ಶ್ರೀ ಮಹಾಕವಿ ಕಾಳಿದಾಸ ಪ್ರಣೀತ

ರಘುವಂಶ, ಕುಮಾರ ಸಂಭವ

ಮತ್ತು

ಮೇಘಸಂದೇಶ

ಮಹಾ ಕಾವ್ಯಗಳಲ್ಲಿನ

ಪೂರ್ವಮೇಘ ಮತ್ತು ಉತ್ತರಮೇಘ ಭಾಗಗಳಲ್ಲಿರುವ ಶ್ಲೋಕಗಳಿಗೆ
ಪೂರ್ಣವಾಗಿ ಮತ್ತು ಮತ್ತೆರಡು ಕಾವ್ಯಗಳಲ್ಲಿನ ಆಯ್ದ ಸರ್ಗಗಳಿಗೆ
ಮಾತ್ರ ಕನ್ನಡ ಪದ್ಯಾನುವಾದವನ್ನೂ ಉಳಿದ ಸರ್ಗಗಳ ಸಂಗ್ರಹ
ತಾತ್ಪರ್ಯವನ್ನೂ ಈ ಕೃತಿಯಲ್ಲಡಗಿಸಿದೆ.

ಸಂಗ್ರಾಹಕ ಮತ್ತು ಗ್ರಂಥಕರ್ತರು
ಅಧ್ಯಾತ್ಮವಿದ್ಯಾಪ್ರವೀಣ
ಬುರುಗನಹಳ್ಳಿ ಭೀಮಸೇನಶರ್ಮಾ, ಎಂ.ಎಸ್‌ಸಿ.
(B. BHEEMASENA RAO)
(ವ್ಯವಸಾಯ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು)
ಮತ್ತು ಕರ್ನಾಟಕ ಸರ್ಕಾರದ ಕೃಷಿ ಶಾಖೆಯ
ರಾಸಾಯನ ಶಾಸ್ತ್ರಜ್ಞ.

ಬೆಲೆ : 20 ರೂ

RAGHUVAMSA, KUMARASAMBAVA and MEGHASANDESHA Compiled and Edited by Buruganahalli Bheemasenasharma M.Sc., Retd. Professor of Agricultural-Chemistry and State Agricultural Chemist, Bangalore.

Copy Rights Reserved.

25th December 1987.

1000 Copies

Published by :
S. Subramanya Iyer
111/49, L.I.C. Colony,
III Block, Jayanagar,
Bangalore-11.

Rs. 20/—

Printed at :
SUDHAMA PRINTERS
Bangalore-560050.

ವಿನಂತಿ

ಕವಿರತ್ನನೆಂದು ಪ್ರಸಿದ್ಧನಾದ ಕಾಳಿದಾಸನ ಮಹಾ ಕಾವ್ಯಗಳೆಂದರೆ ಮೇಘಸಂದೇಶ, ರಘುವಂಶ ಮತ್ತು ಕುಮಾರಸಂಭವ. ಅವುಗಳಲ್ಲಿ ಮೇಘಸಂದೇಶವೆಂಬುದು ಕಿರು ಕಾವ್ಯವಾಗಿದ್ದರೂ ಇದು 'ಕಾವ್ಯಕಲ್ಪದ್ರುಮ' ವೆಂಬ ಪ್ರತೀತಿ ಇದಕ್ಕಿದೆ. ಪಾಶ್ಚಾತ್ಯ ಕವಿವರ್ಯರು ಇದನ್ನು ಮೇರು ಕೃತಿಯೆಂದು ಕರೆದಿರುತ್ತಾರೆ. ಆದರಂತೆಯೇ ಉಳಿದ ಎರಡು ಕಾವ್ಯಗಳು. ಮೇಘಸಂದೇಶದ ಪ್ರಾಶಸ್ತ್ಯವನ್ನು ಕುರಿತು ಇದರಲ್ಲಿ ವಿಶಾಲವಾದ ಪ್ರಶಂಸೆ ಇದೆ. ಈ ಮಹಾ ಕಾವ್ಯಕ್ಕೆ ಇರುವಂತೆಯೇ ಉಳಿದ ಕಾವ್ಯಗಳಿಗೂ ಕೂಡ ಸುಮಾರು ಮೂವತ್ತೇಳು ಪ್ರಸಿದ್ಧ ವ್ಯಾಖ್ಯಾನಗಳಿವೆ. ಈ ವ್ಯಾಖ್ಯಾನಗಳಲ್ಲಡಗಿರುವ ರಹಸ್ಯವನ್ನು ಈ ಅನುವಾದಕನು ತನ್ನ ಕನ್ನಡ ಪದ್ಯಾನುವಾದದಲ್ಲಿ ತರುವ ಸಾಹಸವನ್ನು ಮಾಡಿರುತ್ತಾನೆ. ಈ ಕಿರು ಅನುವಾದ ಗ್ರಂಥದಲ್ಲಿ ಮೇಘಸಂದೇಶದಲ್ಲಿನ ಪೂರ್ವಮೇಘ ಮತ್ತು ಉತ್ತರ ಮೇಘ ಭಾಗಗಳಲ್ಲಿರುವ ಶ್ಲೋಕಗಳೆಲ್ಲಕ್ಕೂ ಕನ್ನಡ ಪದ್ಯ ರೂಪವಾದ ಅನುವಾದ ಮಾಡಿರುವುದು ಮಾತ್ರವಲ್ಲದೆ ಉಳಿದ ರಘುವಂಶ ಮತ್ತು ಕುಮಾರ ಸಂಭವದೊಳಗಿನ ಆಯ್ದ ಸರ್ಗಗಳಿಗೆ ಮಾತ್ರ ಅನುವಾದ ಮಾಡಿರುತ್ತದೆ. ಹೆಸರಿಸಬೇಕೆಂದರೆ ರಘುವಂಶ ಮಹಾ ಕಾವ್ಯದಲ್ಲಿನ ಮೊದಲನೆಯ ಎರಡು ಸರ್ಗಗಳಿಗೂ ಮತ್ತು ಅತ್ಯಂತ ಗಣನೀಯವಾದ ಹದಿನಾಲ್ಕನೆಯ ಸರ್ಗಕ್ಕೆ ಮಾತ್ರ ಅನುವಾದವನ್ನು ಅಳವಡಿಸಿದೆ. ಕುಮಾರ ಸಂಭವದೊಳಗಣ ಸರ್ಗಗಳಲ್ಲಿ ಅತ್ಯಂತ ಶ್ರೇಷ್ಠವೆನಿಸಿದ ಐದನೆಯ ಸರ್ಗವನ್ನು ಅನುವಾದಿಸಿದೆ. ಈ ಮೇಲಿನ ಮಹಾ ಕಾವ್ಯದಲ್ಲಡಗಿರುವ ಉಳಿದ ಸರ್ಗಗಳಲ್ಲಿನ ಸಂಗ್ರಹ ತಾತ್ಪರ್ಯವನ್ನು ಈ ಗ್ರಂಥದಲ್ಲಿ ಸೇರಿಸಿದೆ. ರಘುವಂಶ ಮಹಾ ಕಾವ್ಯದಲ್ಲಿನ ಎಲ್ಲಾ ಸರ್ಗಗಳಿಗೂ ಈ ಲೇಖಕನು ಪದ್ಯರೂಪವಾದ ಅನುವಾದವನ್ನು ಬಹಳ ಹಿಂದೆಯೇ ಕರಡನ್ನು ಸಿದ್ಧಪಡಿಸಿದ್ದರೂ ಕೂಡ, ಅವುಗಳನ್ನು ಪುನಃ ಪರಿಶೀಲಿಸಿ ಮುದ್ರಣಕ್ಕೆ ಒದಗಿಸಲು ದೃಷ್ಟಿದೋಷದಿಂದ ಸಾಧ್ಯವಾಗಿ

ಲಿಲ್ಲ. ಶಸ್ತ್ರಚಿಕಿತ್ಸೆಗೆ ಕಣ್ಣನ್ನು ಒಳಬಡಿಸಿ ದೃಷ್ಟಿಯು ಉತ್ತಮ ಗೊಂಡುದೇ ಆದರೆ ಆ ಅನುವಾದವನ್ನು ಮತ್ತೆ ಪರಿಶೀಲಿಸಿ ಮುದ್ರಣಕ್ಕೆ ಅವಕಾಶ ವನ್ನು ಮಾಡಿಕೊಡಲಾಗುತ್ತದೆ.

ಈ ಅನುವಾದಕನಿಗೆ ತನ್ನ ಕೃತಿಗಳನ್ನು ಮುದ್ರಣ ಮಾಡಿಸಬೇಕೆಂಬ ಆಸೆಯಿರದಿದ್ದರೂ ಕವಿಕಾಳಿದಾಸನಲ್ಲಡಗಿದ್ದ ಮಹತ್ವಕಕ್ಕಿಗಿ ಮೆಚ್ಚಿಗೆಯನ್ನು ಹೊರಸೂಸುವ ಕುತೂಹಲದಿಂದ ಈ ಅನುವಾದಕ್ಕೆ ಯತ್ನಿಸಿರುತ್ತಾನೆ. ಈ ಅನುವಾದದ ಕರಡು ಪ್ರತಿಯನ್ನು ಪರಿಶೀಲಿಸಿದ ಶ್ರೀ ವರ್ಮ ಎಸ್. ಸುಬ್ರಹ್ಮಣ್ಯ ಅಯ್ಯರ್‌ರವರು ಈ ಅನುವಾದವನ್ನು ಪುಸ್ತಕ ರೂಪವಾಗಿ ಪ್ರಕಟಿಸಲೇ ಬೇಕೆಂಬ ನಿರ್ಧಾರದಿಂದ ಈ ಮಹತ್ಕಾರ್ಯಕ್ಕಾಗಿ ನೆರವಾದರಾದುವರಿಂದ ಆ ಮಹನೀಯರಿಗೆ ಈ ಅನುವಾದಕನೂ ಮತ್ತು ಓದುಗರೂ ಚಿರಋಣಿಗಳಾಗಿರ ಬೇಕೆಂಬುದು ಈ ಲೇಖಕನ ಮುಖ್ಯ ಆಶಯ. ಇದೂ ಅಲ್ಲದೆ ಈ ಗ್ರಂಥದ ಪ್ರಕಟಣೆಯನ್ನು ಅತ್ಯಂತ ಆದರದಿಂದ ಕೈಗೊಂಡ ಸುಧಾವ ಎಂಬ ಮುದ್ರಣ ಕಾರರಿಗೂ ಕೂಡ ನಮ್ಮ ವಂದನೆಗಳು,

ಇತಿ ಅನುವಾದಕ

ಬುರುಗನಹಳ್ಳಿ ಭೀಮಸೇನರಾವ್

(B. Bheemasena Rao)

ತಾ, 15-12-87
ನಂ. 2, 9ನೇ ಅಡ್ಡರಸ್ತೆ
ನರಸಿಂಹ ರಾಜ ಕಾಲೋನಿ
ಬೆಂಗಳೂರು 19

ನಿವೇದನೆ

ಪ್ರಪಂಚದಲ್ಲಿನ ವಾಙ್ಮಯದಲ್ಲಿ ಅತಿ ಪ್ರಾಚೀನವೂ ಮತ್ತು ಅತಿ ಶ್ಲಾಘ್ಯವೂ ಆದುದೆಂದರೆ ಭಾರತೀಯ ಸಂಸ್ಕೃತ ಭಾಷೆಯೇ ಹೌದು ಎಂಬುದು ಪ್ರಾಚೀನ ಮತ್ತು ಅರ್ವಾಚೀನ ವಿದ್ವಾಂಸರ ನಿಷ್ಪಕ್ಷಪಾತವಾದ ಅಭಿಪ್ರಾಯ. ಭಾರತೀಯ ಅನೇಕ ಭಾಷೆಗಳಿಗೆ ಮೂಲವಾದುದು ಸಂಸ್ಕೃತ ವಾಙ್ಮಯವೇ ಹೌದು. ಏಕೆಂದರೆ ಆ ಭಾಷೆಯಲ್ಲಿನ ಅಕ್ಷರ ಮಾಲೆಯೇ ಉಳಿದ ಭಾಷೆಗಳಿಗೆ ತಳಹದಿ ಇಂತಹ ಭಾಷೆಯನ್ನು ಅಭ್ಯಸಿಸಬೇಕಾದುದೇ ಪ್ರತಿಯೊಬ್ಬ ಭಾಷಾಜಿಜ್ಞಾಸುವಿನ ಗುರಿ. ಅದರಂತೆಯೇ ಈ ಲೇಖಕನ ಅಭಿಪ್ರಾಯವೂ ಆಗಿದ್ದುದರಿಂದ ಚಿಕ್ಕಂದಿನಿಂದಲೇ ಅಂದರೆ ತಾನು ಹತ್ತುವರ್ಷ ವಯಸ್ಸಿನವನಾಗಿದ್ದಾಗಲೇ ತನ್ನಲ್ಲಿ ಮೂಡಿ ಭಾಷಾಭ್ಯಾಸಕ್ಕೆ ಆರಂಭವಾಯಿತು. ಸಂಸ್ಕೃತ ಭಾಷೆಯಲ್ಲಿ ತಪಸ್ವಿಗಳಿಂದಲೇ ಶೃತಿಗಳು ಉತ್ಪನ್ನವಾದವು. ಶೃತೇರಿವಾರ್ಥಂ ಸ್ಮೃತಿರನ್ವ ಗಚ್ಛತ್' ಎಂಬಂತೆ ಶೃತಿಗಳ ಅರ್ಥವನ್ನು ತಿಳಿಯುವುದು ಸುಲಭ ಸಾಧ್ಯವಾಗದುದರಿಂದ, ಅದರ ಅರ್ಥವು ಸುಲಭವಾದ ಸಂಸ್ಕೃತ ಭಾಷೆಯಲ್ಲಿ 'ಸ್ಮೃತಿ' ರೂಪದಿಂದ ಜನ್ಮವೆತ್ತಿತು. ಈ ಸ್ಮೃತಿಗಳಲ್ಲಿ ಪ್ರತಿಪಾದಿತವಾಗಿರುವ ವಿಷಯವು ಜನಸಾಮಾನ್ಯರ ಆದರ್ಶಕ್ಕಾಗಿ 'ರಾಮಾಯಣ' ಕಾವ್ಯವಾಗಿಯೂ, ಭಾರತದಂತಹ ಇತಿಹಾಸ ರೂಪವಾಗಿಯೂ ಮತ್ತು 'ಭಾಗವತ' ದಂತಹ ಪುರಾಣಗಳಾಗಿಯೂ ಮಾರ್ಪಟ್ಟಿತು. ಅದರಲ್ಲಿ ಕಾವ್ಯದೊಳಗಿನ ವಿಷಯಕ್ಕೆ ಹೊಳಪು ಕೊಟ್ಟು ಕವಿಗಳು ತಮ್ಮದೇ ಆದ ಪ್ರತಿಭೆಯಿಂದ ಬೇರೆ ಬೇರೆ ಕಾವ್ಯಗಳನ್ನು ರಚಿಸಿದರು. ಈ ಕಾವ್ಯಗಳು ಗದ್ಯಪದ್ಯಾತ್ಮಕವಾಗಿವೆ. ದಂಡಿ, ಬಾಣ ಮೊದಲಾದ ಕವಿಗಳು ಗದ್ಯಾತ್ಮಕವಾದ ಕಾವ್ಯಗಳನ್ನು ರಚಿಸಿದರೆ ಭಾಸ, ಕಾಳಿದಾಸ, ಭಾರವಿ, ಮಾಘ ಮೊದಲಾದ ಕವಿಗಳು ಪದ್ಯ ರೂಪವಾದ ಕಾವ್ಯಗಳನ್ನು ರಚಿಸಿದುದು ಮಾತ್ರವಲ್ಲದೆ ನಾಟಕಗಳನ್ನೂ ರಚಿಸಿ ಸಂಸ್ಕೃತ ಭಾಷಾ ವೃದ್ಧಿಗೆ ಒಂದು ಶೋಭೆಯನ್ನು ತಂದಿರುತ್ತಾರೆ. ಇಂತಹ ಕವಿಗಳಲ್ಲಿ ಕಾಳಿದಾಸ

ನಿಗೆ ಹೆಚ್ಚು ಪ್ರಾಶಸ್ತ್ಯ. ಆತನನ್ನು 'ಕವಿಕುಲ ಸಾರ್ವಭೌಮ' ನೆಂಬ ಅನ್ವರ್ಥ ನಾಮದಿಂದ ಹೊಗಳಿರುತ್ತಾರೆ.

ಪ್ರಕೃತ ಕಾಳಿದಾಸನಿಂದ ರಚಿತವಾದ ಕಾವ್ಯರತ್ನಗಳೆಂದರೆ ರಘುವಂಶ, ಕುಮಾರ ಸಂಭವ ಮತ್ತು ಮೇಘದೂತ ವೆಂಬಿವು ಕಾವ್ಯತ್ರಯಗಳು ಅಲ್ಲದೆ ಈ ಕವಿಯು ಶಾಕುಂತಲ, ವಿಕ್ರಮೋರ್ವಶೀಯ ಮತ್ತು ಮಾಳವಿಕಾಗ್ನಿಮಿತ್ರ ಎಂಬ ಮೂರು ನಾಟಕಗಳನ್ನೂ ರಚಿಸಿರುತ್ತಾನೆ. ಈ ಮಹಾ ಕವಿಯ ಮೂರು ಕಾವ್ಯಗಳನ್ನೂ ಅಭ್ಯಾಸಿಸಬೇಕೆಂಬ ಬಯಕೆ ಈ ಲೇಖಕನಿಗೆ ಹುಟ್ಟಿ ಅದಕ್ಕೆ ಅಳವಡಿಸಿರುವ ಅನೇಕ ವ್ಯಾಖ್ಯಾನಗಳಲ್ಲಿ ಹಲವಾರನ್ನು ಪರಿಶೀಲಿಸಿ, ಕವಿಯ ಪ್ರಾಶಸ್ತ್ಯವನ್ನು ಮನಗಂಡು ಅವುಗಳಲ್ಲಡಗಿರುವ ಸಾರವನ್ನು ಕನ್ನಡಿಗರಿಗೆ ಪದ್ಯರೂಪವಾಗಿ ಮನವರಿಕೆ ಮಾಡಿಕೊಡಬೇಕೆಂಬ ಹೆಬ್ಬಯಕೆಯಿಂದ ಕನ್ನಡದಲ್ಲಿನ ಷಟ್ಪದಿಯ ಛಂದಸ್ಸನ್ನು ಉಪಯೋಗಿಸಿಕೊಂಡು ಕವಿಗರ್ಭವನ್ನು ಬಿತ್ತರಿಸುವ ಪ್ರಯತ್ನ ಮಾಡುವ ಕುತೂಹಲಿಗನಾಗಿ ಅದಕ್ಕೆ ಕೈ ಹಚ್ಚಿರುತ್ತಾನೆ. ಆದರಲ್ಲಿನ ಪ್ರಥಮ ಪ್ರಯತ್ನವು ಧಾರವಾಡದಲ್ಲಿ ಪ್ರಕಟವಾದ 'ಶ್ರೀಧರ ಸಂದೇಶ' ಎಂಬ ಮಾಸ ಪತ್ರಿಕೆಯಲ್ಲಿ ಶ್ರೀಧರ ಸ್ವಾಮಿಗಳಿಂದಲೇ ಪ್ರೇರಿತವಾಗಿ ರಘುವಂಶದಲ್ಲಿನ ಒಂದು ಮತ್ತು ಎರಡನೆಯ ಸರ್ಗಗಳನ್ನು ಕನ್ನಡಕ್ಕೆ ಷಟ್ಪದಿಯಲ್ಲಿ ಅನುವಾದಿಸಿ ಹೊರ ತಂದಿರುತ್ತಾನೆ. ಅಷ್ಟರಲ್ಲಿ ಶ್ರೀಧರ ಸಂದೇಶ ಮಾಸ ಪತ್ರಿಕೆಯ ಪ್ರಕಟಣೆಕಾರರು ತೀರಿಕೊಂಡಿದ್ದರಿಂದಲೂ ಮತ್ತು ಈ ಲೇಖಕನು ಧಾರವಾಡವನ್ನು ಬಿಟ್ಟು ಬೆಂಗಳೂರಿಗೆ ಬರಬೇಕಾಗಿದ್ದುದರಿಂದಲೂ ಅನುವಾದದ ಪ್ರಕಟಣೆಯ ಕಾರ್ಯ ಕೊನೆಗೊಂಡಿತು. ಆದೂ ಅಲ್ಲದೆ ರಘುವಂಶದ ಹತ್ತೊಂಭತ್ತು ಸರ್ಗಗಳಲ್ಲಿ 'ಸೀತಾವನವಾಸ' ಎಂಬ ವಿಷಯವನ್ನೊಳಗೊಂಡ ಹದಿನಾಲ್ಕನೆಯ ಸರ್ಗವು ಅತಿ ಶ್ಲಾಘ್ಯವೆನಿಸಿರುವುದರಿಂದ ಅದರ ಅನುವಾದವನ್ನು ಪ್ರತ್ಯೇಕವಾಗಿ ಪ್ರಕಟಿಸಬೇಕೆಂಬ ಬಯಕೆಯಿಂದ ಅದನ್ನು ಸಿದ್ಧಪಡಿಸಲಾಯಿತು. ಅದನ್ನು ಪ್ರಕಟಿಸಲೇಬೇಕೆಂಬ ಸಂಕಲ್ಪವು ಶ್ರೀ ವರ್ಕ್ ಯರ್ಸ್ ದಸ್ತಾವೇಜು ಬರಹಗಾರರಾದ ಅಯ್ಯರ್ ರವರಿಗೆ ಹುಟ್ಟಿ ಅದರ ಪ್ರಕಟಣೆಗೆ ಅವಕಾಶ ಮಾಡಿಕೊಟ್ಟರು. ಶ್ರೀಯುತರ ಅಭಿಪ್ರಾಯದಂತೆ ಇವರ ದಿನಚರಿಯಲ್ಲಿ ರಘುವಂಶ ಮಹಾಕಾವ್ಯದಲ್ಲಡಗಿರುವ ವಿಷಯವನ್ನು ಗದ್ಯರೂಪವಾಗಿ ಓದುಗರಿಗೆ

ಒದಗಿಸಬೇಕೆಂಬ ಅವರ ಮಹದುದ್ದೇಶವನ್ನು ನೆರವೇರಿಸುವುದಕ್ಕಾಗಿ ಆ ಗದ್ಯ ಭಾಗವನ್ನೂ ಸಿದ್ಧಪಡಿಸಿ ಆ ಕಾವ್ಯ ಸಂಪುಟವು ಪೂರ್ತಿಯಾಗುವುದಕ್ಕೆ ಅನುಕೂಲಿಸಲಾಯಿತು.

ಇದೂ ಅಲ್ಲದೆ ಕಾಳಿದಾಸ ಮಹಾ ಕವಿಯಿಂದ ರಚಿತವಾದ 'ಕುಮಾರ ಸಂಭವ' ವೆಂಬ ಮತ್ತೊಂದು ಮಹಾ ಕಾವ್ಯದಲ್ಲಿನ ಹದಿನೇಳು ಸರ್ಗಗಳಲ್ಲಿ ಅತಿ ರಮ್ಯವಾದುದೆಂದರೆ ಪಾರ್ವತಿಯು ತಪಸ್ಸನ್ನಾಚರಿಸಿ ಶಿವನನ್ನು ಮೆಚ್ಚಿಸಿ ಆ ದೇವನು ತನ್ನನ್ನು ವರಿಸುವಂತೆ ಮಾಡಿರುವುದು ಅದರಲ್ಲಿನ ವಿಷಯ ವಾಗಿರುವುದರಿಂದ ಅದನ್ನೂ ಕೂಡ ಕನ್ನಡ ಷಟ್ಪದಿಯ ರೂಪಕ್ಕೆ ತರ ಲಾಯಿತು. ಇದನ್ನೂ ಕೂಡ ಪ್ರಕಟಿಸಬೇಕೆಂಬ ಘನೋದ್ದೇಶದಿಂದ ಶ್ರೀವರ್ಮಾ ಅಯ್ಯರ್‌ರವರು ಆ ಕಾವ್ಯದಲ್ಲಡಗಿರುವ ಕಥಾ ಭಾಗವನ್ನೂ ಕೂಡ ಗದ್ಯ ರೂಪದಲ್ಲಿ ತರುವಂತೆ ಮಾಡಿ ಅದರ ಪ್ರಕಟಣೆಗೆ ಅವಕಾಶ ಮಾಡಿ ಕೊಟ್ಟಿರುತ್ತಾರೆ. ಈ ಮಹತ್ಕಾರ್ಯವನ್ನು ಸಾಧಿಸಲು ಅವಕಾಶವನ್ನು ಕಲ್ಪಿಸಿ ಕೊಟ್ಟಿರುವ ಮಹನೀಯರಿಗೆ ಓದುಗರೂ ಮತ್ತು ಲೇಖಕನು ಚಿರಋಣಿ ಗಳಾಗಿರಬೇಕು. ಕಾಳಿದಾಸನಿಂದ ರಚಿತವಾದ ಈ ಎರಡು ಕಾವ್ಯಗಳಲ್ಲಿನ ಮುಖ್ಯವೆನಿಸಿದ ಭಾಗಗಳು ಈ ಕಿರು ಹೊತ್ತಿಗೆಯಲ್ಲಿ ಪ್ರಕಟವಾಗಿದೆ. ಲೇಖ ಕನ ದೃಷ್ಟಿದೋಷದಿಂದ ಈ ಗ್ರಂಥದಲ್ಲಿ ಮುದ್ರಣ ದೋಷಗಳು ಕಂಡು ಬರುವುದಕ್ಕೆ ಅವಕಾಶವಿದೆ. ಓದುಗರ ಕ್ಷಮಾಪಣೆಯನ್ನು ಈ ವಿಷಯದಲ್ಲಿ ಕೋರಲಾಗಿದೆ. ಈ ಮುಂದಿನ ಆವೃತ್ತಿಯಲ್ಲಿ ಈ ದೋಷಗಳನ್ನು ಸರಿ ಪಡಿಸಲಾಗುವುದು ಎಂಬ ಭರವಸೆಯನ್ನು ಓದುಗರಿಗೆ ಕೊಡಲಾಗಿದೆ. ಈ ಗ್ರಂಥವನ್ನು ಆದಷ್ಟು ಶೀಘ್ರವಾಗಿ ಮುದ್ರಣ ಮಾಡಿ ಕೊಟ್ಟಿರುವ ಸುಧಾನ್ವಾ ಮುದ್ರಣಕಾರರಿಗೆ ಈ ಲೇಖಕನ, ಪ್ರಕಟಣೆಕಾರರ ಮತ್ತು ಓದುಗರ ಕೃತಜ್ಞತೆ ಸಲ್ಲಬೇಕೆಂದು ಬಯಸಲಾಗಿದೆ.

ರ ಘು ವ ಂ ಶ

(ಮಹಾಕವಿ ಕಾಳಿದಾಸ ಪ್ರಣೀತ ಮಹಾಕಾವ್ಯ)

ಕನ್ನಡಾನುವಾದ

ಬಿ ನ್ನ ಹ

ಭಾರತದಲ್ಲಿನ ಕವಿಗಳಲ್ಲೆಲ್ಲಾ ಕಾಳಿದಾಸನಿಗೆ ಅಗ್ರಸ್ಥಾನವನ್ನು ನಿಷ್ಪಕ್ಷಪಾತರೆನಿಸಿದ ವಿಮರ್ಶಕರು ಮೀಸಲಾಗಿಟ್ಟಿರುತ್ತಾರೆ. ಇಂಗ್ಲೀಷ್ ಕವಿಗಳಲ್ಲಿ ಷೇಕ್ಸ್‌ಪಿಯರ್‌ಗೆ ಕೊಟ್ಟಿರುವ ಸ್ಥಾನದಂತೆ ಇಲ್ಲಿ ನಮ್ಮ ಈ ಮಹಾಕವಿಯ ಸ್ಥಾನ. 'ಕವಿಕುಲ ಚಕ್ರವರ್ತಿ'ಯೆಂಬ ಬಿರುದು ಈತನಿಗೇ ಸಲ್ಲತಕ್ಕದು ಎಂಬುದು ಇಲ್ಲಿ ಆಗಿ ಹೋದ ಕವಿಗಳ ವಿದ್ವಾಂಸರ ಮತ್ತು ಇತರದೇಶದ ಮಹಾಪಂಡಿತರ ಅಚ್ಚಳಿಯದ ಅಭಿಪ್ರಾಯ. ಜೀವನದ ರಸಮಯವಾದ ಚಿತ್ರವನ್ನು ತನ್ನ ಕವಿತ್ವದ ಮೂಲಕ ಹೊರಗೆ ಪ್ರಪಂಚದ ಅತಿಶ್ರೇಷ್ಠ ಕವಿಗಳಲ್ಲಿ ಇವನು ಅದ್ವಿತೀಯನೆಂಬುದೇ ಇದಕ್ಕೆ ಮುಖ್ಯಕಾರಣ. ಇವನು 'ಮಂದಃ ಕವಿಯಶಃ ಪ್ರಾರ್ಥೀ ಗಮಿಷ್ಯಾಮ್ಯುಪಹಾಸ್ಯತಾಂ' ಎಂದು ರಘುವಂಶಕಾವ್ಯದಾದಿಯಲ್ಲಿ ತಾನೇ ಹೇಳಿಕೊಂಡಂತೆ 'ನಾನುಮೂಢ' ಕವಿಯೆಂಬ ಹೆಸರಿಗೆ ನಾನು ಅರ್ಹನಲ್ಲ' ಎಂಬ ತನ್ನ ನಮ್ರತೆಯನ್ನು ತೋರಿಸಿರುತ್ತಾನೆ. ಆದರೆ 'ನಮ್ರ ತ್ವೇನೋನ್ನಮಂತಿಃ' ಎಂಬಂತೆ ಇವನ ಅತಿವಿನಯವೇ ಬಹಳ ಉಚ್ಚಸ್ಥಾನಕ್ಕೆ ಇವನನ್ನು ಒಯ್ದಿದೆ. ಅಲ್ಲದೆ ನಾಟಕಕರ್ತೃಗಳಲ್ಲಿ ಬಹು ಖ್ಯಾತಿ ಪಡೆದ 'ಗ್ಯಟೆ' (ಜರ್ಮನ್‌ಕವಿ) ಮೊದಲಾದ ಕವಿಗಳು ಕವಿಯ ಕಾವ್ಯದ ಅನುವಾದವನ್ನು ಓದಿ ಕವಿಯನ್ನು "ಭೂಸ್ವರ್ಗಗಳನ್ನು ಪ್ರೇಮಪಾಶಗಳಿಂದ ಬಿಗಿದು ಅವಕ್ಕೆ ನಿಕಟ ಸಂಬಂಧ ಕಲ್ಪಿಸಿದ ಕವಿಯೆಂದರೆ ಕಾಳಿದಾಸನಲ್ಲದೆ ಮತ್ತಾರು ?" ಎಂದು ಮನಸಾರೆ ಹಾಡಿದ್ದಾರೆ. ಇಂತಹ ಮಹಾತ್ಮರು ಕವಿಯ ಭಾಷೆಯಲ್ಲಿಯೇ ಅವನ ಕೃತಿಗಳನ್ನು ಪಠಿಸಿ ಅವುಗಳ ರಸವನ್ನು ಆಸ್ವಾದಿಸಿದ್ದರೆ ಕವಿಗೆ ಇನ್ನಾವ ಸ್ಥಳವನ್ನು ಕೊಡುತ್ತಿದ್ದರೆಂಬುದನ್ನು ಊಹಿಸ

ಬಹುದು. 'ಪದ್ಯದೋಳ್ ಕಾಳಿದಾಸಂಗದ್ಯದೋಳ್ ಬಾಣಂ, ಇವರ್ ಪೆಂದ್ಮರು ಪೆರರ್ ಪಂದ್ಯರೇ ? 'ಎಂಬುದು ಕರ್ನಾಟ ಕವಿಚಕ್ರವರ್ತಿಯೆನಿಸಿದ ರನ್ನನು ಆಡಿದ ಸಾವಿರ ವರ್ಷದ ಹಿಂದಿನ ಮಾತು. ಕವಿಪ್ರತಿಭೆ, ಕವಿತಾ ಸಾಮರ್ಥ್ಯ, 'ಕವೀನಾಂ ಕಲಿಃ ಕಲ್ಪದ್ರುಮವತ್' ಎಂಬ ಉದ್ದಾಮವ್ಯಾಖ್ಯಾನ ಕಾರರ ಮಾತಿಗೆ ಪುಷ್ಟಿಕೊಡುತ್ತದೆ.

ಇಂತಹ ಕವಿಯು ನಮ್ಮ ಭರತಖಂಡಕ್ಕೇ ಎಂಬುದೇಕೆ ! ಸಂಸ್ಕೃತ ಭಾಷೆಗೇ ಒಂದು ಕಿರೀಟ, ಇವನು ಬರೆದ ನಾಟಕಗಳಲ್ಲಿ 'ಅಭಿಜ್ಞಾನ ಶಾಕುಂ ತಲಕ್ಕೆ ಅಗ್ರಸ್ಥಾನವಿರುವಂತೆ ಕಾವ್ಯತ್ರಯಗಳಲ್ಲಿ (ರಘುವಂಶ. ಕುಮಾರ ಸಂಭವ, ಮೇಘದೂತ) ರಘುವಂಶಕ್ಕೇ ಅತ್ಯುನ್ನತಸ್ಥಾನವೇರ್ಪಟ್ಟಿದೆ ಇದರಿಂದ ಕಾಳಿದಾಸನಿಗೆ 'ರಘುಕಾರ'ನೆಂಬ ಪ್ರತೀತಿಯೂ ಉಂಟು. ಇದರಲ್ಲಿ ಹೊರಸೂಸುವ ಕವಿತಾಪ್ರೌಢಿಮೆಗೆ ಮರುಳಾಗಿ ವಿದ್ವನ್ಮಣಿಗಳಾದ ವ್ಯಾಖ್ಯಾನ ಕಾರರು ತಮ್ಮ ಅಮೋಘವಾದ ವ್ಯಾಖ್ಯೆಗಳನ್ನು ಈ ಕಾವ್ಯಕ್ಕೆ ಅಳವಡಿಸಿರು ತ್ತಾರೆ. ಈ ಕಾವ್ಯಕ್ಕೆ ಸುಮಾರು ಮೂವತ್ತೇಳು ವಾಖ್ಯಾನಗಳಿವೆಯೆಂದು ತಿಳಿದು ಬಂದಿದೆ. ಅದರಲ್ಲಿ ಪ್ರಖ್ಯಾತವಾದವುಗಳು ಹತ್ತು. ಅವುಗಳಲ್ಲಿ ಮೊದಲನೆಯದೆಂದರೆ 'ವಲ್ಲಭದೇವನದು. ಈತನು ತನ್ನ ವ್ಯಾಖ್ಯಾನದಲ್ಲಿ ಶ್ರುತಿಸ್ಮೃತಿಗಳನ್ನೇ ಹೆಚ್ಚಾಗಿ ಬಳಸಿದ್ದಾನೆ. ಅದು ನಿಘಂಟುಗಳು ಇನ್ನೂ ಹುಟ್ಟದಿದ್ದ ಕಾಲವಾಗಿರಬೇಕು. ಇದಾದ ಮೇಲೆ ಬಂದವರು ಮಹಾಪ್ರತಿಭಾ ಶಾಲಿಗಳಾದ ಹೇಮಾದ್ರಿ, ಚಾರಿತ್ರವರ್ಧನ, ವಿಜಯಗಣಿ, ಮೊದಲಾದ ಜೈನ ವಿದ್ವಾಂಸರು. ಇದಾದಮೇಲೆ ದಕ್ಷಿಣಾವರ್ತ, ನಾಥ, ಮಲ್ಲಿನಾಥ ಮೊದ ಲಾದವರು. ಇವುಗಳಲ್ಲಿ 'ಮಹಾಮಹೋಪಧ್ಯಾಯ'ರೆಂಬ ಬಿರುದಾಂಕಿತ ರೆಂದರೆ ಮಲ್ಲಿನಾಥರು 'ಇವರದು ಅತ್ಯುತ್ತಮವಾದ, ಅತಿರಮಣೀಯವಾದ ಕವಿಗರ್ಭವನ್ನು ಉತ್ತಮರೀತಿಯಲ್ಲಿ ತಂದಿರುವಂಥದು' ಎಂಬುದು ಬಲ್ಲವರ ಅಭಿ ಪ್ರಾಯ. ಅವರ ಮಾತಿನಲ್ಲಿಯೇ ಕಾಳಿದಾಸನ ಶ್ರೇಷ್ಠತೆಯನ್ನು ಹೇಳಬೇಕೆಂದರೆ.

ಶ್ಲೋ॥ ಕಾಳಿದಾಸಗಿರಾಂ ಸಾರಂ ‡ ಕಾಳಿದಾಸಃ ಸರಸ್ವತೀ ।
ಚತುರ್ಮುಖೋಽಥವಾ ಸಾಕ್ಷಾತ್ ‡ ವಿದುರ್ನಾನ್ಯೇ
ತು ಮಾದೃಶಾಃ ॥

ಎಂಬಂತೆ 'ಕಾಳಿದಾಸ ಕವಿಯ ಮಾತಿನ ಸಾರವನ್ನು ಕಾಳಿದಾಸ, ಸರಸ್ವತೀ, ಚತುರ್ಮುಖನಾದ ಬ್ರಹ್ಮ ಇವರಿಗೆ ತಿಳಿಯಲು ಶಕ್ಯವೇ ವಿನಾ ನಮ್ಮಂಥವರಿಗೆ ಇದು ಸಾಧ್ಯವಿಲ್ಲ, ಎಂದು ಹೇಳಿದ್ದಾರೆಂದ ಮೇಲೆ ಕವಿಯ ಹಿರಿಮೆ ಎಷ್ಟಿದೆಯೆಂಬುದನ್ನು ಇದರಿಂದ ಊಹಿಸಬಹುದು. ಅನೇಕರು ವ್ಯಾಖ್ಯೆಗಳನ್ನು ಬರೆದರೂ ತಾನು ಏತಕ್ಕೆ ಇದಕ್ಕೆ ಪ್ರಯತ್ನಪಟ್ಟರೆಂಬುದನ್ನು ಕುರಿತು ಅದೇ ಮಲ್ಲಿನಾಥರು ಹೀಗೆಂದು ನುಡಿದಿದ್ದಾರೆ!

ಶ್ಲೋ॥ ಭಾರತೀ ಕಾಳಿದಾಸಸ್ಯ ‡ ದುರ್ವ್ಯಾಖ್ಯಾವಿಷಮೂರ್ಛಿತಾ।
ಏಷಾ ಸಂಜೀವಿನೀ ಟೀಕಾ ‡ ತಾಮದ್ಯೋಜ್ಜೀವಯಿಷ್ಯತಿ ॥

ಅಂದರೆ 'ಕಾಳಿದಾಸನ ವಾಕ್ಯಾಮೃತವು ಅಸಂಬದ್ಧವ್ಯಾಖ್ಯಾನಗಳೆಂಬ ವಿಷದಿಂದ ಮೂರ್ಛೆಹೊಂದಿದೆ. 'ಸಂಜೀವಿನೀ' ಎಂಬ ನನ್ನ ಈ ಟೀಕೆಯು ಅದಕ್ಕೆ ಚೈತನ್ಯವನ್ನು ಕೊಡುತ್ತದೆ' ಎಂದು ಶಪಥ ಮಾಡಿ ಬರೆದಿದ್ದಾರೆ. ಅಂದರೆ ಕವಿಗರ್ಭವನ್ನು ಈ ವ್ಯಾಖ್ಯೆಯು ಬಹುಮಟ್ಟಿಗೆ ಹೊರತಂದಿದೆ; ಆಮೂಲಕ ಕವಿಯ ಮಾಹಾತ್ಮ್ಯೆಯನ್ನು ಬೆಳಗಿಸಿದೆ.

ಇಂತಹ ಉತ್ತಮ ಕಾವ್ಯವನ್ನು ಪ್ರಪಂಚದ ಬೇರೆ ಬೇರೆ ಭಾಷೆಗಳಿಗೆ ಅನುವಾದ ಮಾಡಿರುತ್ತಾರೆ. ಈ ಅನುವಾದಗಳ ಕಾರ್ಯವು ಮಹಾ ವಿದ್ವಾಂಸರೇ ಕೈಗೊಂಡರೂ ಕವಿಯ ಮಾತಿನಲ್ಲಿರುವ ಸೌಂದರ್ಯವನ್ನು ಅವರ ಅನುವಾದಗಳು ಹೊರತರಲು ಸಾಧ್ಯವಾಗಿಲ್ಲವೆಂಬುದು ವ್ಯಕ್ತವಾಗುತ್ತದೆ. ಕವಿಗರ್ಭವನ್ನು ಸಾಧ್ಯವಾದಷ್ಟು ಅನುವಾದಕ್ಕಿಳಿಸದಿದ್ದರೆ ಕವಿಗೆ ಅಪಚಾರ ಮಾಡಿದಂತಾಗುವುದೆಂಬುದು ಎಲ್ಲರೂ ಒಪ್ಪುವ ಮಾತು. ಈ ಅನುವಾದಕರು ಇಂತಹ ಕಷ್ಟಸಾಧ್ಯವಾದ ಕೆಲಸವನ್ನು ಕೈಗೊಳ್ಳಲು ಅವರಿಗೆ ಕವಿಯ ಕವಿತ್ವದ ಸೊಂಪೇ ಪ್ರೇರಿಸಿರಬೇಕು. 'ಕವಿಯ ಪ್ರತಿಭೆಯನ್ನು, ಮಾತಿನ ಸೌಂದರ್ಯವನ್ನು, ಜರ್ಮನ್ ಭಾಷೆಗೆ ತರುವ ನನ್ನ ಪ್ರಯತ್ನವ್ಯರ್ಥ' ಎಂದು ಗ್ಯಟೆ ಕವಿಯು ಉದ್ಗಾರ ತೆಗೆದಿದ್ದಾನೆಂದರೆ ಉಳಿದ ಅನುವಾದಕರ ಪಾಡೇನು !

ಪಾಶ್ಚಾತ್ಯ ಕವಿಗಳೇ ಅನುವಾದದ ಕಾರ್ಯಕ್ಕೆ ಕೈಹಚ್ಚಿದರೆಂದರೆ ಭಾರತೀಯರಲ್ಲಿ ಆ ಹುರುಪು ಬರೆದಿರುಪುದೆ! ಅನೇಕರು ಭಾರತೀಯ ಭಾಷೆಗಳಿಗೆ ಇದನ್ನು ಗದ್ಯರೂಪದಲ್ಲಿಯೂ ಅನುವಾದಿಸಿದುದುಂಟು. ಇದರಲ್ಲಿ ನಮ್ಮ ಕನ್ನಡ ಭಾಷಾಭಿಮಾನಿಗಳು ಕಾಳಿದಾಸನ ಕೆಲವು ಕಾವ್ಯಗಳನ್ನು ಕನ್ನಡಿಸಿದ್ದಾರೆ. ರಘುವಂಶವು ಮೊಟ್ಟ ಮೊದಲು ಕನ್ನಡ ಷಟ್ಪದಿಯ ರೂಪದಲ್ಲಿ ಕೆಲವುಭಾಗ ಹೊರಬಿದ್ದಿದೆ. ಆದರೆ ಕವಿಯ ಕಾವ್ಯದರಸ ಅದರಲ್ಲಿ ಸಾಕಷ್ಟು ಇಳಿದು ಬಂದಿಲ್ಲ. ಇದೊಂದು ದೊಡ್ಡ ಕೊರತೆ ನಿಜ. ಆದರೆ ಇದು ಕಷ್ಟ ಸಾಧ್ಯದ ಮಾತು ಆದರೂ ಕವಿಯ ಈ ಕಾವ್ಯವನ್ನು ಮೆಚ್ಚಿದವರನೇಕರು ತಮ್ಮ ಭಾಷೆಯಲ್ಲಿ ಅದನ್ನು ಹಾಡಲು ಯತ್ನಿಸಿದ್ದಾರೆ. ಅವರಲ್ಲಿ ಈ ಅನುವಾದಕನೂ ಒಬ್ಬ. ತನ್ನ ಯೋಗ್ಯತೆಯ ಅರಿವು ತನಗಿದೆಯಾದರೆ ಆತ್ಮತೃಪ್ತಿಗಾಗಿ ಕವಿಯ ಮಹಿಮೆಯನ್ನು ಹಾಡಬಯಸಿ ಈ ಅನುವಾದಕಾರ್ಯಕ್ಕೆ ಪ್ರಯತ್ನಪಟ್ಟಿದ್ದಾನೆ. ಅನುವಾದದಲ್ಲಿ ಲೋಪದೋಷಗಳು, ನ್ಯೂನಾತಿರೇಕಗಳೂ ಎದ್ದು ಕಾಣುತ್ತವಾದರೂ ತನ್ನ ಯೋಗ್ಯತೆಗೆತಕ್ಕಂತೆ ಅನುವಾದಿಸಲು ಹೊರಟಿದ್ದಾನೆ. ಕವಿಯೇ ಹೇಳುವಂತೆ 'ತಂ ಸಂತಃ ಶ್ರೋತುಮರ್ಹಂತಿ ‡ ಸದಸದ್ವ್ಯಕ್ತಿಹೇತವ:' ಅಂದರೆ ಇದನ್ನು ಸದಸದ್ವಿವೇಕಜ್ಞಾನಿಗಳು ಕೇಳಲರ್ಹರು. ಈ ಅನುವಾದಕನದೂ ಅದೇ ಅಭಿಪ್ರಾಯ.

ಅನುವಾದಕ್ಕೆ ಉಳಿದ ಛಂದಸ್ಸಿಗಿಂತಲೂ ಕನ್ನಡ ಷಟ್ಪದಿಯು ಒಪ್ಪಾಗಿ ತೋರಿದ್ದರಿಂದ ಅದನ್ನೇ ಇಲ್ಲಿ ಬಳಸಿದೆ. ಬಲ್ಲವರು ತಮ್ಮ ನಿಷ್ಪಕ್ಷಪಾತದ ಅಭಿಪ್ರಾಯ ಪಡೆಯಬೇಕೆಂಬ ಉದ್ದೇಶದಿಂದ ಕವಿನುಡಿದ ಸಂಸ್ಕೃತದ ಶ್ಲೋಕಗಳು, ಅದರ ಕೆಳಭಾಗದಲ್ಲಿ ಕನ್ನಡಾನುವಾದದ ಪದ್ಯಗಳು ಕೊಟ್ಟಿದೆ. ಈ ಅನುವಾದವು ಪಾಂಡಿತ್ಯ ಇಲ್ಲವೆ. ಕವಿತ್ವ ಈ ಪ್ರತಿಭೆಯಿಂದ ಹರಿದುದಲ್ಲವಾದರೂ ಕವಿಯಲ್ಲಿನ ಅಚ್ಚಳಿಯದ ಪ್ರೇಮ ಈ ಪ್ರಯತ್ನಕ್ಕೆ ಹುರುಪಿತ್ತಿದೆ ಎಂಬುದು ವಾಚಕರಲ್ಲಿ ಅನುವಾದಕನ ವಿನಂತಿ.

ಒಂದನೆಯ ಸರ್ಗ

ವಸಿಷ್ಠಾಶ್ರಮಾಭಿಗಮನ

(ಕುಸುಮ ಷಟ್ಪದಿ)

ಸೂಚನೆ : ಮನುಕುಲದ ನೃಪ ದಿಲೀ-।
ಪನು ಸತಿಯೊಡನೆ ತೆರಳಿ-।
ದನು ಮುನಿವಶಿಷ್ಠನ ವನಕೆ ಸುತನ ಬಯಸಿ ॥

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ । ೧

ಕ್ವ ಸೂರ್ಯಪ್ರಭವೋ ವಂಶಃ ।
ಕ್ವ ಚಾಲ್ಪವಿಷಯಾ ಮತಿಃ ॥
ತಿತೀರ್ಷುಃ ದುಸ್ತರಂ ಮೋಹಾತ್ ।
ಉಡುಪೇನಾಸ್ಮಿ ಸಾಗರಂ ॥ ೨

ಮಂದಃ ಕವಿಯಶಃ ಪ್ರಾರ್ಥೀ ।
ಗಮಿಷ್ಯಾಮ್ಯುಪಹಾಸ್ಯತಾಂ ॥
ಪ್ರಾಂಶುಲಭ್ಯೇ ಫಲೇ ಲೋಭಾತ್ ।
ಉದ್ಬಾಹುರಿವ ವಾಮನಃ ॥ ೩

ಅಥ ವಾ ಕೃತವಾಗ್ದ್ವಾರೇ ವಂಶೇಽಸ್ಮಿನ್
ಪೂರ್ವಸೂರಿಭಿಃ
ಮಣೌ ವಜ್ರಸಮುತ್ಕೀರ್ಣೇ ಸೂತ್ರಸ್ಯೇವಾಸ್ತಿ
ಮೇ ಗತಿಃ ॥ ೪

ಸೋಽಹಮಾಜನ್ಮಶುದ್ಧಾನಾಂ, ಆಫಲೋದಯ
ಕರ್ಮಣಾಂ, ॥
ಆಸಮುದ್ರಕ್ಷಿತೀಶಾನಾಂ, ಆನಾಕರಥವರ್ತ್ಮನಾಂ, ॥ ೫

ಯಥಾವಿಧಿಹುತಾಗ್ನೀನಾಂ ।
ಯಥಾಕಾಮಾರ್ಚಿತಾರ್ಥಿನಾಂ ॥
ಯಥಾಪರಾಧ ದಂಡಾನಾಂ ।
ಯಥಾಕಾಲಪ್ರ ಬೋಧಿನಾಂ ॥ ೬

ಪದ್ಯ

ಮಾತೊಳರ್ಥವು ಬೆರೆವ । ರೀತಿಯೊಳು ಕೂಡಿ ಸಂ–।
ಪ್ರೀತಿಯಿಂ ದೆಡೆಬಿಡದೆ ಜಗವೆಲ್ಲಕೆ ॥
ಮಾತೆಪಿತರೆನಿಪ ಗಿರಿ–। ಜಾತೆ ಪರಮೇಶರಂ ।
ಮಾತಿನ ದರರ್ಥ ದರಿವಿಂಗೆ ನಮಿಪಂ ॥ ೧

ಭಾನುವಿಂದಾದ ವಂ । ಶಾನುಚರಿತವುದಲ್ಲಿ? ।
ಹೀನಮತಿಯೆನಿಪ ತಾನೆಲ್ಲಿ ತಿಳಿಯೆ ॥
ಯಾನಕರಿದೆನಿಸುವಂ–। ಭೋನಿಧಿಯ ನುತ್ತರಿಸ–।
ಲಾನರಿಯ ದೆಳೆಸುವೆನು ದೋಣಿವಿಡಿದು ॥ ೨

ಎತ್ತರದ ಮನುಜಂಗೆ । ತತ್ತಫಲ ವೊಂದಲೆಳೆ–।
ಸುತ್ತ ಕೈಯೆತ್ತುತಿಹ ಕುಳ್ಳನಂತೆ ॥
ಉತ್ತಮದ ಕವಿಕೀರ್ತಿ–। ಗಿತ್ತು ಮನ ವಪಹಾಸ್ಯ–।
ಪೊತ್ತುವೆನು ನಿಜವು ನಾಂ ಮಂದಮತಿಯು ॥ ೩

ಬಜ್ಜರದ ಸೂಜಿಯಿಂ । ವೆಜ್ಜಿಸಿದ ಮಣಿಯೊಳಗೆ ।
ಸಜ್ಜಿಸುವ ದಾರದೊಳು ರವಿಕುಲದೊಳು ॥
ಉಜ್ಜುಗಂ ಗೋಡೆನಗೆ । ಹೆಜ್ಜೆಯಿಡೆ ಹಿಂದಿರ್ದ
ಬಿಜ್ಜೆಗುರು ತೆರೆದಿಹರು ನುಡಿವಾಗಿಲಂ ॥ ೪

ಆ ನಾನು ಶುದ್ಧ ಜ–। ನ್ಮಾನುಗತಮಿರ್ಪ, ಫಲ–।
ಗಾಣಿಸುವ ಪರ್ಯಂತ ಕರ್ಮಬಿಡದ, ॥
ಮುನ್ನೀರ ಕರೆವರೆಗೆ । ಕ್ಷೋಣೀಶರೆಂದೆನಿಪ, ।
ಬಾನಿನೊಳು ರಥಹೊಡೆವ ಸಗ್ಗದೆಡೆಗೆ ॥ ೫

ನಿಯಮಮಂ ಬಿಡದೆ ವ–। ಹ್ನಿಯೊಳ ಗಾಹುತಿಯೀವ, ।
ಬಯಸಿ ಬಂದದತಿಥಿಗಳ ತಣಿಸುವಂಥ, ॥
ನಯತಪ್ಪ ಲೊಪ್ಪೆನಿಪ । ಭಯದಂಡ ವೆಸಗುವ, ಸ–
ಮಯದೊಳೆಚ್ಚರದಿಂದ ವರ್ತಿಪಂಥ ॥ ೬

ತ್ಯಾಗಾಯ ಸಂಭೃತಾರ್ಥಾನಾಂ ।
ಸತ್ಯಾಯ ಮಿತಭಾಷಿಣಾಂ ॥
ಯಶಸೇ ವಿಜಿಗೀಷೂಣಾಂ ।
ಪ್ರಜಾಯೈ ಗೃಹಮೇಧಿನಾಂ ॥ ೭

ಶೈಶವೇಽಭ್ಯಸ್ತ ವಿದ್ಯಾನಾಂ ಯೌವನೇ
ವಿಷಯೈಷಿಣಾಂ ॥
ವಾರ್ಧಕೇ ಮುನಿವೃತ್ತೀನಾಂ ಯೋಗೇನಾಂತೇ
ತನುತ್ಯಜಾಂ ॥ ೮

ರಘೂಣಾ ಮನ್ವಯಂ ವಕ್ಷ್ಯೇ ತನುವಾಗ್ವಿ
ಭವೋಽಪಿ ಸನ್ ॥
ತದ್ಗುಣೈಃ ಕರ್ಣ ಮಾಗತ್ಯ ಚಾಪಲಾಯ
ಪ್ರಚೋದಿತಃ ॥ ೯

ತಂ ಸಂತಃ ಶ್ರೋತು ಮರ್ಹಂತಿ ।
ಸದಸದ್ವ್ಯಕ್ತಿ ಹೇತವಃ ॥
ಹೇಮ್ನಃ ಸಂಲಕ್ಷ್ಯತೇ ಹ್ಯಗ್ನೌ
ವಿಶುದ್ಧಿಃ ಶ್ಯಾಮಿಕಾಪಿ ವಾ ॥ ೧೦
ವೈವಸ್ವತೋ ಮನು ರ್ನಾಮ
ಮಾನನೀಯೋ ಮನೀಷಿಣಾಂ ॥
ಆಸೀತ್ ಮಹೀಕ್ಷಿತಾ ಮಾದ್ಯಃ ।
ಪ್ರಣವಃ ಛಂದಸಾ ಮಿವ ॥ ೧೧

ತದನ್ವಯೇ ಶುದ್ಧಿ ಮತಿ ।
ಪ್ರಸೂತಃ ಶುದ್ಧಿ ಮತ್ತರಃ ॥
ದಿಲೀಪ ಇತಿ ರಾಜೇಂದುಃ
ಇಂದುಃ ಕ್ಷೀರನಿಧಾ ವಿವ ॥ ೧೨

ಕೊಡಿಟ್ಟ ಸಿರಿಯೆಲ್ಲ । ನೀಡಬೇಕೆಂಬ, ಮಾ-।
ತಾಡುವುದು ಮಿತ, ಸತ್ಯವುಳಿಸಲೆಂಬ, ॥
ಮೂಡಿರ್ಪ ಗೆಲುವಿಚ್ಛೆ । ಬಾಡದಿಹ ಯಶಕೆಂಬ,
ಬೇಡಿಕೆಯು ಸತಿಗೆ ಸಂತಾನಕೆಂಬ ॥ ೭

ಬಾಲ್ಯವಂ ವಿದ್ಯೆಬಾ-। ಹುಳ್ಯದೊಳ್, ವಿಷಯಗಳ ।
ಲೌಲ್ಯದೋಳ್ ಯೌವನಂ, ಕಳೆವ, ತನುಶೈ-
ಥಿಲ್ಯವಂ ಮುನಿವರರ । ತುಲ್ಯವೃತ್ತಿಯೊಳ್, ಕೈ-
ವಲ್ಯಯೋಗದೊಳ್ ಕೊನೆಗೊಡಲ ತೊರೆವ ॥ ೮

ಇಂತಿರ್ಪ ರಘುನೃಪರ । ಹಂತಿಯನು ಪೇಳ್ವೆನಾ-।
ನೆಂತೊರೆವೆ ಕಿರುನುಡಿಯ ಲೆನುತಿರ್ದೊಡಂ ॥
ಅಂತಹರ ಗುಣಗಳ ವ-। ದಂತಿ ಕಿವಿಬಳಿಗೈದಿ ।
ನಿಂತು ಚೋದಿಸಿ ತೆನ್ನ ಚಾಪಲ್ಯಕೆ ॥ ೯

ಗುಣದೋಷದರಿವಿದ್ದು । ಗುಣಗಳಾಚರಿಪ ಸ-।
ದ್ಗುಣಿಗಳೇ ಸಲ್ಲುವರು ಕೇಳಲಿದನು ॥
ಎಣಿಸೆ ಹೊನ್ನಿನ ಶುದ್ಧಿ-। ಗುಣವನಿಲ್ಲವೆ ಮಿಶ್ರ-
ಗುಣವ ನಗ್ನಿಯಲಿ ತಾ ಕಾಣುವಂತೆ ॥ ೧೦

ಜ್ಞಾನಿಗಳ ನಡುವೆ ಬಹು । ಮಾನಿತನು ತಾನೆನಿಸಿ ।
ಭಾನುಸುತ ಮನುವೆಂಬ ಪೆಸರನೊಂದಿ ॥
ಜ್ಞಾನನಿಧಿ ವೇದಗಳ । ತಾಣ ದೋಂಕಾರದೋಲ್ ।
ಕ್ಷೋಣೀಶರೊಳ ಗವನು ಮೊದಲಾದನು ॥ ೧೧

ವಿಮಲಕುಲ ವದರಲ್ಲಿ । ವಿಮಲತರ ವೆಂದೆನಿಸಿ ।
ಕಮನೀಯ ನಾಮದ ದಿಲೀಪನೆಂಬ ॥
ಸುಮತಿ ನೃಪಚಂದ್ರನು ಜನುಮ ತಾಳಿದನು ತಿಳಿವೊ ।
ಳಮೃತಾಬ್ಧಿಯೊಳಗಿಂದು ವುದಿಸಿದಂತೆ ॥ ೧೨

ವ್ಯೂಢೋರಸ್ಕೋ ವೃಷಸ್ಕಂದಃ ।
ಶಾಲಪ್ರಾಂಶುಃ ಮಹಾಭುಜಃ ॥
ಆತ್ಮ ಕರ್ಮಕ್ಷಮಂ ದೇಹಂ ।
ಕ್ಷಾತ್ರೋ ಧರ್ಮ ಇವಾಶ್ರಿತಃ ॥ ೧೩

ಸರ್ವಾತಿರಿಕ್ತ ಸಾರೇಣ ।
ಸರ್ವತೇಜೋಽಭಿಭಾವಿನಾ ॥
ಸ್ಥಿತಃ ಸರ್ವೋನ್ನತೇನೋರ್ವೀಂ ।
ಕ್ರಾಂತ್ವಾ ಮೇರು ರಿವಾತ್ಮನಾ ॥ ೧೪

ಆಕಾರಸದೃಶಪ್ರಜ್ಞಃ ।
ಪ್ರಜ್ಞಯಾ ಸದೃಶಾಗಮಃ ॥
ಆಗಮೈಃ ಸದೃಶಾರಂಭಃ ।
ಆರಂಭಸದೃಶೋದಯಃ ॥ ೧೫

ಭೀಮಕಾಂತೈಃ ನೃಪಗುಣೈಃ
ಸ ಬಭೂವೋಪಜೀವಿನಾಂ
ಅಧೃಷ್ಯ ತ್ವಾಭಿಗಮ್ಯಶ್ಚ ।
ಯಾದೋರತ್ನೈರಿವಾರ್ಣವಃ ॥ ೧೬

ರೇಖಾಮಾತ್ರ ಮಪಿ ಕ್ಷುಣ್ಣಾತ್ ।
ಆಮನೋಃ ವರ್ತ್ಮನಃ ಪರಂ ॥
ನ ವ್ಯತೀಯುಃ ಪ್ರಜಾ ಸ್ತಸ್ಯ ॥
ನಿಯಂತು ರ್ನೇಮಿವೃತ್ತಯಃ ೧೭

ಪ್ರಜಾನಾಮೇವ ಭೂತ್ಯರ್ಥಂ ।
ಸ ತಾಭ್ಯೋ ಬಲಿ ಮಗ್ರಹೀತ್ ॥
ಸಹಸ್ರ ಗುಣ ಮುತ್ಸ್ರಷ್ಟುಂ ।
ಆದತ್ತೇ ಹಿ ರಸಂ ರವಿಃ ೧೮

ಅಗಲವಾ ದೆಡೆಯುವಗೆ, ಹೆಗಲಿಂದ ಗೂಳಿ ಬಾ. ।
ಹುಗಳು ಬಲುಂ ನೀಳ ಮೆತ್ತರದಿ ಶಾಲವೃಕ್ಷ ॥
ಬಗೆಯೆ ನಿಜಕರ್ಮಕ್ಕೆ ಸೊಗಯಿಸುವ ದೇಹವನು ।
ಹೊಗುತಿರ್ದುದೋ ಕ್ಷತ್ರಧರ್ಮ ವೆನಲು ॥ ೧೩

ಎಲ್ಲಕುಂ ಸಾರದಲಿ ಬಲ್ಲಿತಹ, ಕಾಂತಿಗಳ ।
ನೆಲವಂ ಗೆಲ್ಲುತಿಹ, ತುಂಗತನದಿಂ–॥
ದೆಲ್ಲವುಂವಿುೂರಿಹವ– । ಗುಳ್ಳ ದೇಹದಿಂ ಧರೆ ।
ಯೆಲ್ಲವಂ ಹರಡಿಹನು ಮೇರುವಂತೆ ॥ ೧೪

ರೂಪಿಗೊಪ್ಪುವ ಬುದ್ಧಿ । ಯಾಪರಿಯ ಬುದ್ಧಿಗಾ ।
ಭೂಪಗಿಹ ಶಾಸ್ತ್ರಪರಿಚಯುಗಳೊಪ್ಪು ॥
ಆಪರಿಚಯಕ್ಕೊಪ್ಪು । ತಾ ಪಿಡಿದ ಕರ್ಮಗಳು ।
ಲೋಪಿಸದ ಕರ್ಮಕುಂ ಫಲಗಳೊಪ್ಪು ॥

ನೆಲೆಯು ಪಿಡಿದನು ಜೀವಿ–। ಗಳ ನರಸ ತನ್ನಲ್ಲಿ ।
ವಿುಳಿತವಹ ಭಯರಂಜನೆಯು ಗುಣಗಳಿಂದ ॥
ಬಳಿಸರಿಸೆ ಮೋಕ್ಷ ದೂರ–। ಗೊಳಿಸದಂ ತಿರುತಿಹನು ।
ಜಲಜಂತು ಮಣಿಗಳಿಂದಬ್ಧಿಯಂತೆ ॥ ೧೬

ಭೂರಥವ ನಿಯಮದಿಂ ॥ ದಾ ರಾಯ ನಡೆಸಲಿಕೆ ।
ತೇರಚಕ್ರದವೃತ್ತಿ ಜನಗಳಲ್ಲಿ ॥
ಬೇರೂರೆ, ಮನುವಿಟ್ಟ ದಾರಿಯಂನ್ನನುಸರಿಸು–।
ತಾರೊಂದು ಗೀರದುಂ ವಿುೀರದಿಹರು ॥ ೧೭

ಪ್ರಜೆಗಳೇಳಿಗೆಯನ್ನೆ । ಭಜಿಸಿ ಬಯಸುತ್ತ ಭೂ–
ಭುಜನು ಕರ ವವರಿಂದ ಪಡೆಯುತಿಹನು ॥
ನಿಜವು ಸಾಸಿರದಷ್ಟು । ಸೃಜಿಪಲೋಕುಗ ರವಿಯು ।
ಭುಜಿಸುವನು ರಸವ ತಾ ನೆಲ್ಲರಿಂದ ॥ ೧೮

ಸೇನಾಪರಿಚ್ಛದಸ್ತಸ್ಯ
ದ್ವಯಮೇವಾರ್ಥಸಾಧನಂ ॥
ಶಾಸ್ತ್ರೇಷ್ವ ಕುಂಠಿತಾ ಬುದ್ಧಿಃ ।
ಮೌರ್ವೀ ಧನುಷಿ ಚಾತತಾ ॥ ೧೯

ತಸ್ಯ ಸಂವೃತಮಂತ್ರಸ್ಯ ।
ಗೂಢಾಕಾರೇಂಗಿತಸ್ಯ ಚ
ಫಲಾನುಮೇಯಾಃ ಪ್ರಾರಂಭಾಃ ।
ಸಂಸ್ಕಾರಾಃ ಪ್ರಾಕ್ತನಾ ಇವ ॥ ೨೦

ಜುಗೋಪಾತ್ಮಾನ ಮತ್ರಸ್ತಃ !
ಭೇಜೇ ಧರ್ಮ ಮನಾತುರಃ ॥
ಅಗೃಧ್ನು ರಾದದೇ ಸೋಽರ್ಥಂ ।
ಅಸಕ್ತಃ ಸುಖ ಮನ್ವಭೂತ್ ॥ ೨೧

ಜ್ಞಾನೇ ಮೌನಂ, ಕ್ಷಮಾ ಶಕ್ತಿಃ, ।
ತ್ಯಾಗೇ ಶ್ಲಾಘಾವಿಪರ್ಯಯಃ ॥
ಗುಣಾಗುಣಾನು ಬಂಧಿತ್ವಾತ್ ।
ತಸ್ಯ ಸಪ್ರಸವಾ ಇವ ॥ ೨೨

ಅನಾಕೃಷ್ಟಸ್ಯ ವಿಷಯೈಃ ।
ವಿದ್ಯಾನಾಂ ಪಾರದೃಶ್ವನಃ ॥
ತಸ್ಯ ಧರ್ಮರತೇ ರಾಸೀತ್ ।
ವೃದ್ಧತ್ವಂ ಜರಸಾ ವಿನಾ ॥ ೨೩

ಪ್ರಜಾನಾಂ ವಿನಯಾಧಾನಾತ್
ರಕ್ಷಣಾತ್ ಭರಣಾದಪಿ
ಸ ಪಿತಾ ಪಿತರ ಸ್ತಾಸಾಂ ।
ಕೇವಲಂ ಜನ್ಮ ಹೇತವಃ ॥ ೨೪

ಚತುರಂಗ ಸೇನೆಯೋ । ಚತುರಂಗ ದುಪಕರಣ ॥
ಸತಿ ಗರ್ಥಸಾಧನಕ್ಕಿರುವುವೆರಡೆ ॥
ಅತುಲಶಾಸ್ತ್ರದವ್ಯಾ-। ಹತಬುದ್ಧಿಯೊಂದು ಶರ-।
ಪತನಕೇರಿಸಿದ ಚಾಪಗುಣವೊಂದು ॥ ೧೯

ಗುಟ್ಟಿನಲಿ ನೃಪಮಂತ್ರ-। ವಿಟ್ಟಿರುವ ಹೊರಗೊಳಗ ।ವ
ನಿಟ್ಟಿಸಲು ಗುಟ್ಟುಗಳ ರಟ್ಟಿಸದಿಹ ॥
ಜಟ್ಟಿ ಯುವ ದೊರೆತನದಿ । ನೆಟ್ಟ ಕಜ್ಜಗಳು ಫಲ-।
ಕೊಟ್ಟ ಮೇಲೂಹೆ, ಮುಂತೊಟ್ಟ ಹುಟ್ಟಿನಂತೆ ॥ ೨೦

ತನಗೆ ಭಯವಿರದೊಡಂ । ತನುವ ರಕ್ಷಿಪ ನಾತ-।
ನಿನಿಸು ರುಜೆ ಯಿರದೊಡಂ ಸುಕೃತ ಪೊಲಿವಂ ॥
ಧನವ ಕೊಂಬನು ಲುಬ್ಧ । ತನವಿರದೊಡಂ ಸೌಖ್ಯ-।
ವನುಭವಿಸುವಂ ವಿಷಯಸುಖವ ನ್ನೊದೆದು ॥ ೨೧

ತಿಳಿವಿರ್ದೊಡಂ ಮೌನ, । ಬಲವಿರ್ದೊಡಂ ಸಹನೆ, ।
ಸೆಳೆದಿತ್ತೊಡಂ ಹೊಗಳಿಕೊಳ್ಳದಿಹುದು ॥
ಇಳೆಯರಸ ನೀಗುಣಂಗ ಳೆಸೆದವು ।
ಕೆಳೆಗೊಳ್ಳು ತೊಡಹುಟ್ಟಿ ದವುಗಳಂತೆ ॥ ೨೨

ವಿಷಯಗಳ ಸೆಳೆತವನು । ಮೃಷೆಯೆನಿಸಿ ಶಾಸ್ತ್ರಗಳ ।
ವಿಷಯಗಳ ಲವುಗ ಳಂತವನೆ ಸಾರ್ದು ॥
ಕೃಷಿಯು ಧರ್ಮದೊಳೆ ನೃಪ-। ವೃಷಭ ಗಿರೆ ಮುಪ್ಪೆಂಬ ।
ವಿಷ ವಳಿದ ಮುದಿತನವು ಬಂದಿ ತವಗೆ ॥ ೨೩

ವಿನಯಪಥದೊಳ್ ॥ ಪ್ರಜೆಗಳನು ಶಿಕ್ಷಿಸುತಲಿ ರ-।
ಕ್ಷಣೆಯ ಗೈಯುತಲಿ, ಮೇಣ್ ಪೋಷಿಸುತಲಿ
ಜನಪ ಜನಗಳ ತಂದೆ । ಯೆನಿಸಿಹನು ಮತ್ತಪರ ।
ಜನಿಗೆ ಕೇವಲಹೇತುವವರ ಪಿತರು ॥ ೨೪

ಸ್ಥಿತ್ಯೈ ದಂಡಯತೋ ದಂಡ್ಯಾನ್ ।
ಪರಿಣೇತುಃ ಪ್ರಸೂತಯೇ
ಅಪ್ಯರ್ಥಕಾಮೌ ತಸ್ಯಾಸ್ತಾಂ
ಧರ್ಮ ಏವ ಮನೀಷಿಣಃ ॥ ೨೫

ದುದೋಹ ಗಾಂ ಸ ಯಜ್ಞಾಯ ।
ಸಸ್ಯಾಯ ಮಘವಾ ದಿವಂ ॥
ಸಂಪದ್ವಿನಿಮಯೇನೋಭೌ
ದಧತು ಭುರ್ವನದ್ವಯಂ ॥ ೨೬

ನ ಕಿಲಾನು ಯಯು ಸ್ತಸ್ಯ।
ರಾಜಾನೋ ರಕ್ಷಿತು ರ್ಯಶಃ ॥
ವ್ಯಾವೃತ್ತಾ ಯತ್ ಪರಸ್ವೇಭ್ಯಃ ।
ಶ್ರುತೌ ತಸ್ಕರತಾ ಸ್ಥಿತಾ ॥ ೨೭

ದ್ವೇಷ್ಯೋಽಪಿ ಸಮ್ಮತಃ ಶಿಷ್ಟ ಃ
ತಸ್ಯಾರ್ತೋಽಪಿ ಯಥೌಷಧಂ
ತ್ಯಾಜ್ಯೋ ದುಷ್ಟಃ ಪ್ರಿಯೋಽಪ್ಯಾಸೀತ್ ।
ಅಂಗುಳೀವೋರಗಕ್ಷತಾ ॥ ೨೮

ತಂವೇಧಾಃ ವಿದಧೇ ನೂನಂ ।
ಮಹಾಭೂತಸಮಾಧಿನಾ ॥
ತಥಾ ಹಿ ಸರ್ವೇ ತಸ್ಯಾಸನ್ ।
ಪರಾರ್ಥೈಕಫಲಾ ಗುಣಾಃ ॥ ೨೯

ಸ ವೇಲಾಪಪ್ರವಲಯಾಂ ।
ಪರಿಖೀಕೃತಸಾಗರಾಂ ॥
ಅನನ್ಯ ಶಾಸನಾಮುರ್ವೀಂ ।
ಶಶಾಸೈಕಪುರೀಮಿವ ॥ ೩೦

ಲಕ್ಷಿಸುತ ಜನಶುಖವ । ಶಿಕ್ಷೆ ಗರ್ಹರ ನವನು ।
ಶಿಕ್ಷಿಪನು ಸಂತತಿಗೆ ಸತಿಯು ಬಯಕೆ ॥
ರಕ್ಷಕಗೆ ಶಾಸ್ತ್ರದ ವಿ- । ಚಕ್ಷಣಗೆ ವರಧರ್ಮ- ।
ಪಕ್ಷವಹಿಸಿದ ವರ್ಥಕಾಮವೆನಲು ॥ ೨೫

ಕ್ರತುವಿಂಗೆ ಭುವಿಯನುಂ । ಕ್ಷಿತಿಭುಜನು, ಸಸ್ಯಕುಂ ।
ಕ್ರತುಭುಜೇಶನು ದಿವಮುನುಂ, ಹಿಂಡಿ ॥
ಪತಿಗಳೀರ್ವರು ಸಿರಿಯು । ತತಿ ಯೋರ್ವ ನೋರ್ವರ್ಗಂ ।
ಕ್ಷಿತಿನಾಕಲೋಕಗಳ ಪೊರದ ರಿತ್ತು ॥ ೨೬

ಉಳಿದ ನೃಪತಿಭಯವ । ಕಳೆದು ಪೊರೆ ವೀದೊರೆಯು ।
ಗಳಿಸಿರ್ದ ಯಶವೆಂದು ಮನುಕರಿಸರು ॥
ಕಳವು ತಾ ಪರರೊಡವೆ । ಬಳೆಯುರದೆ ಹಿಂದಿರುಗಿ ।
ನೆಲೆಸಿದುದೆ ಕಿವಿಬಳಿಯು ಲಿದಕೆ ಹೇತು ॥ ೨೭

ಶಿಷ್ಟನವ ವೈರಸಂ । ಪುಷ್ಟನಾದೊಡ ಮವಗೆ ।
ತುಷ್ಟಿ ಯೌಷಧಿಯಂತೆ ರೋಗದವಗೆ ॥
ದುಷ್ಟ ನೆನಿಸಿದೊಡೆ ತನ । ಗಿಷ್ಟಸಂಬಂಧಿ ಯು- ।
ಚ್ಛಿಷ್ಟ ಮವಗೆ ಪಾವಗಿದ ಬೆರಳಿನಂತೆ ॥ ೨೮

ಪುಟ್ಟಿಸುವ ದೇವ ತಾಂ । ಹುಟ್ಟಿಸಿರ ಬೇಕಿವನ- ।
ನೊಟ್ಟುಗೂಡಿಸಿ ಮಹಾಭೂತಗಳನು ॥
ನೆಟ್ಟಿಹುದು ಗುಣವೆಲ್ಲ । ವಿಟ್ಟಣಿಸು ತವನಲ್ಲಿ ।
ಕಟ್ಟಳೆಯು ಲೊಂದೆ ನಿಜ ಪರರರ್ಥವು ॥ ೨೯

ಕಡಲುಗಳ ದಂಡೆಗಳೆ । ಗಡಿಯು ಸುತ್ತಿನ ಕೋಟೆ, ।
ಕಡಲುಗಳೆ ಕೋಟೆಯನು ಸುತ್ತಿ ದಗಳು ॥
ಒಡೆಯನವ ಬೇರಾರು । ವೊಡಯುರಿರ ದಂತಿರುವ ।
ಪೊಡವಿ ಯಿದ ನೊಂದೆ ಪುರವೆನ ಲಾಳ್ದನು ॥ ೩೦

ತಸ್ಯ ದಾಕ್ಷಿಣ್ಯರೂಢೇನ ।
ನಾಮ್ನಾ ಮಗಧವಂಶಜಾ ॥
ಪತ್ನೀ ಸುದಕ್ಷಿಣೇತ್ಯಾಸೀತ್ ।
ಅಧ್ವರಸ್ಯೇವ ದಕ್ಷಿಣಾ ॥ ೩೧

ಕಳತ್ರವಂತಮಾತ್ಮಾನಂ ।
ಅವರೋಧೇ ಮಹತ್ಯಪಿ ॥
ತಯಾ ಮೇನೇ ಮನಸ್ವಿನ್ಯಾ ।
ಲಕ್ಷ್ಮ್ಯಾ ಚ ವಸುಧಾಧಿಪಃ ॥ ೩೨

ತಸ್ಯಾಂ ಆತ್ಮಾನುರೂಪಾಯಾಂ ।
ಆತ್ಮಜನ್ಮಸಮುತ್ಸುಕಃ ॥
ವಿಲಂಬಿತಫಲೈಃ ಕಾಲಂ ।
ಸ ನಿನಾಯ ಮನೋರಥೈಃ ॥ ೩೩

ಸಂತಾನಾರ್ಥಾಯ ವಿಧಯೇ ।
ಸ್ವಭುಜಾದವತಾರಿತಾ ॥
ತೇನ ಧೂರ್ಜಗತೋ ಗುರ್ವೀ ।

ಸಚಿವೇಷು ನಿಚಿಕ್ಷಿಪೇ ॥ ೩೪
ಅಥಾಭ್ಯರ್ಚ್ಯ ವಿಧಾತಾರಂ ।
ಪ್ರಯತೌ ಪುತ್ರ. ಕಾಮ್ಯಯಾ ॥
ತೌ ದಂಪತೀ ವಶಿಷ್ಠಸ್ಯ ।
ಗುರೋರ್ಜಗ್ಮತು ರಾಶ್ರಮಂ॥ ೩೫

ಸ್ನಿಗ್ಧ ಗಂಭೀರನಿರ್ಘೋಷಂ ।
ಏಕಂ ಸ್ಯಂದನ. ಮಾಸ್ಥಿತೌ ॥
ಪ್ರಾವೃಷೇಣ್ಯಂ ಪಯೋವಾಹಂ ।
ವಿದ್ಯುದೈರಾವತಾವಿವ ॥ ೩೬

ದಾಕ್ಷಿಣ್ಯಗುಣವೆಂಬ । ಲಕ್ಷಣದ ಮಗಧಕುಲ ।
ಕುಕ್ಷಿಯೊಳ್ ಜನ್ಮಗೊಂಡರಸುಗುವರಿ ॥
ಲಕ್ಷಿಸಲು ಪೆಸರೆಸೆ ಸು–। ದಕ್ಷಿಣೆಯೆ ಧರ್ಮಸತಿ ।
ದಕ್ಷಿಣೆಯು ಯಜ್ಞಸತಿ ಯೆನಿಸುವಂತೆ ॥ ೩೧

ಅರಸಿಸಂತಃಪುರದೊ । ಳರಸಿಯರು ಬಹುಮಂದಿ ।
ಮೆರೆದೊಡಂ ಪತಿಯ ಮನವೊಲಿಸುವಂಥ ॥
ಅರಸಿ ಯಿವಳಿಂದ ಮೇಣ್ । ಸಿರಿಯು ಸತಿಯಿಂದಲಾ–।
ದೊರೆಯು ತಾಂ ಗೃಹಧರ್ಮಿ ಯೆಂದೆಣಿಪನು ॥ ೩೨

ತನಗೆ ಹೆಗಲೆಣೆ ಯೆನಿಪ । ವನಿತೆಯಾಕೆಯಲಿ ನಿಜ–।
ತನುಜನನು ಪಡೆವ ಹೆಬ್ಬಯಕೆ ಯಿಂದ ॥
ಮನುಜಪತಿ ತಾ ತನ್ನ । ಮನತಣಿವ ಫಲನಿರೀ–।
ಕ್ಷಣೆಯೊಳಗೆ ದಿನಗಳೆನಿತೆನಿತೋ ಕಳೆದ್ಮಂ ೩೩

ಭೂಪತಿಯು ಸಂತತಿಯ । ತಾ ಪಡೆವ ವಿಧಿಗಳನು ।
ಲೋಪಿಸದಿರಲು ತನ್ನ ಹೆಗಲಿನೀದ ॥
ಭೂಪಾಲನೆಯ ಕಾರ್ಯ । ದಾಪರಿಯ ಭಾರವಂ ।
ಸ್ಥಾಪಿಸಿದ ನಂದಿಳುಹಿ ಸಚಿವರೊಳಗೆ ॥ ೩೪

ಬಳಿಕ ನಿರ್ಮಲ ಭಾವ । ದೊಳು ವಿಧಿಗೆ ಸುತನ ಹಂ.
ಬಲಿನಿಂದ ಲಾ ಗಂಡ ಹೆಂಡಿರಂದು ॥
ಒಲವಿನಿಂದರ್ಚನೆಯ । ಸಲಿಸಿ ತೆರಳಿದರು ರವಿ–।
ಕುಲಗುರು ವಶಿಷ್ಠನಾಶ್ರಮದ ಕಡೆಗೆ ॥ ೩೫

ಕಾರ್ಗಾಲದೋಳ್ನೆರೆದು । ಭೋರ್ಗರೆವ ಕಾರೆಂಬ ।
ತೇರ್ಗೇರ್ವ ಮಿಂಚು ಮುಗಿಲಾನೆಗಳೊಲು ॥
ಮಾರ್ಗದೋಳ್ ಗಂಭೀರ–। ದೂರ್ಗಾಲಿ ಯಿನಿ ದುಲಿವ ।
ತೇರ್ಗೇರಿ ಯೊಂದರೊಳೆ ಪೋದರವರು ॥ ೩೬

ಮಾ ಭೂದಾಶ್ರಮ ಪೀಡೇತಿ ।
ಪರಿಮೇಯಪುರಸ್ಸರೌ ॥
ಅನುಭಾವವಿಶೇಷಾತ್ ತು ।
ಸೇನಾಪರಿವೃತಾವಿವ ॥ ೩೭

ಸೇವ್ಯಮಾನೌ ಸುಖಸ್ಪರ್ಶೈಃ ।
ಶಾಲನಿರ್ಯಾಸಗಂಧಿಭಿಃ ॥
ಪುಷ್ಪರೇಣೂತ್ಕಿರೈ ರ್ವಾತೈಃ ।
ಆಧೂತವನರಾಜಿಭಿಃ ॥ ೩೮

ಮನೋಭಿರಾಮಾಃ ಶೃಣ್ವಂತೌ ।
ರಥನೇಮಿಸ್ವನೋನ್ಮುಖೈಃ ॥
ಷಡ್ಜಸಂವಾದಿನೀಃ ಕೇಕಾಃ ।
ದ್ವಿಧಾ ಭಿನ್ನಾಃ ಶಿಖಂಡಿಭಿಃ ॥ ೩೯

ಪರಸ್ಪರಾಕ್ಷಿಸಾದೃಶ್ಯಂ ।
ಅದೂರೋಜ್ಝಿತವರ್ತ್ಮಸು ॥
ಮೃಗದ್ವಂದ್ವೇಷು ಪಶ್ಯಂತೌ ।
ಸ್ಯಂದನಾಬದ್ಧದೃಷ್ಟಿಷು ॥ ೪೦

ಶ್ರೇಣೀ ಬಂಧಾ ದ್ವಿತನ್ವದ್ಭಿಃ ।
ಅಸ್ತಂಭಾಂ ತೋರಣಸ್ರಜಂ ॥
ಸಾರಸೈಃ ಕಲಾನಿರ್ಹ್ರಾದೈಃ ।
ಕ್ವಚಿದುನ್ನ ಮಿತಾನನೌ ॥ ೪೧

ಪವನಸ್ಯಾನುಕೂಲತ್ವಾತ್ ।
ಪ್ರಾರ್ಥನಾಸಿದ್ಧಿ ಶಂಸಿನಃ ॥
ರಜೋಭಿಃ ತುರಗೋತ್ಕೀರ್ಣೈಃ ।
ಅಸ್ಪೃಷ್ಟಾಲಕವೇಷ್ಟನೌ ॥ ೪೨

ಎಂದಿಗುಂ ಮುನಿವನಕೆ ‡ ತೊಂದರೆಯು ಬರಬಾರ ।
ದೆಂದು ಮಿತಪರಿವಾರ ವನ್ನೆ ಕೊಂಡು ॥
ಮುಂದರಿಯೆ ನಿಜತೇಜ–। ವೊಂದವರ ಬಳಸಿರಲು ।
ಚೆಂದ ತೋರಿತು ಸೇನೆ ಸುತ್ತಿದಂತೆ ॥ ೩೭

ಬಟ್ಟೆಯೊಳ ಗವರೊಡಲ । ಮುಟ್ಟಿ ಸುಖವೀವ, ರಸ ।
ತೊಟ್ಟ ಶಾಲತರುಗಂಧವನು ಪೊತ್ತ ॥
ಬಿಟ್ಟ ಹೂ ಹುಡಿಯು । ಕೆದ । ರಿಟ್ಟ, ಮರಸಾಲ ಕದ–।
ಲಿಟ್ಟ ತಂಗಾಳಿ ಸೇವಿಸಿದುದವರಂ ॥ ೩೮

ತೇರಗಾಲಿಗಳ ಗಂ–॥ ಭೀರರವಕೆ ಶಿಖಿಗಳ್ ।
ಮೋರೆಯೆತ್ತೊರಲಲಿಬ್ಬಗೆಯು ಲೊಷೆದ ॥
ತಾರಷಡ್ಜಮದ ಕೇ–। ಕಾರವವು ಮನಕಿಂಪು ।
ಬೀರ ಲದ ನಾಲಿಸುತ ನಡೆದರವರು ॥ ೩೯

ದಾರಿಯನು ಬಿಟ್ಟೋಡಂ ! ದೂರ ಸರಿಯದೆ ವಿಂತು ।
ತೇರಿನೊಳೆ ತಮ್ಮೆಲ್ಲ ದಿಟ್ಟಿಯಿಟ್ಟ ॥
ಸಾರಂಗ ಮಿಥುನಗಳ । ಚಾರುನಯನಗಳುಪಮೆ ।
ತೋರುವವರು ತಮ್ಮೊಳಗೆ ಸತಿಪತಿಯರು ॥ ೪೦

ಸಾರಸ ಖಗಂಗಳಾ । ಧಾರಕಂಭಗಳಿರದ ।
ತೋರಣಕೆ ಸಾಲಿನಲಿ ಮಾಲೆಗಟ್ಟಿ ॥
ಆರಾವ ದಿಂಪುಲಿಪು–। ಲಾ ರಾಜರಾಣಿಯರು ।
ಮೋರೆಗೆಳ ನಿನಿಸೆತ್ತಿ ನೋಡುತಿಹರು ॥ ೪೧

ಇಂಗಿತದ ಸಿದ್ಧಿ ಯಾವ । ರಿಂಗೆ ಬಹುದೆಂದೆನುತ ।
ತಂಗಾಳಿ ನುಡಿಯುತನುಕೂಲವೆನಿಸೆ ॥
ಮಂಗಳಾಂಗರ ರಥಹ–। ಯಂಗಳಿಂ ದೇಳ್ದತಿ ರ–।
ಜಂಗಳಂಟಿರವು ಮುಂಗುರುಳು ಪಾಗು ॥ ೪೨

ಸರಸೀಷ್ವರವಿಂದಾನಾಂ ।
ವೀಚಿವಿಕ್ಷೋಭಶೀತಲಂ ॥
ಆಮೋದಮುಪಜಿಘ್ರಂತೌ ।
ಸ್ವನಿಃಶ್ವಾಸಾನುಕಾರಿಣಂ ॥ ೪೩

ಗ್ರಾಮೇಷ್ವಾತ್ಮವಿಸೃಷ್ಟೇಷು ।
ಯೂಪಚಿಹ್ನೇಷು ಯಜ್ವನಾಂ ॥
ಅಮೋಘಾಃ ಪ್ರತಿಗೃಹ್ಣಂತೌ ।
ಅಘ್ರ್ಯಾನುಪದ ಮಾಶಿಷಃ ॥ ೪೪

ಹೈಯಂಗವೀನ ಮಾದಾಯ ।
ಘೋಷವೃದ್ಧಾನ್ ಉಪಸ್ಥಿತಾನ್ ॥
ನಾಮಧೇಯಾನಿ ಪೃಚ್ಛಂತೌ ।
ವನ್ಯಾನಾಂ ಮಾರ್ಗಶಾಖಿನಾಂ ॥ ೪೫

ಕಾಪ್ಯಭಿಖ್ಯಾ ತಯೋ ರಾಸೀತ್ ।
ವ್ರಜತೋಃ ಶುದ್ಧ ವೇಷಯೋಃ ॥
ಹಿಮನಿರ್ಮುಕ್ತಯೋ ರ್ಯೋಗೇ ।
ಚಿತ್ರಾಚಂದ್ರಮಸೋರಿವ ॥ ೪೬

ತತ್ತತ್ ಭೂಮಿಪತಿಃ ಪತ್ನ್ಯೈ ।
ದರ್ಶಯನ್ ಪ್ರಿಯದರ್ಶನಃ ।
ಅಪಿ ಲಂಘಿತ ಮಧ್ವಾನಂ ।
ಬುಬುಧೇ ನ ಬುಧೋಪಮಃ ॥ ೪೭

ಸ ದುಷ್ಪ್ರಾಪಯಶಾಃ ಪ್ರಾಪತ್ ।
ಆಶ್ರಮಂ ಶ್ರಾಂತವಾಹನಃ ।
ಸಾಯಂ ಸಂಯಮಿನ ಸ್ತಸ್ಯ ।
ಮಹರ್ಷೇ ಮಹಿಷೀಸಖಃ ॥ ೪೮

ಸರಸಿಗಳೊಳೆ ಡೆಯೊಡೆದ । ತೆರೆಗಳಿಂ ದೇಳ್ದ ತುಂ-।
ತುರುಗಳಿಂ ತಂಪೊಂದಿ ತಮ್ಮ ಮುಖದಿಂ ॥
ಪೊರಮೊಡುವ ಬಾಷ್ಪಕ ಣೆ-। ಯರವಿಂದದಿನಿಗಂಪ-।
ನೆರಸ ರಪಿಯರಂದು ಸೇವಿಸಿದರು ॥ ೪೩

ತನ್ನಿಂದ ತಾ ತೆತ್ತ । ಜನ್ನಗಂಬಗಳೆಂಬ ।
ಸನ್ನಿಯನ್ನೊಂದಿಹ ಗ್ರಾಮಗಳೊಳು ॥
ಜನ್ನಂಗ ಳೆಸಗಿದರ । ಮನ್ನಣೆಯಲಿರ್ಘ್ಯಂಗಳ ।
ಬೆನ್ನಿನಲೆ ಹರಕೆಗಳ ಪಡೆದರವರ ॥ ೪೪

ಅಂದಿನಾಕಳ ಬೆಣ್ಣೆ । ಯೊಂದಿ ತಂದಿಹ ಗೊಲ್ಲ-।
ಮಂದಿ ಮುದುಕರ ನಡವಿ ಹಾದಿ ಮರಕೆ ॥
ಪೊಂದಿಸಿದ ಪೆಸರುಗಳ । ಚಂದದಿಂ ಕೇಳುತಲಿ ।
ಮುಂದರಿದ ರಾ ರಾಜದಂಪತಿಗಳು ॥ ೪೫

ಪರಿಶುದ್ಧವೇಷವನು । ಧರಿಸಿ ಮುಂದರಿಯುವೀ-।
ರ್ವರಳೊಂದು ಬಗೆ ಶೋಭೆ ಚಿಮ್ಮುತಿಹುದು ॥
ಅರಿಯೆ ಶಿಶಿರದಾತೆರೆಯು । ಪರಿಯೆ ಚೈತ್ರೇಂದುಗಳು ।
ಬೆರೆಯಲಿಕೆ ಬಹುಕಾಂತಿ ಬೀರುವಂತೆ ॥ ೪೬

ಚೆಲುವುರೂಪನು ಪೊತ್ತ । ನೆಲದೊಡೆಯು ತನ್ನೊಲುಮೆ ।
ಲಲನೆಗಂದವ ನಿದನು ತೋರಿಸುತಲಿ ॥
ಬಲಿದ ಹಾದಿಯು ತಾನು । ಕಳೆದು ಮುನ್ನಡೆದುದಂ ।
ತಿಳಿಯುವನ ತಿಳಿವಿನಲಿ ಬುಧಗೆ ಸಮನು । ೪೭

ಗಳಿಸಲಾಗದ ಯಶವ । ಗಳಿಸಿರುವ ಪಟ್ಟದ ಮ-।
ಹಿಳೆಯೊಡಸರಿವ ನೃಪನು ರಥಹಯಗಳು ॥
ಬಳಲಿರಲು ಸಂಯಮಿಗ-। ಳೊಳು ಹಿರಿಯ ಪೆರ್ಮುನಿಯ ।
ನಿಳಯವನು ಸಂಜೆಯೊಳ್ ಪೊಕ್ಕನಂದು ॥ ೪೮

ವನಾಂತರಾತ್ ಉಪಾವೃತ್ತೈಃ |
ಸಮಿತ್ಕುಶಫಲಾಹರೈಃ ||
ಪೂರ್ಯಮಾಣ ಮದೃಶಾಗ್ನಿ-|
ಪ್ರತ್ಯುದ್ಯಾತೈಃ ತಪಸ್ವಿಭಿಃ || ೪೯

ಆಕೀರ್ಣಂ ಋಷಿಪತ್ನೀನಾಂ |
ಉಟಜದ್ವಾರರೋಧಿಭಿಃ ||
ಅಪತ್ಯೈರಿವ ನೀವಾರ-|
ಭಾಗಧೇಯೋಚಿತೈಃ ಮೃಗೈಃ || ೫೦

ಸೇಕಾಂತೇ ಮುನಿಕನ್ಯಾಭಿಃ |
ತಕ್ಷಣೋಜ್ಝಿತವೃಕ್ಷಕಂ ||
ವಿಶ್ವಾಸಾಯ ವಿಹಂಗಾನಾಂ |
ಆಲವಾಲಾಂಬುಪಾಯಿನಾಂ || ೫೧

ಆತಪಾತ್ಯಯಸಂಕ್ಷಿಪ್ತ-|
ನೀವಾರಾಸು ನಿಷಾದಿಭಿಃ ||
ಮೃಗೈಃ ವರ್ತಿತರೋಮಂಥಂ |
ಉಟಜಾಂಗಣಭೂಮಿಷು ೫೨

ಅಭ್ಯುತ್ಥಿತಾಗ್ನಿಪಿಶುನೈಃ |
ಅತಿಥೀನ್ ಆಶ್ರಮೋನ್ಮುಖಾನ್ ||
ಪುನಾನಂ ಪವನೋದ್ಧೂತೈಃ |
ಧೂಮೈರಾಹುತಿಗಂಧಿಭಿಃ || ೫೩

ಅಥಯಂತಾರಮಾದಿಶ್ಯ |
ಧುರ್ಯಾನ್ ವಿಶ್ರಾಮಯೇತಿ ಸಃ |
ತಾಮವಾರೋಪಯತ್ ಪತ್ನೀಂ |
ರಥಾದವತತಾರ ಸಃ || ೫೪

ನೆರೆಹೊರೆಯ ಕಾಡುಗಳ । ತಿರುಗಿ ಫಲಕೃಶ ಹುಳ್ಳಿ-।
ಹೊರೆ ಹೊತ್ತು ತರುತಿರುವ ತವಸಿಗಳನು ॥
ಬರಮಾಡಲಿದಿರೆದ್ದು । ತೆರೆಮರೆಯ ಹೋಮಾಗ್ನಿ ।
ಮರೆಯಲವರಾಶ್ರಮವ । ತುಂಬಿರುವರು ॥ ೪೯

ನೀವಾರ ಧಾನ್ಯಗಳ । ತಾವಾಗಿ ಭಾಗವ-।
ನ್ನೀವುದಕೆ ಹೊಣೆಯೆಂದು ಮೃಗನಿವಹವು ॥
ಭಾವಿಸಲು ತವಸಿಯರು । ತಾವೊಡೆದ ಶಿಶುಗಳೆನ-।
ಲಾವರಿಸಿತೆಲೆವನೆಯ ತಲೆವಾಗಿಲ ॥ ೫೦

ಗಿಡಗಳಿಗೆ ನೀರೆರೆಯು । ತೊಡನೆ ಮುನಿಕನ್ಯೆಯರು ।
ಬಿಡುತೆಡೆಯ ಸರಿದಿರಲು ಸಂಬಿಕೆಯ ತಾ-
ವೊಡೆದು ಹಕ್ಕಿಗಳು ಗಿಡ-। ದಡಿಯ ಪಾತಿಯ ನೀರ ।
ಕುಡಿಯುತಿಹವಾ ತಪೋವನದೆಡೆಯೊಳು ॥ ೫೧

ಬಿಸಿಲುಗಳೆಯಲಿಕೊಂದು । ದೆಸೆಗೆಯ್ದು ಪುಲ್ಗಾಳು-।
ಗಳನೊಂದಿ ದೆಲೆವನೆಗ ಳಂಗಣದೊಳು ॥
ಒಲಿದು ತಾವಲ್ಲಲ್ಲಿ । ಮಲಗುತ್ತಲೆರಳೆಗಳು ।
ಮೆಲುಕುತ್ತ ನೆರೆದಿಹವು ಮುನಿವನದೊಳು ॥ ೫೨

ಎದ್ದುರಿವ ಹೋಮಾಗ್ನಿ । ಯಿದ್ದುದನು ಸೂಚಿಸುವ
ಮೆದ್ದು ಹವಿಗಂಧಗಳ ಹೊತ್ತು ತರುವ ॥
ಉದ್ದದೆಲರಿಂ ಹೊಗೆಯು- ಲದ್ದದ್ದಿ ವನದ ಸರ-।
ಹದ್ದಿನೊಳಗತಿಥಿಗಳು ಕೊಳೆ ತೊಳೆವರು ॥ ೫೩

ಬಳಿಕಲವ ರಥಹಯಂ । ಗಳಿಗಾದ ಬಳಲಿಕೆಯ ।
ಕಳೆಯೆಂದು ಸಾರಥಿಗೆ ನೇಮವಿತ್ತು ॥
ಇಳೆಯರಸ ತನ್ನೊಲುಮೆಗೆಳತಿಯನು ರಥದಿಂದ ।
ಕೆಳಗಿಳಿಸಿದಂ ಮತ್ತೆ ತಾನಿಳಿದನು ॥ ೫೪

ತಸ್ಮೈ ಸಭ್ಯಾಃ ಸಭಾರ್ಯಾಯ ।
ಗೋಪ್ತ್ರೇ ಗುಪ್ತತಮೇಂದ್ರಿಯಾಃ ॥
ಅರ್ಹಣಾ ಮರ್ಹತೇ ಚಕ್ರುಃ ।
ಮುನಯೋ ನಯಚಕ್ಷುಷೇ ॥ ೫೫

ವಿಧೇಃ ಸಾಯಂತನಸ್ಯಾಂತೇ ।
ಸ ದದರ್ಶ ತಪೋನಿಧಿಂ ॥
ಅನ್ವಾಸಿತಂ ಅರುಂಧತ್ಯಾ ।
ಸ್ವಾಹಯೇವ ಹವಿರ್ಭುಜಂ ॥ ೫೬

ತಯೋಃ ಜಗೃಹತುಃ ಪಾದಾನ್ ॥
ರಾಜಾ ರಾಜ್ಞೀ ಚ ಮಾಗಧೀ ॥
ತೌ ಗುರು ಗುರ್ರುಪತ್ನೀ ಚ ।
ಪ್ರೀತ್ಯಾ ಪ್ರತಿನನಂದತುಃ ೫೭

ತಮಾತಿಥ್ಯಕ್ರಿಯಾಶಾಂತ ।
ರಥಕ್ಷೋಭಪರಿಶ್ರಮಂ ॥
ಪ್ರಪಚ್ಛ ಕುಶಲಂ ರಾಜ್ಯೇ ।
ರಾಜ್ಯಾಶ್ರಮಮುನಿಂ ಮುನಿಃ ೫೮

ಅಥಾಥರ್ವನಿಧೇ ಸ್ತಸ್ಯ ।
ವಿಜಿತಾರಿಪುರಃ ಪುರಃ ॥
ಅರ್ಥ್ಯಾ ಮರ್ಥಪತಿ ರ್ವಾಚಂ ।
ಆದದೇ ವದತಾಂವರಃ ॥ ೫೯

ಉಪಪನ್ನಂ ನನು ಶಿವಂ ।
ಸಪ್ತಸ್ವಂಗೇಷು ಯಸ್ಯ ಮೇ ॥
ದೈವೀನಾಂ ಮಾನುಷೀಣಾಂ ಚ ।
ಪ್ರತಿಹರ್ತಾ ತ್ವಮಾಪದಾಂ ॥ ೬೦

ಗೌರವವಗಳಿಸಿ ವಿಂತಿ । ಮೀರಿ ವಿಷಯಂಗಳನು ।
ತೋರಿರ್ದ ಮುನಿವರರು ಸತಿಯುಂ ಕೂಡಿ ॥
ಆರಕ್ಷಕಂ ನ್ಯಾಯ- ಸಾರೇಕ್ಷಣಂ ಬಲಲು ।
ಬೇಂದರು ಪೂಜ್ಯಂಗೆ ಪೂಜೆಗಳನು ॥ ೫೫

ದಿನದಂತ್ಯ ನಿಯಮಂಗಳು । ಕೊನೆಗೊಂಡ ತತ್ ಕ್ಷಣವೆ ।
ಸನಿಹದೊಳರುಂಧತೀ ದೇವಿಯೊಡನೆ ॥
ಅನುಗೊಂಡು ಕುಳಿತಿರುವ । ಮುನಿಪತಿಯು ನವ ಕಂಡ ।
ವನಿತೆಯಾ ಸ್ವಾಹೆಯೆಡೆಹುತಭುಜನೊಲು ॥ ೫೬

ಒಡನೆ ಮುನಿದಂಪತಿಗ । ಳಡಿಗಳನು ಪೊಡವಿಪನು ।
ಮೊಡತಿ ಮಗಧ ಕುಮಾರಿಯುಂ ಪಿಡಿದರು ॥
ಪೊಡಮಡುವರೀರ್ವರಲಿ । ಹಡೆದು ಸಂಮುದವ ಗುರು ।
ಮಡದಿ ಗುರುಮವರ ಹರಸಿದರು ಮರಳಿ ॥ ೫೭

ತನಗೊದವಿದುಪಚಾರ–। ವನು ಪೊಂದಿ ರಥಗತಿಯ–।
ಲನುಭವಿಸಿದ ಶ್ರಮವನೊಡನೆ ಕಳೆದ ॥
ಮನುಜರಾಜ್ಯಾಶ್ರಮದ । ಮುನಿಯು ನಂದಾಶ್ರಮದ ।
ಮುನಿ ಯುವನ ರಾಜ್ಯದೊಳು ಸುಖನ ಕೇಳ್ದಂ ॥ ೫೮

ಅರಿಪುರಂಗಳ ಗೆಲ್ದು । ವರವಚನೆ ಗುರುವೆನಿಸಿ ।
ಸಿರಿಯರಸ ನಾರ್ಥವವೇದ ನಿಧಿಯೆ ॥
ಗುರು ಪುರೋಹಿತನಾಗೆ । ಪುರದೊಳಾಂತಂ ಗಥ––।
ಸರಣಿಯೊಳಗುಕ್ತಿಯನು ಬಳಿಕ ಕೊಂಡ ॥ ೫೯

ಯಾವೆನ್ನ ಸಪ್ತಾಂಗ–। ವಾವಗುಂ ಮಂಗಳಕೆ ।
ತಾವೆನಿಸುತಿಹುದೊ ನುಡಿಯದುವೆ ಸತ್ಯ ॥
ಭಾವಿಸಲು ಮನುಜನಿಂ । ದೈವದಿಂ ದಾಪದಗ–।
ಳಾವುವವ ಕೆಲ್ಲಕುಂ ತಡೆಯು ನೀನೆ ॥ ೬೦

ತವ ಮಂತ್ರಕೃತೋ ಮಂತ್ರೈಃ ।
ದೂರಾತ್ ಪ್ರಶಮಿತಾರಿಭಿಃ ॥
ಪ್ರತ್ಯಾದಿಶ್ಯಂತ ಇವ ಮೇ ।
ದೃಷ್ಟಲಕ್ಷ್ಯಭಿದಃ ಶರಾಃ ೬೧

ಹವಿರಾವರ್ಜಿತಂ ಹೋತಃ ।
ತ್ವಯಾ ವಿಧಿವದಗ್ನಿಷು ।
ವೃಷ್ಟಿ ರ್ಭವತಿ ಶಸ್ಯಾನಾಂ ।
ಅವಗ್ರಹವಿಶೋಷಿಣಾಂ ॥ ೬೨

ಪುರುಷಾಯುಷಜೀವಿನ್ಯೋ ।
ನಿರಾತಂಕಾ ನಿರೀತಯಃ ॥
ಯನ್ಮದೀಯಾಃ ಪ್ರಜಾಸ್ತಸ್ಯ ।
ಹೇತುಃ ತ್ವದ್ಬ್ರಹ್ಮವರ್ಚಸಂ ॥ ೬೩

ತ್ವಯೈವಂ ಚಿಂತ್ಯಮಾನಸ್ಯ ।
ಗುರುಣಾ ಬ್ರಹ್ಮಯೋನಿನಾ ॥
ಸಾನುಬಂಧಾಃ ಕಥಂ ನ ಸ್ಯುಃ ।
ಸಂಪದೋ ಮೇ ನಿರಾಪದಃ ॥ ೬೪

ಕಿಂ ತು ವಧ್ವಾಂ ತವೈತಸ್ಯಾಂ ।
ಅದೃಷ್ಟಸದೃಶಪ್ರಜಂ ॥
ನ ಮಾಮವತಿ ಸದ್ವೀಪಾ ।
ರತ್ನಸೂರಪಿ ಮೇದಿನೀ ॥ ೬೫

ನೂನಂ ಮತ್ತಃ ಪರಂ ವಂಶ್ಯಾಃ ।
ಪಿಂಡವಿಚ್ಛೇದದರ್ಶಿನಃ ।
ನ ಪ್ರಕಾಮಭುಜಃ ಶ್ರಾದ್ಧೇ ॥
ಸ್ವಧಾಸಂಗ್ರಹತತ್ಪರಾಃ ॥ ೬೬

ಮಂತ್ರಪಿತನಹ ನಿನ್ನ । ಮಂತ್ರಗಳಿಗೆ ಶತ್ರು-।
ತಂತ್ರಗಳು ದೂರದಿಂ ಕೈಮುಗಿವುವು ॥
ಮಂತ್ರಂಗಳವು ಗುರಿಯು । ಯಂತ್ರಗಳ ಬಿರಿದೆನ್ನ ।
ಜಂತ್ರದಂಬುಗಳ ಹೀಗಳೆವುವೆನಲು ॥ ೬೧

ಹೋಮಕರ್ತೃವೆ ನೀನು । ನೇಮದಲಿ ಹವಿಗಳಿಂ ।
ಹೋಮಾಗ್ನಿಗಳ ತುಷ್ಟಿಪಡಿಸಲದುವೆ ॥
ಭೂಮಿಯೊಳ್ ಮಳೆನೀರ । ಕಾಮಿಸುತ ಸಸ್ಯದ ।
ಸ್ತೋಮವೊಣಗಲ್ಕದಕೆ ವೃಷ್ಟಿ ಕಹುದು ॥ ೬೨

ಈತಿಬಾಧೆಗಳಿರದೆ । ಭೀತಿಭಯಗಳ ತೊರೆದು ।
ಕೂತಿಹುದು ಶತವರ್ಷ ವೆನ್ನ ಜನವು ॥
ಈ ತೆರೆದ ಫಲಗಳಿಗೆ । ಹೇತು ನಿನ್ನೀ ಬ್ರಹ್ಮ-।
ಜ್ಯೋತಿಯೆಂಬ ಧ್ಯಾನ ನಿಯಮ ಹೌದು ॥ ೬೩

ಈ ಪರಿಯಲೆನ್ನ ಹಿತ । ಕಾಪಾಡಲೆಣಿಸಿ ನೀ-।
ನಾಪಿತಾಮಹಗಣಗ ನಾಗಿ ನೆನೆಯೆ ॥
ತಾಪಕೀಡಾಗದಿಹ । ಕಾಪಿನಿಂ ಸಂಪದವು ।
ಗೋಪನಿರಲೆಂತೆನ್ನ ನೆಡೆಬಿಡುವುದು ॥ ೬೪

ಆದೊಡೆಯು ವಿಪ್ರ ನಿನ್ನ । ಸಾದರದ ಸೊಸೆಯೊಳೆನ್ನ-।
ಗಾದುದಿಲ್ಲೆಂದಿಗುಂ ತಕ್ಕ ಶಿಶುವು ॥
ಈದೊಡಂ ಸದ್ವೀಪ । ಮೇದಿನಿಯು ರತ್ನಗಳ ।
ಮೋದ ಮೊಂತೀಯಂದದು ಮೆನ್ನಮನಕೆ ॥ ೬೫

ನನ್ನ ಪೂರ್ವಜರೆಲ್ಲ । ರೆನ್ನನಂತರ ಪಿಂಡ-।
ವಿನ್ನಿಲ್ಲದಂದರಿದು ಶ್ರಾದ್ಧದಲಿ ॥
ಅನ್ನವಂ ತುಷ್ಟಿಯಿಂ । ತನ್ನದಾ ಸ್ವಧೆಯಂಶ ।
ವನ್ನಕೂಡಿಡಲು ತೊಡಗುವರು ನಿಜವು ॥ ೬೬

ಮತ್ಪರಂ ದುರ್ಲಭಂ ಮತ್ವಾ ।
ನೂನ ಮಾವರ್ಜಿತಂ ಮಯಾ ॥
ಪಯಃ ಪೂರ್ವೈಃ ಸ್ವನಿಶ್ವಾಸೈಃ ।
ಕವೋಷ್ಣ ಮುಪಭುಜ್ಯತೇ ॥ ೬೭

ಸೋಽಹಂ ಇಜ್ಯಾ ವಿಶುದ್ಧಾತ್ಮಾ ।
ಪ್ರಜಾಲೋಪನಿಮೀಲಿತಃ ॥
ಪ್ರಕಾಶಶ್ಚಾಪ್ರಕಾಶಶ್ಚ ।
ಲೋಕಾಲೋಕ ಇವಾಚಲಃ ॥ ೬೮

ಲೋಕಾಂತರಸುಖಂ ಪುಣ್ಯಂ ।
ತಪೋದಾನಸಮುದ್ಭವಂ ॥
ಸಂತತಿಃ ಶುದ್ಧ ವಂಶ್ಯಾ ತು ।
ಪರತ್ರೇಹ ಚ ಶರ್ಮಣೇ ॥ ೬೯

ತಯಾ ಹೀನಂ ವಿಧಾತ ಮಾಂ ।
ಕಥಂ ಪಶ್ಯನ್ ನ ದೂಯಸೇ ? ॥
ಸಿಕ್ತಂ ಸ್ವಯಂ ಮಿವ ಸ್ನೇಹಾತ್ ।
ವಂಧ್ಯ ಮಾಶ್ರಮವೃಕ್ಷಕಂ ॥ ೭೦

ಅಸಹ್ಯಪೀಡಂ ಭಗವನ್ ।
ಋಣಮಂತ್ಯ ಮವೇಹಿ ಮೇ ॥
ಅರುಂತುದ ಮಿವಾಲಾನಂ ।
ಅನಿರ್ವಾಣಸ್ಯ ದಂತಿನಃ ೭೧

ತಸ್ಮಾತ್ ಮುಚ್ಯೇ ಯಥಾ ತಾತ ! ।
ಸಂವಿಧಾತುಂ ತ್ವ ಮರ್ಹಸಿ ॥
ಇಕ್ಷ್ವಾಕೂಣಾಂ ದುರಾಪೇಽರ್ಥೇ ।
ತ್ವದಧೀನಾ ಹಿ ಸಿದ್ಧಯಃ ॥ ೭೨

ಎನ್ನ ಬಳಿಕಿನ್ನಿಲ್ಲ ವೆನ್ನುತಲಿ ದುಗುಡದಿಂ ।
ದೆನ್ನ ಪಿತರುಗಳೆಲ್ಲ ನಿಯಮವಂ ಬಿಡದೆ ॥
ನನ್ನಿಂದ ಲಿತ್ತ ಜಲ-। ವನ್ನು ತಮ್ಮುಸಿರಿಂದ ।
ತಣ್ಣಸವ ಬಿಸಿಮಾಡಿ ಕುಡಿವರವರು ॥ ೬೭

ಯಾಗದಿಂ ವಿಮಲಾತ್ಮ-। ನಾಗೆಸೆದು ಸಂತಾನ-।
ವಾಗದಿಹ ತಮವು ಕವಿದಿರಲಿಕಾನು ॥
ಭಾಗವೊಂದರಲಿ ಬೆಳ-। ಕಾಗಿ ಬೇರೆಡೆಯೊಳದ ।
ನೀಗಿದಾ ಗಿರಿಚಕ್ರಪಾಳಕೆಣೆಯು ॥ ೬೮

ಅರಿಯೆ, ದಾನಪ ತಪವ। ನಿರದೆಸಗಿದಾ ಪುಣ್ಯ-।
ವಿರುವುದದು ಪರಲೋಕಸುಖಕೆ ಮಾತ್ರ ॥
ಪರಿಶುದ್ಧ ಕುಲವನು-। ದ್ಧರಿಪ ಸಂತತಿಯುಹಡೆ ।
ಪರಲೋಕ ದಿಹಲೋಕ ದಿಹುದು ಸುಖಕೆ ॥ ೬೯

ಪುಟ್ಟಿಸಲು ಶಕ್ತ । ಮಗು । ಹುಟ್ಟನರಿಯದ ನನ್ನ ।
ನಿಟ್ಟಿಸಿಯು ನಿನ್ನ ಮನ ನೋಯದೆಂತು? ॥
ನೆಟ್ಟು ನೀನೇ ಜಲವನೊಲಿ-। ದಿಟ್ಟು ಗಿಡಕಾಶ್ರಮದಿ ।
ಪುಟ್ಟದಿರೆ ಫಲವದಕೆ ದುಗುಡಿಪಂತೆ ॥ ೭೦

ತಡೆಯಲಾಗದ ದುಗುಡ। ಮಿಡುತಿಹುದು ।
ಕಡೆಯ ಋಣವಿದು ಮಹಾತ್ಮ ! ಮನಗಾಣು ॥
ಒಡಲು ಮಜ್ಜನವನ್ನು । ಪಡೆಯದಿಹ ಸಲಗನನು ।
ತಡೆದು ಮನಸುಡುವ ತಹಿಗಂಬದಂತೆ ॥ ೭೧

ಅಪ್ಪ! ಋಣವಿದ ತಪ್ಪಿಸುವೆನೆಂತು? ನನ-।
ಗೊಪ್ಪೆನಿಪ ಹಾದಿಯದ ನೀನೆ ತೋರೈ ॥
ಬೊಪ್ಪನಿಕ್ಷ್ವಾಕುವಿಂ । ಬಪ್ಪ ನೃಪರಿಂಗೆ ಸಿಗ-।
ದಿಪ್ಪ ಬಯಕೆಯು ಸಿದ್ಧಿ ನಿನ್ನದೈಸೆ ॥ ೭೨

ಇತಿ ವಿಜ್ಞಾಪಿತೋ ರಾಜ್ಞಾ ।
ಧ್ಯಾನಸ್ತಿಮಿತಲೋಚನಃ।
ಕ್ಷಣಮಾತ್ರ ಮೃಷಿಸ್ತಸ್ಥೌ।
ಸುಪ್ತಮೀನ ಇವ ಹ್ರದಃ॥ ೭೩

ಸೋಽಪಶ್ಯತ್ ಪ್ರಣಿಧಾನೇನ।
ಸಂತತೇಃ ಸ್ತಂಭಕಾರಣಂ॥
ಭಾವಿತಾತ್ಮಾ ಭುವೋ ಭರ್ತುಃ ।
ಅಥೈನಂ ಪ್ರತ್ಯ ಬೋಧಯತ್ ॥ ೭೪

ಪುರಾ ಶಕ್ರ ಮುಪಸ್ಥಾಯ ।
ತವೋರ್ವೀಂ ಪ್ರತಿಯಾಸ್ಯತಃ ॥
ಆಸೀತ್ ಕಲ್ಪತರುಚ್ಛಾಯಾಂ ।
ಆಶ್ರಿತಾ ಸುರಭಿಃ ಪಥಿ ೭೫

ಧರ್ಮಲೋಪಭಯಾತ್ ರಾಜ್ಞೀಂ ।
ಋತುಸ್ನಾತಾಂ ಇಮಾಂ ಸ್ಮರ
ಪ್ರದಕ್ಷಿಣಕ್ರಿಯಾರ್ಹಾಯಾಂ ।
ತಸ್ಯಾಂ ತ್ವಂ ಸಾಧು ನಾಚರಃ ೭೬

ಅವಜಾನಾಸಿ ಮಾಂ ಯಸ್ಮಾತ್ ।
ಅತಸ್ತೇನ ಭವಿಷ್ಯತಿ ॥
ಮತ್ಪ್ರಸೂತಿ ಮನಾರಾಧ್ಯ ।
ಪ್ರಜೇತಿ ತ್ವಾಂ ಶಶಾಪ ಸಾ ॥ ೭೭

ಸ ಶಾಪೋ ನ ತ್ವಯಾ ರಾಜನ್ ।
ನ ಚ ಸಾರಥಿನಾ ಶ್ರುತಃ ॥
ವದತ್ಯಾಕಾಶಗಂಗಾಯಾಃ ।
ಸ್ರೋತ ಸ್ಯುದ್ದಾ ಮದಿಗ್ಗಜೇ ॥ ೭೮

ಈ ಪರಿಯು ನೃಪನವಿ ।ಜ್ಞಾಪನೆಯು ಕೇಳ್ದೊಡನೆ ।
ತಾಪಸಂ ಧ್ಯಾನದಿಂ ಕ್ಷಣದ ಕಾಲ॥
ಸ್ಥಾಪಿಸುತ ಲಕ್ಷಿಗಳ ।ಪಾಪೆಗಳನವ ನಂದು ।
ಕೂಪದಂತಿಹನು ಮೀನು ನಿದ್ರಿಸುವ ॥ ೭೩

ಮನವ ನೊಂದೆಡೆ ನಿಲಿಸಿ। ಮುನಿಪನಂತಃಕರಣ. ।
ವನು ಶುದ್ಧ ಗೊಳಿಸಿ ಭೂಪಾಲಕಂಗೆ॥
ಇನಿತು ದಿನ ಸಂತಾನ.। ಜನಿಸದಿಹ ಕಾರಣವ ।
ನೆನೆದರಿದು ಬಳಿಕವಗೆ ನೆನಪು ಕೊಟ್ಟಂ ॥ ೭೪

ಪಿಂದೆ ನೀಂ ವಾಸವಂ-। ಗೊಂದಿಸುತ ಸೇವೆಯಂ ।
ಹಿಂದಿರುಗುತಿರಲಿಳೆಗೆ ಹಾದಿಯಲ್ಲಿ ॥
ನಂದನೋದ್ಯಾನ ಹರಿ-। ಚಂದ್ರನದ ನೆರಳ ತಾ-।
ಹೊಂದಿಕೊಂಡಿತ್ತಂದು ಕಾಮಧೇನು ॥ ೭೫

ರಾಣಿಯಾಕೆಯು ಋತು-। ಸ್ನಾನಗೈದಾ ದಿನವ ।
ನೀ ನೆನೆದು ಧರ್ಮಲೋಪಕ್ಕೆ ಬೆದರಿ ॥
ಧೇನುವಂ ಸುತ್ತಿಡುವ। ಮಾನಿತರ ಕರ್ತವ್ಯ-।
ಹೀನತೆಯು ನಿನಗವಳಲೊಪ್ಪೆನಿಸದು ॥ ೭೬

ಎನ್ನ ವಿಷಯದಲಿಂತು । ನಿನ್ನ ನಿಕೃತಿಯು ತೋರಿ ।
ಮನ್ನಣೆಯ ನೆಸಗದಿಹ ಹೇತುವಿಂದ ॥
ಎನ್ನ ಸಂತತಿಸೇವೆ-। ಯನು ಬಿಟ್ಟನ್ನಿಲ್ಲ ।
ನಿನ್ನ ಸಂತತಿ ಯೆಂಬು ದದರ ಶಾಪ ॥ ೭೭

ಗಗನಗಂಗೌಘದೊಳು । ಮಿಗಿಲು ದಿಗ್ದಂತಿಗಳು ।
ಹೊಗುತ ಬಹುಶಬ್ದವನು ಗೈಯುತಿರಲು ॥
ಬಗೆಯಲಾಶಾಪ ಕಿವಿ-। ಪುಗದು ನಿನಗು, ಸಾರ-
ಥಿಗು, ಮೇರದವನ ಕರ್ಣದೆಡೆಯಂ ॥ ೭೮

ಈಪ್ಸಿತಂ ತದವಜ್ಞಾನಾತ್ ।
ವಿದ್ಧಿ ಸಾರ್ಗಳ ಮಾತ್ಮನಃ ॥
ಪ್ರತಿಬಧ್ನಾತಿ ಹಿ ಶ್ರೇಯಃ ।
ಪೂಜ್ಯಪೂಜಾವ್ಯತಿಕ್ರಮಃ ೭೯

ಹವಿಷೇ ದೀರ್ಘಸತ್ರಸ್ಯ ।
ಸಾ ಚೇದಾನೀಂ ಪ್ರಚೇತಸಃ ॥
ಭುಜಂಗಪಿಹಿತದ್ವಾರಂ ।
ಪಾತಾಳಮಧಿತಿಷ್ಠತಿ ॥ ೮೦

ಸುತಾಂ ತದೀಯಾಂ ಸುರಭೇಃ ।
ಕೃತ್ವಾ ಪ್ರತಿನಿಧಿಂ ಶುಚಿಃ ॥
ಆರಾಧಯ ಸಪತ್ನೀಕಃ ।
ಪ್ರೀತಾ ಕಾಮದುಘಾ ಹಿ ಸಾ ॥ ೮೧

ಇತಿ ವಾದಿನ ಏವಾಸ್ಯ ।
ಹೋತು ರಾಹುತಿಸಾಧನಂ ॥
ಅನಿಂದ್ಯಾ ನಂದಿನೀ ನಾಮ ।
ಧೇನು ರಾವವೃತೇ ವನಾತ್ ॥ ೮೨

ಲಲಾಟೋದಯ ಮಾಭುಗ್ನಂ ।
ಪಲ್ಲವಸ್ನಿಗ್ಧಪಾಟಲಾ ॥
ಬಿಭ್ರತೀ ಶ್ವೇತರೋಮಾಂಕಂ ।
ಸಂಧ್ಯೇವ ಶಶಿನಂ ನವಂ ॥ ೮೩

ಭುವಂ ಕೋಷ್ಣೇನ ಕುಂಡೋಧ್ನೀ ।
ಮೇಧ್ಯೇನಾವಭೃತಾದಪಿ ॥
ಪ್ರಸ್ರವೇಣಾಭಿವರ್ಷಂತೀ ।
ವತ್ಸಾಲೋಕಪ್ರವರ್ತಿನಾ ॥ ೮೪

ಈ ರೀತಿಯುದಕಿಳಿಕೆ । ದೊರೆ ನಿನ್ನಣಿಕೆಯೀ-।
ಡೇರದಂತಾದುದದೆ ತಡೆಯು ನಿನಗೆ ॥
ಗೌರವಕೆ ಪಾತ್ರರಂ । ಗೌರವಿಸದಿರುವುದದೆ ।
ಭಾರಿ ತಡೆ ಯೇಳಿಗೆಗೆ ನಿಜವು ಭೂಪ! ॥ ೭೯

ಸುರಭಿಯುದು ಬಹುದಿನಾ-। ಚರಿಪ ಯಾಗವ ತೊಟ್ಟು ।
ವರುಣದೇವಗೆ ಹವಿರ್ದ್ರವ್ಯಗಳನು ॥
ಇರದೀಗಲೊದಗಿಸಲಿ । ಕುರಗಂಗಳಿಂ ಜಡಿವ ।
ಹೊರಬಾಗಿಲಿನ ರಸಾತಲದೊಳಿಹುದು ॥ ೮೦

ಸುರಭಿಮಗಳನು ನೀನು । ಸುರಭಿಯೆಂದೇ ನೆನೆದು ।
ಪರಿಶುದ್ಧಭಾವದಿಂ ಸತಿಯು ಕೂಡಿ ॥
ನಿರುತ ಸೇವೆಯ ಮಾಡು-। ತಿರುತವಳ-ಗೊಲವೀಯೆ ।
ಕರೆವಳೈ ನಿಜ ನಿನ್ನಬಯಕೆ ಹಾಲ ॥ ೮೧

ಯಾಗಶೀಲದ ಮುನಿಯು । ಹೀಗೆಂದು ನುಡಿಯುತಿರು-
ವಾಗಲೇ ಹವನಸಾಧನ ವೆನಿಸಿದ ॥
ತಾಗಿ ನಂದಿನಿ ಪೆಸರ। ತಾಗದಿಹ ನಿಂದೆಗಳ-।
ನಾಗೋವು ಕಾಡಿಂದ ಮರಳಿತಂದು ॥ ೮೨

ಎಳೆಯೆಲೆಯ ರಂಗಿನಂ-। ತೆಳಗೆಂಪಿನಾಧೇನು ।
ಬಿಳಿಗೂದಲಿನ ಮಚ್ಚೆ ಯಿನಿಸು ಬಾಗಿ ॥
ಸುಳಿಯುತಿರೆ ಹಣೆಯೊಳಗೆ । ಹೊಳೆವುದದು ಪೊಸಸಸಿಯ ।
ತಳೆದ ಸಂಜೆಯ ವೆಣ್ಣು ಮರೆಯುವಂತೆ ॥ ೮೩

ಎಳೆಗರುವನದು ನೋಡೆ । ಜಳಜಳನೆ ಸುರಿಸುತಿಹ ।
ಬಲು ಯಾಗದವಭೃತಸ್ನಾನಕ್ಕಿಂತ ॥
ಬೆಳೆದ ಪಾವನತೆಯಂ । ತಳೆದ ಕೊಡ ಗೆಚ್ಚಲಿಂ-।
ದಿಳೆಗಿಳಿಯುತಿನಿಸು ಬಿಸಿಹಾಲಮಳೆಯು ॥ ೮೪

ರಜಃಕಣೈಃ ಖುರೋದ್ಧೂತೈಃ ।
ಸ್ಪೃಶದ್ಭಿಃ ಗಾತ್ರಮಂತಿಕಾತ್ ॥
ತೀರ್ಥಾಭಿಷೇಕಜಾಂ ಶುದ್ಧಿಂ ।
ಆದಧಾನಾ ಮಹೀಕ್ಷಿತಃ ೮೫

ತಾಂ ಪುಣ್ಯದರ್ಶನಾಂ ದೃಷ್ಟ್ವಾ ।
ನಿಮಿತ್ತಜ್ಞಃ ತಪೋನಿಧಿಃ ॥
ಯಾಜ್ಯಮಾಶಂಸಿತಾವಂಧ್ಯ- ।
ಪ್ರಾರ್ಥನಂ ಪುನರಬ್ರವೀತ್ ॥ ೮೬

ಅದೂರವರ್ತಿನೀಂ ಸಿದ್ಧಿಂ ।
ರಾಜನ್! ವಿಗಣಯಾತ್ಮನಃ ॥
ಉಪಸ್ಥಿತೇಯಂ ಕಲ್ಯಾಣೀ ।
ನಾಮ್ನಿ ಕೀರ್ತಿತ ಏವ ಯತ್ ೮೭

ವನ್ಯವೃತ್ತಿರಿಮಾಂ ಶಶ್ವತ್ ।
ಆತ್ಮಾನುಗಮನೇನ ಗಾಂ ॥
ವಿದ್ಯಾಂ ಅಭ್ಯಸನೇನೇವ ।
ಪ್ರಸಾದಯಿತುಮರ್ಹಸಿ ॥ ೮೮

ಪ್ರಸ್ಥಿತಾಯಾಂ ಪ್ರತಿಷ್ಠೇಥಾಃ ।
ಸ್ಥಿತಾಯಾಂ ಸ್ಥಿತಿಮಾಚರೇಃ ॥
ನಿಷಣ್ಣಾಯಾಂ ನಿಷೀದಾಸ್ಯಾಂ ।
ಪೀತಾಂಭಸಿ ಪಿಬೇ ರಪಃ ೮೯

ವಧೂ ಭಕ್ತಿಮತೀ ಚೈನಾಂ ।
ಅರ್ಚಿತಾಂ ಆತಪೋವನಾತ್ ॥
ಪ್ರಯಂತಾ ಪ್ರಾತರನ್ವೇತು ।
ಸಾಯಂ ಪ್ರತ್ಯುದ್ವ್ರಜೇದಪಿ ೯೦

ನಂದಿನಿಯ ಕಾಲ್ಗೊರಸಿ–। ನಿಂದೆದ್ದ ಧೂಳ್ಕಣಗ–।
ಳಿಂದ ಬಳಿಸಂದ ನೃಪನೊಡಲು ಸೋಂಕೆ ॥
ಅಂದು ತೀರ್ಥಸ್ನಾನ–। ದಿಂದುದಿಸಿದಮಲತೆಯ ।
ತಂದಿತಿಂತಾದೇನು ವವನಿಪತಿಗೆ ॥ ೮೫

ಮಂಗಳಾಂಗದ ಗೋವು । ಕಂಗೊಳಿಸಲಂದಾತ–।
ಪಂಗಳಿಗೆ ನಿಧಿಯನಿಪ ಶಕುನಜ್ಞನು ॥
ಇಂಗಿತಾರ್ಥಗಳು ವಿಫ–। ಲಂಗಳಾಗದಗೆ ಸವ–।
ನಂಗಳಿಂಗರ್ಹಂಗೆ ಮರಳಿ ನುಡಿದಂ ॥ ೮೬

ಅರಸ ನೀನೇನ ಬಯ–। ಸಿರುವೆಯದು ಬಲುಬೇಗ ।
ದೊರಕುವುದು ನಿಜ ನಂಬು ಹೇತುವಿದಕೆ ॥
ಇರದೆ ನಂದಿನಿಯ ಶುಭ-। ಕರನಾಮವಂ ಪೊಗಳು–।
ತಿರಲಿ ಕೀ ಮಂಗಳೆಯು ಸುಳಿದಳಿಲ್ಲಿ ॥ ೮೭

ಅಡವಿ ಕೊಡುವಾಹಾರ-। ಪೊಡಲ ಪೊರೆಯಲು ಸಲಿಸು–
ತಡೆಬಿಡದ ಲೀಗೋವ ನನುಸರಿಸುತಿರ್ದು ॥
ಬಿಡದಲಭ್ಯಾಸದಿಂ । ಪಡೆವಂತೆ ವಿದ್ಯೆಯ-
ನ್ನೊಡೆಯ ನೀಂ ಸೇವೆಯಿಂ ಧವಳ ತಣಿಸೈ ॥ ೮೮

ಮುಂದೆ ಸರಿಯಲು ಗೋವು । ಹಿಂದೆ ನೀ ಸರಿಯುತಿರು ॥
ನಿಂದೊಡಾಗೋವು ನೀನಲ್ಲಿಯೇ ನಿಲ್ಲು ॥
ನಂದಿನಿಯ ಕುಳಿತೊಡಾ-। ನಂದದಿಂ ಕೂಡ್ರು ನೀ-।
ನಂದು ಕುಡಿ ಜಲವ ಹಸು ಕುಡಿದ ಬಳಿಕ ॥ ೮೯

ನಿನ್ನರಸಿಯುಂ ಭಕ್ತಿ–। ಯನ್ನೊಂದಿ ನಂದಿನಿಯ-।
ದನ್ನಮಲಭಾವದಿಂ ಪೂಜೆಗೈದು ॥
ಬೆನ್ನಿಡಿದು ವನದಗಡಿ-। ಯನ್ನು ಸಾರಲಿ ಮುಂಚೆ ।
ಮನ್ನಿಸುತ ಕರೆತರಲಿ ಸಂಜೆ ಯಲ್ಲಿಂದ ೯೦

ಇತ್ಥ್ಯ ಪ್ರಸಾದಾದಸ್ಯಾ ಸ್ತ್ವಂ ।
ಪರಿಚರ್ಯಾಪರೋ ಭವ ॥
ಅವಿಘ್ನ ಮಸ್ತು ತೇ ಸ್ಥೇಯಾಃ ।
ಪಿತೇವ ಧುರಿ ಪುತ್ರಿಣಾಂ ೯೧

ತಥೇತಿ ಪ್ರತಿಜಗ್ರಾಹಃ ।
ಪ್ರೀತಿರ್ಮಾ ಸ ಪರಿಗ್ರಹಃ ॥
ಆದೇಶಂ ದೇಶಕಾಲಜ್ಞಃ ।
ಶಿಷ್ಯಃ ಶಾಸಿತು ರಾನತಃ ॥ ೯೨

ಅಥ ಪ್ರದೋಷೇ ದೋಷಜ್ಞಃ ।
ಸಂವೇಶಾಯ ವಿಶಾಂ ಪತಿಂ ॥
ಸೂನುಃ ಸೂನೃತವಾಕ್ ಸ್ರಷ್ಟುಃ ।
ವಿಸಸರ್ಜೋರ್ಜಿತಶ್ರಿಯಂ ॥ ೯೩

ಸತ್ಯಾಮಪಿ ತಪಸ್ಸಿದ್ಧೌ ।
ನಿಯಮಾಪೇಕ್ಷಯಾ ಮುನಿಃ ॥
ಕಲ್ಪವಿತ್ ಕಲ್ಪಯಾಮಾಸ ॥
ವದ್ಯಾಮೇವಾಸ್ಯ ಸಂವಿಧಾಂ ॥ ೯೪

ನಿರ್ದಿಷ್ಟಾಂ ಕುಲಪತಿನಾ ಸ ಪರ್ಣಶಾಲಾಂ ।
ಅಧ್ಯಾಸ್ಯ ಪ್ರಯತಪರಿಗ್ರಹದ್ವಿತೀಯಃ ॥
ತಚ್ಛಿಷ್ಯಾಧ್ಯಯನನಿವೇದಿತಾವಸಾನಾಂ ।
ಸಂವಿಷ್ಟಃ ಕುಶಶಯನೇ ನಿಶಾಂ ನಿನಾಯ ॥ ೯೫

ಇನ್ನಿವಳು ತನ್ನೊಲುಮೆ । ಮನ್ನಿಸುವ ವರೆಗಿಂತು ।
ನಿನ್ನ ಸೇವೆಯು ಬಿಡದೆ ಸಲ್ಲಿಸುತಿರ್ಕೈ ॥
ನಿನ್ನ ಬಯಕೆಗೆ-ವಿಘ್ನ-। ವಿನ್ನಿರದು ಸುಸುತಚಿತ-।
ರೆನ್ನುವರ ಮುಂದೆ ಪಿತನಂತೆ ನಿಲ್ವೈ ॥ ೯೧

ದೇಶಕಾಲಜ್ಞರೊಳ-। ಗೀಶನಹ ಶಿಷ್ಯನಾ ।
ಶಾಸಕನ ನುಡಿಯಂತೆ ನಡುವೆ ನೆನುತ ॥
ಶಾಸನದ ಧರ್ಮಪ। ತ್ನೀಸಹಿತ ವಿನಯದಿಂ।
ತಾ ಸಿರದಲೊಲವಿನಿಂ ತಳೆದನೆಂದು ॥ ೯೨

ಬಲ್ಲವರೊಳತಿಹಿರಿಯ-। ನುಲ್ಲಾಸದೊಳ್ಳಿತದ ।
ಸೊಲ್ಲುಳ್ಳ ವಿಧಿಪುತ್ರ ನಿರುಳು ಕವಿಯ ॥
ಎಲ್ಲ ಬಗೆಯ್ಕೈಸಿರಿಯ-। ನುಳ್ಳ ಜನಹಿತ ನೆನಿಪ ।
ನಲ್ಲಂಗೆ ಮಲಗ ಹೇಳಿದನು ಬಳಿಕ ॥ ೯೩

ವ್ರತದ ಬಗೆಯರಿದ ಮುನಿ-। ಪತಿಗೆ ತಪಸಿನ ಸಿದ್ಧಿ-।
ಯುತಿಯಿದೊಡಂ ಭೂಪ ನಂದಿನೀದೇ ॥
ವ್ರತವ ಕೈಕೊಳ್ಳಬೇಕೆ-। ನುತನಲವನವಗೆ ವನ-।
ಸ್ಪತಿಯು ಪರಿಕರವನೇ ನೆರವು ಗೈದ ॥ ೯೪

(ಭಾಮಿನೀಷಟ್ಪದಿ)
ಕುಲಪತಿ ವಶಿಷ್ಠಮುನಿ ತೋರಿಸಿ-।
ದೆಲೆಮನೆಯೊಳೊಳಹೊಕ್ಕು ತನ್ನಯ ।
ಲಲನೆಯಿಂ ಜೊತೆಗೂಡಿ ನಿರ್ಮಲ ಭಾವವನೆ ತಳೆದು,

ಇಳೆಯರಸ ಮುನಿಶಿಷ್ಯವರ್ಗಗ-।
ಳುಲಿಯ ವೇದಗ ಳಿರುಳಂಕೊನೆಯಂ ।
ತಿಳಿದು ಕಳೆದನು ನಿಶಿಯ ಹುಲುಹಾಸಿಗೆಯೊಳೆವ ಮಲಗಿ ॥ ೯೫

ಮೊದಲನೆಯ ಸರ್ಗ ಮುಗಿದುದು.

ರ ಘು ವ ಂ ಶ

(ಎರಡನೆಯ ಸರ್ಗ)

(ಭಾಮಿನೀ ಷಟ್ಪದಿ)

ಸೂಚನೆ :—

ನಂದನನ ತಾಂ ಪೊಂದಲೆಳಸುತ ।
ನಂದಿನಿಯ ಸೇವೆಯಲಿ ದಿಲಿಪನು ।
ನಿಂದು ಭಕ್ತಿಯ ಲೊಲಿಸಿ ವರವನು ಪಡದ ನವಳಿಂದ ॥

ಅಥ ಪ್ರಜಾನಾಂ ಅಧಿಪಃ ಪ್ರಭಾತೇ ।
ಜಾಯಾಪ್ರತಿಗ್ರಾಹಿತಗಂಧಮಾಲ್ಯಾಂ ॥
ವನಾಯ ಪೀತಪ್ರತಿಬದ್ಧವತ್ಸಾಂ ।
ಯಶೋಧನೋ ಧೇನು ಮೃಷೇ ರ್ಮುಮೋಚ ॥ ೧

ತಸ್ಯಾಃ ಖುರನ್ಯಾಸಪವಿತ್ರಪಾಂಸುಂ ।
ಅಪಾಂಸುಲಾನಾಂ ಧುರಿ ಕೀರ್ತನೀಯಾ ॥
ಮಾರ್ಗಂ ಮನುಷ್ಯೇಶ್ವರಧರ್ಮಪತ್ನೀ ।
ಶ್ರುತೇರಿವಾರ್ಥಂ ಸ್ಮೃತಿರನ್ವಗಚ್ಛತ್ ॥ ೨

ನಿವರ್ತ್ಯ ರಾಜಾ ದಯಿತಾಂ ದಯಾಳುಃ ।
ತಾಂ ಸೌರಭೇಯೀಂ ಸುರಭಿ ರ್ಯಶೋಭಿಃ ॥
ಪಯೋಧರೀಭೂತ ಚತುಸ್ಸಮುದ್ರಾಂ ।
ಜುಗೋಪ ಗೋರೂಪಧರಾ ಮಿವೋರ್ವೀಂ ॥ ೩

ವ್ರತಾಯ ತೇನಾನುಚರೇಣ ಧೇನೋಃ ।
ನ್ಯಷೇಧಿ ಶೇಷೋಽಪ್ಯನ ಯಾಯಿ ವರ್ಗಃ ॥
ನ ಚಾನ್ಯತಸ್ತಸ್ಯ ಶರೀರಕ್ಷಾ ।
ಸ್ವವೀರ್ಯಗುಪ್ತಾ ಹಿ ಮನೋಃ ಪ್ರಸೂತಿಃ ॥ ೪

ಯಶವನ್ನೈಸಿರಿಯೆಂದು ಭಾವಿಸಿ ।
ನಿಶಿಯು ಕಳೆದುದಯದಲಿ ಜನಪನು ।
ಪಸುಳೆ ಪಾಲುಂಡೊಡನೆ ಬಿಗಿನಡೆಯೆ ನೃಪಸತಿಯು ॥
ಎಸಗಿದರ್ಚನೆ ಗಂಧ ಹೂಸರ-।
ಹೊಸಗೆಯನು ಕೈಕೊಂಡ ಮುನಿಪತಿ ।
ಪಶುವ ಕಾವಲು ಬಿಟ್ಟನಾಶ್ರಮದಿಂದ ವನಕಾಗಿ ॥ ೧

ಅಮಲಸತಿಯರ ಮುಂದೆ ನೃತ್ಯಳು ।
ರಮಣಿ ನೃಪನರ್ಧಾಂಗಿ ಮಾಗಧಿ-।
ಯಮರ ಗೋನಂದನೆಯ ಗೊರಸಿಂದೇಳ್ದ ಧೂಳಿಂದ ॥
ವಿಮಲಿತಾಧ್ವವ ಪಿಡಿದು ನಡೆದಳು ।
ಗಮನಿಸಲು ತಾ ಧರ್ಮಶಾಸ್ತ್ರದ ।
ಗಮನವಿರುವಂ ತಖಿಳವೇದಾರ್ಥಗಳ ಸರಣಿಯೊಳು ॥ ೨

ದಯೆಗೆ ನಿಧಿಯೆಂದೆನಿಪ ಸತ್ಕೀ-।
ರ್ತಿಯೊಳು ಘಮಘಮಿಪರಸ ತನ್ನಾ-।
ಪ್ರಿಯಳ ಹಿಂದಕೆ ಕಳುಹಿ ಸುರಭಿಯ ಸುತೆಯ ನಂದಿನಿಯ ॥
ನಯದಲಂಬುಧಿನಾಲ್ಕರಿಂ ಭೂ-।
ದಯಿತೆ ನಾಲ್ಮೊಲೆಯೊಂದಿ ಗೋರೂ-।
ಪಿಯಹಳೆಂದೆನುತವನ ರಕ್ಷಣೆಗಾಗಿ ಬೆಂಬಿಡಿದ ॥ ೩

ನಿಯಮಕಾಗಿಯೆ ಧೇನುಪರಿಚ-।
ರ್ಯೆಯನು ಕೈಕೊಂಡಾತವನ ಚರ-।
ಚಯದೊಳುಳಿದಿಹರೆಲ್ಲರನು ನೃಪ ಬಳಿಕ ಮರಳಿಸಿದಂ ॥
ನಯದಿ ನಿಜತನು ಪಾಲನೆಯ ಬೇ-।
ರೆಯರ ದೆಸೆಯಿಂದಲ್ಲವಗೆ ನಿ-।
ಶ್ಚಯವು ಮನುಕುಲದವರ ರಕ್ಷಣೆ ತಮ್ಮ ವೀರ್ಯದಲೇ ॥ ೪

ಆಸ್ವಾದಯದ್ಭಿಃ ಕಬಳೈಃ ತೃಣಾನಾಂ ।
ಕಂಡೂಯನೈಃ ದಂಶನಿವಾರಣೈಶ್ಚ ॥
ಅವ್ಯಾಹತೈಃ ಸ್ವೈರಗತೈಃ ಸ ತಸ್ಯಾಃ ।
ಸಮ್ರಾಟ್ ಸಮಾರಾಧನತತ್ಪರೋಽಭೂತ್ ॥ ೫

ಸ್ಥಿತಃ ಸ್ಥಿತಾಂ, ಉಚ್ಚಲಿತಃ ಪ್ರಯಾತಾಂ ।
ನಿಷೇದುಷೀಂ, ಆಸನ ಬಂಧಧೀರಃ, ॥
ಜಲಾಭಿಲಾಷೀ, ಜಲ ಮಾದದಾನಾಂ, ।
ಛಾಯೇವ ತಾಂ ಭೂಪತಿ ರನ್ವಗಚ್ಛತ್ ॥ ೬

ಸ ನ್ಯಸ್ತ ಚಿಹ್ನಾಮಪಿ ರಾಜಲಕ್ಷ್ಮೀಂ ।
ತೇಜೋವಿಶೇಷಾನುಮಿತಾಂ ದಧಾನಃ ॥
ಆಸೀದನಾವಿಷ್ಕೃತದಾನರಾಜಿಃ ।
ಅಂತರ್ಮದಾವಸ್ಥ ಇವ ದ್ವಿಪೇಂದ್ರಃ ॥ ೭

ಲತಾಪ್ರತಾನೋದ್ಗ್ರಥಿತೈಃ ಸ ಕೇಶೈಃ ।
ಅಧಿಜ್ಯಧನ್ವಾ ವಿಚಚಾರ ದಾವಂ ॥
ರಕ್ಷಾಪದೇಶಾತ್ ಮುನಿಹೋಮಧೇನೋಃ ।
ವನ್ಯಾನ್ ವಿನೇಷ್ಯನ್ನಿ ವ ದುಷ್ಟಸತ್ವಾನ್ ॥ ೮

ಉಣಲು ಬಾಯಿನಿದಾದ ಬಗೆ ಬಗೆ ।
ತೃಣದ ಕಬಗಳಗಿಳಿತ್ತು, ಕಾಡಿನ-।
ನೊಣದ ಬಾಧೆಯು ಹರಿಸಿ. ಮೋಣದರೊಡಲ ತುರಿಸುತ್ತ ॥
ಎಣಿಕೆಗೊಳ್ಳದೆ ಪೋದೊಡ ಗೋ-
ಮಣಿಯು ತಡೆಯದಲದರ ಶುಶ್ರೂ-।
ಷಣೆಯು ತತ್ಪರತೆಯಲಿ ಸಮ್ರಾಣ್ಮಣಿಯೇ ತಾನಿರ್ದಂ ॥ ೫

ಧೇನು ನಿಂತೊಡೆ ತಾನು ನಿಲ್ಲುವ, ।
ಧೇನು ಚಲಿಸಲು ತಾನು ಕದಲುವ,
ಧೇನು ಕೂಡಲು ನೃಪನು ತಾ ನೆಲನಂಟಿ ಕೂಡುವನು: ॥
ಪಾನಗೈಯಲು ಗೋವು ನೀರನು ।
ಮಾನನಿಧಿ ತಾ ಜಲವ ಬಯಸುವ-।
ನೀನಿಯಮದೋಳ್ ಭೂಪನದನನು-ಸರಿಸಿದನು ನೆಳಲಂತೆ ॥ ೬

ರಾಜಚಿಹ್ನೆಗಳಳಿದೊಡಂ ತನು-।
ತೇಜದತಿಸಯದಿಂದಲೂಹಿಪ ।
ರಾಜಲಕ್ಷ್ಮಿಯು ತಳೆದು ಮನುಕುಲರಾಜ ರಾಜಿಸಿದಂ ॥
ಮಾಜಿ ಹೊರಗಾಣಿಸದೆ ಮದಜಲ-।
ರಾಜಿಯನು ಮತ್ತೊಳಗಿರುವ ಮದ-।
ದೋಜೆಯನು ತಾ ಧರಿಸಿ ಸಾಮಜರಾಜ ಮೆರೆವಂತೆ ॥ ೭

ಬಳ್ಳಿ ನಾರುಗಳಿಂದೆ ಲವ ಧ-।
ಮ್ಮಿಲ್ಲವನು ಮೇಲ್ಪಿಗಿದು, ಮೋಣ್ ಹದೆ-।
ಯುಳ್ಳ ಬಿಲ್ಲನು ಧರಿಸಿ, ವನದೆಡೆಗಳಲಿ ಚರಿಸಿದನು ॥
ಬಲ್ಲಿದಡವಿಯು ಖುಲ್ಲಮಿಕಗಳ-।
ನೆಲ್ಲ ಶಿಕ್ಷಿಪನೆಂಬವೊಲ್ ಭೂ-।
ವಲ್ಲಭನು ಮುನಿಹೋಮಧೇನುವ ಪೊರೆವ ನೆವದಿಂದ ॥ ೮

ವಿಸೃಷ್ಟ ಪಾರ್ಶ್ವಾನುಚರಸ್ಯ ತಸ್ಯ ।
ಪಾರ್ಶ್ವದ್ರುಮಾಃ ಪಾಶಭೃತಾ ಸಮಸ್ಯ ॥
ಉದೀರಯಾಮಾಸು ರಿವೋನ್ಮದಾನಾಂ ।
ಆಲೋಕಶಬ್ದಂ ವಯಸಾಂ ವಿರಾವೈಃ ೯

ಮರುತ್ಪ್ರ ಯುಕ್ತಾಶ್ಚ ಮರುತ್ಸಖಾಭಂ ॥
ತಮರ್ಚ್ಯಮಾರಾ ದಭಿವರ್ತಮಾನಂ ॥
ಅವಾಕಿರ್ರ ಬಾಲಲತಾಃ ಪ್ರಸೂನೈಃ ।
ಆಚಾರಲಾಜೈರಿವ ಪೌರಕನ್ಯಾಃ ॥ ೧೦

ಧನುರ್ಭೃತೋಽಪ್ಯಸ್ಯ ದಯಾರ್ದ್ರಭಾವಂ ।
ಆಖ್ಯಾತಮಂತಃಕರಣೈಃ ವಿಶಂಕೈಃ ॥
ವಿಲೋಕಯಂತ್ಯೋ ವಪುರಾಪುರಕ್ಷ್ಣಾಂ
ಪ್ರಕಾಮವಿಸ್ತಾರಫಲಂ ಹರಿಣ್ಯಃ ೧೧

ಸ ಕೀಚಕೈಃ ಮಾರುತಪೂರ್ಣರಂಧ್ರೈಃ ।
ಕೂಜದ್ಭಿ ರಾಪಾದಿತ ವಂಶಕೃತ್ಯಂ ॥
ಕುಶ್ರಾವ ಕುಂಜೇಷು ಯಶಃ ಸ್ವಮುಚ್ಚೈಃ ।
ಉದ್ಗೀಯಮಾನಂ ವನದೇವತಾಭಿಃ ॥ ೧೨

ಪಕ್ಕದನುಚರರೆಲ್ಲರನು ಹಿಂ-।
ದಿಕ್ಕಿ ಪಾಶಾಯುಧಗೆ ನೆರೆ ಪಡಿ-।
ಯಿಕ್ಕಿದಾನೃಪನಿಪನಿಕ್ಕೆಲದ ವಿಟಪಿಗಳು ತವೊಳಗೆ ॥
ಇಕ್ಕೆಗೊಂಡಿಹ ಹಕ್ಕಿಗಳು ವಿಗೆ- ।
ಸೊಕ್ಕಿದಾರವಗಳಲಿ ಜಯು ಜಯು- ।
ದಕ್ಕರಂಗಳ ನವಗೆ ಪೇಳ್ದ ಪವೆನಲು ರಂಜಿಸಿತು ॥ ೯

ಪವನಚೋದಿತ ಬಾಲಲತೆಗಳು ।
ಪವನ ಸಖನಂತೆಸೆವ ಮೇಣ್ತ- ।
ಪ್ಪವನಿಯೊಳು ನಡೆದು ಬಹ ದಿಲಿಪನು ಪೂಜ್ಯನಹನೆಂದು ॥
ಅವನಿಪಾಲನ ಮೇಲೆ ಪೂಗಳ ।
ನಿವಹವನು ತಾವೆರಚಿದವು ಪುರ- ।
ದವರಕನ್ನೆಯರರಳ ಮಳೆಯನು ಸುರಿವಬಗೆಯಿಂದ ॥ ೧೩

ಧನುವ ಧರಿಸಿಹನಾದೊಡಂ ಭೂ-।
ಪನ ತನುವನೀಕ್ಷಿಸಿ ಹರಿಣಿಗಳು ।
ಮನದ ಭಯು ಹಿಂಗಿರುವ ಕಾರಣ ಕರುಣರಸದೊಳಗೆ ॥
ನೆನೆಸಿದಿಂಗಿತವುಳ್ಳುದೀತನ ತನು-।
ವೆನುತ ಹೊಗಳುವುದೆನ ಲವಠ ಲೋ-।
ಚನಗಳಾಯುತವಿರಲು ತುಂಬಿದ ಫಲವ ಗಳಿಸಿದವು ॥ ೧೧

ಅಲ್ಲಿ ಕೀಚಕವಿವರನಿಕರಗ-
ಳಲ್ಲಿ ಗಾಳಿಯು ತುಂಬಲುದಿಸಿದ ।
ಸೊಲ್ಲಿನಲಿ ತಾವ್ಕೊಳಲುಗಾನದ ಪೆಂಪಗಳಿಸುತ್ತ
ಬಳ್ಳಿ ಹೊದರುಗಳೊಳಗೆ ಕುಳಿತ-।
ಲ್ಲಲ್ಲಿ ವನದೇವಿಯರು ತನ್ನೊಳ-।
ಗುಳ್ಳ ಕೀರ್ತಿಯ ನೆತ್ತಿಪಾಡುವ ದನಿಯು ನವ ಕೇಳ್ದ । ೧೨

ಪೃಕ್ತಸ್ತು ಷಾರೈಃ ಗಿರಿನಿರ್ಝರಾಣಾಂ ।
ಅನೋಕಹಾಕಂಪಿತ ಪುಷ್ಪ ಗಂಧೀ ॥
ತಮಾತಪಕ್ಲಾಂತಮನಾತಪತ್ರಂ ।
ಆಚಾರಪೂತಂ ಪವನಃ ಸಿಷೇವೇ ॥ ೧೩

ಶಶಾಮ ವೃಷ್ಟ್ಯಾಪಿ ವಿನಾ ದವಾಗ್ನಿಃ ।
ಆಸೀದ್ವಿಶೇಷಾ ಫಲಪುಷ್ಪವೃದ್ಧಿಃ ॥
ಊನಂ ನ ಸತ್ವೇಷ್ವಧಿಕೋ ಬಬಾಧೇ ।
ತಸ್ಮಿನ್ ವನಂ ಗೋಪ್ತರಿ ಗಾಹಮಾನೇ ॥ ೧೪

ಸಂಚಾರಪೂತಾನಿ ದಿಗಂತರಾಣಿ ।
ಕೃತ್ವಾ ದಿನಾಂತೇ ನಿಲಯಾಯ ಗಂತು ॥
ಪ್ರಚಕ್ರಮೇ ಪಲ್ಲವರಾಗತಾಮ್ರಾ ।
ಪ್ರಭಾ ಪತಂಗಸ್ಯ ಮುನೇಶ್ಚ ಧೇನುಃ ೧೫

ತಾಂ ದೇವತಾಪಿತ್ರತಿಥಿಕ್ರಿಯಾರ್ಥಾಂ ।
ಅನ್ವಗ್ಯಯೌ ಮಧ್ಯಮಲೋಕಪಾಲಃ ॥
ಬಭೌ ಚ ಸಾ ತೇನ ವತಾಃ ಮತೇನ ।
ಶ್ರದ್ಧೇವ ಸಾಕ್ಷಾತ್ ವಿಧಿನೋಪಪಸನ್ನಾ ॥ ೧೬

ಬೆಟ್ಟದೊರೆಗಳ ತಣ್ಪು ತುಂತುರು ।
ತೊಟ್ಟು ಗಿಡದರಳುಗಳಿನಿಸು ಕದ-।
ಲಿಟ್ಟು ಮೇಣವುಗಳ ಸುಗಂಧವನೆಲರು ತಾ ಹೊತ್ತು ॥
ಕಟ್ಟಳೆಯು ಕೆಲಸದಲಿ ತಾನಳ-।
ವಟ್ಟು ಶುದ್ಧಿಯು ಮೊಡೆದ ಮೇಣ್ಕೊಡೆ-
ಬಿಟ್ಟು ಬಿಸಿಲಿನ ಬೇಗೆಯೊಂದಿಹ ನೃಪನ ಸೇವಿಸಿತು ॥ ೧೩

ಅರಿತಡವಿಯು ಕಿಚ್ಚು ಮಳೆಹನಿ-।
ಬಾರದೆಯ್ಯೆ, ಬಲು ಹಣ್ಣುಹೂಗಳ-।
ಭಾರ ಹೆಚ್ಚಿತು ಮರಗಳೊಳು ಮೇಣಲ್ಲಿ ನೆಲಸಿರ್ದ ॥
ಕ್ರೂರಿಗಳು ಮೃಗವರ್ಗದೊಳಗತಿ-
ಭೀರುಗಳ ತಾವ ಬಾಧೆಪಡಿಸವು ।
ಧಾರಿಣಿಯ ಪರಿಪಾಲಕನು ತಾ ಇಹನ ಮೊಳಪೂಗಲು ॥ ೧೪

ಎಳೆದಳಿರ ಕೆಂಬಣ್ಣದಲಿ ನೆರೆ-।
ಬೆಳಗುತಿಹ ತಾ ಸಂಜೆನೇಸರ ।
ಬೆಳಕುಮಲ್ಲದೆ ಮುನಿಯು ಧೇನುಂ ದಿಕ್ಕು ದಿಕ್ಕುಗಳ ॥
ಒಳಗಿನ ಸ್ಥಳಗಳನು ನಿಜಪರಿ-
ಚಲನೆಯಲಿ ನಿರ್ಮಲವ ಗೈಯುತ ।
ನಿಳಯಕವುಗಳು ಪೊರಡಲುಜ್ಜುಗಿಸಿದವು ದಿನದಿನದೊಳ್ ॥ ೧೫

ದೇವತಾಪಿತೃ ತಿಥಿದೇವರ ।
ಸೇವೆಗೋಸುಗ ವಿರುವ ಧೇನುವ-।
ನೀ ವಸುಧೆಪತಿ ಯನುಸರಿಸಿದನು ಸಂತತೊಳು ಮಾನ್ಯಂ ।
ಭಾವಿಸಲು ನೃಪನೊಡನೆ ನಡೆವಾ-।
ಗೋವು ಕಂಗೊಳಿಸಿದುದು ತಾ ಗುರು-।
ಭಾವಿ ವಿಹಿತಾಚರಣೆಯೊಡನಿಹ ಶ್ರದ್ಧೆಯಿಂದಲಿ ॥ ೧೬

ಸ ಪಲ್ವಲೋತ್ತೀರ್ಣವರಾಹಯೂಥಾ ।
ನ್ಯಾವಾಸವೃಕ್ಷೋನ್ಮುಖಬರ್ಹಿಣಾನಿ ॥
ಯಯೌ ಮೃಗಾಧ್ಯಾಸಿತಶಾದ್ವಲಾನಿ ।
ಶ್ಯಾಮಾಯಮಾನಾನಿ ವನಾನಿ ಪಶ್ಯನ್ ॥ ೧೭

ಆಪೀನಭಾರೋದ್ವಹನಪ್ರಯತ್ನಾತ್ ।
ಗೃಷ್ಟಿಃ ಗುರುತ್ವಾತ್ ವಪುಷೋ ನರೇಂದ್ರಃ ॥
ಉಭಾವಲಂಚಕ್ರತುರಂಚಿತಾಭ್ಯಾಂ ।
ತಪೋವನಾವೃತ್ತಿಪಥಂ ಗತಾಭ್ಯಾಂ ॥ ೧೮

ವಶಿಷ್ಠಧೇನೋ ರನುಯಾಯಿನಂ ತಂ ।
ಆವರ್ತಮಾನಂ ವನಿತಾ ವನಾಂ ತಾತ್ ॥
ಪಪೌ ನಿಮೇಷಾಲಸಪಕ್ಷ್ಮ ಪಂಕ್ತಿಃ ।
ಉಪೋಷಿತಾ ಭ್ಯಾ ಮಿವ ಲೋಚನಾಭ್ಯಾಂ ೧೯

ಪುರಸ್ಕೃತಾ ವರ್ತ್ಮನಿ ಪಾರ್ಥಿವೇನ ।
ಪ್ರತ್ಯುದ್ಗತಾ ಪಾರ್ಥಿವಧರ್ಮಪತ್ನ್ಯಾ ॥
ತದಂತರೇ ಸಾವಿರರಾಜ ಧೇನುಃ ।
ದಿನಕ್ಷಪಾಮಧ್ಯಗತೇವ ಸಂಧ್ಯಾ ॥ ೨೦

ಕುಂಟೆಕೆಸರಿಂದೆದ್ದು ತಾ ಹೊರ-।
ಪಂಟ ಹಂದಿಯು ಹಿಂಡನ್ನುಂ ಸೆಲೆ-।
ಗಂಟಿದವುಗಳ ಮರಗಳಿರುವೆಡೆ ಪಾರ್ವ ನವಿಲುಗಳ ॥
ನಂಟಿಸಿದ ಹಲ್ಲೆಗಳೊಡನಿಹೆಳೆ ।
ದಂಟಪುಲ್ಮೆಲಗಳನು ಮೇಣ್, ಮು-।
ಬ್ಬಂಟಿ ಬರುತಿಹ ವನಗಳನು ನೋಡುತ್ತ ಲವ ನಡೆದ ॥ ೧೭

ಒಂದು ಸೂಲಿನ ಗೋವು ಕೆಚ್ಚಲಿ-।
ನಿಂದತಿಹೊರೆಯು ಹೊತ್ತ ಬಳಲಿಕೆ ।
ಯಿಂದಲುಂ ಮೇಣರಸು ತನ ಪೇರೊಡಲ ಭಾರದೊಳು ॥
ಅಂದು ಗೊಗೋವಿಂದರಿಬ್ಬರು ।
ಚಂದವೆನಿಸುವ ತಮ್ಮ ನಡಿಗೆ-।
ಳಿಂದ ಮುನಿವನದ ಮರುಹಾದಿಯು ನಂದಗೊಳಿಸಿದರು ॥ ೧೮

ಮುನಿವಶಿಷ್ಠನ ಹೋಮಧೇನುವ-।
ನನುಸರಿಸಿ ವನದಿಂದ ಮರಳುವ ।
ಜ ನಪನನು ಜನಿತಾನು ರಾಗತಿಶಯದೊಳು ವೆಳಿನ ।
ವನಿತೆಯೊಮೆಯಿಕ್ಕದಿಹ ತನ್ನೀ-।
ಕ್ಷಣಗಳೆರಡಿಂ ದಮಿತತೃಷೆಯೊಳು ।
ಮನವೊಲಿಯುು ತೀಂಟಿದ ಳವುಗ ಳುಪವಾಸ ವಿದ್ದವೆನೆ ॥ ೧೯

ಒಟ್ಟೆಯೊಳು ಭೂಪತಿಯು ತಾ ಹಿಂ-।
ದಿಟ್ಟು ನಡೆಯುವ ನೃಪನ ಧಾರ್ಮಿಕ-।
ಪಟ್ಟ ದರಸಿಯು ತುಗೆದುರು ಬರುತಿರಲು ನಂದಿನಿಯು ॥
ಕಟ್ಟ ಳೆಯೊಳದು ಗಂಡಹೆಂಡಿರ ।
ನಟ್ಟನಡುವಲಿ ಬರಲಿಕೆಸೆದುದು ।
ದಿಟ್ಟಿಸಲು ಹಗಲಿರುಳಮಧ್ಯ ದೊಳೆಸೆವ ಸಂಜೆಯಂತೆ ॥ ೨೦

ಪ್ರದಕ್ಷಿಣೀಕೃತ್ಯ ಪಯಸ್ವಿನೀಂ ತಾಂ ।
ಸುದಕ್ಷಿಣಾ ಸಾಕ್ಷತಪಾತ್ರ ಹಸ್ತಾ ॥
ಪ್ರಣಮ್ಯ ಚಾನರ್ಚ ವಿಶಾಲಮಸ್ಯಾಃ ।
ಶೃಂಗಾಂತರಂ ದ್ವಾರಮಿವಾರ್ಥಸಿದ್ಧೇಃ ॥ ೨೧

ವತ್ಸೋತ್ಸುಕಾಪಿ ಸ್ತಿಮಿತಾಂ ಸಪರ್ಯಾಂ ।
ಪ್ರತ್ಯಗ್ರಹೀತ್ ಸೇತಿ ನನಂದತು ಸ್ತೌ ॥
ಭಕ್ತ್ಯೋಪಪನ್ನೇಷು ಹಿ ತದ್ವಿಧಾನಾಂ ।
ಪ್ರಸಾದಚಿಹ್ನಾನಿ ಪುರಃಫಲಾನಿ ॥ ೨೨

ಗುರೋಸ್ಸದಾರಸ್ಯ ನಿಪೀಡ್ಯ ಪಾದೌ ।
ಸಮಾಪ್ಯ ಸಾಂಧ್ಯಂ ಚ ವಿಧಿಂ ದಿಲೀಪಃ ।
ದೋಹಾವಸಾನೇ ಪುನರೇವ ದೋಗ್ಧ್ರೀಂ ।
ಭೇಜೇ ಭುಜೋಚ್ಛಿನ್ನರಿಪು ರ್ನಿಷಣ್ಣಾಂ ೨೩

ತಾ ಮಂತಿಕನ್ಯಸ್ತಬಲಿಪ್ರದೀಪಾಂ ।
ಅನ್ವಾಸ್ಯ ಗೋಪ್ತಾ ಗೃಹಿಣೀಸಹಾಯಃ ॥
ಕ್ರಮೇಣ ಸುಪ್ತಾಮನುಸಂವಿವೇಶ।
ಸುಪ್ತೋತ್ಥಿತಾಂ ಪ್ರಾತ ರನೂದತಿಷ್ಠತ್ ॥ ೨೪

ಅಕ್ಷತೆಯು ಬಟ್ಟಲನು ಕೈಲಿ ಸು-।
ದಕ್ಷಿಣೆಯುಂ ತಾ ಕೊಂಡು ಭಕ್ತಿವಿ-।
ಚಕ್ಷಣೆಯು ಲತಿಪಾಲ್ಗ ಕೆವ ನಂದಿನಿಯು ಸುತ್ತಿಟ್ಟು ॥
ತಕ್ಷಣವೆ ನಮಿಸುತೆ ವಿಶಾಲಸು-।
ಲಕ್ಷಣದ ಕೋಡ ನಡುತಾಣಕೆ ।
ಲಕ್ಷಿಸಿದ ಆರ್ಚನೆಯು ನಿಷ್ಪವನೀವ ಬಾಗಿಲನೆ ॥ ೨೧

ಎಳೆಗರುವ ಹಂಬಲಿಕೆ ಯಿದ್ದರು ।
ಚಲಿಸದಾ ಹಸು ಪೂಜೆಯುಂ ನೆರೆ-।
ತಳೆದುದೆಂದಾ ಗಂಡಹೆಂಡಿರು ನಲಿದ ಹಿಗ್ಗಿದರು ॥
ಮಿಳಿತಭಕ್ತಿಯುಲೆಸೆವ ಮಾನವ ।
ರೊಳಗೆ ನಿಜವಾ ಬಗೆಯು ಮಹಿಮೆಯು ।
ತಳೆದವರನುಗ್ರಹವು ಮುಂದಹ ಫಲಕೆ ಸೂಚನೆಯುಂ ॥ ೨೨

ಅರಿಗಳನು ಭುಜಬಲದ ಲೊರೆಸಿದ ।
ದೊರೆ ದಿಲೀಪನು ಪತ್ನಿಯೊಡನಿಹ ।
ಗುರುವಶಿಷ್ಠನ ಪಾದಗಳ ತಾನೊತ್ತಿ ಸಂಜೆಯೊಳು ॥
ವರವಿಧಿಯು ನೆರವೇರಿಸುತ ಪಾ-।
ಲ್ಗರೆದ ಬಳಿಕಲಿ ಮಲಗಿಕೊಂಡಿಹ ।
ಕರೆವ ಕಪಿಲೆಯು ಸೇವೆಯುಂ ಮತ್ತಿರದೆ ಕೈಕೊಂಡ ॥ ೨೩

ಭೂಪ ನರಸಿಯು ಕೂಡಿ ಬಳಿಯು-।
ಟ್ಟೌಪಚಾರಿಕ ದೀಪ ಬಲಿ ಪೂ-।
ಜೋಪಕರಣಗಳಿಂದೆಸೆದ ನಂದಿನಿಯು ನನುಕರಿಸಿ ॥
ಈಪರಿಯು ಲದು ನಿದ್ರಿಸಲು ತಾ ।
ಪೋಪ ನಿದ್ದೆಯು ಬೆಳಕು ಹರಿಯುಲಿ-।
ತಾಪಶುವು ಮೇಲೆದ್ದೊಡನೆ ನರಪತಿಯು ಮೇಲೆದ್ದ ೨೪

ಇತ್ಥಂ ವ್ರತಂ ಧಾರಯತಃ ಪ್ರಜಾರ್ಥಂ ।
ಸಮಂ ಮಹಿಷ್ಯಾ ಮಹನೀಯಕೀರ್ತೇಃ ॥
ಸಪ್ತ ವ್ಯತೀಯುಃ ತ್ರಿಗುಣಾನಿ ತಸ್ಯ ।
ಡಿನಾನಿ ದೀನೋದ್ಧರಣೋಚಿತಸ್ಯ॥ ೨೫

ಅನ್ಯೇದ್ಯು ರಾತ್ಮಾನುಚರಸ್ಯ ಭಾವಂ ।
ಜಿಜ್ಞಾ ಸಮಾನಾ ಮುನಿಹೋಮಧೇನುಃ॥
ಗಂಗಾಪ್ರಪಾತಾಂತನಿರೂಢಶಷ್ಪಂ
ಗೌರೀಗುರೋಃ ಗಹ್ವರ ಮಾವಿವೇಶ ॥ ೨೬

ಸಾ ದುಷ್ಪ್ರಧರ್ಷಾ ಮನಸಾಪಿ ಹಿಂಸ್ರೈಃ ।
ಇತ್ಯದ್ರಿಶೋಭಾಪ್ರಹಿತೇಕ್ಷಣೇನ॥
ಅಲಕ್ಷಿತಾಭ್ಯುತ್ಪ ತನೋ ನೃಪೇಣ ।
ಪ್ರಸಹ್ಯ ಸಿಂಹಃ ಕಿಲ ತಾಂ ಚಕರ್ಷ ॥ ೨೭

ತದೀಯ ಮಾಕ್ರಂದಿತ ಮಾರ್ತಸಾಧೋಃ ।
ಗುಹಾನಿಬದ್ಧಪ್ರತಿಶಬ್ದ ದೀರ್ಘಂ ॥
ರಶ್ಮಿಷ್ವಿವಾದಾಯ ನಗೇಂದ್ರಸಕ್ತಾಂ ।
ನಿವರ್ತಯಾಮಾಸ ನೃಪಸ್ಯ ದೃಷ್ಟಿಂ ॥ ೨೮

ದೀನರಕ್ಷೆಗೆ ತನುವ ತೆತ್ತವ
ಮಾನಿತ ಮಲಯಜಶದ ಲತಿವೇರೆ-
ಮಾನೃಪಾಲನುಪಟ್ಟದರಸಿಯು ಜೊತೆಯು ಲೀಬಗೆಯಿಂ ॥
ತಾನು ಸಂತತಿ ಪಡೆಯಲೋಸುಗ— ।
ಧೇನುಸೇವೆಯು ನಿಯಮ ತಳೆದಿರೆ ।
ನಾನುರಾಗದಿ ದಿನಗೇಳರ ಪೂರನವ ಕಳೆದಂ ॥ ೨೫

ಮಾರನೆಯು ದಿನ ತನ್ನ ಸೇವಾ— ।
ಚಾರನಿರತನ ಮನದ ಭಕ್ತಿಯು ।
ಭಾರವನು ತಾನರಿಯಲಿಕೆ ಮುನಿಹೋಮಧೇನುವದು ॥
ವಿೂರಿಬೆಳೆದೆಳಪುಲ್ಗಳಿರೆ ಭಾ— ।
ಗೀರಥಿಯು ಜಲಪಾತ ಸನಿಪದ ।
ಗೌರಿಯಯ್ಯನ ಸಾನುವಿನ ಗವಿಯಂ ಪ್ರವೇಶಿಸಿತು । ೨೬

ಕ್ರೂರಮೃಗಗಳು ಮನದೊಳುಂ ಹಾ— ।
ಹಾರಿಸೆಳೆಯಲ್ಕಾರ ವದನೆಂ— ।
ದಾ ರಮಣಿ ನಾಗಿರಿಯು ಸೊಬಗಲಿ ದಿಟ್ಟಿ ಪಸರಿಸಿರೆ ॥
ಘೋರಸಿಪ ವದೊಂದು ರಭಸದಿ ।
ಹಾರಿ ಧೇನುವದನ್ನು ಪಿಡಿದಿಹ ।
ದಾರಿಗಾಣನು ನರಪ ನೆಂಬಿದು ಪರಮ ಕೌತುಕವು ॥ ೨೭

ಒಡನೆ ಚೀರಿದ ಗೋವಿನಳುವದು ।
ಬಿಡದೆ ಗವಿಯೊಳು ತಡೆಯೆ ಗುಣಿತವ ।
ಪಡೆಯಲುದ್ಬಕೆ ಸಾಗಿ ಭಯಗೊಂಡವರ ಭಯತೊಡೆವ ।
ಪೊಡವಿಪಾಲನ ದಿಟ್ಟಿ ಗಿರಿಗಳಿ— ।
ಗೊಡೆಯನಲಿ ನೆಟ್ಟಿರಲಿ ಕದ ತಾ— ।
ಕೆಡೆದೆಳೆದು ಮರಳಿಸಿತು ಹಗ್ಗವ ಕಟ್ಟಿ ಸೆಳೆದಂತೆ ॥ ೨೮

ಸ ಪಾಟಲಾಯಾಂ ಗವಿ ತಸ್ಥಿವಾಂಸಂ ।
ಧನುರ್ಧರಃ ಕೇಸರಿಣಂ ದದರ್ಶ ॥
ಅಧಿತ್ಯಕಾಯಾಂ ಇವ ಧಾತುಮಯ್ಯಾಂ ॥
ಲೋಧ್ರದ್ರುಮಂ ಸಾನುಮತಃ ಪ್ರಪುಲ್ಲಂ ॥ ೨೯

ತತೋ ಮೃಗೇಂದ್ರಸ್ಯ ಮೃಗೇಂದ್ರಗಾಮೀ ।
ವಧಾಯ ವಧ್ಯಸ್ಯ ಶರಂ ಶರಣ್ಯಃ ॥
ಜಾತಾಭಿಷಂಗೋ ನೃಪತಿ ರ್ನಿಷಂಗಾತ್ ।
ಉದ್ಧರ್ತು ಮೈಚ್ಛತ್ ಪ್ರಸಭೋದ್ಧೃತಾರಿಃ ॥ ೩೦

ವಾಮೇತರಃ ತಸ್ಯ ಕರಃ ಪ್ರಹರ್ತುಃ ।
ನಖಪ್ರಭಾರೂಷಿತಕಂಕ ಪತ್ರೇ ॥
ಸಕ್ತಾಂಗುಳಿಃ ಸಾಯಕ ಪುಂಖ ಏವ ।
ಚಿತ್ರಾರ್ಪಿತಾರಂಭ ಇವಾವತಸ್ಥೇ ॥ ೩೧

ಬಾಹುಪ್ರತಿಷ್ಟಂಭ ವಿವೃದ್ಧ ಮನ್ಯುಃ ।
ಅಭ್ಯರ್ಣ ಮಾಗಸ್ಕೃತ ಮಸ್ಪೃಶದ್ಭಿಃ
ರಾಜಾ ಸ್ವತೇಜೋಭಿ ರದಹ್ಯತಾಂತಃ
ಭೋಗೀವ ಮಂತ್ರೌಷಧರುದ್ಧ ವೀರ್ಯಃ ॥ ೩೨

ಬಿಲ್ಲಗೊಂಡಾ ನೃಪನು ನೋಡಿದ-।
ನಲ್ಲಿ ಯಾ ಕೆಂಬಣ್ಣ ಹಸು ಬೆ-।
ನ್ನಲ್ಲಿ ನೆಲೆಸಿಹ ಕೇಃ ಸರಂಗಳ ಲೆಸೆವ ಸಿಹ್ಮವನು ॥
ಬಲ್ಲೊಡದು ಗೈರಿಕದ ಧಾತುಗ-
ಳಲ್ಲಿ ರಂಜಿಪ ಗಿರಿಯು ಮೇಲ್ನೆಲ-।
ದಲ್ಲಿ ನರೆ ಪೂಬಿಟ್ಟ ಲೋಧ್ರದ ತರುವಿ ಗೆಣೆಯಾಯ್ತು ॥ ೨೯

ಉತ್ತರಕ್ಷಣ ರಕ್ಷಣೆಗೆ ಮನ-।
ತೆತ್ತು ಕೇಸರಿಯುತ್ತ ಕಡೆ ಹರಿ-।
ಯುತ್ತ ರಿಪುಗಳ ರಭಸದಿಂ ಕಿತ್ತೊಗೆವ ನೃಪ ತನಗೆ ॥
ಪೊತ್ತ ಹಪಜಯು ಪೊತ್ತೆ ವಧೆಗಾ-।
ಯುತ್ತ ವೆಂದದ ನಂದು ವಧಿಸಲು ।
ಬತ್ತಳಿಕೆಯಿಂದುತ್ತ ಮಾಶುಗ ವೆತ್ತಲಿಚ್ಛಿಸಿದಂ ॥ ೩೦

ಶತ್ರುಸಿಹ್ಮವ ಕೊಲ್ಲಬಗೆದಾ-।
ಕ್ಷತ್ರಿಯನ ಬಲಗೈಯು ಬೆರಳವು ।
ಪತ್ರಿಮೂಲಕ್ಕಂಟಿ ನೆಲೆಸಿರೆ ಶರಕೆ ಬಗಿದಿರ್ದ ॥
ಪತ್ರಿಗರಿಯು ನ್ಮು ಗುರು ಹೊಳುಪಲಿ ।
ಚಿತ್ರಿಸುತ ಲಂಬೆಳವ ಕಾರ್ಯಂದ ।
ಚಿತ್ರದೊಳು ಬರೆದಂತೆ ನೃಪಭುಜವಿದ್ದುದಿದು ಚಿತ್ರಂ ॥ ೩೧

ಭುಜದ ಸಾಹಸ ಸಾಗದಿರೆ ಭೂ-।
ಭುಜನು ಹೆಚ್ಚಿದ ಕೋಪ ಶಿಖಿಯುಲಿ ।
ಭುಜಗನಂ ತೌಷಧದಿ ಮಂತ್ರದಿ ತಡೆದ ಬಲವುಳ್ಳ ॥
ಭುಜಿಸೆ ಗೋವನು ಪಿಡಿದ ತಪ್ಪನು ।
ಭಜಿಸಿದವನೆದುರಿರ್ದೊಡರಿಯದ ।
ನಿಜದ ತೇಜೋಜ್ವಾಲೆ ಯುವನನ್ನೊಳಗೆ ಬೇಯಿಸಿತು ॥ ೩೨

ತಮಾರ್ಯಗೃಹ್ಯಂ ನಿಗೃಹೀತಧೇನುಃ ।
ಮನುಷ್ಯವಾಚಾ ಮನುವಂಶಕೇತುಂ ॥
ವಿಸ್ಮಾಯಯನ್ವಿಸ್ಮಿತಮಾತ್ಮವೃತ್ತೌ ।
ಸಿಹ್ಮೋರುಸತ್ವಂ ನಿಜಗಾದ ಸಿಹ್ಮಃ ॥ ೩೩

ಅಲಂ ಮಹೀಪಾಲ ! ತವ ಶ್ರಮೇಣ ।
ಪ್ರಯುಕ್ತ ಮಪ್ಯಸ್ತ್ರ ಮಿತೋ ವೃಥಾ ಸ್ಯಾತ್ ॥
ನ ಪಾದಪೋನ್ಮೂಲನ ಶಕ್ತಿರಂಹಃ ।
ಶಿಲೋಚ್ಚಯೇ ಮೂರ್ಛತಿ ಮಾರುತಸ್ಯ । ೩೪

ಕೈಲಾಸಗೌರಂ ವೃಷಮಾರುರುಕ್ಷೋಃ
ಪಾದಾರ್ಪಣಾನುಗ್ರಹ ಪೂತಪೃಷ್ಠಂ ।
ಅವೇಹಿ ಮಾಂ ಕಿಂಕರಮಷ್ಟ ಮೂರ್ತೇಃ ।
ಕುಂಭೋದರಂ ನಾಮ ನಿಕುಂಭತುಲ್ಯಂ ॥ ೩೫

ಅಮುಂ ಪುರಃ ಪಶ್ಯಸಿ ದೇವದಾರುಂ ।
ಪುತ್ರೀಕೃತೋಽಸೌ ವೃಷಭಧ್ವಜೇನ ॥
ಯೋ ಹೇಮಕುಂಭಸ್ತನನಿಸೃತಾನಾಂ ।
ಸ್ಕಂದಸ್ಯ ಮಾತುಃ ಪಯಸಾಂ ರಸಜ್ಞಃ ೩೬

ತುರುವ ಪಿಡಿದಿಹ ಕೇಸರಿಯು ಗುರು-।
ಹಿರಿಯರೆಡೆಯೊಳು ನಿಲುವ ಮನುಕುಲ-।
ದರಸರ ಧ್ವಜ ಪಿಹ್ನದಂ ಶತಿಶಕ್ತನುಂ ತನ್ನ ॥
ಕರವು ಚಲಿಸದ ಬಾಳ್ಕೆ ಗಚ್ಚರಿ-।
ಭರದೊಳಿರ್ದಂಗಚ್ಚರಿಯುನೆ.।
ಚ್ಚರಿಸುತಂದದು ನರರ ಮಾತೊಳು ನುಡಿದುದ ವನೊಡನೆ ॥ ೩೩

ಸಾಕುಮಾಡೈ ಭೂಪ! ಬಳಲುವೆ.।
ಯೇಕೆ ? ನೀಂ ನಿನ್ನಸ್ತ್ರವನು ಬಹು-।
ಜೋಕೆಯಿಂದಲಿ ತೊಟ್ಟೊಡಂ ನನ್ನಲ್ಲಿ ಬಯಲಹುದು ॥
ಲೋಕಿಸಲು ಬುಡಕಿತ್ತು ಮರಗಳ ।
ನೂಕುವತಿಬಲದ ನಿಲವೇಗವು ।
ಸಾಕೆನಿಸಲಾರದು ಕಣಾ ಬೆಟ್ಟವನು ಕದಲಿಡಲು ॥ ೩೪

ಹರನು ತನ್ನಯ ಗಿರಿಯ ತೆರದೊಳು ।
ಮೆರವ ವೃಷಭವನೇರೆ ಪಾದವ-।
ನಿರಿಸಲೆನ್ನಯ ಬೆನ್ನು ಪಾವನಗೈದನುಗ್ರಹವಂ ॥
ಧರಿಸಿರುವೆನಲ್ಲದೆ ನಿಕುಂಭಗೆ ।
ಸರಿಯೆನಿಪೆ ನಾಂ ಪೆಸರು ಕುಂಭೋ-
ದರನು ನಾನಾಶಿವಗೆ ಸೇವಕನೆಂದು ನೀಂ ತಿಳಿಯೈ॥ ೫೩

ಮುಂದೆ ಮೆರೆವಾ ದೇವದಾರುವ-।
ನಿಂದು ನೀ ನೋಡುತಿಹೆಲಾ ನಿಜ-।
ಕಂದನೆಂದೇ ನಂದಿವಾಹನ ಸದನು ಭಾವಿಪನು ॥
ಸ್ಕಂದನೆಂಬೆಯು ಮೊಲೆಗಳವು ನಿಜ-।
ವೆಂದೆನಿಪ ತಾ ಚಿನ್ನ ಗೊಡದೊಳ.।
ಗಿಂದ ಸುರಿಸುವ ಪಯುದರಸರುಚಿ- ಯಿಂದಕೆ ತಿಳಿದಿಹುದು॥ ೩೬

ಕಂಡೂಯಮಾನೇನ ಕಟಂ ಕದಾಚಿತ್ ।
ವನ್ಯದ್ವಿಪೇನೋನ್ಮಥಿತಾ ತ್ವಗಸ್ಯ ॥
ಅಥೈನ ಮದ್ರೇಃ ತನಯಾ ಶುಶೋಚ
ಸೇನಾನ್ಯ ಮಾಲೀಢ ಮಿವಾಸುರಾಸ್ತ್ರೈಃ ॥ ೩೭

ತದಾಪ್ರಭೃತ್ಯೇವ ವನದ್ವಿಪಾನಾಂ ।
ತ್ರಾಸಾರ್ಥ ಮಸ್ಮಿನ್ನಹ ಮದ್ರಿಕುಕ್ಷೌ ॥
ವ್ಯಾಪಾರಿತಃ ಶೂಲಭೃತಾ ವಿಧಾಯ ।
ಸಿಹ್ಮತ್ವ ಮಂಕಾಗತಸತ್ತ್ವವೃತ್ತಿ ॥ ೩೮

ತಸ್ಯಾಲಮೇಷಾ ಕ್ಷುಧಿತಸ್ಯ ತೃಪ್ತ್ಯೈ ।
ಪ್ರದಿಷ್ಟಕಾಲಾ ಪರಮೇಶ್ವರೇಣ ।
ಉಪಸ್ಥಿತಾ ಶೋಣಿತಪಾರಣಾ ಮೇ ॥
ಸುರದ್ವಿಷಃ ಚಾಂದ್ರಮಸೀ ಸುಧೇವ ॥ ೩೯

ಸ ತ್ವಂ ನಿವರ್ತಸ್ವ ವಿಹಾಯ ಲಜ್ಜಾಂ ।
ಗುರೋರ್ಭವಾನ್ ದರ್ಶಿತ ಶಿಷ್ಯಭಕ್ತಿಃ ॥
ಶಸ್ತ್ರೇಣ ರಕ್ಷ್ಯಂ ಯದಶಕ್ಯರಕ್ಷ್ಯಂ ।
ನ ತದ್ಯಶಃ ಶಸ್ತ್ರಭೃತಾಂ ಕ್ಷಿಣೋತಿ ॥ ೪೦

ಒಂದು ದಿನ ಕಾಡಾನೆಯೊಂದಿದ ।
ಸಂದು ತನ್ನಯ ಗಂಡದೇಶಗ-।
ಳಿಂದ ತುರಿಸಲಿಕೆದ್ದು ಬಂದುದು ತೊಗಟೆ ಯದರಿಂದ ॥
ಹಿಂದೆ ಗಿರಿಜೆಯು ದೈತ್ಯಶಸ್ತ್ರಗ-।
ಳಿಂದ ಗಾಯವ ತಳೆದ ಗುಹನಂ-।
ಪೊಂದಿ ತಾನತ್ತಂತೆ ಶಿವಯಂದಿದಕೆ ಮರುಗಿದಳು ॥ ೩೭

ಅದುಮೊದಲು ಕಾಡಾನೆಹಿಂಡನು ।
ಬೆದರಿಸುವ ಸಲುವಾಗಿ ಯಾಗಿರಿ-।
ಯೊಡಲ ಮಧ್ಯದೊಳೆನಗೆ ಸಿಹ್ಮತ್ವವನು ತಾ ವಿಧಿಸಿ ॥
ಮದನಮಥನನು ಸೇವಿಸಿದ ನೆನ-।
ಗದನು ಕುಂಭೋದರನೆ ನಿನ್ನೆಡೆ-।
ಗೊದವಿದ ಪ್ರಾಣಿಗಳ ನುಂಡೀ ತರುವ ಪೊರೆಯೆಂದು ॥ ೩೮

ಕೃತ್ತಿವಾಸನು ಗೊತ್ತುಮಾಡಿದ ।
ಹೊತ್ತಿಗೀ ಗೋವಿತ್ತ ಸರಿದುದು ।
ವೃತ್ತಿನಿಯಮದೊಳಿರ್ದು ಹಸಿಹಸಿ ದೆನಗೆ ಹಸಿವೊಡಲ ॥
ನೆತ್ತರಿನ ಪಾರಣೆಯು ತೃಪ್ತಿಯು ।
ನಿತ್ತಪುದು ಯೋಚಿಸಲು ಚಂದ್ರನು ।
ಪೊತ್ತಿಹಮೃತದ ರಸವ ರಾಹುವ ಮನವು ತಣಿವಂತೆ ॥ ೩೯

ಮುಂದುದೋರದ ನೀನು ಲಜ್ಜೆಯು-।
ನಿಂದು ನಂದಿಸಿ ಹಿಂದಿರುಗು ನಿ-।
ನ್ನಿಂದ ಗುರುವಲಿ ಶಿಷ್ಯಭಕ್ತಿಯು ಚೆಂದ ಕಾಣಿಸಿತು ॥
ನಿಂದೆಯೆಂಕೈ ಶಸ್ತ್ರರಕ್ಷಣೆ-।
ಪೊಂದಿ ಪೊರೆಯಲಸಾಧ್ಯವಾದೊಡೆ ।
ಕಂದಿಸದು ತಾ ಯಶವ ನೆಂದಿಗು ಶಸ್ತ್ರ ಬಂಧುಗಳ । ೪೦

ಇತಿ ಪ್ರಗಲ್ಭಂ ಪುರುಷಾಧಿರಾಜೋ ।
ಮೃಗಾಧಿರಾಜಸ್ಯ ವಚೋ ನಿಶಮ್ಯ ॥
ಪ್ರತ್ಯಾಹತಾಸ್ತ್ರೋಃ ಗಿರಿಶಾ ಪ್ರಭಾವಾತ್ ।
ಆತ್ಮನ್ಯವಜ್ಞಾಂ । ಶಿಥಿಲೀಚಕಾರ ॥ ೪೧

ಪ್ರತ್ಯಬ್ರವೀಚ್ಚೈನ ಮಿಷುಪ್ರಯೋಗೇ ।
ತತ್ಪೂರ್ವಸಂಗೇ ವಿತದಪ್ರಯತ್ನಃ ॥
ಜಡೀಕೃತತ್ರ್ಯಂಬಕ ವೀಕ್ಷಣೇನ ।
ವಜ್ರಂ ಮುಮುಕ್ಷನ್ನಿವ ವಜ್ರಪಾಣಿಃ ॥ ೪೨

ಸಂರುದ್ಧ ಚೇಷ್ಟಸ್ಯ ಮೃಗೇಂದ್ರ ಕಾಮಂ ।
ಹಾಸ್ಯಂ ವಚಃ ತದ್ಯದಹಂ ವಿವಕ್ಷುಃ ॥
ಅಂತರ್ಗತಂ ಪ್ರಾಣಭೃತಾಂ ಹಿ ವೇದ ।
ಸರ್ವಂ ಭವಾನ್ ಭಾವ ಮತೋಭಿದಾಸ್ಯೇ ॥ ೪೩

ಮಾನ್ಯ ಸ್ಸ ಮೇ ಸ್ಥಾವರಜಂಗಮಾನಾಂ ।
ಸರ್ಗಸ್ಥಿತಿಪ್ರತ್ಯವಹಾರಹೇತುಃ ॥
ಗುರೋರಪೀದಂ ಧನಮಾಹಿತಾಗ್ನೇಃ ।
ನಶ್ಯತ್ ಪುರಸ್ತಾತ್ ಅನುಪೇಕ್ಷಣೀಯಂ ॥ ೪೪

ಈ ತೆರದಿ ಮೃಗರಾಜನವ ದ-।
ರ್ಪಾತಿಶಯದಲಿ ತನಗೆ ಪೇಳ್ದಾ-।
ಮಾತ ನಾನರರಾಜ ನಾಸಕ್ತಿಯಲಿ ಕಿವಿಗೊಟ್ಟು ॥
ಭೂತನಾಥನ ಮಹಿಮಯಿಂ ತನ-।
ಗಾತುದಸ್ತ್ರದ ತಡೆಯು ನಿಜವೆನು-।
ತಾತ ತನ್ನೊಳಗುದಿಸಿದಪಮಾನವನು ಸಡಲಿಸಿದಂ ॥ ೪೧

ಸ್ಥಾಣುದೇವಂ ಗಶನಿಯನು ಪವಿ ।
ಪಾಣ ಬಿಡಲಂದೆಳೆಸೆ ನೋಟದ-।
ಜಾಣ ನೀಕ್ಷಣದೊಳಗೆ ಸಿಲುಕಿ ಸ್ತಬ್ಧವಾದಂತೆ ॥
ಬಾಣದೆಸುಗೆಗೆ ತಡೆಯು ಮೆಂದಿಗು ।
ಕಾಣದೀದೊರೆ, ಸಫಲಯತ್ನಕೆ ।
ತಾಣವಿಲ್ಲದ ಕಂಡು ಕೇಸರಿ ಗಿತ್ತನುತ್ತರವಂ ॥ ೪೨

ಕೇಳು ಮೃಗಪತಿ! ಚಲನೆಯುಡಗಿದ ।
ಬಾಳಿನಿಂದಾಂ ಮುಂದೆ ನಿನ್ನೊಳು ।
ಪೇಳಬಗೆದಿಹ ನುಡಿಯು ಬಹುಪರಿ-ಹಾಸ್ಯಕೀಡಹುದು ॥
ಪೇಳಲೇಕೈ ನೀನೆ ಜೀವಿಗ-।
ಳಾಳಿಯೊಳ ಹುದುಗಿರುವ ಮನಸಿನ ।
ಜಾಳಿಯಲ್ಲವ ಬಲ್ಲೆಯದರಿಂ ದದನೆ ನಾಂ ನುಡಿವೆಂ ॥ ೪೩

ಚರಿಪ ಚಲಿಸದ ವಸ್ತುವರ್ಗದ ।
ಹರಣ ಭರಣೋತ್ಪತ್ತಿಕಾರಣ-।
ಪರನಹಾಸ್ಯರಹರನು ನನಗತಿಭಕ್ತಿ-ಪೂಜ್ಯನಲಾ ॥
ನಿರುತಹೋಮಾಗ್ನಿಯಲಿ ಮೊತೆವಾ-।
ಗುರುವಿನೀಗೋಧನವನುಂ ತನ-।
ಪುರದೊಳಳಿಯುತ್ತಿರಲುಪೇಕ್ಷೆಯ-ನೆಸಗಕೂಡದಲಾ ॥ ೪೪

ಸ ತ್ವಂ ಮದೀಯೇನ ಶರೀರವೃತ್ತಿಂ ।
ದೇಹೇನ ನಿರ್ವರ್ತಯಿತುಂ ಪ್ರಸೀದ ॥
ದಿನಾವಸಾನೋತ್ಸುಕಬಾಲವತ್ಸಾ ।
ವಿಸೃಜ್ಯತಾಂ ಧೇನುರಿಯಂ ಮಹರ್ಷೇಃ ॥ ೪೫

ಅಥಾಂಧಕಾರಂ ಕಿರಿಗಹ್ವರಾಣಾಂ ।
ದಂಷ್ಟ್ರಾಮಯೂಖೈಃ ಶಕಲಾನಿ ಕುರ್ವನ್ ॥
ಭೂಯಃ ಸ ಭೂತೇಶ್ವರಪಾರ್ಶ್ವವರ್ತೀ ।
ಕಿಂಚಿತ್ ವಿಹಸ್ಯಾರ್ಥಪತಿಂ ಬಭಾಷೇ ॥ ೪೬

ಏಕಾತಪತ್ರಂ ಜಗತಃ ಪ್ರಭುತ್ವಂ ।
ನವಂ ವಯಃ ಕಾಂತ ಮಿದಂ ವಪುಶ್ಚ ॥
ಅಲ್ಪಸ್ಯ ಹೇತೋಃ ಬಹು ಹಾತು ಮಿಚ್ಛನ್ ।
ವಿಚಾರಮೂಢಃ ಪ್ರತಿಭಾಸಿ ಮೇ ತ್ವಂ ॥ ೪೭

ಭೂತಾನುಕಂಪಾ ಯದಿ ಚೇದಿಯಂ ಗೌಃ ।
ಏಕಾ ಭವೇತ್ ಸ್ವಸ್ತಿಮತೀ ತ್ವದಂತೇ ॥
ಜೀವನ್ ಪುನಃ ಶಶ್ವದುಪಪ್ಲವೇಭ್ಯಃ ।
ಪ್ರಜಾಃ ಪ್ರಜಾನಾಥ! ಪಿತೇವ ಪಾಸಿ ॥ ೪೮

ಸನ್ನು ತವ್ರತಜೀವನನೆ ನೀ-।
ನೆನ್ನ ತನುವನ್ನುಂಡು ಹೆಚ್ಚಿಹ ।
ನಿನ್ನೊಡಲೊಳಿಹ ಪಸಿವನಿಂಗಿಸಲಿಕ್ಕನು-ಗ್ರಹಿಸೈ ॥
"ಇನ್ನು ಕಳೆಯಿತು ಹಗಲು ತಾಯಿಯು ।
ಮುನ್ನಸೇರುವೆ" ನೆಂದುಬಯಸುವ ।
ಸಣ್ಣಕರುವನ್ನುಳ್ಳ ಮುನಿಪಶುವಿದನು ಬಿಟ್ಟುಬಿಡೈ ॥ ೪೫

ಇಳೆಯು ರಮಣನ ನುಡಿಯು ಕೇಳಿದ ।
ಬಳಿಕ ಭೂತಾಧಿಪನ ಚರನಾ-।
ಮಲೆಯು ಗವಿಗಳ ಲಿರ್ದ ಕಗ್ಗತ್ತಲೆಯುನವ ತನ್ನ ॥
ಹೊಳೆವ ಕೋರೆಯು ವಲ್ಗಳುಗುಳುವ ।
ಬೆಳಕಿನಲಿ ಖಂಡಿಸುತ ತುಸುನಗು-।
ಬೆಳಸಿ ಸಿರಿಯುರಸಂಗೆ ಮತ್ತಿಂತು ನುಡಿದನವಂ ॥ ೪೬

ನಿನ್ನಬೆಳ್ಗೊಡೆಯೊಂದರಲಿ ಜಗ-
ವನ್ನು ಪಾಲಿಸುತಿರ್ಪ, ಯೌವನ-।
ವನ್ನು ನೀ ಮೀರಿಲ್ಲ, ಮೇಣೀ ತನುವು ರಮಣೀಯಂ ॥
ಅಣ್ಣ! ನೀಂ ಸಣ್ಣದಹ ಫಲಕಿ-।
ಷ್ಟನ್ನು ಬಿಡಲಿಚ್ಛಿಸುವೆ ನಿನ್ನಂ ।
ಬಣ್ಣಿಸುವೆ ನಾಂ ತಾರತಮ್ಯವ ನರಿಯನಿವನೆಂದು ॥ ೪೭

ಭೂತದಯೆ ನಿನಗಿರುವುದಾದೊಡೆ ।
ಭೂತಳಾಧಿಪ! ನಿನ್ನ ಸಾವಿಂ-।
ದೀ ತುರುವು ತಾನೊಂದೆ ಕುಶಲವನೊಂದಿ ಬದುಕುವುದು ॥
ಆ ತನುವನುಳಿಸಿದೊಡೆ ಜನಗಳಿ-
ಗಾತುಕೊಂಡತಿಕಷ್ಟಗಳ ನೀಂ ।
ತಾತನೊಲು ತಿಳಿದವರ ನೆಂದುಂ ಪೊರವೆಜನನಾಥ । ೪೮

ಅಥೈಕಧೇನೋ ರಪರಾಧಚಂಡಾತ್ |
ಗುರೋಃ ಕೃಶಾನುಪ್ರತಿಮಾತ್ ಬಿಭೇಷಿ ||
ಶಕ್ಯೋಽಸ್ಯ ಮನ್ಯು ರ್ಭವತಾ ವಿನೇತುಂ |
ಗಾಃ ಕೋಟಿಶಃ ಸ್ಪರ್ಶಯತಾ ಘಟೋಧ್ನೀಃ || ೪೯

ತದ್ರಕ್ಷ ಕಲ್ಯಾಣಪರಂಪರಾಣಾಂ |
ಭೋಕ್ತಾರ ಮೂರ್ಜಸ್ವಲ ಮಾತ್ಮದೇಹಂ ||
ಮಹೀತಲಸ್ಪರ್ಶನಮಾತ್ರಭಿನ್ನಂ |
ಋದ್ಧಂ ಹಿ ರಾಜ್ಯಂ ಪದ ಮೈಂದ್ರ ಮಾಹುಃ || ೫೦

ಏತಾವದುಕ್ತ್ವಾ ವಿರತೇ ಮೃಗೇಂದ್ರೇ |
ಪ್ರತಿಸ್ವನೇನಾಸ್ಯ ಗುಹಾಗತೇನ ||
ಶಿಲೋಚ್ಚಯೋಽಪಿ ಕ್ಷಿತಿಪಾಲ ಮುಚ್ಚೈಃ |
ಪ್ರೀತ್ಯಾ ತಮೇವಾರ್ಥ ಮಭಾಷತೇವ || ೫೧

ನಿಶಮ್ಯ ದೇವಾನುಚರಸ್ಯ ವಾಚಂ |
ಮನುಷ್ಯದೇವಃ ಪುನರಪ್ಯುವಾಚ ||
ಧೇನ್ವಾ ತದಧ್ಯಾಸಿತಕಾತರಾಕ್ಷ್ಯಾ |
ನಿರೀಕ್ಷ್ಯಮಾಣಃ ಸುತರಾಂ ದಯಾಲುಃ || ೫೨

‘ಇರುವುದೊಂದೇ ಗೋವು ಗುರುವಿಗೆ, ।
ಹರಿಗೆ ನಾನದ ನಿತ್ತು ತಪ್ಪಿಂ-।
ದುರಿಗೆ ಸಮುನತಿಕೋಪಕೆಡೆಯುಹೆನೆಂದು ಬೆದರುವೆಯೋ ? ॥
ನರಪ ಕೊಡಗೆಚ್ಚಲಿನ ಹಸುಗಳ-।
ನರಸಿ ಕೋಟಿಗಳನ್ನು ಮುನಿಪಗೆ ।
ತೆರುವ ತೆರದಲಿ ಮುನಿಪ ನೀಂ ಪರಿಹರಿಸಲಹುದಲ್ತು ॥ ೪೯

ಆದಕಾರಣ ಮೇಲೆ ಮೇಲೆ ಶು ।
ಭೋದಯಂಗಳ ಪೊಂದಿ ಸುಖಸಂ-।
ಪಾದಿಸುವ ಮೋಣೇ ಸಾರವೆನಿಸುವ ನಿನ್ನ ತನುವುಳುಹೈ ॥
ಭೋ ದಿಲೀಪನೆ! ಸುಖಸಿರಿಂಗೆ ನೆಲೆ-।
ಯಾದ ರಾಜ್ಯವ ನವನಿಗಂಟಿಹ ।
ಭೇದ ಪೊಂದುಳಿದಿಂದ್ರರಾಜ್ಯವಿದೆಂದು ಪೇಳ್ವರಲ್ತೆ ॥ ೫೦

ಕಾಡಮಿಕಗಳಿಗಧಿಪನಿನಿತೆಂ-।
ದಾಡಿ ನಿಲ್ಲಿಸ ಲಾನುಡಿಯು ಹೊರ-।
ದೂಡಿ ಬರುವಂದಾ ಗವಿಯೊಳಗೆ ಗುಣಿತರವದಿಂದ ॥
ಕೂಡಿ ಮೊರೆಯಲು ಶೈಲರಾಜನು ।
ಕೂಡ ಹರ್ಷದೊಳದರಬಾವವ ।
ನಾಡಿನರಸಿಂಗೆತ್ತಿ ಪೇಳ್ವನೋ ಎನಲು ತೋರಿದುದು ೫೧

ಕೇಸರಿಯು ಹಿಡಿತದೊಳು ನೆರೆಸಂ-।
ತ್ರಾಸವೀಕ್ಷಣದಿಂದ ತನ್ನ-।
ನ್ನಾಸೆಯಲಿ ಹಸು ನೋಡುತ್ತಿರಲತ್ಯಂತ ಕರುಣವನು ॥
ಸೂಸುತಿಹ ಮನುಜೇಶ್ವರನು ಶಿವ-।
ನಾಸರೆಯನೊಂದಿಹನ ನುಡಿಯಾ-।
ಲೈಸುತವನಂ ಕುರಿತು ಮಾರುತ್ತರವನಿಂತೊರೆದ ॥ ೫೨

ಕ್ಷತಾತ್ ಕಿಲ ತ್ರಾಯತ ಇತ್ಯುದಗ್ರಃ ।
ಕ್ಷತ್ರಸ್ಯ ಶಬ್ದೋ ಭುವನೇಷು ರೂಢಃ ॥
ರಾಜ್ಯೇನ ಕಿಂ ತದ್ವಿಪರೀತವೃತ್ತೇಃ ।
ಪ್ರಾಣೈರುಪಕ್ರೋಶಮಲೀಮಸೈರ್ವಾ ॥ ೫೩

ಕಥಂ ನು ಶಕ್ಯೋಽನುನಯೋ ಮಹರ್ಷೇಃ ।
ವಿಶ್ರಾಣನಾತ್ ಅನ್ಯಪಯಸ್ವಿನೀನಾಂ ॥
ಇಮಾ ಮನೂನಾಂ ಸುರಭೇ ರವೇಹಿ ।
ರುದ್ರೌಜಸಾ ತು ಪ್ರಹೃತಂ ತ್ವಯಾಸ್ಯಾಂ ॥ ೫೪

ಸೇಯಂ ಸ್ವದೇಹಾರ್ಪಣನಿಷ್ಕ್ರಯೇಣ ।
ನ್ಯಾಯ್ಯಾ ಮಯಾ ಮೋಚಯಿತುಂ ಭವತ್ತಃ ॥
ನ ಪಾರಣಾ ಸ್ಯಾತ್ ವಿಹತಾ ತವೈವಂ ।
ಭವೇದಲುಪ್ತಶ್ಚ ಮುನೇಃ ಕ್ರಿಯಾರ್ಥಃ ॥ ೫೫

ಭವಾನಪೀದಂ ಪರವಾನವೈತಿ ।
ಮಹಾನ್ ಹಿ ಯತ್ನಃ ತವ ದೇವದಾರೌ ।
ಸ್ಥಾತುಂ ನಿಯೋಕ್ತುಃ ನ ಹಿ ಶಕ್ಯಮಗ್ರೇ ।
ವಿನಾಶ್ಯ ರಕ್ಷ್ಯಂ ಸ್ವಯ ಮಕ್ಷತೇನ ॥ ೫೬

ಕೇಡಿಗಿಡಾಗಿಹುದನಂ ಕಾ ।
ಪಾಡುವುದೆ ಬಲ್-ಕ್ಷತ್ರ ಪದಕೊಡ.।
ಗೂಡಿದರ್ಥಂ- ಕ್ಷತ್ರಿಯಂಗಿದು ಲೋಕಸಿದ್ಧವಲಾ ! ॥
ನೋಡಲಿದನವ ಮೀರಿ ನಡೆದೊಡೆ ।
ನಾಡಿನಿಂದೇಂ ? ನರಪಗಥವಾ ।
ಪೀಡೆಪಳಿವಲಿ ಮಲಿನವೊಂದಿರ್ಪಸುಗಳಿಂದೇನು ? ೫೩

ಬೇರೆ ಬಹುಗಾಲ್ಗರೆವ ಪಶುಗಳ ।
ಸೂರೆಯಿತ್ತೊಡ ಮಾಮಹರ್ಷಿಯು ।
ಘೋರಕೋಪವ ಶಮನಗೈಯಲು ಸಾಧ್ಯವೆಂತಹುದೈ? ॥
ಸೌರಭೇಯಿಯೀ ಗೋವು ಸುರಗೋ-।
ನಾರಿಗಿಂತಲು ಕಡಿಮೆಯಿಲ್ಲೈ ।
ಗೌರಿಯರಸನ ಮಹಿಮೆಯಿಂ ನೀನದನು ಪಿಡಿದಿರುವೈ ॥ ೫೪

ಇನ್ನು ಆ ಈ ಧೇನುವನು ನಾಂ-।
ನಿನ್ನ ದೆಸೆಯಿಂ ಬಿಡಿಸಲೋಸುಗ ।
ತನ್ನ ದೇಹಾರ್ಪಣವೆ ಮುಯ್ಯಿ ನ್ಯಾಯಸಿದ್ಧವಿದು ॥
ಛಿನ್ನವಾಗದು ನಿನ್ನ ಪಾರಣೆ-।
ಯುನ್ನವುಂ ಮೇಣ್ ಮುನಿಯ ಹೋಮಗ-
ಳನ್ನು ಲೋಪಕ್ಕಿಡದೆ ನಡೆಸುವ ನಿಂತು ಮಾಡಲಿಕೆ ॥ ೫೫

ಪರರಧೀನದ ನೀನು ಮೆಲೆ-ಕೇ
ಸರಿಯೆ ಒಲ್ಲೈಮುಂದೊರೆವುದನು, ।
ಪರಮ ಸಾಹಸ ತೋರಿದೈ ನೀಂ ದೇವದಾರುವಲಿ ॥
ಪೊರೆಯ ಬೇಕಾಗಿರುವ ವಸ್ತುವ ।
ಪೊರೆಗಳೆದು ತಾಂ ಗಾಯ ಮೊಂದದೆ ।
ಚರನು ನೇಮಕನೆದುರು ನಿಲ್ಲಲು ಸಾಧ್ಯವಿಲ್ಲವಲಾ ॥ ೫೬

ಕಿಮಪ್ಯಹಿಂಸ್ಯಃ ತವ ಚೇನ್ಮತೋಽಹಂ ।
ಯಶಶ್ಶರೀರೇ ಭವ ಮೇ ದಯಾಳುಃ ।
ಏಕಾಂತವಿಧ್ವಂಸಿಷು ಮದ್ವಿಧಾನಾಂ ।
ಪಿಂಡೇಷ್ವನಾಸ್ಥಾ ಖಲು ಭೌತಿಕೇಷು । ೫೭

ಸಂಬಂಧ ಮಾಭಾಷಣಪೂರ್ವ ಮಾಹುಃ ॥
ವೃತ್ತ ಸ್ಸ ನೌ ಸಂಗತಯೋ ರ್ವನಾಂತೇ ।
ತದ್ಭೂತನಾಥಾನುಗ ! ನಾರ್ಹಸಿ ತ್ವಂ ।
ಸಂಬಂಧಿನೋ ಮೇ ಪ್ರಣಯಂ ನಿಹಂತುಂ ॥ ೫೮

ತಥೇತಿ ಗಾಂ ಮುಕ್ತವತೇ ದಿಲೀಪಃ ।
ಸದ್ಯಃ ಪ್ರತಿಷ್ಟಂಭವಿಮುಕ್ತಬಾಹುಃ ॥
ಸ ನ್ಯಸ್ತಶಸ್ತ್ರೋ ಹರಯೇ ಸ್ವದೇಹಂ ।
ಉಪಾನಯತ್ ಪಿಂಡ ಮಿವಾಮಿಷಸ್ಯ ॥ ೫೯

ತಸ್ಮಿನ್ ಕ್ಷಣೇ ಪಾಲಯಿತುಃ ಪ್ರಜಾನಾಂ ।
ಉತ್ಪಶ್ಯತಃ ಸಿಹ್ಮನಿಪಾತ ಮುಗ್ರಂ ॥
ಅವಾಙ್ಮುಖಸ್ಯೋಪರಿ ಪುಷ್ಪವೃಷ್ಟಿಃ ।
ಪಪಾತ ವಿದ್ಯಾಧರಹಸ್ತಮುಕ್ತಾ ॥ ೬೦

ನಿನಗಥವ ನನ್ನನ್ನು ಹಿಂಸಿಸೆ ।
ಮನವು ಬಾರದೊಡೆನ್ನ ಕೀರ್ತಿಯು ।
ತನುವಿನಲಿ ನೀಂ ದಯೆಯು ತೋರ್ಕೈ. ನನ್ನ ಪರಿಯುಲಿಹ ॥
ಜನಗಳೆಂದುಂ ನಾಶದಲ್ಲಿಯೆ ।
ಕೊನೆಯನೊಂದುವ ಪಾಂಚಭೌತಿಕ-।
ವೆನಿಪ ವಸ್ತುಗಳಲ್ಲಪೇಕ್ಷೆಯು ನಿಡರು ಸತ್ಯವಿದು ॥ ೫೭

ಮಾತುಗಳ ನಾಡುವುದೆ ಮೈತ್ರಿಗೆ ।
ಹೇತುವೆಂಬರು ವನದ ಮಧ್ಯದ-।
ಲಾತುಕೊಂಡುದು ಸಖ್ಯ ವೆಮ್ಮಿರ್ವರಿಗೆ ಜೊತೆಸೇರೆ ।
ಭೂತಪತಿಗಂಕರನೆ! ಕಾರಣ-।
ನೀತೆರದೊಳಿರೆ ಸಲಿಸದಿರುವುದು ।
ನೀತಿಯಲ್ಲೈ ನಿನಗೆ ಸಖನಹೆ ನೆನ್ನ ಬೇಡಿಕೆಯಂ ॥ ೫೮

'ಹಾಗೆಯಾಗಲಿ' ಯೆಂದು ಗೋವನು ।
ಬೇಗ ಬಿಡುಗಡೆ ಗೈದ ಕೇಸರಿ-।
ಗಾಗಿ ತಕ್ಷಣ ಭುಜದ ತಡೆ ಸಡಿಲಲು ದಿಲೀಪನೃಪಂ ॥
ಸಾಗದಿಹ ಶಸ್ತ್ರವನು ತಾ ಹಿಂ-।
ದಾಗಿಸುತಲೊಡನವನ ದೇಹವ ।
ರಾಗದಿಂದಲೆ ಮಾಂಸಮುದ್ದೆಯು ತೆರದಲರ್ಪಿಸಿದಂ ॥ ೫೯

ಘೋರ ಸಿಂಹದ ಘೋರತರದಾ-।
ಹಾರುವಿಕೆಯನ್ನೆದುರು ನೋಡುತ ।
ಮೋರೆ ತಗ್ಗಿಸಿಕೊಂಡು ನರಪಾಲಕನು ಕುಳಿತಿರಲು ॥
ಚಾರಿಸಿದರಾಕ್ಷಣವೆ ಕುಸುಮಾ-।
ಸಾರವನು ವಿದ್ಯಾಧರರು ನಯು-।
ಧೀರನಂಗದ ಮೇಲೆ ತಮ್ಮಯ ಕೈಗಳಿಂದಂದು॥ ೬೦

ಉತ್ತಿಷ್ಠ ವತ್ಸೇತ್ಯಮೃತಾಯಮಾನಂ ।
ವಚೋ ನಿಶಮ್ಯೋತ್ಥಿತ ಮುತ್ಥಿತ ಸ್ಸನ್ ।
ದದರ್ಶ ರಾಜಾ ಜನನೀ ಮಿವ ಸ್ವಾಂ ।
ಗಾಮದಿಗ್ರತಃ ಪ್ರಸ್ರವಣೀಂ ನ ಸಿಹ್ಮಂ ॥ ೬೧

ತಂ ವಿಸ್ಮಿತಂ ಧೇನು ರುವಾಚ ಸಾಧೋ ।
ಮಾಯಾಂ ಮಯೋದ್ಭಾವ್ಯ ಪರೀಕ್ಷಿತೋಽಸಿ ।
ಋಷಿಪ್ರಭಾವಾತ್ ಮಯಿ ನಾಂತಕೋಽಪಿ ।
ಪ್ರಭುಃ ಪ್ರಹರ್ತುಂ ಕಿಮುತಾನ್ಯಹಿಂಸ್ರಾ ॥ ೬೨

ಭಕ್ತ್ಯಾ ಗುರೌ ಮಯ್ಯನುಕಂಪಯಾ ಚ ।
ಪ್ರೀತಾಸ್ಮಿ ತೇ ಪುತ್ರ! ವರಂ ವೃಣೀಷ್ವ ॥
ನ ಕೇವಲಾನಾಂ ಪಯಸಾಂ ಪ್ರಸೂತಿಂ ।
ಅವೇಹಿ ಮಾಂ ಕಾಮದುಘಾಂ ಪ್ರಸನ್ನಾಂ ॥ ೬೩

ತತ ಸ್ಸಮಾನೀಯ ಸ ಮಾನಿತಾರ್ಥೀ ।
ಹಸ್ತೌ ಸ್ವಹಸ್ತಾರ್ಜಿತವೀರಶಬ್ದಃ ॥
ವಂಶಸ್ಯ ಕರ್ತಾರ ಮನಂತಕೀರ್ತಿಂ ।
ಸುದಕ್ಷಿಣಾಯಂ ತನಯಂ ಯಯಾಚೇ ॥ ೬೪

ಏಳುಕಂದನೆ ಏಂಬುವ ವಮೃತವ ।
ಪೋಲುವಂತಹ ಮಧುರನುಡಿಯನು ।
ಕೇಳುತಾ ನರರಾಜ ನುತ್ಸುಕದಿಂದ ಮೇಲೆದ್ದು ॥
ಹೇಳಬೇಕೇ ತನ್ನ ಜನನಿಯು
ಸೋಲಿಪಂದದಿ ಕಂಡ ನೆದುರಲಿ ।
ಪಾಲ ಸುರಿಸುತ ನಿಂದ ಗೋವನು ಸಿಹ್ರವವ ಕಾಣ ॥ ೬೧

ಅಚ್ಚರಿಯು ಕಳೆ ಸಚ್ಚರಿತ್ರನೆ ।
ಮೆಚ್ಚಿದೆನು ನಾ ನಿಂಪು ಮಾಯೆಯು ॥
ಬಿಚ್ಚಿದನು ನಿನ್ನನ್ನು ಪರಕಿಸೆ ಮುನಿಯ ಮಹಿಮೆಯನು ॥
ನಚ್ಚಿ ಹೆನ್ನಚ್ಚಿ ಯಮನುಂ
ಬೆಚ್ಚುವನೆನಲು ಬೇರೆ ಹೆಚ್ಚಿನ ।
ಏಚ್ಚಾಪುವೆ, ಪೇಳ್, ದುಷ್ಟಮೃಗಗಳು ಈನ್ನ ಹಿಂಸಿಸಲು ॥ ೬೨

ಭಕ್ತಿ ಗುರುವಲಿ ಕರುಣೆ ಯೆನ್ನಲಿ ।
ಪೊತ್ತು ಬಿತ್ತರಗೊಳಿಸು ತೆನ್ನಯ ।
ಚಿತ್ತ ಕಿತ್ತೈ ಮುದವ ನಿನುತ್ತಮದ ವರವೆಳಸ್ಯೆ ॥
ಚಿತ್ತವಿಸು ಪಾಲ್ಗೋತ್ತವನು ತಾಂ ।
ತೆತ್ತು ಮೇರವಳು ಮಾತ್ರವಲ್ಲದೆ ।
ಮತ್ತೆ ವೊಲಿದೊಡೆ ಬಯಕೆ ತೆತ್ತಪಳೆಂದು ನೃಪ ತಿಳಿಯ್ಯೆ ॥ ೬೩

ಬೇಡುವರ ನತ್ಯಾದರಿಪ, ಕೈ–।
ನೀಡಿ ಗಳಿಸಿಹ ವೀರ ಪದವನು ।
ನಾಡಿನರಸನು ಬಳಿಕ ತನ್ನಯ ಕೈಗಳೆರಡನ್ನು ॥
ಜೋಡಿಸಿಯೆ ಕುಲವೃದ್ಧರಿಪ ಮೇಣ್–।
ಬಾಡದಿಹ ಯಶಗಳಿಪ ಸುತನನು ।
ಬೇಡಿದನು ನಂದಿನಿಯನವ ನಿಜ ಸತಿ ಸುದಕ್ಷಿಣೆಯೊಳ್ ॥ ೬೪

ಸನ್ತಾನಕಾಮಾಯ ತಥೇತಿ ಕಾಮಂ ।
ರಾಜ್ಞೇ ಪ್ರತಿಶ್ರುತ್ಯ ಪಯಸ್ವಿನೀ ಸಾ ।
ದುಗ್ಧ್ವಾ ಪಯಃ ಪತ್ರಪುಟೇ ಮದೀಯಂ ॥
ಪುತ್ರೋಪಭುಂಕ್ಷ್ವೇತಿ ತಮಾದಿದೇಶ ೬೫

ವತ್ಸಸ್ಯ ಹೋಮಾರ್ಥವಿಧೇಶ್ಚ ಶೇಷಂ ।
ಗುರೋರನುಜ್ಞಾಂ ಅಧಿಗಮ್ಯ ಮಾತಃ ॥
ಊದಸ್ಯ ಮಿಚ್ಛಾಮಿ ತವೋಪಭೋಕ್ತುಂ ।
ಷಷ್ಠಾಂಶ ಮುರ್ವ್ಯಾಃ ಇವ ರಕ್ಷಿತಾಯಾಃ ॥ ೬೬

ಇತ್ಥಂ ಕ್ಷಿತೀಶೇನ ವಶಿಷ್ಠಧೇನುಃ ।
ವಿಜ್ಞಾಪಿತಾ ಪ್ರೀತತರಾ ಬಭೂವ ॥
ತದನ್ವಿತಾ ಹೈಮವತಾಚ್ಚ ಕುಕ್ಷೇಃ ।
ಪ್ರತ್ಯಾಯಯೌ ಆಶ್ರಮ ಮಶ್ರಮೇಣ ॥ ೬೭

ತಸ್ಯಾಃ ಪ್ರಸನ್ನೇಂದುಮುಖಃ ಪ್ರಸಾದಂ ।
ಗುರು ನೃಪಾಣಾಂ ಗುರುವೇ ನಿವೇದ್ಯ
ಪ್ರಹರ್ಷ ಚಿಹ್ನಾನುಮಿತಂ ಪ್ರಿಯಾಯೈ ।
ಶಶಂಸ ವಾಚಾ ಪುನರುಕ್ತ ಮೇವ ॥ ೬೮

ನನ್ನಿಯಿಂ ಪಾಲ್ಗರೆವ ನಂದಿನಿ–।
ಯಿನ್ನು ಕೋರಿಕೆ ಸಲಿಪೆನೆನುತಲಿ ।
ತನ್ನ ಸತಿಯುಲಿ, ಮಗನ ನೆಳಸಿದ ನೃಪಗೆ ಮಾತಿತ್ತು ॥
"ಎನ್ನ ಕಂದನೆ ನನ್ನ ಪಾಲನು
ದೊನ್ನೆಯುಲಿ ನೀಂ ಕರೆದು ಮುದದಿಂ ।
ಮ್ಮುಭುಂಜಿಸು" ಎಂದವಗೆ ಬೆಸಸಿದಳು ಗೋಮಾತೆ ॥ ೬೫

ಅಮ್ಮ ! ನಿಮ್ಮಳಿಗರುವು ಕುಡಿದುಂ, ।
ನಮ್ಮ ಮುನಿಹೋಮಗಳ ಸಾಧನೆ–।
ಯುಮ್ಮಿಯು ಮುಳಿದ ನಿಮ್ಮಾ ಮೊಲೆ-ಹಾಲನ್ನು ಗುರುವರನ ॥
ಸಮ್ಮತಿಯು ಪಡೆದೀಂಟು ವಿಚ್ಛೆಗೆ ।
ಸಮ್ಮತಿಸು ನಾಂ ಪೊರೆದಿಳೆಯು ಜನ–।
ಸಮ್ಮತದ ಲುತ್ಪತ್ತಿ ಯಾರನೆಯುಂತ ಕೊಂಬಂತೆ ॥ ೬೬

ಈ ಪರಿಯೊ ಳಾತಾಪಸನ ತುರು ।
ಭೂಪನಿಂ ಬಿನ್ನಮೈಸೇವೆಯು ।
ಲೋಪಿಸದನೊಳ ಗಿರ್ದ ತನ್ನಯು ಮುದವ ಹೆಚ್ಚಿಸಿತು ॥
ಆಪಶುವು ಬಳಲದೆಯು ಬಳಿಕ ದಿ–।
ಲೀಪನಿಂ ದೊಡಗೂಡಿ ಹಿಮನಗ–।
ದಾಪೊಡೆಯು ದೆಸೆಯಿಂದ ತಾ ಹಿಂದಿರುಗಿ ತಾಶುಮಕೆ ॥ ೬೭

ವಿಮಲಚಂದ್ರಮನನ್ನು ಹೋಲುವ ।
ಸುಮುಖದಿಂದವನಿಪಾಲ–।
ಪ್ರಮುಖ ಗುರುವಹ ದಿಲಿಪ ತನ್ನಯು ಗುರುವಶಿಷ್ಠಂಗೆ ॥
ಅಮಿತಹರ್ಷಾಂಕಗಳಲೂಹಿಪ ।
ಸುಮನದಿಂದಾಧೇನುವೊಲಿದುದ ।
ಸುಮತಿ ಮತ್ತೊರೆದ ನೆನ ಲರ್ಪಿಸಿ ಬಳಿಕಸತಿ ಗೊರೆದ ॥ ೬೮

ಸ ನಂದಿನೀಸ್ತನ್ಯ ಮನಿಂದ್ಯ ಕೀರ್ತೇಃ ।
ಸದ್ವತ್ಸಲೋವತ್ಸಹುತಾವಶೇಷಂ ॥
ಪಪೌ ವಶಿಷ್ಠೇನ ಕೃತಾಭ್ಯನುಜ್ಞಃ ।
ಶುಭ್ರಂ ಯಶೋ ಮೂರ್ತ ಇವಾತಿತೃಷ್ಣಃ ॥ ೬೯

ಪ್ರಾತ ರ್ಯಥೋಕ್ತವ್ರತಪಾರಣಾಂತೇ ।
ಪ್ರಾಸ್ಥಾನಿಕಂ ಸ್ವಸ್ತ್ಯಯನಂ ಪ್ರಯುಜ್ಯ ॥
ತೌ ದಂಪತೀ ಸ್ವಾಂ ಪ್ರತಿ ರಾಜಧಾನೀಂ ।
ಪ್ರಸ್ಥಾಪಯಾಮಾಸ ವಶೀ ವಶಿಷ್ಠಃ ॥ ೭೦

ಪ್ರದಕ್ಷಿಣೀಕೃತ್ಯ ಹುತಂ ಹುತಾಶಂ ।
ಅನಂತರಂ ಭರ್ತು ರರುಂಧತೀಂ ಚ ॥
ಧೇನುಂ ಸವತ್ಸಾಂ ಚ ನೃಪಃ ಪ್ರತಸ್ಥೇ ।
ಸನ್ಮಂಗಳೋದಗ್ರತರ ಪ್ರಭಾವಃ ॥ ೭೧

ಶ್ರೋತ್ರಾಭಿರಾಮಧ್ವನಿನಾ ರಥೇನ ।
ಸ ಧರ್ಮಪತ್ನೀಸಹಿತಃ ಸಹಿಷ್ಣುಃ ॥
ಯಯಾವನುದ್ಘಾತಸುಖೇನ ಮಾರ್ಗಂ ।
ಸ್ವೇನೇವ ಪೂರ್ಣೇನ ಮನೋರಥೇನ ॥ ೭೨

ನಿಂದೆಯೊಂದದ ಭಾವವಿಹ ಸ-।
ದ್ವೃಂದಹಿತಕರ ನರಸನಾ ಹಸು-।
ಕಂದನುಂಡುಂ ಹೋಮಸಾಧನೆ ಗಳಿಸಿಯುಂ ಮಿಕ್ಕ ॥
ನಂದಿನಿಯು ಮೊಲೆಹಾಲ ನಾಗುರು ।
ವಿಂದಲಾಣತಿ ಪೊಂದಿ ಬಹುತೃಷೆ-
ಯಿಂದ ಕುಡಿದನು ರೂಪಗೊಂಡಿಹ ವಿಮಲಯಶವೆನಲು ॥ ೭೯

ಮೂರನೆಯ ಬೆಳಗಿನಲಿ ವಶಿಗಳ ।
ಧೀರಮುನಿ ಹಿಂದೊರೆದ ನಿಯಮದ
ಪಾರಣೆಯ ಕಡೆಯಲ್ಲಿ ಪಯಣದ ಸಮಯ ಕುಚಿತವಹ ॥
ಭೂರಿಮಂಗಳದಾಶಿಷಂಗಳ ।
ಬೀರುತಲಿ ನಿಜರಾಜಧಾನಿಯ ।
ದಾರಿಯಲಿ ತಾ ತೆರಳಿಚಿದನಾ ಗಂಡಹೆಂಡಿರನು ॥ ೮೦

ಹವಿಯ ತಳೆದಿಹ ಹೋಮದಗ್ನಿಗು-।
ಮವನಿಪತಿ ಮುನಿವರನಿಗುಂ ಬಳಿ-।
ಕವನಪತ್ನಿ ಯರುಂಧತಿಗು ಮೋಣ್ ಕರುವಿಗಾಕಳಿಗುಂ ॥
ಸುವಿನಯದಲಿ ಸುತ್ತಿಟ್ಟು ಸಂತರ ।
ನಿವಹದಿಂದಹ ಮಂಗಳಾಶಿಷ-।
ಪವ ತಳೆದು ತಾ ಹೊರಟ ನತ್ಯಧಿಕ ಪ್ರಭಾವದಲಿ ॥ ೮೧

ಸಹನಶೀಲನು ಧರ್ಮದರಸಿಯ ।
ಸಹಿತ ಕಿವಿಗಿಂಪೆನಿಸಿ ದನಿಗುಡು ।
ತಿಹುದ ಹಾದಿಯೊಳೇರುಪೇರುಗಳಿಂದ ಕಾರಣದಿಂ ॥
ವಿಹಿತಸುಖವನ್ನೀವ ರಥದೊಳು ।
ಮಹಿಯರಸ ತಾ ಕುಳಿತು ಹೊರ-।
ಟಿಹ ಸಫಲವೊಂದಿನಿಜಮನೋರಥ-ದೊಳೆಂಬಂತೆ ॥ ೮೨

ತಮಾಹಿತೌತ್ಸುಕ್ಯ ಮದರ್ಶನೇನ ।
ಪ್ರಜಾಃ ಪ್ರಜಾರ್ಥವ್ರತಕರ್ಶಿತಾಂಗಂ
ನೇತ್ರೈಃ ಪಪುಃ ತೃಪ್ತಿ ಮನಾಪ್ನುವದ್ಭಿಃ ।
ನವೋದಯಂ ನಾಥ ಮಿವೌಷಧೀನಾಂ ॥ ೭೩

ಪುರಂದರಶ್ರೀಃ ಪುರ ಮುತ್ಪತಾಕಂ ।
ಪ್ರವಿಶ್ಯ ಪೌರೈ ರಂಭಿನಂದ್ಯಮಾನಃ !
ಭುಜೇ ಭುಜಿಂಗ್ರೇಂದ್ರ ಸಮಾನಸಾರೇ
ಭೂಯಃ ಸ ಭೂಮೇ ರ್ಧುರ ಮಾಸಸಜ್ಜ ॥ ೭೪

ಅಥ ನಯನಸಮುತ್ಥಂ ಜ್ಯೋತಿರತ್ರೇ ರಿವ ದ್ಯೌಃ ।
ಸುರಸರಿದಿವ ತೇಜೋ ವಹ್ನಿನಿಷ್ಠ್ಯೂತ ಮೈಶಂ ॥
ನರಪತಿಕುಲಭೂತ್ಯೈ ಗರ್ಭ ಮಾದತ್ತ ರಾಜ್ಞೀ ।
ಗುರುಭಿ ರಭಿನಿವಿಷ್ಟಂ ಲೋಕಪಾಲಾನುಭಾವೈಃ ॥ ೭೫

ತನ್ನ ಕಾಣದ ಜನಕೆ ಲಾಲಸ ।
ಯನ್ನು ಹೆಚ್ಚಿಪ ನೃಪನು। ನಿಜಸುತ ।
ನನ್ನು ಪಡೆಯಲು ನಿಯಮದಿಂ ನಿಜತನುವು ನವೆದಿರಲು ॥
ನನ್ನಿಯಿಂ ಹಿಂದಿರುಗಿ ಬಂದವ ।
ನನ್ನು ಕುಡಿದರು ಬಯಕೆ ಹಿಂಗದ।
ಕಣ್ಣಿನಲಿ ಹೊಸಹುಟ್ಟಿ ನೋಷಧಿಪತಿಯು ತಾನೆನಲು ॥ ೭೩
ಸುರಪವಿಭವಶ್ರೀಯಲಸೆಯುವ।

ಪುರದ ಜನರಿಂ ಸ್ತುತಿಯ ನೊಂದುತ
ಜಪ ಬಾವುಟ ವೆತ್ತಿ ಕಟ್ಟಿಪ ಪುರವನೊಳಪೊಕ್ಕು ॥
ಮುಗೆರಾಜಂಗೆಣೆಯ ಬಲದಿಂ ।
ಮೆರೆವ ತನ್ನಯ ಭುಜದಲಾತನು ।
ಮರಳಿ ವಹಿಸಿದವಂದು ಭೂಮಿಯೆನೊಗದ ಭಾರವನು ॥ ೭೪

ಅಂಬರಾಂಗನೆ ಯತ್ರಿ ಮುನಿವರ-।
ನಂಬಕದಿ ಹೊರಬಿದ್ದ ತೇಜವ ।
ಕೊಂಬವೋಲು ಮೇಣ್ ದೇವಗಂಗೆಯು ವಹ್ನಿಯಿಂದಿಟ್ಟ ।
ತ್ರ್ಯಂಬಕನ ತೇಜರನು ಪೊತ್ತವೊ-।
ಲುಂ ಬಳಿಕರಸಿ ತಾಳ್ದಳು ನೃಪಕು-।
ಲಂ ಬೆಳೆಸೆ ಗಬ್ಬವನು ದಿಕ್ಪತಿ ತೇಜ ವೆಡೆಗೊಂಡು ॥ ೭೫

ಶ್ರೀ ಮಹಾಕವಿ ಕಾಳಿದಾಸನಕೃತ ರಘುವಂಶ ಕಾವ್ಯದಲ್ಲಿ ನಂದಿ
ನೀರ್ವರ ಪ್ರಧಾನವೆಂಬ ಎರಡನೆಯ ಸರ್ಗ ಮುಗಿದುದು,

ಕವಿ ಕಾಳಿದಾಸನಿಂದ ಪ್ರಣೀತವಾದ ರಘುವಂಶ ಮಹಾಕಾವ್ಯ ದೊಳಗಣ 14ನೆಯ ಸರ್ಗದಲ್ಲಿನ ಶ್ಲೋಕಗಳಿಗೆ ಕನ್ನಡಾನುವಾದ (ಭಾಮಿನೀಷಟ್ಪದಿಯಲ್ಲಿ)

ಹಿನ್ನೆಲೆ

ಕವಿಯು ತನ್ನ ಈ ಕಾವ್ಯದಲಿ ಅಲ್ಲಲ್ಲಿ, 'ಸೂರ್ಯವಂಶ' 'ಮನುವಂಶ', 'ಇಕ್ವಾಕುವಂಶ' ಮತ್ತು 'ಕಾಕುತ್ಸ್ಥವಂಶ, ಎಂದು ಈಪ್ರಸಿದ್ಧ ರಾಜವಂಶವನ್ನು ಹೆಸರಿಸಿದ ರೀತಿಯಲ್ಲಿಯೇ ತನ್ನ ಈ ಗ್ರಂಥಕ್ಕೆ 'ರಘುವಂಶ' ಎಂದು ಕರೆದಿದ್ದಾನೆ. ಇದಕ್ಕೆ ಕಾರಣ ಸೂರ್ಯ, ಮನು ಇಕ್ವಾಕು, ಕಾಕುತ್ಸ್ಥರಂತೆಯೇ ರಘುಚಕ್ರವರ್ತಿಯೂ ಅತಿಪ್ರಸಿದ್ಧನು. ಇದಕ್ಕಾಗಿಯೇಅಂತಹನ ಹುಟ್ಟು ಬಹಳಷ್ಟು ಅಲೌಕಿಕವಾದುದೆಂಬ ವಿಷಯವನ್ನು ಈ ಗ್ರಂಥದ ಒಂದನೆಯ ಮತ್ತು ಎರಡನೆಯ ಸರ್ಗಗಳಲ್ಲಿ ವಿಷದಪಡಿಸಿರುತ್ತಾನೆ. ಈ ಸರ್ಗಗಳ ಕನ್ನಡಾನುವಾದವು (ಷಟ್ಪದಿಗಳಲ್ಲಿ) ಈ ಸಂಕಲನದಲ್ಲಿ ನಿರೂಪಿತ ವಾಗಿದೆ.

ಮೂರನೆಯಸರ್ಗದಲ್ಲಿ ಆ ರಘುವು ಮಂಗಳ ಮುಹೂರ್ತದಲ್ಲಿ ಜನಿಸಿದುದೂ, ಅವನ ಶೈಶವಾವಸ್ಥೆಯಲ್ಲಿ ಉಪನಯನ, ವೇದಮತ್ತು ಧನುರ್ವೇದ ಗಳಲ್ಲಿ ವಿದ್ಯಾರ್ಜನೆಯೂ, ಯೌವನ ಬಂದೊಡನೆ ವಿವಾಹದೀಕ್ಷೆ, ಆ ಬಳಿಕ ಯೌವರಾಜ್ಯಾಭಿಷೇಕಾದಿಗಳೂ, ಅನಂತರ ತಂದೆಯಾದ ದಿಲೀಪಚಕ್ರವರ್ತಿಯು ಕೈಕೊಂಡ ತೊಂಭತ್ತೊಂಭತ್ತು ಅಶ್ವಮೇಧಯಜ್ಞದಲ್ಲಿನ ಕುದುರೆಯ ರಕ್ಷಣೆಯನ್ನು ಯಶಸ್ವಿಯಾಗಿ ನೆರವೇರಿಸಿದುದು, ನೂರನೆಯ ಯಜ್ಞಕ್ಕಾಗಿ ನಿರ್ದಿಷ್ಟವಾದ ಯಜ್ಞದ ಕುದುರೆಯನ್ನು ಅಸೂಯೆಯಿಂದ ಸ್ವಾರ್ಥಪರನಾಗಿ ಇಂದ್ರನುಅಪಹರಿಸಿದುದೂ, ಅದಕ್ಕಾಗಿ ಯುವಕನಾದರೂ ಯುದ್ಧದಲ್ಲಿ ಚನ್ನಾಗಿ ನುರಿತ ಇಂದ್ರನೊಡನೆ ಹೋರಾಡಿ, ಅವನಿಂದ ಪ್ರಯೋಗಿಸಲ್ಪಟ್ಟ ವಜ್ರಾಯುಧಕ್ಕೆ ಮಣಿಯದಿದ್ದ ಪ್ರತಾಪಕ್ಕೆ ಮೆಚ್ಚಿದ ಆ ದೇವರಾಜನಿಂದ ಯಜ್ಞಾಶ್ವವನ್ನು ಬಿಟ್ಟುಕೊಡಲು ಒಪ್ಪದಿದ್ದಲ್ಲಿ ತಮ್ಮ ತಂದೆಯು ಕೈಕೊಂಡ

ಮೂರನೆಯ ಯಜ್ಞದ ಫಲವನ್ನು ವರದ ಮೂಲಕ ತಂದೆಗೆ ಗಳಿಸಿಕೊಟ್ಟುದೂ, ಅನಂತರ ದಿಲೀಪನು ರಘುವನ್ನು ಸಿಂಹಾಸನಾಧೀಶ್ವರನನ್ನಾಗಿ ಮಾಡಿ ತಾನು ವಾನ ಪ್ರಸ್ಥಾಶ್ರಮವನ್ನು ಕೈಕೊಂಡುದೂ ಈ ಸರ್ಗದಲ್ಲಿ ನಿರೂಪಿತವಾಗಿದೆ.

ನಾಲ್ಕನೆಯ ಸರ್ಗದಲ್ಲಿ ರಘುಚಕ್ರವರ್ತಿಯು ಚೈತ್ರಯಾತ್ರೆಯನ್ನು ಕೈಕೊಂಡು ಕ್ರಮವಾಗಿ ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಗ್ಭಾಗಗಳಿಗೆ ಚತುರಂಗ ಸೈನ್ಯಗಳೊಡನೆ ಮುಂದವರಿದು ಅಲ್ಲಲ್ಲಿದ್ದ ರಾಜ ರಾಜಾಧಿರಾಜರುಗಳನ್ನು ತನ್ನ ಪ್ರತಾಪದಿಂದ ಗೆದ್ದು, ಆ ಮೂಲಕ ಕಪ್ಪ ಕಾಣಿಕೆಗಳ ರೀತಿಯಲ್ಲಿ ಗಳಿಸಿದ್ದ ಅಪಾರವಾದ ಐಶ್ವರ್ಯವೆಲ್ಲವನ್ನೂ 'ವಿಶ್ವ ಜಿತ್' ಯಾಗವನ್ನು ನೆರವೇರಿಸಿ ತನ್ನಲ್ಲಿದ್ದ ಸಮಸ್ತ ಧನಕನಕ ವಸ್ತುವಾಹನಗ ಳನ್ನು ದಾನರೂಪವಾಗಿ ವ್ಯಯಮಾಡಿ ತನ್ನರಮನೆಯಲ್ಲಿನ ಬೆಳ್ಳಿ ಬಂಗಾರ ಪಾತ್ರೆ ಗಳನ್ನೂ ಸಹ ಬ್ರಾಹ್ಮಣರಿಗೆ ದಾನಮಾಡಿ ಅವಕ್ಕೆ ಪ್ರತಿಯಾಗಿ ಮಣ್ಣಿನ ಪಾತ್ರೆ ಗಳನ್ನು ದಿನಬಳಕೆಗೆ ಉಪಯೋಗಿಸಿಕೊಳ್ಳುತ್ತಿದ್ದನೆಂಬ ವಿಷಯದ ವಿವರಣೆಯು ಈ ಸರ್ಗದಲ್ಲಿ ಅಡಕವಾಗಿದೆ. ಐದನೆಯ ಸರ್ಗದಲ್ಲಿ ಇಂತಹ ನಿರ್ಧನ ಸ್ಥಿತಿ ಯಲ್ಲಿರುವಂದು ವರತಂತುಮಹರ್ಷಿಯ ಶಿಷ್ಯ ಕೌತ್ಸನೆಂಬುವನು ತನ್ನ ಗುರು ವಿಗೆ ಸಲ್ಲಿಸಬೇಕಾಗಿದ್ದ ಹದಿನಾಲ್ಕು ಸಾವಿರ ಕೋಟೀ ಪಂಹ (ಚಿನ್ನದನಾಣ್ಯ) ಗಳನ್ನು ರಘುಮಹಾರಾಜನಿಂದ ಯಾಚಿಸಿ ಪಡೆದು ಅದನ್ನು ಗುರುದಕ್ಷಿಣೆ ಯನ್ನಾಗಿ ಅರ್ಪಿಸಬೇಕೆಂಬ ಬಯಕೆಯಿಂದ ಆ ರಾಜನಬಳಿಗೆಬಂದು, ಅವನ ನಿರ್ಧನಸ್ಥಿತಿಯನ್ನು ಕಂಡು ಆಶಾಭಂಗನಾಗಿ ಹಿಂತಿರುಗುವುದರಲ್ಲಿದ್ದಾಗ, ರಘು ಚಕ್ರವರ್ತಿಯು ಆ ಮಹಾತ್ಮನನ್ನು ತಡೆದುನಿಲ್ಲಿಸಿ ತನಗೆ ಎರಡು ಮೂರು ದಿನ ಗಳು ಅವಕಾಶ ಕೊಟ್ಟಲ್ಲಿ ಗುರುದಕ್ಷಿಣೆಗಾಗಿ ಕೊಡುವ ಮೌಲ್ಯವನ್ನು ಆತನಿಗೆ ಒದಗಿಸಲು ಪ್ರಯತ್ನಿಸುವುದಾಗಿ ಭರವಸೆಕೊಟ್ಟನು. ಇಷ್ಟುಹಣವನ್ನು ಉತ್ತರ ದಿಕ್ಪತಿಯಾದ ಕುಬೇರನಿಂದ ಮಾತ್ರಸಾಧಿಸಬೇಕಾಗಿದೆಯೆಂದೆಣಿಸಿ, ಅವನನ್ನು ಸಾಮಂತರಾಜನನ್ನಾಗಿಗಣಿಸಿ, ಅವನಮೇಲೆ ದಂಡಯಾತ್ರೆಯನ್ನು ಕೈಕೊಳ್ಳಲು ಸಿದ್ಧನಾಗಿದ್ದ ವಿಷಯವನ್ನು ಕುಬೇರನು ತಿಳಿದು ಅನುಚಾರರ ಮೂಲಕ ರಘು ರಾಜನ ಬೊಕ್ಕಸದ ಮೇಲೆ ಸುವರ್ಣವೃಷ್ಟಿಯನ್ನು ಕರೆಯುವಂತೆ ಮಾಡಿದನು. ಈ ಅದ್ಭುತವಾದ ವಿಷಯವನ್ನು ತಿಳಿದು ಸಂತೋಷದಿಂದ ಆ ಐಶ್ವರ್ಯವೆಲ್ಲ

ವನ್ನೂ ಕೌತ್ಸಮುನಿಗೆ ಭಕ್ತಿಯಿಂದ ಅರ್ಪಿಸಿಬಿಟ್ಟನು. ಈ ಅದ್ಭುತವಾದ ಪ್ರಸಂಗ ಕ್ಕಾಗಿ ಅತ್ಯಾನಂದಾಶ್ಚರ್ಯಗಳಿಂದಕೂಡಿದ ಅಂತಹ ಚಕ್ರವರ್ತಿಗೆ ವಂಶೋದ್ಧಾರ ಕನಾದ ಪುತ್ರನು ಜನಿಸಲೆಂದು ವರವನ್ನು ಮುನಿಯು ಕರುಣಿಸಿದನು. ಅದರಂತೆ ಶುಭಲಗ್ನದಲ್ಲಿ ಮಹಾರಾಣಿಯು ಗಂಡು ಶಿಶುವಿಗೆಜನ್ಮ ವಿತ್ತಳು ಅವನಿಗೆ ಅಜ ನೆಂದು ನಾಮಕರಣವಾಯಿತು. ಉಪನಯನ ಸಂಸ್ಕಾರ, ವಿದ್ಯಾರ್ಜನೆ ಇವೆಲ್ಲವೂ ಪೂರೈಸಿದ ಬಳಿ ಯೌವನದಲ್ಲಿ ಅವನು ಕಾಲಿಟ್ಟಂದು ಕ್ರಥಕೈ ಶಿಕವಂಶೋತ್ಪನ್ನ ನಾದಭೋಜಕನೆಂಬರಾಜನು ತನ್ನತಂಗಿ ಸರ್ವಾಂಗಸುಂದರಿಯೆನಿಸಿದ ಇಂದುಮತೀ ಎಂಬ ಕನ್ಯೆಗಾಗಿ ಏರ್ಪಡಿಸಿದ್ದ ಸ್ವಯಂವರದಲ್ಲಿ ಭಾಗವಹಿಸಬೇಕೆಂದುಯುವರಾಜ ನಾದ ಅಜಕುಮಾರನನ್ನು ಚತುರಂಗ ಸೈನ್ಯಸಹಿತವಾಗಿ ಸ್ವಯಂವರದಲ್ಲಿ ಭಾಗ ವಹಿಸಲುರಘುವು ಕಳುಹಿಸಿಕೊಟ್ಟನು. ಹಾದಿಯಲ್ಲಿನ ನರ್ಮದಾನದೀ ತೀರದಲ್ಲಿ ಪಾಳೆಯಬಿಟ್ಟಂದು ಇದ್ದಕ್ಕಿದ್ದಂತೆಯೇ ಒಂದುಕಾಡಾನೆಯು ಆ ನದಿಯಲ್ಲಿ ನಿರಾಟವನ್ನು ಮುಗಿಸಿ ಮೇಲೆದ್ದು ನದಿಯದಡದಲ್ಲಿ ಸೆರೆದಿದ್ದ ಅಜನ ಸೈನ್ಯದ ಆನೆಗಳ ಮೇಲೆ ನುಗ್ಗಿಬಂದು ಸೈನ್ಯವೆಲ್ಲವನ್ನು ಅಸ್ತವ್ಯಸ್ತ ಮಾಡತೊಡಗಿದು ದನ್ನು ಕಂಡು ಅಜಕುಮಾರನು ತನ್ನ ಬಿಲ್ಲಿನಲ್ಲಿ ಬಾಣವನ್ನು ಹೂಡಿ ಅದನ್ನು ಹಿಮ್ಮೆಟ್ಟಿಸುವಸಲುವಾಗಿ ಬಾಣದಿಂದ ಅದರ ಹಣೆಗೆ ಹೊಡೆದೊಡನೆಯೇ ಆ ಆನೆಯು ತನ್ನದೇಹವನ್ನು ತ್ಯಜಿಸಿ ಅದರಿಂದ ಗಂಧರ್ವದೇಹವನ್ನು ತಳೆದ ಒಂದುವ್ಯಕ್ತಿಯು ಹೊರಬಂದು ಆಗಸದಲ್ಲಿ ನಿಂತು ಅಜನನ್ನುದ್ದೇಶಿಸಿ 'ನಾನು ಪ್ರಿಯಂವದ ಎಂಬ ಒಬ್ಬಗಂಧರ್ವ, ನನ್ನ ಗರ್ವದಿಂದ ಮತಂಗರ ಶಾಪಕ್ಕೊಳ ಗಾಗಿ ಈ ಮತಂಗಜತ್ವ (ಆನೆಯರೂಪ)ವನ್ನು ಪಡೆದೆ- ನನ್ನ ನಮ್ರವಾದ ಬೇಡಿಕೆಗೆ ಓಗೂಟ್ಟು ರಘುಚಕ್ರವರ್ತಿಯುಮಗ ಅಜಕುಮಾರನ ಬಾಣವು ನಿನ್ನನ್ನು ಸೋಂಕಿದೊಡನೆಯೇ ಈ ಶಾಪವು ಕೊನೆಗೊಂಡು ನಿನ್ನ ಹಿಂದಿನರೂಪವನ್ನು ಹೊಂದುತ್ತಿ' ಎಂಬ ಶಾಪವಿಮೋಚನೆಯ ಪ್ರಸಂಗವನ್ನು ತಿಳಿಯಹೇಳಿ, ನೀನು ಮಾಡಿದ ಉಪಕಾರಕ್ಕಾಗಿ ನಿನಗೆ ನಾನು ಸಮ್ಮೋಹನಾಸ್ತ್ರವನ್ನು ಆದಕ್ಕೆ ತಕ್ಕ ಮಂತ್ರೋಪದೇಶದೊಡನೆ ನಿನಗೆ ಕೊಡಬೇಕೆಂದಿದ್ದೇನೆ" ಎಂದು ಹೇಳಿ ದೊಡನೆಯೇ ಆ ಮಂತ್ರೋಪದೇಶವನ್ನು ಆ ಗಂಧರ್ವನಿಂದ ಪಡೆದನು. ಅಲ್ಲಿಂದ ಮುಂದುವರೆದು ಭೋಜರಾಜನ ಪಟ್ಟಣದ ಹೊರವಲಯದಲ್ಲಿಳಿದುಕೊಂಡಿ

ರುವ ವಿಷಯವನ್ನು ಕೇಳಿ ಸಂತಸಗೊಂಡು ಅಜಕುಮಾರನನ್ನು ಗೌರವದಿಂದ ಬರಮಾಡಿಕೊಂಡು ಸ್ವಯಂವರದ ಹಿಂದಿನರಾತ್ರಿ ಅವನನ್ನು ಸತ್ಕರಿಸಿದನು. ಇಷ್ಟು ವಿಷಯಗಳು ಐದನೆಯ ಸರ್ಗದಲ್ಲಿ ಅಡಕವಾಗಿವೆ.

ಆರನೆಯ ಸರ್ಗವು ಸ್ವಯಂವರ ಮಹೋತ್ಸವಕ್ಕೆ ಮೀಸಲಾಗಿದೆ. ಅಲ್ಲಿ ಅನೇಕ ದೇಶಗಳಿಂದ ಆಹ್ವಾನಿತರಾಗಿ ಸ್ವಯಂವರ ಮಂಟಪದಲ್ಲಿ ರಾಜರು ರಾಜ ಕುಮಾರರೂ ಮಂಡಿತರಾಗಿದ್ದಾರೆ. ಕನ್ನೆ ಇಂದುಮತಿಯು ವಿವಿಧರಾಜರ ಪೂರ್ವೋತ್ತರಗಳನ್ನು ಚೆನ್ನಾಗಿಬಲ್ಲ ಮತ್ತು ವಾಗ್ಮಿಯಾದ ಸುನಂದಾ ಎಂಬ ದೌವಾರಿಕೆಯನ್ನು ಮುಂದುಮಾಡಿಕೊಂಡು ಒಂದು ಪಲ್ಲಕ್ಕಿಯಲ್ಲಿ ಕುಳಿತು ಸುನಂದೆಯ ಮಾತುಗಳನ್ನು ಆಲಿಸುತ್ತ ಅದರಿಂದ ತನ್ನ ನಿರ್ಧಾರವನ್ನು ಮಾಡಿ ಕೊಂಡು ಮುಂದುವರಿದಿದ್ದಾಳೆ. ಸುಮಾರು ಏಳುಜನ ರಾಜರೂ ಮತ್ತು ರಾಜಕುಮಾರರೂ ಇವರನ್ನು ಸಂಧಿಸಿ ಅವರ ವಿವರವೆಲ್ಲವನ್ನೂ ತಿಳಿದು ತನ್ನದೇ ಆದ ನಿರ್ಧಾರದಿಂದ ಯಾರನ್ನೂ ಒಲ್ಲದೆ ಕಡೆಗೆ ಅಜಕುಮಾರನ ಸಮೀಪಕ್ಕೆ ಬಂದೊಡನೆಯೇ ಅವನ ಭಾವ ಮತ್ತು ಸೌಂದರ್ಯ ಗಾಂಭೀರ್ಯ ಇವು ಗಳಿಂದ ಆಕರ್ಷಿಸಲ್ಪಟ್ಟುದು ಮಾತ್ರವಲ್ಲದೆ ಅವರ ಪೂರ್ವಿಕರ ಚರಿತ್ರೆಯೆಲ್ಲವನ್ನೂ ಆಮೂಲಾಗ್ರವಾಗಿ ಸುನಂದೆಯಿಂದ ತಿಳಿದು ಆ ಅಜಕು ಮಾರನೇ ತನಗೆ ತಕ್ಕವರನೆಂದು ನಿರ್ಧರಿಸಿ ಅವನ ಕೊರಳಿಗೆ ವರಣಮಾಲಿಕೆ ಯನ್ನು ತೊಡೆಸಿದಳು. ಆ ಸುಂದರಿಯ ನಿರ್ಧಾರಕ್ಕೆ ಗುಣಗ್ರಾಹಿಗಳ ಸಂಪೂರ್ಣ ಮೆಚ್ಚಿಗೆಯನ್ನು ಪಡೆದರೂ ಅಲ್ಲಿನೆರದಿದ್ದ ರಾಜ ಸಂತತಿಗಳು, ತಮಗೆ ಆಶಾ ಭಂಗವಾಗಲಿಕ್ಕಾಗಿ ಇದಕ್ಕಾಗಿ ಸೇಡುತೀರಿಸಿಕೊಳ್ಳುವ ಯೋಚನೆಯಲ್ಲಿ ಅವರು ತೊಡಗಿದವರಾಗಿದ್ದರು.

ಏಳನೆಯಸರ್ಗದಲ್ಲಿ ಅಜ ಮತ್ತು ಇಂದುಮತಿಯರ ವಿವಾಹ ಮಹೋತ್ಸವವು ಬಹು ವಿಜೃಂಭಣೆಯಿಂದ ಶಾಸ್ತ್ರರೀತಿಯಾಗಿ ನೆರವೇರಿತು. ಭೋಜರಾಜನು ತನ್ನತಂಗಿ ಇಂದುಮತಿ ಮತ್ತು ಅಜಕುಮಾರ ಇವರನು ಪಯಣಮಾಡಿಸಿ ಚತುರಂಗ ಸೈನ್ಯದೊಡನೆ ಮೂರುದಿನಗಳವರೆಗೆ ಅವರೊಡನ್ನೆ ಬೆಂಬಲಿಸಿ ಹಿಂದಿರುಗಿದನು ಆದರೆ ಅಸೂಯೆಗೊಂಡು ನಿರಾಶರಾದ ಇತರ

ರಾಜರು ಅಜನು ಪಯಣಿಸಿದ ಮಾರ್ಗಕ್ಕೆ ಅಡ್ಡಗಿಸಿ ಚತುರಂಗ ಸೈನ್ಯ ಸಹಾಯದಿಂದ ಅಜನ ಸೈನ್ಯವನ್ನು ತಡೆಹಿಡಿದು ಯುದ್ಧ ಸನ್ನದ್ಧರಾದರೂ. ಮಹಾಘೋರ ಯುದ್ಧವು ನಡೆಯಿತಾದರೂ, ಒಬ್ಬೊಂಟಿಗನಾದ ಅಜನಿಗೆ ಅನೇಕ ರಾಜರ ಸೈನ್ಯಗಳೊಡನೆ ಸೆಣಸುವುದು ಕಷ್ಟವಾಗಿ ಪರಿಣಮಿಸಿದರೂ ಕೂಡ ಅವರೆಲ್ಲರನ್ನೂ ನಿರ್ವೀರ್ಯರನ್ನಾಗಿ ಮಾಡಬಲ್ಲ, ತನಗೆ ಗಂದರ್ವರಾಜನಿಂದ ದತ್ತವಾದ ಸಂಮೋಹನಾಸ್ತ್ರವನ್ನು ಅವರ ಮೇಲೆ ಪ್ರಯೋಗಿಸಿದೊಡನೆಯೇ ಆ ರಾಜರೆಲ್ಲರೂ ತಮ್ಮ ಸೈನ್ಯಗಳೊಡನೆ ಸಮ್ಮೋಹಿತರಾಗಿ ನೆಲದಮೇಲೆ ಒರಗಿದರು. ಆಗ ಅಜನು ತನ್ನ ಪ್ರೇಯಸಿ ಇಂದುಮತಿಯನ್ನು ಸಮೀಪಿಸಿ, ಈ ಬಗೆಯಾಗಿ ಯುದ್ಧದಲ್ಲಿ ನಿರ್ವೀರ್ಯರಾಗಿ ಎಚ್ಚರತಪ್ಪಿ ನೆಲದ ಮೇಲೆ ಒರಗಿದವರು ನಿನ್ನಕೈಹಿಡಿಯಲು ಬಯಸಿದರಲ್ಲವೆ. ನೀನೆ ರಣರಂಗದಲ್ಲಿನ ವಿಜಯಲಕ್ಷ್ಮಿ ಇನ್ನು ನಮ್ಮ ರಾಜ್ಯಕ್ಕೆ ತೆರಳೋಣ ಎಂದು ಹೇಳಿ ಅಯೋಧ್ಯೆಗೆ ಜಯಶಾಲಿಗಳಾಗಿ ವೈಭವದಿಂದ ಹಿಂದಿರುಗಿ ಮಾತಾಪಿತೃಗಳಿಗೆ ವಂದಿಸಿದರು. ಇದು ಏಳನೆಯ ಸರ್ಗದಲ್ಲಿನ ವಿಷಯ.

ಎಂಟನೆಯಸರ್ಗದಲ್ಲಿ. ಇಕ್ಷ್ವಾಕುಕುಲಪದ್ಧತಿಯಂತೆ ರಾಜ್ಯಾಧಿಕಾರವನ್ನು ಮಾಡಲು ಶಕ್ತನಾದ ಪುತ್ರನಿದ್ದರೆ ಅವನಿಗೆ ರಾಜ್ಯಭಾರವನ್ನು ವಹಿಸಿ ತಂದೆ ತಾಯಿಗಳಿಬ್ಬರು ವಾನಪ್ರಸ್ಥಾಶ್ರಮವನ್ನು ಕೈಗೊಳ್ಳುವಸ್ವಭಾವವುಳ್ಳವರಾದುದರಿಂದ ರಘುವೂ ಕೂಡ ಯೋಗ್ಯನಾದ ಅಜಕುಮಾರನಿಗೆ ರಾಜ್ಯಭಾರದ ಸೂತ್ರಗಳನ್ನು ವಹಿಸಿದೊಡನೆಯೇ ವನಕ್ಕೆ ಪ್ರಯಾಣಮಾಡಲು ಸಿದ್ಧನಾದುದನ್ನು ಕಂಡು ಅಪರಿಮಿತವಾದ ಪಿತೃವಾತ್ಸಲ್ಯದಿಂದಕೂಡಿದ ಅಜಮತ್ತು ಇಂದುಮತಿಯರು ತಮ್ಮನ್ನು ಬಿಟ್ಟು ವನಕ್ಕೆ ತೆರಳಬಾರದೆಂದು ಕಾಲಿಗೆ ಬಿದ್ದು ಕಣ್ಣೀರಿಟ್ಟರು. ಅದಕ್ಕಾಗಿ ರಘುವು ಕರುಣೆಯಿಂದ ಊರ ಹೊರಗಿನ ಉಪವನದಲ್ಲಿ ಪರ್ಣಶಾಲೆಯನ್ನು ನಿರ್ಮಿಸಿಕೊಂಡು ಅಲ್ಲಿ ಪತ್ನಿಯೊಡನೆ ವಾಸಿಸುವುದಕ್ಕೆ ಒಪ್ಪಿದನೇವಿನಾ ರಾಜ್ಯಸುಖಗಳಿಗೆ ಮತ್ತೆ ಹಿಂದಿರುಗುವುದಕ್ಕೆ ಒಪ್ಪಲಿಲ್ಲ. ಇಷ್ಟಕ್ಕೆ ತೃಪ್ತರಾದ ಅಜಇಂದುಮತಿಯರಿಂದ ಪ್ರತಿನಿತ್ಯವೂ ಸೇವೆಯನ್ನು ಕೈಕೊಳ್ಳುತ್ತ ಯೋಗದಹಾದಿಯಲ್ಲಿ ಮನವಿಟ್ಟು ಕೆಲವು ದಿನಗಳ ಬಳಿಕ ಯೋಗಸಮಾಧಿಯಿಂದ ಶರೀರವನ್ನು ಬಿಟ್ಟು ಆತ್ಮೈಕ್ಯ ಸ್ಥಿತಿಯನ್ನು

ರಘು ಗಳಿಸಿಕೊಂಡನು. ತಂದೆಯ ವಿಯೋಗದಿಂದ ಚಿರಕಾಲ ಕಣ್ಣೀರು ಸುರಿಸುತ್ತಾ ಗುರುವರ್ಯರ ಆತ್ಮಬೋಧೆಯಿಂದ ವಿಯೋಗ ದುಃಖವನ್ನು ಸಡಲಿಸಿ, ಪ್ರಜಾಪರಿಪಾಲನೆಯ ಕಾರ್ಯದಲ್ಲಿ ನಿರತನಾದನು. ಹೀಗಿರಲು ಆ ದಂಪತಿಗಳಿಗೆ ಒಬ್ಬ ಪುತ್ರನು ಜನಿಸಿದನು. ಆತನೇ ದಶರಥನೆಂಬ ನಾಮದಿಂದ ಬೆಳಗಿದವನು. ತನ್ನ ಪುತ್ರನು ಇನ್ನೂ ಶಿಶುವಾಗಿರುವಾಗ ಒಂದುದಿನ ಅಜದಂಪತಿಗಳು ಊರ ಹೊರಗಿನ ಕೈತೋಟದಲ್ಲಿ ವಿಹರಿಸುತ್ತಿದ್ದಾಗ ಇದ್ದಕ್ಕಿದ್ದಂತೆಯೇ ಆಕಾಶಮಾರ್ಗದಲ್ಲಿ ವೀಣೆಯ ಶಬ್ದವು ಅವರಿಗೆ ಕೇಳಿ ಬಂದಿತು. ತಲೆಯೆತ್ತಿ ನೋಡಿದಂದು ಅದು ಗೋಕರ್ಣ ಕ್ಷೇತ್ರದಲ್ಲಿ ನೆಲೆಸಿದ ಮಹಾಬಲೇಶ್ವರನಿಗೆ ವೀಣಾ ಸೇವೆಯನ್ನು ಸಲ್ಲಿಸಲೋಸುಗ ಆಕಾಶಮಾರ್ಗದಲ್ಲಿ ಹೋಗುತ್ತಿದ್ದ ನಾರದಮಹರ್ಷಿಯ ವೀಣೆಯಿಂದುದಿಸಿದುದು. ದಂಪತಿಗಳಿಬ್ಬರೂ ಆಶ್ಚರ್ಯದಿಂದ ಆ ಮುನಿಯ ಕಡೆಗೆ ತಲೆಯೆತ್ತಿ ನೋಡುತ್ತಿದ್ದಂತೆಯೇ ಆ ವೀಣೆಗೆ ಅಲಂಕರಿಸಿದ್ದ ದೇವಲೋಕದ ಪುಷ್ಪಹಾರವು ಅದರಿಂದ ಜಾರಿಬಂದು ನೇರವಾಗಿ ಇಂದುಮತಿಯ ಎದೆಯಭಾಗವನ್ನು ಸೇರಿತು. ಆಕೆಯು ಅದನ್ನು ದೃಷ್ಟಿಸಿದ ಒಡನೆಯೇ ಚೈತನ್ಯವನ್ನು ಕಳೆದುಕೊಂಡು ಪ್ರಜ್ಞೆತಪ್ಪಿ ನೆಲದಮೇಲೆ ತನ್ನ ಪತಿಯಾದ ಅಜನನ್ನು ಒಡಗೊಂಡು ಕೆಳಕ್ಕೆ ಬಿದ್ದುಬಿಟ್ಟಳು. ಇಬ್ಬರಿಗೂ ಮೂರ್ಛೆ ಬಂದಿತು ಪಕ್ಕದಲ್ಲಿದ್ದ ಸೇವಕರ ಶೈತ್ಯೋಪಚಾರಗಳಿಂದ ಅಜನಿಗೆ ಪ್ರಜ್ಞೆ ಬಂದಿತು. ಆದರೆ ಇಂದುಮತಿಯು ಮೃತಿಯನ್ನು ಅಪ್ಪಿದಳಾದುದರಿಂದ ಆಕೆಗೆ ಮೂರ್ಛೆಯಿಂದ ಎಚ್ಚರವಾಗಲು ಅವಕಾಶವೇ ಇಲ್ಲದಂತಾಯಿತು. ಯೌವನದಲ್ಲಿಯೇ ಅನಿರೀಕ್ಷಿತವಾದ ಪತ್ನೀವಿಯೋಗವನ್ನು ಸಹಿಸಲಾರದೆ ಅಜಕುಮಾರನು ಪ್ರೇಯಸಿಯ ದೇಹವನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಕಲ್ಮರಗಳೂ ಕರಗುವಂತೆ ಹಲುಬುವುದಕ್ಕೆ ಆರಂಭಿಸಿದನು. ಸುಮಾರು ಇಪ್ಪತ್ತೈದು ಶ್ಲೋಕಗಳನ್ನು ವಿವಿಧರೀತಿಯಲ್ಲಿ ಅಜನ ಗೋಳಾಟಕ್ಕೆ ಮೀಸಲಿರಿಸಿದ್ದ ಕವಿಯ ಪ್ರತಿಭೆಯನ್ನು ಪೌರ್ವಾತ್ಯ ಪಾಶ್ಚಾತ್ಯ ವಿದ್ವಾಂಸರು ತಮ್ಮ ಮೆಚ್ಚಿಗೆಯನ್ನು ವ್ಯಕ್ತ ಪಡಿಸಿರುತ್ತಾರೆ. 'ಅಭಿಷಂಗಜಿತಾ' ಅಂದರೆ ಅತ್ಯಂತ ಶೋಕಕ್ಕೀಡಾದ ವಿವೇಕ ಶೂನ್ಯನಾಗಿರುವ ಸ್ಥಿತಿಯನ್ನು ತ್ರಿಕಾಲಜ್ಞನಾದ ಇಕ್ಷ್ವಾಕುಗುರುವೆನಿಸಿದ ವಸಿಷ್ಠಮುನಿಯು ತಾನು ತ್ರಿಕಾಲಜ್ಞನಾದುದರಿಂದ, ಆತನನ್ನು

ಸಮಾಧಾನ ಪಡಿಸುವುದಕ್ಕಾಗಿ ತನ್ನ ಶಿಷ್ಯನೊಡನೆ ಲೌಕಿಕ ಮತ್ತು ಆಧ್ಯಾತ್ಮಿಕವಾದ ಉಪದೇಶರೂಪವಾದ ಮಾತುಗಳನ್ನು ಹೇಳಿ ಕಳುಹಿಸಿದನು. ಮುನಿಯು ಯಜ್ಞವೊಂದರಲ್ಲಿ ತೊಡಗಿದ್ದನಾದುದರಿಂದ ತಾನೇ ಬರಲಾಗಲಿಲ್ಲವಾದುದರಿಂದ ಶಿಷ್ಯನ ಮೂಲಕ ಸಮಾಧಾನ ವಾಕ್ಯಗಳನ್ನು ಹೇಳಿಕಳುಹಿಸಬೇಕಾಯಿತು. ಅಜನಾದರೋ ಪತ್ನಿವಿಯೋಗದಿಂದ ಅತ್ಯಂತ ದುಃಖಸಂತಪ್ತನಾದುದರಿಂದ ಗುರೂಪದೇಶರೂಪವಾದ ವಾಕ್ಯಗಳು ಯಾವ ಪರಿಣಾಮವನ್ನು ತರದಿದ್ದರೂ ಸಹ ಗುರುವಿನ ಆಜ್ಞೆಯಂತೆ ನಡೆಯುತ್ತೇನೆ ಎಂದು ಶಿಷ್ಯನಿಗೆ ಆಶ್ವಾಸನ ಕೊಟ್ಟು ತನ್ನ ಜೀವಿತವನ್ನು ಪ್ರೇಯಸಿಗೇ ಮುಡುಪಾಗಿರಿಸಿದನು. ಆದರೆ ತನ್ನ ಮಗನು ಇನ್ನೂ ಎಳೆಯುವನಾದುದರಿಂದ ರಾಜ್ಯಭಾರವನ್ನು ವಹಿಸಿ ಹೊರಡುವುದಕ್ಕೆ ತನ್ನ ವಯಸ್ಸನ್ನು ಪಡೆಯುವವರೆವಿಗೂ ಜೀವಿಸಿದ್ದು, ಅವನಿಗೆ ಪಟ್ಟ ಕಟ್ಟಿ ಅವನ ಭವಿಷ್ಯವನ್ನು ಹಿತಚಿಂತಕರಾದ ಮಂತ್ರಿಗಳಿಗೆ ವಹಿಸಿ ತಾನ ಗಂಗಾಸರಯೂ ಸಂಗಮದಲ್ಲಿ ಪ್ರಾಯೋಪವೇಶವನ್ನು ಕೈಕೊಂಡು ಕಡೆಗೆ ದೇಹತ್ಯಾಗಮಾಡಿ ನಂದನವನದಲ್ಲಿ ಕ್ರೀಡಿಸುತ್ತಿದ್ದ 'ಹರಿಣೀ' ಎಂಬ ಅಪ್ಸರೆಯೊಡನೆ ಸೇರಿ ಸುಖ ಸಂತೋಷದಿಂದ ಕಾಲ ಕಳೆದನು ಎಂಬಲ್ಲಿಗೆ ಎಂಟನೆಯ ಸರ್ಗವು ಮುಗಿಯಿತು.

ಒಂಭತ್ತನೆಯ ಸರ್ಗದಲ್ಲಿ ಅಜಕುಮಾರನಾದ ಮತ್ತು ಅನ್ವರ್ಥನಾಮದಿಂದ ಮೆರೆಯುವ ದಶರಥನ ರಾಜ್ಯಭಾರದ ವರ್ಣನೆಯಿದೆ. ಈ ಯುವಕರಾಜನ ಬಿಲ್ಲಾಳುಗಳಲ್ಲಿ ಅಗ್ರಗಣ್ಯನಾಗಿ 'ಶಬ್ದವೇಧೀ' ಅಂದರೆ ಶಬ್ದವನ್ನು ಕೇಳಿದ ಮಾತ್ರದಿಂದಲೇ ಆ ದಿಕ್ಕಿನಲ್ಲಿ ಬಾಣಪ್ರಯೋಗ ಮಾಡಿ ಗುರಿ ಮುಟ್ಟುವ ಧನುರ್ವಿದ್ಯೆಯಲ್ಲಿ ಚತುರನಾದುದರಿಂದ, ಅದನ್ನು ಪರೀಕ್ಷಿಸಲು ಸರಯೂ ನದೀತೀರದಲ್ಲಿನ ಅರಣ್ಯದಲ್ಲಿನ ಮೃಗಗಳನ್ನು ಬೇಟೆಯಾಡುವುದಕ್ಕಾಗಿ ಒಂದಾನೊಂದು ಸಲ ರಾತ್ರಿಯ ವೇಳೆಯಲ್ಲಿ ಹೊರಹೊರಟು, ಸರಯೂ ನದಿಯಲ್ಲಿನೆಡೆಯಲ್ಲಿ ಆನೆಯೊಂದು ನೀರುಕುಡಿಯುವ ಶಬ್ದವೆಂದು ಭ್ರಮಿಸಿ ಆ ದಿಕ್ಕಿಗೆ ಪ್ರಾಣಾಂತಕವಾದ ಬಾಣಪ್ರಯೋಗ ಮಾಡಿದನು. ಇದರ ಪರಿಣಾಮವಾಗಿ, ಅಂಧರಾದ ತನ್ನ ಮುದಿ ತಂದೆತಾಯಿಗಳ ಬಾಯಾರಿಕೆಯನ್ನು ತಣಿಸುವ ಸಲುವಾಗಿ ಸರಯೂ ನದಿಯಿಂದ ನೀರನ್ನು ಹೊತ್ತು

ತರಲು ತಾಪಸಕುಮಾರನು ತನ್ನ ಕಲಶವನ್ನು ನೀರಿನಿಂದ ತುಂಬುತ್ತಿರುವ ಶಬ್ದದಿಂದ ಮರುಳಾಗಿ ಆ ಬಾಣವು ಅವನ ಹೃದಯವನ್ನು ಭೇದಿಸಿತಾದುದರಿಂದ, ಆ ನೋವನ್ನು ತಡೆಯಲಾರದೆ 'ಹಾಹತೋಽಸ್ಮಿ' ಅಂದರೆ 'ಅಯ್ಯೋ ನಾನು ಸತ್ತೆ' ಎಂದು ಗಟ್ಟಿಯಾಗಿ ಅರಚಿದನು. ಈ ಶಬ್ದವು ದಶರಥನ ಕಿವಿಗೆ ಬಿದ್ದೊಡನೆಯೇ ಗಾಬರಿಯಿಂದ ಋಷಿಕುಮಾರನಿದ್ದೆಡೆಗೆ ಧಾವಿಸಿಬಂದು ಅಜ್ಞಾನದಿಂದ ಬಾಣಪ್ರಯೋಗ ಮಾಡಿದುದಕ್ಕಾಗಿ ತಾಪಸಕುಮಾರನನ್ನು ಕ್ಷಮೆ ಬೇಡಿದನು. ಅವನಿಂದ ವಿಷಯವೆಲ್ಲವನ್ನೂ ಗ್ರಹಿಸಿ, ತನ್ನ ತಪ್ಪಿಗೆ ಪ್ರಾಯಶ್ಚಿತ್ತವೆಂಥದು ಎಂಬದನ್ನು ಗ್ರಹಿಸಬೇಕು' ಎಂದು ಅಂಗಲಾಚುತ್ತಿರುವ ದಶರಥನ ಸ್ಥಿತಿಯನ್ನು ಕರುಣಿಸಿ, 'ನೀನು ಬಾಯಾರಿಕೆಯಿಂದ ತಪಿಸುತ್ತಿರುವ ನನ್ನ ತಂದೆತಾಯಿಗಳಿಗೆ ಈ ಕಲಶದ ನೀರನ್ನು ಒಯ್ದು ಅವರನ್ನು ತಣಿಸಿ ನಿನ್ನ ತಪ್ಪನ್ನು ಅವರ ಮುಂದೆ ಒಪ್ಪಿಕೊಂಡುದೇ ಆದರೆ ಅವರು ನಿನ್ನ ತಪ್ಪನ್ನು ಮನ್ನಿಸುತ್ತಾರಾಗಿ ಅದರಂತೆ ನಡೆದರೆ ನಿನಗೆ ಆಘಾತವುಂಟಾಗದು' ಎಂದು ಸಮಾಧಾನ ಹೇಳಿ ಆ ತಪಸ್ವಿ ಬಾಲಕನು ಪ್ರಾಣಬಿಟ್ಟನು. ದಶರಥನಾದರೋ ವಿವೇಕರಹಿತವಾದ ತನ್ನ ಈ ಕಾರ್ಯಕ್ಕೆ ಅತ್ಯಂತ ಮರುಗುತ್ತ ಕುಮಾರನು ಹೇಳಿದಂತೆ ಕಲಶದ ನೀರಿನಿಂದ ವೃದ್ಧರಾದ ತಪೋದಂಪತಿಗಳಿಗೆ ಬಾಯಾರಿಕೆಯನ್ನು ತೀರಿಸಿ ತಾನು ಅಜ್ಞಾನದಿಂದೆಸಗಿದ ಕ್ರೂರಕಾರ್ಯವನ್ನು ಅವರಿಗೆ ಬಿನ್ನೈಸಿದನು. ಆ ವೃದ್ಧರಾದರೋ ಪುತ್ರಶೋಕದಿಂದ ಬಹಳವಾಗಿ ಹಲುಬುತ್ತ ತಾವೂ ಜೀರ್ಣದೇಹವನ್ನು ತೊರೆಯುವುದಾಗಿ ನಿರ್ಧರಿಸಿ ರಾಜನನ್ನು ಕುರಿತು, 'ರಾಜ ! ತಡೆಯಲಾರದ ಪುತ್ರ ವಿಯೋಗದ ದುಃಖದಿಂದ ನಾವು ಈ ಇಳಿವಯಸ್ಸಿನಲ್ಲಿ ದೇಹವನ್ನು ತ್ಯಾಗ ಮಾಡುವೆವೋ ಅದರಂತೆಯೇ ನೀನೂ ಕೂಡ ನಿನ್ನ ಇಳಿ ವಯಸ್ಸಿನಲ್ಲಿ ಪುತ್ರ ವಿಯೋಗದಿಂದ ಮೃತಿಯನ್ನಪ್ಪುವೆ' ಎಂಬ ಶಾಪವನ್ನು ಕೊಟ್ಟು, 'ದಶರಥ, ಜೀರ್ಣದೇಹಗಳನ್ನು ಅಗ್ನಿಗೆ ಆಹುತಿಮಾಡಿ ಆಪುಣ್ಯಕ್ಕೆ ಭಾಗಿಯಾಗು" ಎಂದು ಬೇಡಿಕೊಂಡನು, ಅದರಂತೆ ನಡೆಸಿದ ಮೇಲೆ ಪುಣ್ಯಲೋಕಗಳತ್ತ ವಿಮಾನದಲ್ಲಿ ಗಮಿಸಿದರು. ಈ ವಿಷಯಗಳೆಲ್ಲವೂ ಒಂಬತ್ತನೆಯ ಸರ್ಗದಲ್ಲಿ ಕವಿಯು ಅಡಗಿಸಿರುತ್ತಾನೆ.

ಹತ್ತನೆಯ ಸರ್ಗದಲ್ಲಿ ಕವಿಯು, ರಾವಣಾದಿ ದುಷ್ಟ ರಾಕ್ಷಸರಿಂದ ಪೀಡಿತರಾದ ಇಂದ್ರಾದಿದೇವತೆಗಳು ದುಷ್ಟಶಿಕ್ಷಣ ಶಿಷ್ಟಪರಿಪಾಲನಾ ಕಾರ್ಯ ವನ್ನು ನೆರವೇರಿಸಿ ಆ ಮೂಲಕ ಧರ್ಮ ಸಂಸ್ಥಾಪನೆಯನ್ನು ಮಾಡಲು ಭೂಮಿಯ ಮೇಲೆ ಅವತರಿಸಬೇಕೆಂದು ಕ್ಷೀರಸಾಗರದಲ್ಲಿ ಶಯನಿಸಿದ. ಶ್ರೀ ಮಹಾವಿಷ್ಣುವನ್ನು ಸ್ತುತಿಮಾಡಿ ಬೇಡಿಕೊಂಡರು. ಇದನ್ನು ಕೇಳಿ ಯೋಗ ನಿದ್ರೆಯಿಂದೆಚ್ಚೆತ್ತ ಶ್ರೀ ಮಹಾವಿಷ್ಣುವು "ರಾವಣ ಕುಂಭಕರ್ಣಾದಿಗಳು ತಪಸ್ಸುಮಾಡಿ ಯಾವ ದೇವಗಣಗಳಿಂದಾಗಲೀ, ಯಕ್ಷರಾಕ್ಷಸರಿಂದಾಗಲೀ ಮರಣವಾಗದಂತೆ ತಮ್ಮ ತಪಸ್ಸಿನಿಂದ ಬ್ರಹ್ಮದೇವನನ್ನು ಮೆಚ್ಚಿಸಿ, ಅವನಿಂದ ವರವನ್ನು ಪಡೆದಿರುತ್ತಾರೆ, ಅವರ ಭಾವನೆಯಲ್ಲಿ ಮನುಷ್ಯನು ನೀಚವಾದ ವಸ್ತುವೆಂದು ತಿಳಿದು, ಮಾನವನ ವಿಷಯವನ್ನು ಪ್ರಸ್ತಾಪಿಸಿಲ್ಲವಾಗಿ ನಾನು ದಶರಥನ ಪಟ್ಟಮಹಷಿಯಲ್ಲಿ ಜನಿಸಿ ಆ ಮೂಲಕ ನಾನು ರರಾವಣಕುಂಭ ಕರ್ಣಾದಿ ರಾಕ್ಷಸರನ್ನು ಕೊಂದು ಧರ್ಮವನ್ನು ಪುನರುದ್ಧಾರ ಮಾಡುವೆನು ನೀವೆಲ್ಲರೂ ಕರಡಿ ಕಪಿಗಳಾಗಿ ಜನಿಸಿ ನನಗೆ ಸಹಾಯ ಮಾಡುವವರಾಗಲಿ" ಎಂದು ಅವರಿಗೆ ಆಶ್ವಾಸನವನ್ನಿತ್ತು ತಾನು ಮರೆಗೊಂಡನು.

ಅಯೋಧ್ಯೆಯಲ್ಲಿ ಆಳುತ್ತಿದ್ದ ದಶರಥ ಮಹಾರಾಜನಾದರೋ ತನಗೆಮೂರು ಜನ ಪಟ್ಟಮಹಿಷಿರಿದ್ದರೂ ಕೂಡ ಪುತ್ರಸಂತಾನವಾಗದಿರುವುದಕ್ಕಾಗಿ ಬಲು ದುಗುಡಗೊಂಡು ಇದಕ್ಕೆ ಪರಿಹಾರವನ್ನು ಪಡೆಯಲು ತಮ್ಮ ಕುಲಗುರುವಾದ ವಶಿಷ್ಠ ಮಹರ್ಷಿಗಳ ನೆರವನ್ನು ಈ ವಿಷಯದಲ್ಲಿ ಬೇಡಿದನು. ಆ ಮಹರ್ಷಿಗಳ ಸಲಹೆಯಂತೆ "ಮಹಾರಾಜ, ನೀನು ಋಷ್ಯಶೃಂಗ ಮಹರ್ಷಿಯನ್ನು ಕರೆಸಿ, ಪುತ್ರಕಾಮೇಷ್ಟಿಯಾಗವನ್ನು ಕ್ರಮದಿಂದ ನರವೇರಿಸಿದರೆ ಪುತ್ರ ಲಭಿಸುವುದು" ಎಂಬ ಋಷಿಯ ಸಲಹೆಯನ್ನು ಕೇಳ ಅದರಂತೆ ಪುತ್ರಕಾಮೇಷ್ಟಿಯನ್ನು ಋಷ್ಯ ಶೃಂಗ ಮೂಲಕ ನಿಷ್ಠೆಯಿಂದ ನೆರವೇರಿಸಿದನು. ಸಂತಾನವು ಇದರ ಫಲವಾಗಿ ತೃಪ್ತಿಗೊಂಡ ಯಜ್ಞಪುರುಷನು ದೇವಚರುವಿನಿಂದ ಅಂದರೆ ಪಾಯಸದಿಂದ ತುಂಬಿದ ಕನಕ ಕಲಶವನ್ನು ದಶರಥರಾಜನಿಗೆ ನೀಡಿದನು. ಆ ಪಾಯಸವನ್ನು ತನ್ನ ಪತ್ನಿಯರಿಗೆ ಹಂಚಲು ಅವರು ಗರ್ಭಿಣಿಯರಾಗಿ ಕುಲಕ್ರಮದಲ್ಲಿ ಗಂಡು ಶಿಶುಗಳಿಗೆ ಜನ್ಮ ಕೊಟ್ಟರು. ವಸಿಷ್ಠಮುನಿಯು ಅವರಿಗೆ ಕ್ರಮವಾಗಿ ರಾಮ,

ಲಕ್ಷ್ಮಣ, ಭರತ, ಶತ್ರುಘ್ನರೆಂದು ನಾಮಧೇಯವನ್ನು ಕರುಣಿಸಿದನು. ಅವರು ಕ್ರಮವಾಗಿ ಬೆಳೆಯುತ್ತಿರುವಾಗ ಅವರೊಡನೆ ಸೇರಿ ದಶರಥನು ಸಂತೋಷ ದಿಂದಿರುತ್ತಿದ್ದನು. ಇಲ್ಲಿಗೆ ಹತ್ತನೆಸರ್ಗದ ಕಥಾಭಾಗವು ಪೂರೈಸಿತು.

ಹನ್ನೊಂದನೆಯ ಸರ್ಗದಲ್ಲಿ ಬಾಲಕಾಂಡದ ಕಥೆಯನ್ನು ಕವಿಯು ರೂಪಿಸಿರುತ್ತಾನೆ. ಅಂದರೆ ವಿಶ್ವಾಮಿತ್ರಮುನಿಯು ದಶರಥನ ಒಪ್ಪಿಗೆ ಯನ್ನು ಪಡೆದು ಇನ್ನೂ ಹದಿನಾರುವರ್ಷಗಳು ತುಂಬದ ಬಾಲಕರಾದ ರಾಮ ಲಕ್ಷ್ಮಣರನ್ನು ತಾನು ಕೈಕೊಳ್ಳಲಿರುವ ಯಜ್ಞರಕ್ಷಣೆಗಾಗಿ ಕೊಂಡೊಯ್ದುದೂ, ಅವರಿಗೆ 'ಬಲ ಮತ್ತು ಅತಿಬಲ' ಎಂಬ ಮಹಾಮಂತ್ರೋಪದೇಶ ಮಾಡಿ ದುದೂ, ಹಾದಿಯಲ್ಲಿನ ವನದಲ್ಲಿ ತಮ್ಮ ಮೇಲೆ ಏರಿ ಬಂದ ತಾಟಕೆಯನ್ನು ಸಂಹರಿಸಿದನು. ಬಳಿಕ ಯಜ್ಞದೀಕ್ಷೆಯನ್ನು ಹೊಂದಿ ಮುನಿಯು ಅದನ್ನು ನೆರವೇರಿಸುವುದಕ್ಕೆ ವಿಘ್ನವನ್ನುಂಟುಮಾಡಿದ ಮಾರೀಚ ಸುಬಾಹುಗಳೆಂಬ ರಾಕ್ಷಸರನ್ನು ನಿಗ್ರಹಿಸಿದುದೂ, ಗೌತಮನ ಆಶ್ರಮದಲ್ಲಿ ಪತಿಯ ಶಾಪಕ್ಕೊಳ ಗಾಗಿ ಅದೃಶ್ಯಳಾಗಿ ತಪಸ್ಸನ್ನೆಸಗುತ್ತಿದ್ದ ಅಹಲ್ಯೆಗೆ ಶಾಪವಿಮೋಚನೆ ಮಾಡಿ ದುದೂ, ಆ ಬಳಿಕ ಜನಕನ ಆಸ್ಥಾನವನ್ನು ಸೇರಿ ಅಲ್ಲಿ ಪಣವಾಗಿ ಒಡ್ಡಿದ್ದ ಶಿವಧನುರ್ಭಂಗಮಾಡಿ ಆ ಮೂಲಕ ಸೀತಾದೇವಿಯನ್ನೂ ವರಿಸಿದುದೂ, ಅಲ್ಲಿಂದ ವಿವಾಹಮಹೋತ್ಸವದಲ್ಲಿ ಪಾಲ್ಗೊಂಡ ದಶರಥ, ಗುರುವಸಿಷ್ಠ ಇವರುಗಳೊಡನೆ ಅಯೋಧ್ಯೆಗೆ ಹಿಂದಿರುಗುತ್ತಿದ್ದ ಸಮಯದಲ್ಲಿ ಅವರನ್ನು ಅಡ್ಡಗಟ್ಟಿ ಶ್ರೀರಾಮನ ಪ್ರತಾಪವನ್ನು ಹೀಯಾಳಿಸಿದ ಪರಶುರಾಮನ ಗರ್ವ ಭಂಗವನ್ನು ಮಾಡಿ ಅಯೋಧ್ಯೆಗೆ ಹಿಂದಿರುಗಿ ಸುಖದಿಂದುದ್ದುದೂ ಇವೆಲ್ಲವೂ ಹನ್ನೊಂದನೆಯ ಅಧ್ಯಾಯದಲ್ಲಿ ವಿಶಾಲವಾಗಿ ವರ್ಣಿತವಾಗಿದೆ.

ಹನ್ನೆರಡನೆಯ ಸರ್ಗದಲ್ಲಿ ಅಯೋಧ್ಯಾಕಾಂಡ, ಅರಣ್ಯಕಾಂಡ ಕಿಷ್ಕಿಂ ಧಾಕಾಂಡ, ಸುಂದರಕಾಂಡ ಮತ್ತು ಯುದ್ಧಕಾಂಡಗಳ ಕಥೆಯನ್ನು ಕವಿಯು ಸಂಗ್ರಹವಾಗಿ ವರ್ಣಿಸಿರುತ್ತಾನೆ. ಈ ಸರ್ಗವು ರಾವಣವಧೆ, ಅಗ್ನಿಪರೀಕ್ಷೆಯ ಮೂಲಕ ಸೀತಾ ಪರಿಗ್ರಹ ಇವುಗಳು ನಡೆದ ಬಳಿಕ ಪುಷ್ಪಕ ವಿಮಾನವನ್ನೇರಿ ಸೀತಾಲಕ್ಷ್ಮಣ ಸುಗ್ರೀವ ಹನುಮಂತ ವಿಭೀಷಣಾದಿಗಳೊಡನೆ ಅಯೋಧ್ಯಾ,

ಪುರಕ್ಕೆ ಹಿಂದಿರುಗುವ ಪ್ರಯಾಣಕ್ಕೆ ಸನ್ನದ್ಧರಾಗುವ ವಿಷಯ ಪ್ರತಿಪಾದಿತವಾಗಿದೆ.

ಹದಿಮೂರನೆಯ ಸರ್ಗದಲ್ಲಿ ಶ್ರೀರಾಮನು ಸೀತಾಲಕ್ಷ್ಮಣ ವಿಭೀಷಣ ಹನುಮಂತಾದಿ ವೀರರೊಡನೆ ಪುಷ್ಪಕ ವಿಮಾನದಲ್ಲಿ ಅಯೋಧ್ಯಾನಗರಿಗೆ ವೇಗವಾಗಿ ಹಿಂದಿರುಗುವಂದು ತನ್ನ ಪ್ರೇಯಸಿಯನ್ನು ತೊಡೆಯಮೇಲೇರಿಸಿಕೊಂಡ ರಹಸ್ಯವಾಗಿ ತಾನು ಮರು ಪ್ರಯಾಣಮಾಡುವಾಗ ಹಾದಿಯಲ್ಲಿ ಸಿಕ್ಕುವ ಪ್ರದೇಶಗಳ ವಿಷಯವನ್ನು ತಿಳಿಯ ಹೇಳುತ್ತಾನೆ. ಅದರ ಸಂಗ್ರಹ ವಿವರಣೆ ಈ ಮುಂದಿನಂತಿದೆ ;-

"ಸೀತೆ ! ಇಲ್ಲಿ ಕೆಳಗೆ ನೋಡು. ನಾವು ಲಂಕೆಯನ್ನು ಬಿಟ್ಟು ಉತ್ತರಾಭಿಮುಖವಾಗಿ ವಿಮಾನದಲ್ಲಿ ಪಯಣಿಸುತ್ತಿದ್ದೇವೆ. ಈ ದ್ವೀಪಕ್ಕೂ ಕನ್ಯಾಕುಮಾರಿಗೂ ಮಧ್ಯೆ ಅಗಾಧವಾದ ಹಿಂದೂಸಾಗರವಿದೆ. ಇದಕ್ಕೆ ನೂರುಯೋಜನದುದ್ದದ ಸೇತುವೆಯನ್ನು ಕಪಿಕರಡಿಗಳ ಸೈನ್ಯದ ಸಹಾಯದಿಂದ ನಿರ್ಮಿಸಿದ್ದೇನೆ. ಅದು ಆಗಸದೊಳಗಿನ ಛಾಯಾಪಥದಂತೆ ಕಂಗೊಳಿಸುತ್ತದೆ. ನಮ್ಮ ಪೂರ್ವಿಕರಾದ ಸಗರ ಚಕ್ರವರ್ತಿಯ ಅರವತ್ತುಸಾವಿರ ಮಕ್ಕಳಿಂದ ಯಜ್ಞದ ಕುದುರೆಯನ್ನು ಹುಡುಕಲು ಪಾತಾಳದವರೆವಿಗೂ ಅವರು ತೋಡಿದ್ದರಿಂದ ಆ ಭಾಗದಲ್ಲಿ ನೀರು ಶೇಖರವಾಗಿ 'ಸಾಗರ' ಎಂಬ ಅನ್ವರ್ಥನಾಮವನ್ನು ಗಳಿಸಿದೆ. ನಮ್ಮ ಹಿರಿಯರ ಮಹಿಮೆಯನ್ನು ಇದು ತೋರುವುದರಿಂದ ಇದು ನಮಗೆ ಪುಣ್ಯವಾದ ವಸ್ತು ಅಲ್ಲದೆ ಈ ಸಮುದ್ರರಾಜನು ಅನೇಕ ಶ್ಲಾಘ್ಯವಾದ ಗುಣಗಳಿಂದ ಮೆರೆಯುತ್ತಿರುವನು. ಆ ಕಾರಣ ಇವನು ಸಮಸ್ತರ ವಂದನೆಗೆ ಅರ್ಹನು ವಿಮಾನದ ವೇಗದಿಂದ ಒಂದು ಮುಹೂರ್ತದಲ್ಲಿಯೇ ನೂರು ಯೋಜನದ ಅಗಲವಾದ ಈ ಜಲಧಿಯನ್ನು ದಾಟಿ ಮತ್ತೊಂದು ದಡವನ್ನು ಮುಟ್ಟಿದೆವು. ನಿನ್ನನ್ನು ಹುಡುಕಿಕೊಂಡು ಬರುವಂದು ನಿನ್ನ ಒಂದು ಖುಳಿ ಇಲ್ಲಿಯೇ ಬಿದ್ದಿರುವುದನ್ನು ಗುರುತಿಸಿದೆವು. ಇಲ್ಲಿನ ಗಿಡ ಮರ ಬಳ್ಳಿಗಳೂ, ಜಿಂಕೆಗಳೂ ನಿನ್ನನ್ನು ರಾಕ್ಷಸನು ಒಯ್ದ ಹಾದಿಯನ್ನು ತೋರಲು ದಕ್ಷಿಣ ದಿಕ್ಕಿನ ಕಡೆಗೇ ತೋರಿಸಹತ್ತಿದೆವು. ಇದೋ

ಇದೇ ಈ ಮಾಲ್ಯವಾನ್ ಪರ್ವತ. ಇಲ್ಲಿಯೇ ಮಳೆಗಾಲದಲ್ಲಿ ನಿನ್ನ ವಿರಹದಿಂದ ಅದರ ಗವಿಯಲ್ಲಿ ಕಾಲವನ್ನು ನೀಗಿದೆವು. ಇದೇ ಪಂಪಾ ಸರೋವರ 'ರಾಮಾಯಣ ಮಹಾಮಾಲಾರತ್ನ' ವೆಂಬ ಬಿರುದನ್ನು ಗಳಿಸಿದ ಹನುಮಂತ ನನ್ನು ಕಂಡಿದ್ದು, ಇದೋ ನಾವು ವಾಸಿಸುತ್ತಿದ್ದ ಪಂಚವಟೀ ಕ್ಷೇತ್ರ ಮತ್ತು ಅದರ ಸಮೀಪದಲ್ಲಿ ಹರಿಯುವ ಗೋದಾವರಿ ನದಿ, ಈ ಕೆಳಗೆ ಕಾಣಿಸುವುದೇ ಮಹಾಮುನಿ ಅಗಸ್ತ್ಯರ ಆಶ್ರಮ, ಈ ಮುಂದಿನದು ಶೌತಕರ್ಣ, ಸುತೀಕ್ಷ್ಣ, ಮತ್ತು ಶರಭಂಗ ಮಹಾಮುನಿಗಳ ಆಶ್ರಮಗಳು, ಈ ಮುಂದಿನದೇ ನಾವು ಚಿರಕಾಲವಾಸಿಸುತ್ತಿದ್ದ ಚಿತ್ರಕೂಟ ಪರ್ವತ, ಇದರ ಸಮೀಪದಲ್ಲಿ ಮೆರೆಯು ತ್ತಿರುವ ಮಹಾಮುನಿ ಅತ್ರಿ ಮತ್ತು ಆದರ್ಶ ಪತಿವ್ರತೆಯೆನಿಸಿದ ಅನುಸೂಯಾ ದೇವಿಯರ ತಪೋವನ ಈ ಮುಂದೆ ಕಾಣುವ ದೊಡ್ಡ ಆಲದ ಮರವನ್ನು ನೀನು ಪೂಜಿಸಿ ಅದರಿಂದ ವರವನ್ನು ಬೇಡಿದುದು, ಇದೋ ಗುಹನ ಶೃಂಗಿ ಭೇರಪುರ ಇಲ್ಲಿಂದ ಮುಂದೆ ಕಣ್ಣು ಹಾಯಿಸಿದಲ್ಲಿ ದೂರದಲ್ಲಿ ಕಾಣ್ಬರುವುದೇ ಅಯೋಧ್ಯೆಯ ಪಕ್ಕದಲ್ಲಿ ಹರಿಯುತ್ತಿರುವ ಪವಿತ್ರವಾದ ಸರಯೂನದಿ, ಅದಕ್ಕೆ ನಮಸ್ಕರಿಸು ಅದು ಹೆತ್ತತಾಯಿಯಂತೆ ತನ್ನ ಅಲೆಗೈಗಳಿಂದ ನಮ್ಮನ್ನು ಪ್ರೀತಿಯಿಂದ ಬರಮಾಡಿಕೊಳ್ಳುವಂತಿದೆ. ಅದೋ ದೂರದಲ್ಲಿ ಉತ್ತರ ದಿಗ್ಭಾಗವು ಕೆಂದೂಳಿನಿಂದ ತುಂಬಿದೆ, ಹನುಮಂತನಿಂದ ನಮ್ಮ ಬರವನ್ನು ತಿಳಿದು ಭರತನು ಸೈನ್ಯಸಮೇತನಾಗಿ ನಮ್ಮನ್ನು ಪ್ರೇಮದಿಂದ ಬರಮಾಡಿ ಕೊಳ್ಳುವುದಕ್ಕೆ ಬರುತ್ತಿರುವನೆಂದು ನಾನು ಊಹಿಸುತ್ತೇನೆ. ಅವನು ಸೈನ್ಯ ವೆಲ್ಲವನ್ನು ಹಿಂದಿರಿಸಿ ಗುರುವಶಿಷ್ಠರನ್ನು ಮುಂದುಮಾಡಿಕೊಂಡು ನನ್ನ ಪಾದುಕೆಗಳನ್ನು ಹೊತ್ತುತರುವಂತಿದೆ" ಎಂದು ಶ್ರೀರಾಮನು ಪ್ರೇಯಸಿಗೆ ವಿವರಿಸುತ್ತಿರುವಲ್ಲಿಯೇ ಶ್ರೀರಾಮನ ಮನದಿಚ್ಛೆಯಂತೆ ವಿಮಾನವು ಕೆಳಗಿಳಿಯು ತ್ತದೆ. ವಿಮಾನದಿಂದ ಸೋಪಾನಗಳ ಮೂಲಕ ಕೆಳಗಿಳಿದೊಡನೆಯೇ ಇಕ್ಷ್ವಾಕು ಕುಲಗುರುವಾದ ವಶಿಷ್ಠಮುನಿಗಳಿಗೆ ನಮಸ್ಕಾರ ಮಾಡಿ ತಮ್ಮನಾದ ಭರತ ನನ್ನು ಶ್ರೀರಾಮನು ಆಲಂಗಿಸಿ ತನ್ನ ಒಡನಾಡಿಗಳಾದ ವಿಭೀಷಣ ಸುಗ್ರೀವರ ಪರಿಚಯವನ್ನು ತಮ್ಮನಿಗೆ ಮಾಡಿಕೊಡಲು ಅವರಿಗೆ ಭರತನು ವಂದಿಸುತ್ತಾನೆ. ಆ ಬಳಿಕ ಲಕ್ಷ್ಮಣನನ್ನು ಅಪ್ಪಿಕೊಂಡು ಮಹಾಪತಿವ್ರತೆಯೆನಿಸಿ ತನಗೆ ಪೂಜ್ಯ

ಳಾದ ಅತ್ರಿಗೆ ಸೀತಾದೇವಿಯ ಪಾದಗಳಿಗೆ ಭರತನು ನಮಿಸುತ್ತಾನೆ. ಅಲ್ಲಿಂದ ಮುಂದಕ್ಕೆ ಭರತನನ್ನೂ ವಿಮಾನದಲ್ಲೇರಿಸಿಕೊಂಡು ಶತ್ರುಘ್ನನು ಈ ಮುಂದೆಯೇ ಏರ್ಪಡಿಸಿದ್ದ ಡೇರೆಗಳಿಂದಕೂಡಿ, ಅಲ್ಲಿ ಮಕ್ಕಳ ಬರವನ್ನೇ ಹಾರೈಸುತ್ತಿದ್ದ ಕೌಸಲ್ಯಾ ಸುಮಿತ್ರೆಯರು ಉಪಸ್ಥಿತರಾಗಿದ್ದ ಊರ ಹೊರ ವಲಯದಲ್ಲಿನ ಉಪವನದಲ್ಲಿ ಬಂದಿಳಿದರು. ಇಲ್ಲಿಗೆ ಹದಿಮೂರನೆಯ ಸರ್ಗ ದಲ್ಲಿ ಅಡಕವಾಗಿರುವ ವಿಷಯವು ಮುಗಿಯಿತು.

ಈ ಮುಂದೆ ಹದಿನಾಲ್ಕನೆಯ ಸರ್ಗದ ವಿಷಯಗಳ ವಿವರಣೆಯಿದೆ. ರಘುವಂಶ ಮಹಾಕಾವ್ಯದೊಳಗೆ ಕವಿಯು ತನ್ನ ಪ್ರತಿಭೆಯನ್ನು ಅತ್ಯಂತ ಸ್ಪುತ್ತ್ಯವಾದ ಬಗೆಯಲ್ಲಿ ಹದಿನಾಲ್ಕನೆಯ ಸರ್ಗದಲ್ಲಿ ಮೇರು ಶಿಖರಕ್ಕೇರಿರುತ್ತಾ ನೆಂಬುದು ಪೌರ್ವಾತ್ಯ ಮತ್ತು ಪಾಶ್ಚಾತ್ಯ ವಿದ್ವಾಂಸರ ನಿಷ್ಪಕ್ಷಪಾತವಾದ ಅಭಿಪ್ರಾಯವಾಗಿರುವುದರಿಂದ ಈ ಅನುವಾದಕನು ಆ ಕವಿಯ ಆಶಯವನ್ನು ಸಂಸ್ಕೃತಭಾಷೆಯ ಪರಿಚಯವಿಲ್ಲದ ಕನ್ನಡಿಗರಿಗೆ ತನ್ನಯೋಗ್ಯತೆಗೆ ತಕ್ಕಂತೆ ನೀಡುವ ಸಲುವಾಗಿ ಈ ಸರ್ಗದಲ್ಲಿನ ಶ್ಲೋಕಗಳಿಗೆ ಭಾಮಿನೀಷಟ್ಪದಿಯ ಮೂಲಕವಾಗಿ ಅನುವಾದಿಸಲು ಯತ್ನಿಸಿರುತ್ತಾನೆ. 'ಅನುವಾದಕರು ಕೊಲೆ ಪಾತ ಕರು' ಎಂಬ ನಾಣ್ಣುಡಿಯಲ್ಲಿ ಸತ್ಯಾಂಶವಿರುವುದಾದರೂ ಕವಿಯ ಆಶಯವನ್ನು ಸಾಧ್ಯವಾದಷ್ಟು ಮಾತ್ರ ಈ ಅನುವಾದದಲ್ಲಿ ಹೊರತರಲು ಯತ್ನಿಸಿರುತ್ತಾನೆ ಈ ಯತ್ನದಲ್ಲಿ ಎಷ್ಟರಮಟ್ಟಿಗೆ ಅನುವಾದಕನು ತನ್ನ ಇಚ್ಛೆಯನ್ನು ಸಾಧಿಸಿರು ತ್ತಾನೆಂಬ ವಿಷಯದ ವಿಮರ್ಶೆ ಓದುಗರಿಗೆ ಸೇರಿದುದು. ಸಂಸ್ಕೃತ ಮತ್ತು ಕನ್ನಡ ಈ ಉಭಯ ಭಾಷೆಗಳಲ್ಲಿ ಪರಿಣತರಾದ ವಿದ್ವಾಂಸ ವಿಮರ್ಶಕರ ಅನುಕೂಲ, ಕ್ಕಾಗಿ ಸಂಸ್ಕೃತ ಶ್ಲೋಕಗಳ ಜೊತೆಗೆ ಅವುಗಳ ಪಕ್ಕದಲ್ಲಿಯೇ ಅನುವಾದಕನ ಷಟ್ಪದೀ ಪದ್ಯಗಳನ್ನೂ ಅಳವಡಿಸಿದೆ. ಓದುಗರು ಈ ಅನುವಾದದ ಮೂಲಕ ಕವಿಯ ಮೂಲಕೃತಿಯಲ್ಲಿನ ಪ್ರತಿಭೆಯ ಪರಿಚಯವಾದುದೆಂದರೆ ಅನುವಾದ ಕನ ಈ ಬಗೆಯ ಯತ್ನಸಾರ್ಥಕ.

ಇತಿ

ಅನುವಾದಕ

ಬುರುಗನಹಳ್ಳಿ ಭೀಮಸೇನಶರ್ಮಾ

ಶ್ರೀ ಮ ಹಾ ಕ ವಿ ಕಾ ಳಿ ದಾ ಸ ನ ಕೃ ತಿ ರ ತ್ನ ವೆ ನಿ ಸಿ ದ

ರ ಘು ವ ಂ ಶ

ವೆಂಬ ಮಹಾಕಾವ್ಯದೊಳಗಣ

ಹದಿನಾಲ್ಕನೆಯ ಸರ್ಗದ ಸಂಸ್ಕೃತ ಶ್ಲೋಕಗಳು

ಮತ್ತು ಅವುಗಳ 'ಕನ್ನಡಾನುವಾದ'

(ಭಾಮಿನೀ ಷಟ್ಪದಿ)

ಸಂಸ್ಕೃತದ ಶ್ಲೋಕಗಳು

ಭರ್ತುಃ ಪ್ರಣಾಶಾದಥ ಶೋಚನೀಯಂ।
ದಶಾಂತರಂತತ್ರ ಸಮಂ ಪ್ರಪನ್ನೇ ॥
ಅಪಶ್ಯತಾಂ ದಾಶರಥೀಜನನ್ಯೌ।
ಛೇದಾದಿವೋಪಘ್ನತರೋಃ ವ್ರತತ್ಯೌ ॥ ೧

ಉಭಾವುಭಾಭ್ಯಾಂ ಪ್ರಣತೌಹತಾರೀ ।
ಯಥಾಕ್ರಮಂ ವಿಕ್ರಮ ಶೋಭಿನೌ ತೌ ॥
ವಿಸ್ಪಷ್ಟ ಮಸಾಂಧತಯಾ ನ ದೃಷ್ಟೌ ।
ಜ್ಞಾತೌ ಸುತಸ್ಪರ್ಶಸುಖೋಪಲಂಭಾತ್ ॥ ೨

ಆನಂದಜಃ ಶೋಕಜ ಮಶ್ರು ಬಾಷ್ಪಃ ।
ತಯೋರಶೀತಂ ಶಿಶಿರೋ ಬಿಭೇದ ॥
ಗಂಗಾಸರಯ್ವೋಃ ಜಲ ಮುಷ್ಣತಪ್ತಂ ।
ಹಿಮಾದ್ರಿನಿಷ್ಯಂದ ಇವಾವತೀರ್ಣಃ ॥ ೩

ತೇಪುತ್ರಯೋಃ ನೈರುತಶಸ್ತ್ರಮಾರ್ಗಾ ।
ಆರ್ದ್ರಾನಿವಾಂಗೇ ಸದಯಂ ಸ್ಪೃಶಂತೌ ॥
ಅಪೀಪ್ಸಿತಂಕ್ಷತ್ರಕುಲಾಂಗನಾನಾಂ ।
ನ ವೀರಶಬ್ದ ಮಕಾಮಯೇತಾಂ ॥ ೪

ಮರವ ಕಡಿಯಲ್ಕದರ ತೆಕ್ಕೆಯೊ- ।
ಳಿರುವ ಬಳ್ಳಿಗಳೆರಡ ನೋಲುತ ।
ಪೊರೆವ ನಾಥನ ಮರಣದಿಂಗೋಳುಡುವ ದುಃಸ್ಥಿತಿಯಂ ॥
ಭರಿಸು ತವರಂ ಹಡೆದರೀರ್ವರ-।
ನಿರದೆ ದಶರಥ ನಣುಗ ರಿಬ್ಬರು
ಪುರದ ಹೊರದೋಟದಲಿ ನೋಡಿದರೊಂದೆ ಕಾಲದಲಿ ॥ ೧

ಅರಿಗಳನು ಕೊಂದ ಮಿತ ಶೌರ್ಯವ ।
ಮೆರೆಸಿದಂತಹ ಹ ಕುವರ ರೀರ್ವರು ।
ಹಿರಿ ಕಿರಿ ಕ್ರಮದಿಂದೆ ತಮ್ಮನುಪೆತ್ತ ರೀರ್ವರಿಗೆ ॥
ಎರಗತಿರಲವ್ವೆಯರು ಕಂಬನಿ-।
ತೆರೆಯ ಲಣುಗರ ನೆಟ್ಟನರಿಯದೆ ।
ಗುರುತಿಸಿದ ರವರೊಡಲ ಸೋಂಕಿನ ಸೌಖ್ಯದನು ಭವದಿಂ ॥ ೨

ಹಿಮದ ಗಿರಿಯಿಂ ದಿಳಿದ ಹೊನಲಿನ ।
ಹಿಮದ ತಣ್ಪದು ಬಿಸಿಲ ಬಿಸಿಯೊ-।
ಕ್ರಮಿಸೆ ಗಂಗಾ ಸರಯೂ ಜಲಗಳ ಕಾವನಡಗಿಪ ಪೋಲ್ ॥
ರಮಣಿ ನಲಿವಲಿ ದುಗುಡ ಗೊಂಡಾ-।
ರಮಣಿಯರ ಕಂಬನಿಯು ಬಿಸಿಯನ್ನು ।
ಮಮತೆ ಯಾನಂದದಲಿ ಸುರಿಸಿದ ಬಾಷ್ಪ ತಂಪಿಸಿತು ॥ ೩

ಮಕ್ಕಳೊಡಲನು ಸವರುತಲ್ಲಿಹ ।
ರಕ್ಕಸರ ಕೈದುಗಳ ಗಾಯ್ಗಳ-
ನಕ್ಕರಿಂ ಹಸಿಯೆನುತ ಬಗೆದಿಹ ರವರ ಪೆತ್ತವರು ॥
ತಕ್ಕವೀರರ ಪೆತ್ತರೆಂ ಬಪ-
ದಕ್ಕೆ ಬಯಕೆ ಕ್ಷತ್ರ ನಾರಿಯು-
ಲಿಕ್ಕೆಗೊಂಡರು ಬಯಸರದಕೆಂ ದದಕವರ ಜನನಿಯರು ॥ ೪

ಕ್ಲೇಶಾವಹಾ ಭರ್ತು ರಲಕ್ಷಣಾಹಂ ।
ಸೀತೇತಿನಾಮ ಸ್ವಮುದೀರಯಂತೀ ॥
ಸ್ವರ್ಗಪ್ರತಿಷ್ಠಸ್ಯಗುರೋಃ ಮಹಿಷ್ಯಾ ।
ಭಕ್ತಿಭೇದೇನ ವಧೂಃ ವವದೇ ॥ ೫

ಉತ್ತಿಷ್ಠವತ್ಸೇ! ನನು ಸಾನುಜೋಽಸೌ ।
ವೃತ್ತೇನ ಭರ್ತಾ ಶುಚಿನಾ ತವೈವ ॥
ಕೃಚ್ಛ್ರಂ ಮಹತ್ ತೀರ್ಣಇತಿಪ್ರಿಯಾರ್ಹಂ ।
ತಾ ಮೂಚತು ಸ್ತೇ ಪ್ರಿಯ ಮಪ್ಯಮಿಥ್ಯಾ ॥ ೬

ಅಥಾಭಿಷೇಕಂ ರಘುವಂಶ ಕೇತೋಃ ।
ಪ್ರಾರಬ್ಧಮಾನಂದ ಜಲೈಃ ಜನನ್ಯೋಃ ॥
ನಿರ್ವರ್ತಯಾಮಾಸು ರಮಾತ್ಯವೃದ್ಧಾಃ ।
ತೀರ್ಥಾಹೃತೈಃ ಕಾಂಚನ ಕುಂಭತೋಯೈಃ ೭

ಸರಿತ್ ಸಮುದ್ರಾನ್ ಸರಸೀಶ್ಚ ಗತ್ವಾ ।
ರಕ್ಷಃ ಕಪೀಂದ್ರೈ ರುಪಪಾದಿತಾನಿ ॥
ತಸ್ಯಾಪತನ್ ಮೂರ್ಧ್ನಿಜಲಾನಿ ಜಿಷ್ಣೋಃ ।
ವಿಂಧ್ಯಸ್ಯ ಮೇಘಪ್ರಭವಾ ಇವಾಪಃ ॥ ೮

ಪೊರೆವ ಪತಿ ಗತಿ ಸಂಕಟವ ತಂ–
ದಿರಿಸಿದ ಪಲಕ್ಷಣದ ಸೊಸೆ ಬಂ–
ದಿರುವೆ ನಾಂ 'ಸೀತೆ' ಯೆನುತಲಿ **ನಿಜ ನಾಮ** ವೊರೆಯುತ್ತ ॥
ಸುರ ಪುರದಿ ನೆಲೆಗೊಂಡ ದಶರಥ–।
ಗುರುವ ಪಟ್ಟದ ರಾಣಿ ಯುವ ದಿನ
ಚರಣ ಕೆರಗಿದಳಂದು ಭಕ್ತಿಯ ಭೇದ **ಕೆಡೆ** ಗುಡದೆ ॥ ೫

ಏಳು ಮಗಳೇ! ನಿನ್ನೊಡೆಯು ನಿವ ।
ತಾಳಲಾಗದ ವಿವಿಧ ಕಷ್ಟಗ–।
ಳಾಳಿಯುಂ ತಮ್ಮ ನೊಡನುತ್ತರಿಸಿದುವ ನೆಂಬುದಿದು ॥
ಕೇಳು, ನಿನ್ನತಿ ಶುದ್ಧ ಗೊಂಡಿಹ ।
ಶೀಲದಿಂದಲೆ ಹೌದು ಹೀಗೆನು–
ತಾಲಲ ನೆಗವ ದೊರೆದ ರಿಂಪಾ ದೊಡೆಯು ನಿಜವನ್ನೆ ॥ ೬

ಜನನಿಯರು ಸಂತಸದ ಕಂಬನಿ–
ಹನಿಗಳಿಂ ಮೊದಲಿಟ್ಟು ರಘು ಕುಲ–
ಮಣಿಯ ಶಿರಕಭಿಷೇಕ ವಿಧಿಯನು ಹಿರಿಯ ಮಂತ್ರಿಗಳು ॥
ವಿನುತ ತೀರ್ಥಗಳಿಂದ ಜಲಗಳ
ಕನಕ ಕಲಶಗಳಲ್ಲಿ ತರಿಸಿಹ–
ಮಣಿಸುತವುಗಳ ಹೊಸಲಿನಿಂದಾ ಬಳಿಕ ಮುಗಿಸಿದರು ॥ ೭

ಹರಿವ ತೊರೆ, ಕಡಲುಗಳ ಕೊಳಗಳ
ಪೊರೆಗೆ ಸರಿಯುತ ದನುಜ ಕಪಿ ಕುಲ–
ದರ ಸರವುಗಳ ಪುಣ್ಯ ಜಲವನು ತರಲಿಕೆವುಗಳನು ॥
ಸುರಿದ ರಂದಾ ವಿಜಯ ಶೀಲನ
ಶಿರದ ಲೂಹಿಸೆ ವಿಂಧ್ಯೆಯೆಂಬುವ
ಗಿರಿಯ ಶಿಖರಕೆ ಮೋಡಗಳು ಮಳೆನೀರ ಕರೆವಂತೆ ॥ ೮

ತಪಸ್ವಿವೇಷಕ್ರಿಯಯಾಪಿ ತಾವತ್ ।
ಯಃ ಪ್ರೇಕ್ಷಣೀಯಃ ಸುತರಾಂಬಭೂವ ॥
ರಾಜೇಂದ್ರ ನೇಪಥ್ಯವಿಧಾನ ಶೋಭಾ ।
ತಸ್ಯೋದಿ ತಾಸೀತ್ ಪುನರುಕ್ತ ದೋಷಾ ॥ ೯

ಸಮೌಳಿರಕ್ಷೋಹರಿಭಿಃ ಸಸೈನ್ಯಃ ।
ತೂರ್ಯಸ್ವನಾನಂದಿತ ಪೌರವರ್ಗಃ ॥
ವಿವೇಶ ಸೌಧೋದ್ಗ ತಲಾಜವರ್ಷಾಂ
ಉತ್ತೋರಣಾ ಮನ್ವಯರಾಜಧಾನೀಂ ॥ ೧೦

ಸೌಮಿತ್ರಿಣಾ ಸಾವರ ಜೇನ ಮಂದಂ ।
ಆಧೂತ ಬಾಲ ವ್ಯಜನೋರಥಸ್ಥಃ ॥
ಧೃತಾತಪತ್ರೋ ಭರತೇನ ಸಾಕ್ಷಾತ್
ಉಪಾಯ ಸಂಘಾತ ಇವ ಪ್ರವೃದ್ಧಃ ॥ ೧೧

ಪ್ರಾಸಾದ ಕಲಾ ಗುರು ಧೂಮರಾಜಿಃ ।
ತಸ್ಯಾಃ ಪುರೋವಾಯುವ ಶೇನ ಭಿನ್ನಾ ॥
ವನಾನ್ನಿವೃತ್ತೇನ ರಘೂದ್ವಹೇನ ।
ಮುಕ್ತಾ ಸ್ವಯಂ ವೇಣಿರಿವಾ ಬಭಾಸೇ ॥ ೧೨

ತಪವ ನಾಚರಿಪರಿಗೆ ಸಲ್ಲುವ ।
ವಿಪುಲ ವೇಷದ ಲಾರ ವ್ಯ ಸೊಬ–।
ಗ ಪರಿವಿಡಿತಾನಂದವನು ಪಸರಿಸಿತು ನೋಳ್ಪರಿಗೆ ॥
ನೃಪವರೇಣ್ಯರ ವೇಷ ರಚನೆಯು–
ಲುಪಚ ಡರಿಸಲುದಿಸಲುದಿಸಿರ್ದ ಶೋಭೆಯು ।
ನೆಪದಲಾ ರಾಮುಂಗೆ ಸೊಬಗೆರಡಷ್ಟು ಪೆಚ್ಚಿದುದು ೯

ಪುರ ಜನತೆ ಗಾನಂದ ತಹ ಭೋ–
ರ್ಗರೆವ ಶುಭವಾದ್ಯಗಳು ವೊಳಗಲು
ಹಿರಿಯು ಸಚಿವರ ದನುಜಕಪಿಗಳ ಕೂಡಿ ರಘುವರನು ॥
ಅರಳ ಮಳೆ ಹೊರ ಸುರಿವ ಮುಹಡಿಗ–
ಳಿರುವ ತೋರಣ ವೆತ್ತಿ ಕಟ್ಟಿಹ ।
ತರಣಿ ಕುಲನೃಪ ರಾಳ ನಗರಿಯುನೊಕ್ಕ ಪಡೆಯೊಡನೆ ॥ ೧೦

ಅನುಜನೆಡೆಗೊಂಡಾ ಸುಮಿತ್ರೆಯು
ತನುಜನಂದಾ ಚಾಮರಂಗಳ–
ಲಿನಿಸಿನಿಸು ಬೀಸುತಿರೆ ಬೆಳ್ಗೊಡೆ ಭರತ ಹಿಡಿದಿರಲು ॥
ನೆನೆಯೆ ತೇರಲಿ ಕುಳಿತ ರಾಮನು ।
ತನುವ ನೊಂದಿಹ ನಾಲ್ಕು ಸಾಯುಗ–
ಳಿನಿತು ವೊಂದೆಡೆ ಸೇರ್ದ ವೆಂಬೊಲು ಪುರವ ನೊಳವೊಕ್ಕಂ ॥ ೧೧

ಉಪ್ಪರಿಗೆಯೊಳಗಿಂವ ಹೊರಬಹ ।
ಕಪ್ಪುಗುರ ಹೊಗೆಸಾಲು ಬೀಸುತ–
ಲಿಪ್ಪ ಗಾಳಿಗೆ ಸಿಕ್ಕಿ ಸುತ್ತಲು ಚೂರೆ ಪುರವ ಧುವ ॥
ತಪ್ಪದಲೆ ವನದಿಂದ ಹಿಂದಿರು–
ಗಿಪ್ಪ ರಘುವರ ನಂದು ಜಡೆನೂಂ–
ಡಿಪ್ಪ ಮುಡಿಯನು ತಾನೆ ಬಿಡಿಸಿಹ ನೆನಲು ರಂಜಿಸಿತು ॥ ೧೨

ಶ್ವಶ್ರೂಜನಾನುಷ್ಠಿತ ಚಾರು ವೇಷಾಂ ।
ಕರ್ಣೀ ರಥಸ್ಥಾಂ ರಘುವೀರಪತ್ನೀಂ ॥
ಪ್ರಾಸಾದ ವಾತಾಯನ ದೃಶ್ಯಬಂಧೈಃ ।
ಸಾ ಕೇತನಾರ್ಯೋಂ ಜಲಭಿಃ ಪ್ರಣೇಮುಃ ॥ ೧೩

ಸ್ಫುರತ್ ಪ್ರಭಾಮಂಡಲ ಮಾನುಸೂಯಂ ।
ಸಾಬಿಭ್ರತೀ ಶಾಶ್ವತಮಂಗರಾಗಂ ॥
ರ ರಾಜ ಶುದ್ಧೇತಿ ಪುನಃ ಸ್ವಪುರ್ಯೈ ।
ಸಂದರ್ಶಿತಾ ವಹ್ನಿಗತೇವ ಭರ್ತ್ರಾ ॥ ೧೪

ವೇಶ್ಮಾನಿ ರಾಮಃ ಪರಿಬರ್ಹವನ್ತಿ ।
ವಿಶ್ರಾಣ್ಯ ಸೌಹಾರ್ದನಿಧಿಃ ಸುಹೃದ್ಭ್ಯಃ ॥
ಬಾಷ್ಪಾಯಮಾಣೋ ಬಲಿಮತ್ ನಿಕೇತಂ ।
ಆಲೇಖ್ಯಶೇಷಸ್ಯ ಪಿತು ರ್ವಿವೇಶ ॥ ೧೫

ಕೃತಾಂಜಲಿಃ ತತ್ರ ಯದಂಬ ಸತ್ಯಾತ್ ।
ನಾ ಭ್ರಶ್ಯತ ಸ್ವರ್ಗಫಲಾತ್ ಗುರು ರ್ನಃ ॥
ತತ್ ಚಿಂತ್ಯಮಾನಂ ಸುಕೃತಂತವೇತಿ ।
ಜಹಾರ ಲಜ್ಜಾಂ ಭರತಸ್ಯ ಮಾತುಃ ॥ ೧೬

ಅತ್ತ್ರಿಯುವರಿಂ ಚಾರು ವೇಶವ ।
ಪೊತ್ತು, ತನಗಹ ಪುಟ್ಟ ತೇರವು ।
ಪತ್ತಿ ರಾಘವನರಸಿ ಬರಲಿಕಯೋಧ್ಯೆ ರಮಣಿಯರು ॥
ಎತ್ತರದ ಸೌಧಗಳ ಕಿಟಿಕಿ ಗ-
ಳತ್ತ ತಮ್ಮಯ ಬೊಗಸೆಗೈ ತೋ
ರುತ್ತ ಮಣಿದರಾ ಭಕುತಿಯಿಂದಾ ಪೂಜ್ಯ ಭಾಮಿನಿಗೆ ॥ ೧೩

ಕಾಂತಿ ಮಂಡಲವನ್ನು ಪಸರಿಪ ।
ಕಾಂತಿ ಯೆಂದುಂ ದುಂಕುಂದ ದತ್ರಿಯ-।
ಕಾಂತೆಯುಂ ದಿತ್ತಂಗ ರಾಗವ ಸೀತೆ ತಳೆದಿರಲು ॥
ಕಾಂತೆಯುವ ಳತ್ಯಂತ ಶುದ್ಧಿಯು-
ನಾಂತಿ ಹುದ ಪುರಜನಕೆ ತೋರಲು
ಕಾಂತ ನುಡಿಯೊಳ ಗವಳ ಮಾರು-ಪುಗಿಸಿ ದರ್ನೆನಲೆ ಸೆದಳ್ ॥ ೧೪

ಸ್ನೆಹರಸ ನಿಧಿಯೆನಿಪ ರಾಮಂ ।
ಸ್ನೇಹ ಗೊಂಡೈ ತಂದ ವರ್ಗಕೆ ।
ಬೇಹುದೆಲ್ಲವ ತುಂಬಿಸಿಹ ವಸತಿಗಳ ನನು ಗೊಳಿಸಿ ॥
ನೇಹ ಗಂಬನಿ ತುಳುಕೆ ಚಿತ್ರದ
ದೇಹ ಮೊಂದರ ಲುಳಿದ ತಾತನ
ಮೋಹ ದರಮನೆ ಪೂಜೆಗೊಂಡಿ ರಲದನು ತಾಮೊಕ್ಕ ೧೫

ಅಮ್ಮಾ! ನಮ್ಮಯ್ಯನಿಗೆ ಸಗ್ಗದ
ಸೊಮ್ಮ ಗಳಿಸಿಹ ಸತ್ಯವನೆ ನರೆ
ಮಮ್ಮ ತದರಿಂ ಜಾರದಿರಲವಗಾರ ನೆರವಿತ್ತೋ ॥
ನಿಮ್ಮ ಪುಣ್ಯವದಮ್ಮ ಯೋಚಿಸಿ
ನಮ್ಮ ನುತೊರೆದು ಭರತನಂಪಡೆ
ದಮ್ಮ ಗವನಂ ಜಲಿಸುತಾಕೆಯು ನಾಚನೊರೆಸಿದನು ॥ ೧೬

ತಥೈವ ಸುಗ್ರೀವ ವಿಭೀಷಣಾದೀನ್ |
ಉಪಾಚರತ್ ಕೃತ್ರಿಮ ಸಂವಿದಾ ಭಿಃ ||
ಸಂಕಲ್ಪಮಾತ್ರೋದಿತ ಸಿದ್ಧಯಸ್ತೇ |
ಕ್ರಾಂತಾ ಯಥಾ ಚೇತಸಿ ವಿಸ್ಮಯೇನ || ೧೭

ಸಭಾಜನಾ ಯೋಪಗತಾನ್ಸ ದಿವ್ಯಾನ್ |
ಮುನೀನ್ ಪುರಸ್ಕೃತ್ಯ ಹತಸ್ಯ ಶತ್ರೋಃ ||
ಶುಶ್ರಾವ ತೇಭ್ಯಃ ಪ್ರಭರಾದಿ ವೃತ್ತಂ |
ಸ್ವವಿಕ್ರಮೇ ಗೌರವ ಮಾದ ಧಾನಂ || ೧೮

ಪ್ರತಿಪ್ರಯಾತೇಷು ತಪೋಧನೇಷು |
ಸುಖಾದ ವಿಜ್ಞಾತ ಗ ತಾರ್ಧಮಾಸಾನ್ ||
ಸೀತಾಸ್ವಹಸ್ತೋಪಹೃತಾಗ್ರ ಪೂಜಾನ್ |
ರಕ್ಷಃ ಕಪೀಂದ್ರಾನ್ ವಿಸಸರ್ಜ ರಾಮಃ || ೧೯

ತಚ್ಚಾತ್ಮ ಚಿಂತಾ ಸುಲಭಂ ವಿಮಾನಂ |
ಹೃತಂ ಸುರಾರೇಃ ಸಹ ಜೀವಿತೇನ ||
ಕೈಲಾಸ ನಾಥೋದ್ವಹನಾಯ ಭೂಯಃ
ಪುಷ್ಪಂದಿವಃ ಪುಷ್ಪಕಮನ್ವಯುಂಕ್ತ || ೨೦

ನೆನೆದ ಮಾತ್ರದಲು ದಿಪಸಿದ್ಧಿಯು–।
ನನುಭವಿಸಿ ಕಪಿದನುಜ ರೊಡೆಯರುರು ।
ಮನ ದೊಳ ಚ್ಚರಿ ಗಾಸರೆಯು ನಿರದೆಂತು ಕೊಡುತಿಹರೋ ॥
ನೆನೆಯುಲಾ ಬಗೆಯಿಂದ ಸುಖಸಾ–
ಧನೆಗಳಿಂ ಕಲ್ಪಿಸಲವುಗಳಿಂ
ದನುಭವಿಸುವಂ ತುಪಚರಿಸಿದನು ರಾಮನವರುಗಳಂ॥ ೧೭

ತನ್ನನಭಿನಂ ದಿಸಲು ಬಂದಿಹ ।
ಮುನ್ನಿಸಲ್ಕಿಹ ದಿವ್ಯಮುನಿಗಳ ।
ಮನ್ನಿಸುತ ತಾ ಕೊಂದ ಶತ್ರುವ ಹುಟ್ಟು ಮೊದಲಾದ ।।
ತನ್ನ ವಿಕ್ರಮದಲ್ಲಿ ಗೌರವ–।
ವನ್ನು ನೆಟ್ಟಿಹ ಸುದ್ದಿಯೆಲ್ಲಕೆ
ನನ್ನಿಯಿಂ ಕಿವಿ ಗೊಟ್ಟು ರಾಮನು ಕೇಳ್ದ ನವರಿಂದ ॥ ೧೮

ಮುನಿಗಳೆಲ್ಲರು ವನಕೆ ಮರುಳಲು ।
ಜನಕ ಜಾತೆಯು ಕೈಗಳಿಂದಲೆ ।
ವಿನುತ ಪೂಜೆಯು ಕೈ ಕೊ ಳುತ ತಿಂಗಳಲರ್ಧಕಾಲವನು ।
ದಿನಗಳೆದುದಂ ಸುಖ ದಲರಿಯದ
ದನು ಜ ಕಪಿವೀರ ರ್ಕ ಳೊ ಡೆಯರ
ನನುಯುದಲಾ ರಘುವರನು ಬೀಳ್ಕೊಟ್ಟ ನಲ್ಲಿಂದ ॥ ೧೯

ದುರುಳ ರಾವಣನ ಸುಗಳೊಡನಪ–।
ಹರಿಸಿ ತಂದಿಹ ನೆನೆದೊಡೊಯುನ ।
ಬರಲಿರುವ ಮೇಣ್ ಸಗ್ಗ ಕದು ಹೂಗೊಂಚಲಂತಿರ್ಪ ॥
ವರವಿಮಾನ ಸುಪುಷ್ಪಕ ನಿವಿ–।
ತರುಣಿಯುರಸನು ಬೆಸಸಿದನು ನೀಂ ।
ಮರಳಿ ಹರಸಖನ ಕುಬೇರನ ಹೊರಲು ಪೋಗೆಂದು ॥ ೨೦

ಪಿತುರ್ನಿಯೋಗಾತ್ ವನವಾಸ ಮೇವಂ ।
ನಿಸ್ತೀರ್ಯರಾಮಃ ಪ್ರತಿ ಪನ್ನರಾಜ್ಯಃ ॥
ಧರ್ಮಾರ್ಥಕಾಮೇಷು ಸಮಾಂ ಪ್ರಪೇದೇ ।
ಯಥಾ ತಥಾವರಜೇಷು ವೃತ್ತಿಂ ॥ ೨೧

ಸರ್ವಾಸು ಮಾತೃಷ್ಟಪಿ ವತ್ಸಲತ್ವಾತ್ ।
ಸ ನಿರ್ವಿಶೇಷ ಪ್ರತಿ ಪತ್ತಿ ರಾಸೀತ್ ॥
ಷಡಾನನಾ ಪೀತ ಪಯೋಧರಾಸು ।
ನೇತಾ ಚಮೂನಾ ಮಿವಕೃತ್ತಿಕಾಪು ॥ ೨೨

ತೇನಾರ್ಥವಾ ಲೋಭಪರಾಜ್ಮುಖೇನ ।
ತೇನ ಘ್ನತಾ ವಿಘ್ನಭಯಂ ಕ್ರಿಯಾವಾ ॥
ತೈನಾ ಪ ಲೋಕಃ ಪಿತೃವಾ ವಿನೇತಾ ।
ತೇನೈವ ಶೋಕಾಪನೂದೇನ ಪುತ್ರೀ ॥ ೨೩

ಸ ಪೌರಕಾರ್ಯಾಣಿ ಸಮೀಕ್ಷ್ಯ ಕಾಲೇ ।
ರೇಮೇ ವಿದೇಹಾಧಿ ಪತೇಃ ದುಹಿತ್ರಾ ॥
ಉಪಸ್ಥಿತಃ ಚಾರುವಪುಃ ತದೀಯಂ ।
ಕೃತ್ವೋಪ ಭೋಗೋತ್ಸುಕಯಾಚ ಲಕ್ಷ್ಮ್ಯಾ ॥ ೨೪

ಪಿತನ ನೇಮದ ಲಿಂತು ರಾಮನು ।
ಸತಿಯೊಡನೆವನ ವಾಸವನು ಮುಗಿ–।
ಸುತ ಬಳಿಕ ರಾಜ್ಯಾಡಳಿತ ಸೂತ್ರವನು ಕೈಕೊಂಡು ॥
ಮತಿಯಲವ ಧರ್ಮಾರ್ಥಕಾಮದ ।
ತತಿಯಲೆಂತೋ ತಮ್ಮಾದಿರೊಳಭಿ ।
ಮತದ ಸಮತೆಯ ವೃತ್ತಿಯನು ತಳೆದಿರ್ದನಾತೆರದಿ ॥ ೨೧

ಜನನಿಯರ ಬಲುಮುದ್ದು ಮಗನೆಂ–।
ದೆನಿಸಿರಲಿಕವರೆಲ್ಲರಲ್ಲಿಯು–।
ಮನುನಯದಲವ ನೊಂದೆಬಗೆ ಯುಪಚಾರವೆಸಗುತಿಹಂ ॥
ತನಯ ನಂಬೆಗೆ ಕೃತ್ತಿಕೆಯರ ।
ಸ್ತನಗಳುಂಡಾರ್ಮೊಗ ಗಳಿಂದಲೆ ।
ಜನಿಸಿದೊಲುಮೆಯ ಸಮತೆಯವರಲಿ ತೋರಿಮೆರೆವಂತೆ ॥ ೨೨

ಜನಪನವನಲಿ ಲೋಭ ಹಿಂಗಲು ।
ಜನತೆಯಲಿ ಸಿರಿತನವು ನೆಲೆಸಿತು ।
ಸೆಣಸಲವನೆಡರುಗಳ ಸತ್ಕರ್ಮಗಳಲೆರಗಿತದು ॥
ಜನಗಣವ ನೇಮದಲಿ ಪಾಲಿಸೆ ।
ಜನಕನೆನಿಸಿದನರಸ ನೆಲ್ಲಕೆ ।
ಮನದದು ಗುಡವ ತೊಡೆದು ಜನತೆಗೆ ಸುತನು ತಾನಾದ ॥ ೨೩

ಶೌರಿಯೊಡನು ಪಭೋಗಕೆಳೆಸುತ ।
ಗೌರ ಕಾಂತಿಯ ತಳೆದು ಸೀತಾ–।
ಗೌರಿಯಂಗವನೊಂದಿ ಬಂದಿಹ ಲಕುಮಿ ತಾನೆನಲು ॥
ಸೌರ ಕುಲತಿಲಕನವ ಕಾಲದಿ ।
ಪೌರಕಾರ್ಯವ ನೆಸಗಿ ಮಿಥಿಲೆಯ ।
ಶೌರಿನವಳೊಡಗೂಡಿ ರಮಿಸಿದ ನಖಿಳ ವೈಭರದಿಂ ॥ ೨೪

ತಯೋಃ ಯಥಾ ಪ್ರಾರ್ಥಿತಮಿಂದ್ರಿಯರ್ಥಾಃ ।
ಆಸೇ ದುಷೋಃ ಪದ್ಮಸುಚಿತ್ರವತ್ಸು ॥
ಪ್ರಾಸ್ತಾನಿ ದುಃಖಾನ್ಯಪಿ ದಂಡ ಕೇಷು ।
ಸುಚಿಂತ್ಯಮಾನಾನಿ ಸುಖಾನ್ಯಭೂರ್ವ ॥ ೨೫

ಅಥಾಧಿಕ ಸ್ನಿಗ್ಧ ವಿಲೋಚನೇನ ।
ಮುಖೇನ ಸೀತಾ ಶರಪಾಂಡುರೇಣ ॥
ಆನಂದಯಿತ್ರೀ ಪರಿಣೇತುರಾ ಸೀತ್ ।
ಅನಕ್ಷರ ವ್ಯಂಜತ ದೋಹದೇನ ॥ ೨೬

ತಾ ಮಂಕ ಮಾರೋಪ್ಯ ಕೃಶಾಂಗ ಯಷ್ಟಿಂ ।
ವರ್ಣಾಂ ತರಾಕ್ರಾಂತ ಪಯೋಧರಾಗ್ರಂ ॥
ವಿಲಜ್ಜ ಮಾನಾಂ ರಹಸಿ ಪ್ರತೀತಃ ।
ಪಪ್ರಚ್ಛ ರಾಮಾಂ ರಮಣೋಽಭಿಲಾಷಂ ॥ ೨೭

ಸಾ ದಷ್ಟ ನೀವಾರ ಬಲೀನಿ ಹಿಂಸ್ರೈಃ ।
ಸಂಬದ್ಧ ವೈಖಾನಸ ಕನ್ಯಕಾನಿ ॥
ಇಯೇಷ ಭೂಯಃ ಕುಶವನ್ತಿ ಗಂತುಂ ।
ಭಾಗೀರಥೀ ತೀರತ ಪೋವನಾನಿ ॥ ೨೮

ದಂಪಕಾವನಗಳಲಿ ತೊಡರಿದ ।
ಖಂಡ ಕಷ್ಟವತೋರ್ವ ಚಿತ್ರದ ।
ತಂಡದಿಂದೆಸೆವಾ ಲಯಂಗಳ ಲಿಂದ್ರಿಯಾರ್ಥಗಳಂ ॥
ಗಂಡ ಹೆಂಡಿರು ಸವಿದು ತಮ್ಮ –।
ದ್ದಂತ ದುಃಖದನೆನಪಿನಿಂದಲೆ ।
ಕೊಂಡು ಸುಖವನು ರಮಿಸಿ ಮೆರೆದರು ಸುಖದ ಹೊನಲಿನಲಿ ॥ ೨೫

ಬಳಿಕ ಸೀತೆಯು ಶರತ್ತೃಣದವೊಲು ।
ಬಿಳಿಚಿ ಕೊಡಿಹ ಸೇಹರಸವಂ ।
ತುಳುಕಿಸುವ ಕಂಗಳಲಿ ಬೆಳಗುವ ಮೊಗದ ಸೊಬಗಿಂದ ॥
ಉಲಿಯದೆಯೆ ತಾಗಬ್ಬ ತಳೆದಿಹ ।
ಸುಳಿಯನರು ಹುತಲವಳು ತನ್ನ ।
ನ್ನೊಲಿದುಕ್ಕಿ ಪಿಡಿದವಗೆ ಹರ್ಷದ ಹೊನಲ ಹರಿಸಿದಳು ॥ ೨೬

ಒಡೆಯ ನೀಬಗೆಯರಿದು ಯೋಚಿಸು ।
ತೊಡಲ ಮಡಲೊಳು ಬಡತನವನು ।
ಬಿಡದೆ ಚೂಚಕದೆಡೆಗಳಲಿ ಕರಿ–ಬಣ್ಣವನು ಕಂಡು ॥
ಮಡದಿ ಬಲುನಾಚಿಕೆಯ ಸೂಸಲು ।
ತೊಡೆಗರಳ ನೇರಿಸುತಲವ ತ– ।
ನ್ನೊಡತಿಗಿಹ ಬಯಕೆಗಳ ನೇಕಾಂತದಲಿ ಕೇಳಿದನು ॥ ೨೭

ಎಲ್ಲಿ ಹಿಂಸೆಯಗೈವ ಮೃಗಗಳು ।
ಮೆಲ್ಲೆ ಪುಲ್ಬೀಜಗಳ ಮೇವನು ।
ಚೆಲ್ಲುತಿರುವರೊ, ಸೊಂಪುಬೆಳಸಿನ ಕುಶಗಳೆಲ್ಲಿಹವೋ ॥
ಎಲ್ಲಿ ಮುನಿ ಕನ್ಯೆಯರು ಗೆಳೆತನ–।
ದಲ್ಲಿಹರೊ ಭಾಗೀರಥಿಯ ದಡ–।
ದಲ್ಲಿನಾ ಮುನಿವನಗಳಿಗೆ ತಾ ಪೋಗಲೆಳಸಿದಳು ॥ ೨೮

ತಸ್ಯೈ ಪ್ರತಿಶ್ರುತ್ಯ ರಘುಪ್ರವೀರಃ।
ತದೀಪ್ಸಿತಂ ಪಾರ್ಶ್ವಚರಾನುಯಾತಃ ॥
ಆ ಲೋಕಯಿಷ್ಯ ಮುದಿತಾಮಯೋಧ್ಯಾಂ ।
ಪ್ರಾಸಾದ ಮಭ್ರಂಲಿಹ ಮಾರುರೋಹ ॥ ೨೯

ಋದ್ಧಾಪಣಂ ರಾಜಪಥಂ ಸ ಪಶ್ಯ ।
ವಿಗಾಹ್ಯಮಾನಾಂ ಸರಯೂಂ ಚ- ನೌಭಿಃ ॥
ವಿಲಾಸಿಭಿ ಶ್ಚಾ ಭ್ಯುಷಿತಾನಿ ಪೌರೈಃ ।
ಪುರೋಪಕಂಠಾನಿವನಾನಿ ರೇಮೇ ॥ ೩೦

ಸ ಕಿಂಪ ದಂತೀಂ ವದತಾಂ ಪುರೋಗಃ
ಸ್ವ ವೃತ್ತ ಮುದ್ದಿಶ್ಯ ವಿಶುದ್ಧ ವೃತ್ತಃ ॥
ಸರ್ಪಾಧಿರಾಜೋರು ಭುಜೋಪ ಸರ್ಪಃ ।
ಪಪ್ರಚ್ಛ ಭದ್ರಂ ವಿಜಿತಾರಿ ಭದ್ರಃ ॥ ೩೧

ನಿರ್ಬಂಧಪೃಷ್ಟಃ ಸಜಗಾದ ಸರ್ವಂ ।
ಸ್ತುವಂತಿ ಪೌರಾಃ ಚರಿತಂತ್ವದೀಯಂ ॥
ಅನ್ಯತ್ರ ರಕ್ಷೋಭವನೋಷಿತಾಯಾಃ।
ಪರಿಗ್ರಹಾತ್ ಮಾನವದೇನ ದೇವ್ಯಾಃ ॥ ೩೨

ನಾರಿಕೋರಿದ ಬಯಕೆಯದ ನೆರ-।
ವೇರಿಸಲು ಮಾತಿತ್ತ ರಘುಕುಲ-।
ವೀರ ಮೈಗಾವಲಿನ ಚರರೊಡ ಗೂಡಿ ಸಂತಸವಂ-॥
ಬೀರುತಿಹ ಸಾಕೇತಪನು ಕ-।
ಣ್ಣಾರೆ ಕಾಣುವ ಬಯಕೆಯಿಂದವ-।
ನೇರಿದನು ಮಗಿಕಿಲೆಂಜಲಿಸುವರ ಮನೆಯ ಸೌಧವನು ॥ ೨೯

ಸಿರಿಗೆ ನೆಲೆಯೂ ದಂಗಡಿಗಳಿಂ ।
ಭರಿತವಾಗಿಹ ರಾಜಮಾರ್ಗವ ।
ತರಿನಿಲಿಹ ದೋಣಿಗಳು ನೆರೆದಿಹಸರಯು ತೊರೆಯನ್ನಂ ॥
ತರುಣ ತರುಣೀಪೌರ ಜನಗಳ ।
ಸರಸಕೇಳಿಗ ಳಿಕ್ಕೆಯೆನಿಸಿಹ ।
ಪುರದಗಡಿಯುಪವನಗಳನ್ನವ ನೋಡಿ ಮುದವಾಂತ ॥ ೩೦

ಮಾತಬಲ್ಲವಗೊಳಗೆ ಲೂದಲಿಗ ।
ಪಾತಕಕ್ಕೆ ಗುಡದ ಚರಿತನು ।
ಜೋತ ನೀಳ್ದೋಳ್ಗಳಲಿ ಪಾವೊಡೆಯನೋಲೈವನು ॥
ಆತನರಿಗಳ ಶುಭವನೊರೆಸುವ-।
ನಾತ ನಿಜಚರಿತೆಯೊಳು ಮುಂದಿಯ ।
ಮಾಡಬಗೆಯಿಂ ಭದ್ರನೆಂಬನುಚರನ ಕೇಳಿದನು ॥ ೩೧

ದೇವನಿದಿರಲಿ ಪೂಜಲನು ಚರ-।
ದೇವ ನಿರ್ಬಂಧದಲಿ ಬಲವಂತದಲಿ ಪೇಳ್ದನು।
ದೇವ! ಬಹುದಿನ ರಕ್ಕಸನ ಮನೆಯೊಳಗೆ ನೆಲೆಸಿರ್ದ ॥
ದೇವಿಯಿಂ ಕೊಳ್ಳುವುದು ಮಾನವ-।
ದೇವಗನು ಚಿತವೆಂಬ ಬಹುಪರಿ-।
ದೇವನೋಕ್ತಿಯ ನುಳಿದು ನುತಿಪರು ಅಥವಾ ನಿಮ್ಮ ಚರಿತೆಗಳಂ ॥ ೩೨

ಕಳತ್ರನಿಂದಾ ಗುರುಣಾಕಿಲೈವಂ ।
ಅಭ್ಯಾಹತಂ ಕೀರ್ತಿವಿಪರ್ಯಯೇಣ ॥
ಅಯೋಘನೇನಾಯ ಇತಾಭಿತಪ್ತಂ ।
ವೈದೇಹಬಂಧೋಃ ಹೃದಯಂ ವಿದಧ್ರೇ ॥ ೩೩

ಕಿಮಾತ್ಮ ಸಿರ್ವಾದ ಕಥಾ ಮುಪೇಕ್ಷೇ ।
ಜಾಯಾಮ ದೋಷಾ ಮುತ ಸಂತ್ಯಜಾನಿ ॥
ಇತ್ಯೇಕ ಪಕ್ಷಾಶ್ರಯ ವಿಕ್ಲವತ್ವಾತ್ ।
ಆಸೀತ್ ಸ ಡೋಲಾ ಚಲಚಿತ್ತವೃತ್ತಿಃ । ೩೪

ನಿಶ್ಚಿತ್ಯ ಚಾನನ್ಯನಿವೃತ್ತಿ ವಾಚ್ಯಂ ।
ತ್ಯಾಗೇನ ಪತ್ನ್ಯಾಃ ಪರಿಮಾಷ್ಟು ಮೈಚ್ಛತ್ ॥
ಅಪಿ ಸ್ವದೇಹಾತ್ ಕಿಮುತೇಂದ್ರಿಯಾರ್ಥಾತ್
ಯಶೋಧನಾನಾಂ ಹಿಯಶೋಗರೀಯಃ ॥ ೩೫

ಸನ್ನಿಪತ್ಯಾವರಜಾನ್ ಹ ತೌಜಾಃ
ತದ್ವಿ ಕ್ರಿಯಾ ದರ್ಶನ ಲುಪ್ತ ಹರ್ಷಾನ್ ॥
ಕೌಲೀನ ಮಾತ್ಮಾಶ್ರಯ ಮಾಚಚಕ್ಷೇ ।
ತೇಭ್ಯಃ ಪುನಶ್ಚೇದ ಮುವಾಚ ವಾಕ್ಯಂ ॥ ೩೬

ಚರನನವ ನಾಗ್ರಹಿಸಿ ಕೇಳ–।
ಲ್ಕೊರೆದನಂತನ ದೇವ ! ರಕ್ಕಸ–।
ನರಮನೆಯೊಳಗೆ ಬಹಳ ದಿನ ನೆಲೆಸಿರ್ದ ದೇವಿಯನು ॥
ಮುರಳಿ ಕೈಕೊಂಡಿಹುದನುಳಿದರೆ ।
ಪುರಧೊಳಿಹ ಜನಗಣವು ಬಿಡಧನ–।
ವರತ ನಿನ್ನಯ ಚರಿತೆಯೆಲ್ಲರ ಹೊಗಳು ತಿರುತಿಹರು ॥ ೩೩

ತನ್ನ ಪೆಸರಂ ಕುಂದಿಸುವ ಜನ–।
ವೆನ್ನುವುದ ಲಕ್ಷಿಸದಿರಲೆ ? ಮೇ–।
ಣೆನ್ನ ದೋಷವು ಸೋಂಕದಿಹನಿಜ ಸತಿಯ ತೊಲಗಿಸಲೆ ॥
ಭಿನ್ನಪಕ್ಷಗಳಲ್ಲಿ ನೊಂದೊಂ–।
ದನ್ನನಾಸರೆಯಿಂತು ಪೊಂದಿಹ ।
ಮನ್ನೆಯುವ ಮನದಂದ ತೂಗುಯ್ಯಾಲೆ ಕೆಣೆಯಾಯ್ತು ॥ ೩೪

ಬೇರೆ ಪರಿಯಿಂ ಕಳೆಯಲಾಗದ ।
ಪೌರನಿಂದೆಯ ನೊರೆಸಲೆಳೆಸೂತ ।
ಭೂರಮಣನಿಜರಮಣಿಯನು ಬಿಡಲು ಮನಗೈದ ॥
ಕೀರುತಿಯೆ ಸಿರಿಯೆಂಬರಿಗೆ ನಿಜ-।
ಕೀರುತಿಯು ತಮ್ಮೊಡಲಿ ಗಿಂತತಿ-।
ಸಾರವೆನಿಸಿರಲಿಂದ್ರಿಯಾರ್ಥಕ್ಕವರು ಮಣಿಯುವರೆ ? ೩೫

ಬಾಡಿರಲು ಮುಖಕಾಂತಿ ಯಣ್ಣಗೆ ।
ನೋಡುತದ ತಮ್ಮದಿರು ಹರುಷನ ।
ದೂಡಿನಿಂದಿರಲರಸನವರೆಲ್ಲರನು ಬಳಿತಂದು ॥
ನಾಡಮಂದಿಯ ನಿಂದೆ ತಮಗೀ–।
ಕೇಡತಂದಿಹ ಪರಿಚಯ ನವರೊಳ–।
ಗಾಡಿದನು ತಾವೆತ್ತೆ ಮುಂದಿನ ಮಾತನಿದ ನೊರೆದಂ ॥ ೩೬

ರಾಜರ್ಷಿವಂಶಸ್ಯ ರವಿಪ್ರಸೂತೇಃ ।
ಉಪ ಸ್ಥಿತಃ ಪಶ್ಯತ ಕೀದೃಶೋಽಯಂ ॥
ಮತ್ತಃ ಸದಾಚಾರ ಶುಚೇಃ ಕಳಂಕಃ
ಪಯೋದವಾತಾ ದಿವ ದರ್ಪಣಸ್ಯ ॥ ೩೭

ಪೌರೇಷು ಸೋಽಹಂ ಬಹುಳೀಭವಂತಂ ।
ಅಪಾಂ ತರಂಗೇಷ್ವಿವ ತೈಲ ಬಿಂದುಂ ॥
ಸೋಢುಂ ನ ತತ್ಪೂರ್ವ ಮವರ್ಣ ಮೀಶೇ ।
ಆಲಾನಿಕಂ ಸ್ಥಾಣುಮಿವ ದ್ವಿಪೇಂದ್ರಃ ॥ ೩೮

ತ ಸ್ಯಾಪನೋದಾಯ ಫಲಪ್ರವ ತ್ತೌ ।
ಉಪಸ್ಥಿತಾ ಯಾಮಪಿ ನಿರ್ವ್ಯಪೇಕ್ಷಃ ॥
ತ್ಯಕ್ಷ್ಯಾಮಿ ವೈದೇಹಸುತಾಂ ಪುರಸ್ತಾತ್
ಸಮುದ್ರ ನೇಮಿಂ ಪಿತುರಾಜ್ಞಯೇವ ॥ ೩೯

ಅವೈಮಿ ಚೈನಾಂ ಅನಘೇತಿ ಕಿಂತು ।
ಲೋಕಾಪವಾದೋ ಬಲವಾನ್ ಮತೋ ಮೇ ॥
ಛಾಯಾಹಿ ಭೂಮೇಃ ಶಶಿನೋ ಮಲತ್ವೇ–
ನಾರೋಪಿ ತಾ ಶುದ್ಧಿಮತಃ ಪ್ರಜಾಭಿಃ ॥ ೪೦

ನೋಡಿರನುಜರೆ ! ರವಿಯುದೆಸೆಯಿಂ
ಮೂಡಿಬಂದಿಹ ರಾಜಮುನಿಗಳ ।
ಕೂಡಿ ಬೆಳೆದಿರುವೆಮ್ಮ ಕುಲಕಾಚಾರ ಶುದ್ಧಿಯಲಿ ॥
ನಾಡನಾಳುವ ನನ್ನದೆಸೆಯಿಂ ।
ಜೋಡಿಯೆಂತಾಯ್ತೀ ಕಳಂಕಕೆ ।
ಮೋಡದಿಂ ಬಹಗಾಳಿ ಕನ್ನಡಿಗೂಣೆ ತರುವಂತೆ ॥ ೩೭

ಲೋಲ ಜಲದಲೆಗಳಲಿ ಪಸರಿಪ ।
ತೈಲ ಬಿಂದುವಿನನಂತೆ ಪುರಜನ-।
ಜಾಲದಲಿ ಹಬ್ಬುವೀ ಮೊದಲಿನವ ಮತಿಯಂ ॥
ಕೇಳಿರೈ ನಾಂ ತಾಳಲಾರೆನು ।
ತಾಳಲವೇನಾನೆಗಳ ಮುಂ-।
ದಾಳು ಸಲಗಕೆ ಕಂಭದಲಿ ಬಿಗಿವಡೆವ ಹೇಳದವಂ ॥ ೩೮

ನಿಂದೆಯುದನಾಂ ಕಳೆಯ ಲೋಸುಗ ।
ಮಿಂದು ತುಂಬಿದ ಬಸುರಿಯಾಗಿಹ ।
ಳೆಂದು ಗಮನಕೆ ತಾರ ದೀವ್ಯದೇಹ ನಂದನೆಯಂ ॥
ಹಿಂದೆ ತಂದೆಯು ನೇಮದಿಂ ಕಡ-।
ಲಿಂದ ಸುತ್ತಿರ್ದಿಳೆಯ ಸಿರಿಯನು ।
ಚಂದದಿಂ ಬಿಟ್ಟಂದದಲಿ ಬಿಡುವೆನು ತೊರೆದು ಮೋಹವನು ॥ ೩೯

ಬಲ್ಲೆನಿವಳತಿ ಶುದ್ಧಳೆಂಬುದ-।
ನಿಲ್ಲಿ ಬಗೆವೊಡೆ ಮಂದಿಯಾಡುವ ।
ಜೊಳ್ಳುನುಡಿ ಬಲಗೊಳ್ವುದೆಂಬುವ ತತ್ವ ಹಿರಿದೆನಗೆ ॥
ಎಲ್ಲವುಂ ಶುಚಿಗೊಂಡ ಚಂದ್ರಮ-।
ನಲ್ಲಿ ಭೂಮಿಯ ಛಾಯೆಯುಂ ಕಂ-।
ಡಿಲ್ಲದಿಹಮಲಿನತೆಯು ಹೇರುತ್ತಿಹರು ಜನರಿದಕೆ ॥ ೪೦

ರಕ್ಷೋವ ಧಾನ್ತೋನ ಚ ನೋ ಪ್ರಯಾಸಃ ।
ವ್ಯರ್ಥಃ ಸ ವೈರಿ ಪ್ರತಿಮೋಕ್ಷಣಾಯ ॥
ಅಮರ್ಷಣಃ ಶೋಣಿತಕಾಂಕ್ಷಯಾ ಕಿಂ ।
ಪಲ್ಲಾ ಸ್ಪೃಶಂತಂ ದಶತಿ ದ್ವಿಜಿಹ್ವಃ ॥ ೪೧

ತದೇಷ ಸರ್ಗಃ ಕರುಣಾರ್ದ್ರ ಚಿತ್ತೈಃ
ನ ಮೋ ಭವದ್ಭಿಃ ಪ್ರತಿಷೇಧನೀಯಃ ॥
ಯದ್ಯರ್ಥಿತಾ ನಿರ್ಹೃತ ವಾಚ್ಯಶಲ್ಯಾನ್ ।
ಪ್ರಾಣಾನ್ ಮಯಾ ಧಾರಯಿತುಂ ಚಿರಂವಃ ॥ ೪೨

ಇತ್ಯುಕ್ತವನ್ತಂ ಜನಕಾತ್ಮಜಾಯಾಂ ।
ನಿತಾನ್ತರೂಕ್ಷಾಭಿನಿವೇಶ ಮೀಶಃ ॥
ನ ಕಶ್ಚನ ಭ್ರಾತೃಷು ತೇಷು ಶಕ್ತೋ ।
ನಿಷೇದ್ಧು ಮಾಸೀತ್ ಅನುವರ್ತಿತುಂವಾ ॥ ೪೩

ಸ ಲಕ್ಷ್ಮಣಂ ಲಕ್ಷ್ಮಣಪೂರ್ವಜನ್ಮಾ ।
ವಿಲೋಕ್ಯ ಲೋಕತ್ರಯ ಗೀತಕೀರ್ತಿಃ ॥
ಸೌಮ್ಯೇತಿ ಚಾಭಾಷ್ಯ ಯಥಾರ್ಥಭಾಷೀ ।
ಸ್ಥಿತಂ ನಿದೇಶೇ ಪೃಥಗಾದಿದೇಶ ॥ ೪೪

ಅಮರರಿಪುವದ್ರಿಯಲ್ಲಿ ಮುಗಿದಾ-।
ಶ್ರಮವ ಬಂದಂ ದೆಣಿಸಲಾಗದು ।
ರಮಣಿಯನ ಕದ್ದವನ ಹಗೆತನ ಕದುವೆ ಮಾರುಮಯ್ಯಿ ॥
ಕುಮತಿ ಕಾಲಲಿ ಹಾವನೊದೆದಂ-
ದ ಮಿತ ರೋಷದಲವನ ಕಚ್ಚಲು ।
ಮಮತೆಯಿಹುದೇನದಕೆ ನೆತ್ತರ ಸವಿಯಲಿಕ್ಕವನ ॥ ೪೧

ಆದಕಾರಣ ಸಿದ್ಧವಿದು ಜನ ।
ವಾದವೆನೆ ಕೂರಲುಗಿನಿಂ ಬಿಡಿ-।
ದಾದ ಜೀವಗಳನ್ನು ನಾಂಚಿರಕಾಲ ಧರಿಸುವುದಂ ॥
ಸೋದರರು ನೀವ್ ಕರುಣೆರಸದಿಂ ।
ತೋದಮನದವ ರೆಳೆಸಿದಾದೊಡೆ ।
ಹಾದಿ ಹಿಡಿದೆನ್ನ ನಿಶ್ಚಿತ ಕಡ್ಡಿ ತಾರದಿರಿ ॥ ೪೨

ಜನಕಜೆಯ ವಿಷಯದಲಿ ಹೀಗೆಂ-।
ದು ನುಡಿಯುತತ್ಯಂತ ಕಠಿಣತೆ ।
ಯನು ತಳೆದಾ ಗ್ರಹವಿರುವ ತಮ್ಮೊಡೆಯ ರಾಘವನ ॥
ಮನದ ನಿಶ್ಚಿತವನ್ನು ಕಡೆಯಲು ।
ವಿನಯದಿಂದ ಥಮಾನುಮೋದಿಸ-।
ಲನುಜರವರೊಳಗೊಬ್ಬನಾದರು ಶಕ್ತನೆಂದೆನಿಪಂ ॥ ೪೩

ಮೂರುಲೋಕಗಳಲ್ಲಿ ಪಾಡುವ ।
ಚಾರು ಕೀರ್ತಿಯ ನೊಂದಿ ಸತ್ಯದ ।
ಸಾರವನೆ ತಾ ನಿರುತ ನುಡಿವಾ ಲಕ್ಷ್ಮಣಾಗ್ರಜನು ॥
ಭೂರಮಣ ನಾಣತಿಯನೆಂದುಂ ।
ಮೀರದಿಹ ಲಕ್ಷ್ಮಣನ ನಿಟ್ಟಿಸಿ ।
ಬೇರೆ ಕರೆ 'ದಲೆಸೌಮ್ಯ' ನೆಂದವಗೊಳೆದು ಬೆಸಸಿದನು ೪೪

ಪ್ರಜಾವತೀ ದೋಹದಶಂಸಿನೀ ತೇ ।
ತಪೋವನೇಷು ಸ್ಪೃಹಯಾಳು ರೇವ ॥
ಸ ತ್ವಂ ರಥೀ ತದ್ವ್ಯಪದೇಶನೇಯಾಂ ।
ಪ್ರಾಪಯ್ಯ ವಾಲ್ಮೀಕಿಪದಂ ತ್ಯಜೈನಾಂ ॥ ೪೫

ಸ ಶುಶ್ರುವಾನ್ ಮಾತರಿ ಭಾರ್ಗವೇಣ ।
ಪಿತುಃ ನಿಯೋಗಾತ್ ಪ್ರಹೃತಂ ದ್ವಿಷದ್ವ ॥
ಪ್ರತ್ಯಗ್ರ ಹೀತ್ ಅಗ್ರಜಶಾಸನಂ ತತ್ ।
ಆಜ್ಞಾ ಗುರೂಣಾಂ ಅವಿಚಾರಣೀಯಾ ॥ ೪೬

ಅಥಾನುಕೂಲ ಶ್ರವಣ ಪ್ರತೀತಾಂ ।
ಅತ್ರಸ್ನುಭಿಃ ಯುಕ್ತಧುರಂ ತುರಂಗೈಃ ॥
ರಥಂ ಸುಮಂತ್ರ ಪ್ರತಿಪನ್ನರಶ್ಮಿಂ ।
ಆರೋಪ್ಯ ವೈದೇಹಸುತಾಂ ಪ್ರತಸ್ಥೇ ॥ ೪೭

ಸಾ ನೀಯಮಾನಾ ರುಚಿರಪ್ರದೇಶಾನ್ ।
ಪ್ರಿಯಂ ಕರೋ ಮೇ ಪ್ರಿಯ ಇತ್ಯನಂದತ್ ॥
ನಾಬುದ್ಧ ಕಲ್ಪ ದ್ರುಮತಾಂ ವಿಹಾಯ ।
ಜಾತಂ ತ ಮಾತ್ಮನ್ಯಸಿ ಪತ್ರ ವೃಕ್ಷಂ ॥ ೪೮

ನಿಪದವಿದು ನಿಮ್ಮಣ್ಣನರಸಿಯುಂ ।
ಬಸಿರು ಬಯಕೆಯು ನರುಹಲಿಚ್ಛಿಸಿ ।
ರಿಸಿಗಳಾಶ್ರಮಗಳಲಿ ವಾಸವನೆಳಪಿ ಬೇಡಿಹಳು ॥

ಬೆಸನಪೊಡೆದಾನೀನು ರಥವೇ-
ರಿಸುತ ಲಾನೆಪದಲಾಕೆಗೆ ।
ವಸತಿಯುಹ ವಾಲ್ಮೀಕಿಯಾಶ್ರಮಕೊಯ್ದು ಬಿಡುಸತಿಯಂ ॥ ೪೫

ಗುರುನಿರೂಪದಲಂದು ಭಾರ್ಗವ-।
ಗುರುವರೇಣ್ಯನು ಹಗೆಯು ಬಗೆಯಲಿ ।
ಗುರುಶರದ ತನ್ನಬ್ಬೆ ಕೊಲೆಗೈದುದನು ಕೇಳಿರ್ದ ॥
ಗುರುಮತಿಯು ಸೌಮಿತ್ರಿ ತನ್ನಯ ।
ಗುರುವಿನಾಣತೆಯನ್ನು ತಳೆದನು ।
ಗುರುಗಳಾಜ್ಞೆಯು ನಡೆಸು ಬೇಡೆಂಬೆಣಿಕೆ ಕೂಡದಲಾ ॥ ೪೬

ಎಳೆಸಿದುದ ಸಲಿಸುವುದನಾಲಿಸಿ ।
ಬಳಿಕ ಬಲುಸಂತಸದ ಹೊನಲಲಿ ।
ಮುಳುಗಿ ದವನಿಜೆಯನ್ನು ಬೆದರದ ಕುದುರೆಗಳಲಂದು ॥
ಸೆಳೆದು ಕಟ್ಟಿದ ಹಗ್ಗಗಳ ಕೈ-।
ಗಳಲಿ ಸೂತ ಸುಮಂತ್ರ ಕೊಳ್ಳುತ ।
ಮಿಳನಗೈಸಿಹ ರಥವನೇರಿಸಿ ಪೊರಟ ಲಕ್ಷ್ಮಣನು ॥ ೪೭

ಚಾರು ಭುವಗಳ ಲೊಯ್ಯುತಿರಲಾ-।
ನಾರಿ ಹಿಗ್ಗಿದಳೆನ್ನ ವಲ್ಲಭ-।
ಕೋರಿದುದ ಸಲ್ಲಿಸುತ ಹಿತಕರನ ಹನು ತನಗೆಂದು ॥
ತೋರಲಿಲ್ಲವು ಮಾತಿಗೆ ತನ್ನವಿ-।
ಚಾರದಲಿ ಸುರತರುವ ಭಾವವ ।
ಚಾರಿಸುತ್ತಸಿ ಪತ್ರತರುಗುಣವವನು ತಳೆದಿಹುದಂ ॥ ೪೮

ಜುಗೂಹ ತಸ್ಯಾಃ ಪಥಿ ಲಕ್ಷ್ಮಣೋ ಯತ್ ।
ಸ ವ್ಯೇತರೇಣ ಸ್ಫುರತಾ ಯುದಕ್ಷ್ಣಾ ॥
ಆ ಖ್ಯಾತಮು ಸ್ಯೈ ಗುರು ಭಾವಿದುಃಖಂ ।
ಅತ್ಯಂತ ಲುಪ್ತ ಪ್ರಿಯದರ್ಶನೇವ ॥ ೪೯

ಸಾ ದುರ್ನಿಮಿತ್ತೋಪಗತಾತ್ ವಿಷಾದಾತ್ ।
ಸದ್ಯಃ ಪರಿಮ್ಲಾನಮುಖಾರವಿಂದಾ ॥
ರಾಜ್ಞಃ ಶಿವಂ ಸಾವರಜಸ್ಯ ಭೂಯಾತ್ ।
ಇತ್ಯಾಶಶಂಸೇ ಕರಣೈ ರಬಾಹ್ಯೈಃ ॥ ೫೦

ಗುರೋಃನಿಯೋಗಾತ್ ವನಿತಾಂ ವನಾನ್ತೇ ।
ಸಾಧ್ವೀಂ ಸುಮಿತ್ರಾ ತನಯೋ ವಿಹಾಸ್ಯನ್ ॥
ಅವಾರ್ಯತೇವೋತ್ಥಿತ ವೀಚಿಹಸ್ತೈಃ ।
ಜಹ್ನೋಃ ದುಹಿತ್ರಾ ಸ್ಥಿತಯಾ ಪುರಸ್ತಾತ್ ॥ ೫೧

ರಥಾತ್ ಸ ಯಂತ್ರಾ ನಿಗೃಹೀತವಾಹಾತ್ ।
ತಾಂ ಭ್ರಾತೃಜಾಯಾಂ ಪುಲಿನೇಽವತಾರ್ಯ ॥
ಗಂಗಾಂ ನಿಷಾದಾಹೃತನೌ ವಿಶೇಷಃ ।
ತತಾರ ಸಂಧಾಮಿವ ಸತ್ಯಸಂಧಃ ॥ ೫೨

ಯಾವ ದುರ್ಧರ ದುಃಖವಿಷಯವ ।
ದೇವಿಯಿಂ ಮರೆಮಾಚಿ ಲಕ್ಷ್ಮಣ-।
ದೇವಹಾದಿಯೊಳರುಹಲಿಲ್ಲವೊ ತಾನೆ ತಾನಾಗಿ ॥
ಆವಗುಂ ದುರ್ಲಭವು ನಿಜಪತಿ-।
ದೇವ ದರ್ಶನವೆಂಬ ಸೂಚನೆ ।
ದೇವಗಾಕೆಯ ಬಲದ ಕಣ್ಣದುರಿನಲಿ ತೆತ್ತುದದು ॥ ೪೯

ನೋಡಿ ದುಶ್ಶಕುನಂಗಳಂ ನೆರೆ-।
ಮೂಡಿದತಿಶಯ ದುಃಖದಿಂ ಬಹು-।
ಬಾಡುತಲಿ ಮೊಗದಾವರೆಯು ಸೊಂಪಡೆಗೆ ಜಾನಕಿಯುಲಿ ॥
ನಾಡಿನರಸಿಗನುಜರಿಂ ದೊಡ-।
ಗೂಡಿ ಮಂಗಳವಾಗಲೆಂದವ-।
ಳಾಡಿ ಹಾರೈಸಿದಳು ಸಾಂತಃಕರಣ ಶುದ್ಧಿಯಲಿ ॥ ೫೦

ಅಗ್ರಜಾತನ ನೇಮದಿಂದಲು-।
ದಗ್ರ ಪಾತಿವ್ರತ್ಯ ಶೀಲಳ-
ನುಗ್ರವನ ದೊಳು ತೊರೆಯಲೋಸುಗ ಬಂದ ಲಕ್ಷ್ಮಣನಂ ॥
ಅಗ್ರಭಾಗದೊಳೆಸೆವ ಜಾಹ್ನವಿ-।
ಯುಗ್ರ ಕರ್ಮವನೆಸೆಗ ಬೇಡೆಂ-।
ದಗ್ರದಲೆಗೈ ಗಳಲಿ ತಡೆದಪಳೆಂಬ ವೊಲು ತೋರ್ಪಳ್ ॥ ೫೧

ಪ್ರಥಿತಗಂಗಾ ಪುಲಿನದಲಿ ಸಾ-
ರಥಿಯು ಹಯಗಳ ಪಿಡಿದು ನಿಲ್ಲಿಸೆ ।
ರಥದ ದೆಸೆಯಿಂದಣ್ಣನರಸಿಯನಿಳುಹಿ ನಿಷಧರಲಿ ॥
ಪ್ರಥಮನೊಯ್ದುರು ದೋಣಿಯಲಿಜಲ-।
ಪಥವನತ್ತಿಗೆಯೊಡನೆ ಸತ್ವದ ।
ಪಥಿಕ ನುತ್ತರಿಸಿದನು ನುಡಿತಾನಿತ್ತು ನಡೆವಂತೆ ॥ ೫೨

ಅಥ ವ್ಯವಸ್ಥಾಪಿತ ವಾಕ್ ಕಥಂಚಿತ್ ।
ಸೌಮಿತ್ರಿ ರಂತರ್ಗತ ಬಾಷ್ಪಕಂಠಃ ॥
ಔತ್ಪಾತಿಕಂ ಮೇಘ ಇವಾಶ್ಮವರ್ಷಂ ।
ಮಹೀಪತೇಃ ಶಾಸನ ಮುಜ್ಜಗಾರ ॥ ೫೩

ತತೋಽಭಿಷಂಗಾನಿಲ ವಿಪ್ರವಿದ್ಧಾ ।
ಪ್ರಭ್ರಶ್ಯಮಾನಾಂ ಭರಣ ಪ್ರಸೂನಾ ॥
ಸ್ವಮೂರ್ತಿಲಾಭ ಪ್ರಕೃತಿಂ ಧರಿತ್ರೀಂ ।
ಲತೇವ ಸೀತಾಸಹಸಾಜಗಾಮ ॥ ೫೪

ಇಕ್ಷ್ವಾಕುವಂಶ ಪ್ರಭವಃ ಕಥಂ ತ್ವಾಂ ।
ತ್ಯಜೇ ದಕಸ್ಮಾತ್ ಕಥಮಾರ್ಯವ್ಯ ॥
ಇತಿಕ್ಷಿತಿಃ ಸಂಶಯಿತೇವ ತಸ್ಯೈ ।
ದದೌಪ್ರವೇಶಂ ಜನನೀನ ತಾವತ್ ॥ ೫೫

ಸಾಲುಪ್ತ ಸಂಜ್ಞಾನ ವಿವೇದ ದುಃಖಂ ।
ಪ್ರತ್ಯಾಗತಾಸುಃ ಸಮತಪ್ಯತಾಂತಃ ॥
ತಸ್ಯಾಃ ಸುಮಿತ್ರಾತ್ಮಜಯತ್ನಲಬ್ಧಃ ।
ಮೋಹಾದಭೂತ್ ಕಷ್ಟತರಃ ಪ್ರಭೋಧ ॥ ೫೬

ಬಳಿಕ ಬಹುಕಷ್ಟದಲಿ ನುಡಿಗಳ-।
ನೆಳವಡಿಸಿ ಕಂಬನಿಯು ಗಳದೊಳ-
ಗಿಳಿಯಲ ದರಿಂ ಮಾತು ಗದ್ಗದವಾಗೆ ಲಕ್ಷ್ಮಣನು ॥
ಇಳೆಯು ಪತಿಯಿತ್ತಾಣತಿಯು ಸಂ-।
ದೆಳೆಯಳಿದಿರೊಳು ಕಕ್ಕದನು ಕ-।
ಲ್ಪಳಿಯ ನೌತ್ಪಾತಿಕದ ಕಾರ್ಮುಗಿಲುಬ್ಬಿ ಸುರಿವಂತೆ ॥ ೫೩

ಈ ತೆರದ ಬಿರುನುಡಿಯನಾಲಿಸಿ ।
ಸೀತೆ ಪರಿಭವವೆಂಬ ಝಂ ಝಾ-
ವಾತವೇಗದಿ ಕೊಡಹಿದೊಡವೆಗಳೆಂಬ ಪೂವಾಂತ ॥
ಘಾತಿಗೊಂಡಿಹ ಬಳ್ಳಿಯಂದದಿ-।
ಭೂ ತಲವ ಹಮ್ಮೈಸಿ ಸಾರ್ದಳು-।
ಹೇತುವದಲಾ ನ್ನೈಜದಲಿ ತನ್ನೊಡಲ ಗಳಿಪುದಕೆ ॥ ೪೫

ಜನಿಸಿ ದಿಕ್ಷ್ವಾಕುವಿನ ಕುಲದಲಿ ।
ವಿನುತ ಚರಿತೆಯನಾಂತು ಬೆಳಗುವ ।
ನಿನೆಯನೇನೊಂದೀದೆ ನಿನ್ನನು ಬಿಡುವ ಪರಿಯೆಂತು ?
ಎನುತ ಸಂದೇಹವನೆ ತಾಳ್ದಳೊ ।
ಮನದೊಳಗೆ ತಾನೆನಲು ಧರಣೀ-
ಜನನಿ ಮಗಳಿಗೆ ತನ್ನ ಪೊಡೆಯೊಳ ಗೆಡೆಯ ಕುಡದಿರ್ದಳ್ ॥ ೫೫

ಧರೆಗೆ ಬೀಳ್ದೊಡನೆ ಬಲೆಯೊಡಲನು ।
ಮರೆಯೆ ದುಗುಡವ ನರಿಯದಿರ್ದಳು ।
ಮರಳಿ ಚೇತನಗೊಳಲು ತಾಪದಿ ಬೆಂದಳವಳೊಳಗೆ ॥
ವರಸುಮಿತ್ರಾ ಸುತನ ಯತ್ನದಿ ।
ತಿರುಗಿದೆಚ್ಚರದರಿವು ತನುವಿನ ।
ವರೆವೆಗಿಂತಲು ಸೈಸಲ ದಳವಾಯ್ತು ಸತಿಗಂದು ॥ ೫೬

ನ ಚಾವದತ್ ಭರ್ತುರ್ಗರರ್ಣ ಮಾರ್ಯರ್ಗಾ ।
ನಿರಾಕರಿಷ್ಣೋಃ ವೃಜಿನಾತ್ ಋತೇಽಪಿ ।
ಆತ್ಮಾನಮೇವ ಸ್ಥಿರದುಃಖಭಾಜಂ ।
ಪುನಃ ಪುನಃ ದುಷ್ಕೃತಿನಂ ನಿನಿಂದ ॥ ೫೭

ಆಶ್ವಾಸ್ಯ ರಾಮಾವರಜಃ ಸತೀಂತಾಂ ।
ಆಖ್ಯಾತ ವಾಲ್ಮೀಕಿ ನಿಕೇತಮಾರ್ಗ ॥
ನಿಘ್ನಸ್ಯ ಮೇ ಭರ್ತೃನಿದೇಶರೌಕ್ಷ್ಯ ।
ದೇವಿ ! ಕ್ಷಮಸ್ವೇತಿ ಬಭೂವನಮ್ರಃ ೫೮

ಸೀತಾತಮುತ್ಥಾಪ್ಯ ಜಗಾದ ವಾಕ್ಯಂ ।
ಪ್ರೀತಾಸ್ಮಿತೇ ಸೌಮ್ಯ ಚಿರಾಯು ಜೀವಂ ॥
ಬಿಡೌಜಸಾ ವಿಷ್ಣುರಿವಾಗ್ರ ಜೇವ ।
ಭ್ರಾತ್ರಾಯದಿತ್ಥಂ ಪರವಾನಸಿತ್ವಂ ॥ ೫೯

ಶ್ವಶ್ರೂ ಜನಂ ಸರ್ವಮನು ಕ್ರಮೇ ।
ವಿಜ್ಞಾಪಯ ಪ್ರಾಪಿತ ಮತ್ಪ್ರಣಾಮ ॥
ಪ್ರಜಾನಿಷೇಕಂ ಮಯಿವರ್ತಮಾ॥
ಸೂನೋರನು ಧ್ಯಾಯತ ಚೇತಸೇ ॥ ೬೦

ಪಾಪವೊಂದಿನಿಸಿರದೊಡಂ ಕುಜ–
ನಾಪವಾದಕೆ ತನ್ನನುಗಿ ಬಗೆ–
ದಾಪತಿಗೆ ಕೆಡುನುಡಿಯನಾಸತಿಯೆಂದು ಪೊಂದಿಸಳು ॥
ಪಾಪಿನಿಯು ತಾನಾಗೆ ನಿರುತಂ ।
ತಾಪಕೆಡೆಯಾಗಿ ಹೆನುತಾನೆನು–
ತಾಪತಿವ್ರತೆ ತನ್ನ ಕರ್ಮವ ಪಳಿವಳಡಿಗಡಿಗೆ ॥ ೫೭

ಬಳಿಕ ರಾಮನ ತಮ್ಮಾಕೆಯು ।
ಬಲಿದಶೋಕವ ಶಾತಿಗೊಳಿಸುತ ।
ತಿಳುಹಿಮುನಿ ವಾಲ್ಮೀಕಿಯಾಶ್ರಮ ಕೊಯ್ವ ಹಾದಿಯನು ॥
ಇಳೆಯು ಪತಿಗಾನಾಳು ದೇವಿಯೆ !
ಬಲುಕಠಿಣವೆನ್ನಾಣ್ಣ ನಾಣತಿ–।
ತಳೆದು ಸಲಿಸಿಹೆನದನು ಮುನ್ನಿಪುದೆ ನೂತ ಬಾಗಿದನು ॥ ೫೮

ಸೀತೆಯನಂ ಮೇಲ ಕೇಳಿಸಿ ।
ಮಾತನು ಸುನಿದಳಿಂದು ‘ನಿನ್ನೋಳ್’ ।
ಪೀತಳಹೆನಾಂ ವಿನಯುಶೀಲನೆ ಬಾಳು ಚಿರಕಾಲಂ ॥
ಪೀತವಾಸಂ ಗಣ್ಣನಹ ಪುರು–
ಹೂತ ನಾಣತಿಗರನು ಬಾಗುವ ।
ರೀತಿಯಲಿ ನೀನಣ್ಣದೇವನ ನೇಮ ಪಾಲಿಸಿಹೆ ॥ ೫೯

ಅತ್ತೆಯುವರೆಲ್ಲರಿಗೆ ಹಿರಿಕಿರಿ–।
ಯತ್ತ ಗಮನಿಸಿ ವಂದನೆಗಳಾಂ ।
ತೆತ್ತುದನು ನೀನರುಹಿ ಮತ್ತದನಿರದೆ ಬಿನ್ನವಸು ॥
ಪೊತ್ತಿಹೆನು ಪೊಡೆಯೊಳಗೆ ಸುತನಿಂ–।
ದಿತ್ತ ಸಂತತಿ ಬೀಜವನು ನೆರೆ–।
ಚಿತ್ತದಲಿ ಹರಸುವುದು ಮಂಗಳವದಕೆ ನೀವೆಂದು ೬೦

ವಾಚ್ಯಸ್ತ್ವಯಾ ಮದ್ವಚನಾತ್ ಸರಾ ।
ವಹ್ನೌ ವಿಶುದ್ಧಾಮಪಿ ಯತ್ಸಮಕ್ಷ ॥
ಮಾಂ ಲೋಕವಾದಶ್ರವಣಾದ ಹಾಸೀಃ ।
ಶ್ರುತಸ್ಯ ಕಿಂತತ್ ಸದೃಶಂ ಕುಲಸ್ಯ ॥ ೬೧

ಕಲ್ಯಾಣ ಬುದ್ಧೇರಥವಾ ತವಾಯಂ ।
ನ ಕಾಮಚಾರೋ ಮಯಿ ಶಂಕನೀಯಃ ॥
ಮಮೈವ ಜನ್ಮಾಂತರ ಪಾತಕಾನಾಂ ।
ವಿಪಾಕ ವಿಸ್ಫೂಜಥು ರಪ್ರಸಹ್ಯಃ ॥ ೬೨

ಉಪಸ್ಥಿತಾಂ ಪೂರ್ವಮಪಾಸ್ಯ ಲಕ್ಷ್ಮೀಂ ।
ವನಂಮಯಾ ಸಾರ್ಧಮಸಿ ಪ್ರಪನ್ನಃ ॥
ತದಾಸ್ಪದಂ ಪ್ರಾಪ್ಯ ತಯಾತಿ ರೋಷಾತ್ ।
ಸೋಢಾಸ್ಮಿನ ತ್ವದ್ಭವನೇ ವಸಂತೀ ॥ ೬೩

ನಿಶಾಚರೋಪ ಪ್ಲುತ ಭರ್ತೃಕಾಣಾ ।
ತಪಸ್ವಿನೀನಾಂ ಭವತಃ ಪ್ರಸಾದ ॥
ಭೂತ್ವಾ ಶರಣ್ಯಾ ಶರಣಾರ್ಥಮನ್ಯ ।
ಕಥಂ ಪ್ರಪತ್ಸ್ಯೇ ತ್ವಯಿ ದೀಪ್ಯ ॥ ೬೪

ಒಡೆಯಗಾವೊರೆದಂತೆ ನುಡಿಯೈ ।
ಬಿಡದೆ ನಾನಂ ದಗ್ನಿಯಲಿಶುಚಿ-।
ಪಡೆದುದನು ನೀಂ ನಿನ್ನ ಕಣ್ಣದಿಂನಲಿ ಕಂಡೊಡೆಯು ॥
ಮಡದಿಯಂ ನೀನಿಂಪು ಮಂದಿಗ-।
ಳೊಡಕುನುಡಿಗಳ ಬಗೆಯನಾಲಿಸಿ ।
ಬಿಡುವುದಾವುದೊ ಯಶವಗಳಿಸಿಹ ವಂಶಕದು ಸರಿಯೆ ॥ ೬೧

ಮಂಗಳದ ಮತಿಯುಳ್ಳ ನೀಂ ನಿ-।
ನ್ನಂಗನೆಯನಿಂತು ಗಿವುದಿದು ಮನ-।
ಸಿಂಗೆ ಬಂದೊಲು ನಡೆವನಿವನೆಂ ಬೂಹೆಗೆ ಯೆಡೆಯಿರದೈ ॥
ಹಿಂಗಳೆದ ಹುಟ್ಟುಗಳ ಲಾಂ ದುರಿ-।
ತಂಗಳೆಸಗಿಹೆ ಫಲವದಕೆ ಸಿಡಿ-
ಲಿಂಗೆ ಸಮವ ಹುದದರ ಬೇಗೆಯ ಸೈಸಲೆನಗರಿದು ॥ ೬೨

ರಕ್ಕಸರ ಬಲಿದುಪಟಳಕೆ ನೆರೆ-।
ಸಿಕ್ಕಿರಲು ನಿಜಭರ್ತೃಗಳು ಮಾರೆ-।
ಪೊಕ್ಕ ಮುನಿಸತಿಯರಿಗೆ ನಿನ್ನೊಲವಿಂದಲಾಸರೆಯಂ ॥
ಅಕ್ಕರೆಯ ಲಂದಿತ್ತು ತಾಪಸಿ-।
ಯಕ್ಕಳೋರ್ವಳ ನೆರವಿನಿಂದಾಂ ।
ಚಿಕ್ಕ ಬೇಡುವುದಂತು ಪೇಳ್ ನೀನಿಂತು ಬೆಳಗುತಿರೆ ॥ ೬೩

ಪಿಂತೆ ಬಳಿಸಂ ದಿರ್ದ ಲಕ್ಷ್ಮ ಯ-
ನಂತು ಪೇಕ್ಷಿಸಿ ನಮ್ಮೊಡನೆ ಬಹು-
ಸಂತಸದಿ ಬನದೆಡೆಹೆ ನೀಂ ನಡೆದಿರ್ದೆಯದರಿಂದೆ ॥
ಇಂತು ನೀನಿಂ ದವಳ ವಶದಲಿ ।
ನಿಂತಿರಲು ಬಲುರೋಷವನು ತಾ-
ನಾಂತು ಎನ್ನರಮನೆಯೊಳಗೆ ನನ್ನಿರವ ಸೈರಿಸಳೈ ॥ ೬೪

ಕಿಂವಾ ತವಾತ್ಯಂತ ವಿಯೋಗ ಮೋಘೇ ।
ಕುರ್ಯಾಮುಪೇಕ್ಷಾಂ ಹತ ಜೀವಿತೇ ॥
ಸ್ಯಾದ್ರಕ್ಷಣೀಯಂ ಯದಿ ಮೇನತೇ ।
ತ್ವದೀಯ ಮಂತರ್ಗತ ಮಂತರಾಂ ॥ ೬೫

ಸಾ ಹಂ ತಪಃ ಸೂರ್ಯನಿವಿಷ್ಟ ದೃಷ್ಟಿಃ ।
ಊರ್ಧ್ವಂ ಪ್ರಸೂತೇಃ ಚರಿತೇಂ ಯತಿಃ ॥
ಭೂ್ರಯೋ ಯಥಾಮೇಜನ ನಾಂತರೇಽ ।
ತ್ವಮೇವ ಭರ್ತಾನಚುವಿ ಪ್ರಯೋಗಃ ॥ ೬೬

ನೃಪಸ್ಯ ವರ್ಣಾಶ್ರಮಪಾಲನಂ ಯಾತ್ ।
ಸ ಏವ ಧರ್ಮೋ ಮನುನಾ ಪ್ರಣೀತಃ ॥
ನಿರ್ವಾಸಿತಾ ಪ್ಯೇವಮತಃ ತ್ವಯಾಹಂ ।
ತಪಸ್ವಿ ಸಾಮಾನ್ಯ ಮವೇಕ್ಷಣೀಯಂ ॥ ೬೭

ತಥೇತಿ ತಸ್ಯಾಃ ಪ್ರತಿಗೃಹ್ಯವಾಚಂ ।
ರಾಮಾನುಜೇ ದೃಷ್ಟಿ ಪಥಂ ವ್ಯತೀತೇ ॥
ಸಾ ಮುಕ್ತಕಂಠಂ ವ್ಯಸನಾತಿ ಭಾರಾತ್ ।
ಚಕ್ರಂದ ವಿಗ್ನಾ ಕುರರೀವ ಭೂಯಃ ॥ ೬೮

ಎನ್ನ ಪೊಡೆವೊಳ ವೊಕ್ಕುನಿಂತಿಹ ।
ನಿನ್ನತೇಜವ ರಕ್ಷಿಸಲು ಬೇ-।
ಕೆನ್ನುವತಿನಿರ್ಬಂಧವೆನ್ನನು ತಡೆಯದಿದ್ದಲ್ಲಿ ॥
ನಿನ್ನಚಿರವಿರಹದಲಿ ಹುಸಿಗೊಂ-।
ಡೆನ್ನದೀ ಬಗೆ ಬೆಂದ ಬಾಳ್ವಿಕೆ ।
ಯನ್ನು ಕಡೆಗೆಣಿಸುತ್ತಲಾಗಿಯತ್ತಲಿರ್ದೆ ನಾನಿಂದು ॥ ೬೫

ಹೆತ್ತಬಳಿಕಾಂ ದಿಟ್ಟವೋಲ-।
ಕೆತ್ತಿ ರವಿಬಿಂಬದೊಳು ನೆಡುತದ ।
ಚಿತ್ತದೊಳಗಿದ ಬಯಸಿ ತಪವಾಚರಿಸ ಲೆರಗುವೆನು ॥
ಮತ್ತೆ ನನಗಹ ಹುಟ್ಟು ಹುಟ್ಟಲಿ ।
ಮತ್ತೆ ನೀನೇ ಭರ್ತನೆನಗಾ-
ಗುತ್ತಲಿರಬೇಕೆಂದು ಮೇಣೇ ವಿರಹ ಬೇಡೆಂದು ॥ ೬೬

ನರಪತಿಗೆ ವರ್ಣಾಶ್ರಮಂಗಳ ।
ಪೊರೆವುದೆಂಬುದೆ ಧರ್ಮವೆಂದಾ-।
ಹಿರಿಯನಹ ಮನು ಶಾಸ್ತ್ರದಲಿ ತಿಳಿಸಿರುವ ನದರಿಂದ ॥
ನರಪ ! ನೀನಿಂದೆನ್ನನೀಪರಿ ।
ಹೊರಗೆ ದೂಡಿರ್ದೊಡೆಯು ತಪವಾ-।
ಚರಿಪರಿಗೆ ಸಮಳೆನುತ ಭಾವಿಸಿ ಪೊರೆಯಲಿಹುದೆನ್ನಂ ॥ ೬೭

ಅಂತೆಯೋ ಸೈ ಯೆನುತೆ ರಾಮನ ।
ಸಿಂತೆ ಬಿಂದವ ನತ್ತಿಗೆಯ ಮಾ-।
ತಂತಳೆದು ಕಣ್ಮರೆ ಗೊಳಲು ಹೊರೆ ಗೊಂಡ ಸಂಕಟಕೆ ॥
ಅಂತವನು ನೆರೆಕಾಣದೆಯೆ ಬಾ-।
ಯಂತೆರೆದು ತಾನೊರಲಿದಳು ಸೀ-।
ಮಂತಿನಿಯು ಭಯಗೊಂಡು ಚೀರುವ ಹಕ್ಕಿ ಕುರದಿವೊಲು ॥ ೬೮

ನೃತ್ಯಂಮಯೂರಾಃ ಕುಸುಮಾನಿವೃಕ್ಷಾ ।
ದರ್ಭಾನು ಪಾತ್ತಾನ್ವಿಜಹುಃ ಹರಿಣ್ಯಃ ॥
ತಸ್ಯಾಃ ಪ್ರಸನ್ನೇ ಸಮದುಃಖ ಭಾವಂ ।
ಅತ್ಯಂತಮಾ ಸೀತ್ ರುದಿಂತಮನೇಽಪಿ ॥ ೬೯

ತಾಮಭ್ಯಗಚ್ಛತ್ ರುದಿತಾನು ಸಾರೀ ।
ಕವಿಃ ಕುಶೇಧ್ಮಾಹರಣಾಯ ಯಾತಃ ॥
ನಿಷಾದ ವಿದ್ಧಾಂಡಜ ದರ್ಶನೋತ್ಥಃ ।
ಶ್ಲೋಕತ್ವ ಮಾಪದ್ಯತ ಯಸ್ಯ ಶೋಕಃ ॥ ೭೦

ತಮಶ್ರು ನೇತ್ರಾವರಣಂ ಪ್ರಮುಜ್ಯ ।
ಸೀತಾ ವಿಲಾಪಾತ್ ವಿರತಾವ ವನ್ದೇ ॥
ತಸ್ಯೈಮುನಿಃ ದೋಹದ ಲಿಂಗದರ್ಶೀ ।
ದಾಶ್ವಾನ್ ಸುಪುತ್ರಾ ಶಿಷ ಮಿತ್ಯುವಾಚ ॥ ೭೧

ಜಾನೇ ವಿಸೃಷ್ಟಾಂ ಪ್ರಣಿಧಾನತಃ ತ್ವಾಂ ।
ಮಿಥ್ಯಾಪವಾದ ಕ್ಷುಭಿತೇನ ಭರ್ತ್ರಾ ॥
ತನ್ಮಾವ್ಯಥಿಷ್ಠಾ ವಿಷಯಾಂತರಸ್ಥಂ ।
ಪ್ರಾಪ್ತಾಸಿ ವೈದೇಹಿ ! ಪಿತುರ್ನಿಕೇತಂ ॥ ೭೨

ಸೋಗೆಗಳು ಕುಣಿತವನು ತೊರೆದವು ।
ಹೂಗಳನು ಸುರಿಸಿದುವು ಮರಗಳು ।
ನೀಗಿದವು ಪೆಣ್ಣೆರಳೆಗಳು ಮೆಲ್ಲುತಿಹ ಕುಶಗಳನು ॥
ಹೀಗೆ ದೇವಿಯು ದುಃಖ ಭಾವದ ।
ಭಾಗ ಸುಮತೆಯು ಕೊಂಡವನದೊಳ ।
ಭಾಗದಲ್ಲಿಯು ಮಂದು ರೋದನ ತುಂಬಿತುಳುಕಿದುದು ॥ ೧೯

ಅಳುವ ದನಿ ದೆಸೆವಿಡಿಯುತಾವನ ।
ದೊಳಗೆ ಕುಶಸಮಿತುಗಳ ನಾರಿಸಿ ।
ಕೊಳಲು ಕವಿ ವಾಲ್ಮೀಕಿ ಮುನಿವರ ಬಂದನವಳೆಡೆಗೆ ॥
ಹೊಲಸು ಬೇಡಂ ಕ್ರೌಂಚ ಹಕ್ಕಿಗೆ ।
ಕೊಲೆಯು ತಂದುದ ಕಾಣುತಾನಂ-।
ಗಳಲನಿತ್ತು ಹುದದುವೆ ಪದ್ಯದ ಚೆಂದರಾಯ್ತವಗೆ ॥ ೨೦

ಕಂಡು ಮುನಿಯಂ ದಿಟ್ಟಿಯನು ಮರೆ ।
ಗೊಂಡ ಕಂಬನಿ ತೊಡೆದು ಸೀತೆಯು ।
ಮುಂದೆ ಯುವನಡಗಿಟ್ಟಳುವಂ ನಿಲ್ಲಿಸಿದ ಬಳಿಕ ॥
ಕಂಡು ಗಬ್ಬದ ಕುರುಹನುತ್ತಮ ।
ಗಂಡು ಮಕ್ಕಳ ಪಡೆವ ಭಾಗ್ಯವ ನವ ।
ಕೊಂಡು ಬಾಳುವ ಹರಕೆಯಿತ್ತವನವಳಿಗಿಂತೆಂದ ॥ ೨೧

ಮಂದಿಯಾಡಿದ ಹುಸಿಯನಿಂದೆಗೆ ।
ಬೆಂದು ಮನದಲಿ ಪತಿಯು ನಿನ್ನ-।
ನ್ನಂದು ತೊರೆದಿಹನೆಂದು ತಿಳಿದಿಹೆ ಯೋಗ ಬಲದಿಂದೆ॥
ಪೊಂದದಿರು ನೀವೆಥೆಯ ನದರಿಂ ।
ಬಂದಿರುವೆಯು ಬೇರೆಡೆಯೊಳಿಹ ।
ತಂದೆಯಾಲಯಕೆಂದು ಬಗೆಯೌ ಮಗಳೆ ಜಾನಕಿ ! ನೀಲಂ ॥ ೨೨

ಉತ್ಖಾತಲೋಕತ್ರಯಕಂಟಕೇಽಪಿ ।
ಸತ್ಯಪ್ರತಿಜ್ಞೇಽಪ್ಯವಿಕತ್ಥನೇಽಪಿ ॥
ತ್ವಾಂ ಪ್ರತ್ಯಕಸ್ಮಾತ್ ಕಲುಷ ಪ್ರವೃತ್ತೆ ।
ಅಸ್ತ್ಯೇವ ಮನ್ಯುಃ ಭರತಾಗ್ರಜೇ ಮೇ ॥ ೭೩

ತವೋರುಕೀರ್ತಿಃ ಶ್ವಶುರಃ ಸಖಾ ಮೇ ।
ಸ ತ್ವಾಂ ಭವೋಚ್ಛೇದಕರಃ ಪಿತಾ ತೇ ॥
ಧುರಿ ಸ್ಥಿತಾ ತ್ವಂ ಪತಿದೇವತಾ ನಾಂ ।
ಕಿಂ ತತ್ ನ ಯೇನಾಸಿ ಮಮಾನು ಕಂಪ್ಯಾ ॥ ೭೪

ತಪಸ್ವಿ ಸಂಸರ್ಗ ವಿನೀತಸತ್ವೇ ।
ತಪೋವನೇ ವೀತಭಯಾವಸಾಸ್ಮಿನ್ ॥
ಇತೋ ಭವಿಷ್ಯತ್ಯನಘಪ್ರಸೂತೇ ।
ಅಪತ್ಯ ಸಂಸ್ಕಾರಮಯೋವಿಧಿಸ್ತೇ ॥ ೭೫

ಅಶೂನ್ಯತೀರಾಂ ಮುನಿಸನ್ನಿವೇಶೈಃ ।
ತಮೋಪಹಂತ್ರೀಂ ತಮಸಾಂ ವಗಾಹ್ಯ ॥
ತತ್ಸೈಕತೋತ್ಸಂಗಬಲಿಕ್ರಿಯಾಭಿಃ
ಸಂಪತ್ಸ್ಯತೇ ತೇ ಮನಸಃ ಪ್ರಸಾದಃ ॥ ೭೬

ಮೂರು ಲೋಕಕೆ ಮುಳ್ಳೊಲಿರ್ದರ ।
ಬೇರನವ ಕಿತ್ತೊಗೆದೊಡಂ ಮನ-।
ಸಾರೆ ಸತ್ಯವ ಕಾಯೊಡಂ ನಿಜಶಂಸೆ ಯುಗಿದೊಡೆಯು ನೀತಿಯು ॥
ಓ ರಮಣಿ ನಿನ್ನೊಳವ ನೀತಿಯೂ ।
ಮೀರಿ ನಡೆದಿಹ ಬರಿದೆಯುದರಿಂ-।
ಹೇರಿಹೆನು ನಿಜ ಭರತನಣ್ಣವಲೆನ್ನ ಸಿಡಿಮುನಿಸಂ ॥ ೭೩

ನಿನ್ನ ಮಾವನು ಯಶವ ಬೆಳೆಸಿರ ।
ಲೆನ್ನಸಖನಹ, ನಿನ್ನ ತಾತನು ।
ಮನ್ನೆಯರ್ಗಿಹ ಭವದ ತೊಡಕನು ಬಿಡಿಸಲತಿಜಾಣ ॥
ಇನ್ನು ಹದಿಬದೆ ಹೆಂಗಳಿದಿರಲಿ ।
ಸನ್ನುತಳು ನೀನಾಗಿರ್ಪೆಯುದರಿಂ-।
ದೆನ್ನಮನದನು ಕಂಪವನು ನೀಂ ಪೊಂದದೆಂತಿರುವೆ ? ೭೪

ಮುನಿಗಳೂರು ಸಹವಾಸದಿಂ ಬಹು ।
ವಿನಯುಗಳಿಸಿಹ ಮಿಂಕಗಳಿರೆ ನೀಂ ।
ಮನದೊಳಂಜಿಕೆ ಯುಳಿಸುತಿಲ್ಲಿಯೆ ಸುಖದಿ ನೆಲೆಗೊಳೌ ॥
ನಿನಗೆ ಸುಖದಿಂ ಹೆರಿಗೆಯುಹುದೀ-।
ಮುನಿ ಬನದೊಳಗೆ ಮೋಣಪತ್ಯಕೆ ।
ಜನನ ಸಂಸ್ಕಾರಾದಿ ವಿಧಿ ಕರ್ಮಗಳು ನಡೆಯುವುವು ॥ ೭೫

ತಡಿಗಳೆಡೆಯೊಳು ಮುನಿಗಳುಟಜಗ ।
ಳೆಡೆ ಬಿಡದೆ ತುಂಬಿರುವ, ಪಾಪವ-।
ನೊಡನೆ ದೂಡುವ, ತಮಸೆಯುರು ತೀರ್ಥದಲಿ ಮಿಂದವದರ ॥
ಒಡಲ ಮಳಲಿನ ತೊಡೆಯೊಡೆಯೊಳಗೆ ।
ಬಿಡದೆ ಬಲಿಕರ್ಮಗಳ ವಿಧಿಯುನು ।
ನಡೆಸುತಿರೆ ನೀಂ ನಿನ್ನ ಮನಕದು ಶಾಂತಿಯುನು ತಹುದೌ ॥ ೭೬

ಪುಷ್ಪಂ ಫಲಂ ಚಾರ್ತವ ಮಾಹರಂತ್ಯಃ ।
ಬೀಜಂಚ ಬಾಲೇಯ ಮಕೃಷ್ಟರೋಹಿ ॥
ವಿಸೋದಯಿಷ್ಯಂತಿ ನವಾಭಿಷಂಗಾಂ ।
ಉದಾರವಾಚೋ ಮುನಿಕನ್ಯಕಾಃ ತ್ವಾಂ ॥ ೭೭

ಪಯೋಘಟೈಃ ರಾಶ್ರಮ ಬಾಲವೃಕ್ಷಾನ್ ।
ಸಂವರ್ಧಯಂತೀ ಸ್ವಬಲಾನು ರೂಪೈಃ ॥
ಅಸಂಶಯಂ ಪ್ರಾಕ್ ತನಯೋಪ ಪತ್ತೇಃ ।
ಸ್ತನಂಧಯಪ್ರೀತಿ ಮವಾಪ್ಸ್ಯಸಿತ್ವಂ ॥ ೭೮

ಅನುಗ್ರಹ ಪ್ರತ್ಯಭಿನಂದಿನೀಂ ತಾಂ ।
ವಾಲ್ಮೀಕಿರಾದಾಯ ದಯಾರ್ದ್ರ ಚೇತಾಃ ।
ಸಾಯಂ ಮೃಗಾಧ್ಯಾಸಿತ ವೇದಿಪಾರ್ಶ್ವಂ ।
ಸ್ವಮಾಶ್ರಮಂ ಶಾಂತಮೃಗಂ ನಿನಾಯ ॥ ೭೯

ತಾಮರ್ಪಯಾಮಾಸ ಚ ಶೋಕದೀನಾ ।
ತದಾಗಮಪ್ರೀತಿಷು ತಾಪಸೀಷು ॥
ನಿರ್ವಿಷ್ಟಸಾರಾಂ ಪಿತೃಭಿಃ ಹಿಮಾಂಶೋಃ ।
ಅಂತ್ಯಾಂಕಳಾಂ ದರ್ಶ ಇವೌಷಧೀಷು ॥ ೮೦

ತಿಳಿಯ ಋತುಋತುಗಳಲಿ ದೊರಕುವ |
ಹಲವು ಹೂ ಹಣ್ಣುಗಳನುಂಮೇ-|
ಣಾಳದೆ ಬೆಳೆದಿಹ ಬಲಿಗೆ ಸಲ್ಲುವ ಹುಲ್ಲ ಬೀಜವನುಂ ||
ಒಲಿದು ತರುತಲಿ, ನಲುಮೆ ನುಡಿಗಳ-|
ನುಲಿಯುತಲಿ ಮುನಿಕನ್ನೆಯರು ಪೊರ-|
ತಳಂ ಬೇಗೆಯ ನಳಸಿ ರಂತೈಸುವರು ನಿನ್ನನ್ನು || ೭೭

ಎತ್ತಲಿಕೆ ತನಗಳವಡುವ ಕುಚ-|
ವೃತ್ತಿಯನು ಬೇಗುತಿಹ ಕೊಡಗಳ |
ಪೊತ್ತು ನೀನಾಶ್ರಮದ ಕಿರುಗಿಡಗಳಿಗೆ ನೀರ ನೆರೆ-||
ಯುತ್ತ ಬೆಳೆಸುತ್ತಿರಲು ಸಿಸುಗಳ |
ಪೆತ್ತಪಕೆ ಮೊಲೆಯುಣಿಪ ಸುಖವನು |
ಮೊತ್ತ ಮೊದಲೇ ಪಡೆವೆಯೌ ನೀ ನಿದುವೆ ನಿಶ್ಚಯವು || ೭೮

ಕರುಣೆರಸದೊಳು ನೆನೆದ ಮನವೊಂ-|
ದಿರುವ ಮುನಿವಾಲ್ಮೀಕಿ ತನಗುಪ-|
ಕರಿಸಲಿಂತದಕಾಗಿ ನಿಜಸಂತಸವ ನವ ಗೊರೆಯೆ ||
ತರಳೆಯನು ತಾ ಶಾಂತಮೃಗದಿಂ |
ಮರೆವ ಸಂಜೆಯ ವೇದಿಯೆಡೆಗಿರು |
ವೆರಳೆಗಳ ಮೊಂದಿರುವ ತನ್ನಾಶ್ರಮಕೆ ಕೊಂಡೊಯ್ದ || ೭೯

ಶೋಕದಿಂ ನವೆದಂಗನೆಯ ವಾ-|
ಲ್ಮೀಕಿ ಮುನಿಯತ್ಯಂತ ಹರ್ಷವ-|
ನಾಕೆ ಬರಲಿಕೆ ತಳೆದ ತಾಪಸಿಯರಿಗೆ ವಹಿಸಿದನು ||
ಲೋಕಿಸಲು ಪಿತೃವರ್ಗವವ್ಯ ತವ |
ನಾಕಳಾನಿಧ್ರೆಯಿಂದ ಹೀರುತ-|
ಲಾಕೊನೆ ಕಳೆಯ ನೋಷಧಿಗಳಲ್ಲಿ ದರ್ಶವಿಡುವಂತೆ || ೮೦

ತಾ ಇಂಗುದೀ ಸ್ನೇಹಕೃತ ಪ್ರದೀಪಂ ।
ಅಸ್ತೀರ್ಣ ಮೇಧ್ಯಾಜಿನ ತಲ್ಪಮಂತಃ ॥
ತಸ್ಯೈ ಸಪರ್ಯಾನು ಪದಂ ದಿನಾಂತೇ ।
ನಿವಾಸಹೇತೋರುಟಜಂ ವಿತೇರುಃ ॥ ೮೧

ತತ್ರಾಭಿಷೇಕಪ್ರಯತಾ ವಸಂತೀ ।
ಪ್ರಯುಕ್ತ ಪೂಜಾ ವಿಧಿನಾ ತಿಥಿಭ್ಯಃ ॥
ವನ್ಯೇನ ಸಾವಟ್ಕಲಿನೀ ಶರೀರಂ ।
ಪತ್ಯುಃ ಪ್ರಜಾಸಂತತಯೇ ಬಭಾಂ ॥ ೮೨

ಅಪಿಪ್ರಭುಃ ಸಾನುಶಯೋಧುನಾ ।
ಕಿಮುತ್ಸುಕಃ ಶಕ್ರಜಿತೋಽಪಿಹನಾ ॥
ಶಶಂಸ ಸೀತಾ ಪರಿದೇವನಾನ್ತಂ ।
ಅನುಷ್ಠಿತಂ ಶಾಸನ ಮಗ್ರಜಾಯ ॥ ೮೩

ಬಭೂವರಾಮಃ ಸಹಸಾಸಬಾಷ್ಪ ।
ತುಷಾರ ವರ್ಷೀವ ಸಹಸ್ಯಚಂದ್ರಃ ॥
ಕೌಲೀನ ಭೀತೇನ ಗೃಹಾನ್ನಿರಸ್ತಾ ।
ನತೇನ ವೈದೇಹಸುತಾ ಮನಸ್ತಃ ॥ ೮೪

ಅತಿಥಿ ಪೂಜೆಯು ಸಲಿಸಿದೆಂಡನೆಯು ।
ಗತಿಸೆ ದಿನವದು ನೆಲೆಸೆವ ಸತಿಯು ।
ಸತಿಗೆ ಕಲ್ಪಿಸಲಿಂಗಲಾದಿಯು ತೈಲ ದೊಳುರು ಸೊಡರಂ ॥
ಜೊತೆಗೆ ಶುಚಿಗೊಂಡ ಜನಶಯ್ಯೆಯು ।
ಜತನದಿಂದೊಳ ಗೊಂಡಿಸಿಹ ಮುನಿ ।
ಸತಿಯುರಲೆವನೆಯೊಂದ ನಾಕೆಗೆ ಸಲ್ಲಿಸಿದರಂದು ॥ ೮೧

ಸ್ನಾನಕರ್ಮಾದಿ ಶುದ್ಧಿಯೊಂದುತ ।
ಮುನಿ ಸೀ ಮಣೆಯಲ್ಲಿ ನೆಲೆಸುತ– ।
ಲಾನಿಯು ಮಾನಿಂ ತಿಥಿಗಳಿಗುಪಚಾರ ಗೈಯುತ್ತ ॥
ತಾನೆ ನಾರ್ಮಡಿಯುಟ್ಟು ಪತಿಗಿಹ ।
ಭಾನುಕುಲಸಂತತಿಯು ಬೆಳೆಸಲು ।
ಕಾನನದ ಕಂದಾದಿಗಳನುಂ ಡೊಡಲ ಹೊರೆದಿಹಳು ॥ ೮೨

ಒಡೆಯು ನೀಗಳು ಮೊಳಗೆ ದುಗುಡ– ।
ಪಡೆದಿರುವನೇನೆನುತಲುತ್ಸುಕವ ।
ಪೊಡೆದು ತಾನಂದಿಂದ್ರ ಜಿತುವಂ ಕೊಂದವನು ಕೂಡ ॥
ಒಡತಿ ಸೀತಾದೇವಿಯುಳಲಿನ ।
ಕಡೆಯುವರೆಗುಂ ಪ್ರಭುವಿನಾಜ್ಞೆಯು ।
ಬಿಡದೆ ತಾನಡೆಸಿರ್ದುದೆಲ್ಲವ ನೊದೆದನಣ್ಣನಿಗೆ ॥ ೮೩

ಹಿಮಗರೆವ ಹೇಮಂತ ತಿಂಗಳ ।
ಹಿಮಕರನ ಪರಿಯಂತೆ ರಾಮಂ ।
ರಮಣಿ ವಾರ್ತೆಯು ಕೇಳ್ದ ತಕ್ಷಣ ಕಂಬನಿಯು ಕರೆದಂ ॥
ರಮಣನವ ಜನನಿಂದೆಗಂಜುತ– ।
ಲಮುಮ ಮನೆಯಿಂದಟ್ಟಿಹನು ನಿಜ– ।
ಮಮತೆಗಿಹ ತರುಣಿಯನು ಮನದಿಂ ತಳ್ಳನವನೆಂದುಂ ॥ ೮೪

ನಿಗೃಹ್ಯ ಶೋಕಂ ಸ್ವಯಮೇವ ಧೀಮಾ ।
ವರ್ಣಾಶ್ರಮಾವೇಕ್ಷಣ ಜಾಗರೂಕಃ ॥
ಸಭ್ರಾತೃ ಸಾಧಾರಣ ರಾಜ್ಯಮೃದ್ಧಂ ।
ರಾಜ್ಯಂ ರಜೋರಿಕ್ತಮನಾಃ ಶಶಾಸ ॥ ೮೫

ತಾಮೇಕ ಭಾರ್ಯಾಂ ಪರಿವಾದಭೀರೋಃ ।
ಸಾಧ್ವೀಮಪಿ ತ್ಯಕ್ತವತೋ ನೃಪಸ್ಯ ॥
ವಕ್ಷಸ್ಯಸು ಘಟ್ಟಸುಖಂ ವಸಂತೀ ।
ರೇಜೇ ಸಪತ್ನೀರಹಿತೇವ ಲಕ್ಷ್ಮೀಃ ॥ ೮೬

ಸೀತಾಂ ಹಿತ್ವಾ ದಶಮುಖರಿಪುಃ ನೋಪಯೇಮೇ ಯದನ್ಯಾಂ ।
ತಸ್ಯಾ ಏವ ಪ್ರತಿಕೃತಿ ಸಖೋ ಯಾತ್ಕ್ರತೂ ನಾಜ ಹಾರ ॥
ವೃತ್ತಾಂತೇನ ಶ್ರವಣ ವಿಷಯಂ ಪ್ರಾಪಿಣಾ ತೇನ ಭರ್ತುಃ ।
ಸಾ ದುರ್ವಾರಕ ಕಥಮಪಿ ಪರಿತ್ಯಾಗದುಃಖಂ ವಿಷೇಹೇ ॥ ೮೭

ಜಾಣನುಂ ವರ್ಣಾಶ್ರಮಗಳನು ಸಂ-]
ಧಾನ ದೊಳಗೆಚ್ಚರನು ಮಾಗಿಹ]
ಮಾನನಿಧಿ ಮನದಿಂ ರಜೋಗುಣವ ನೆಲ್ಲವನು ದೂಡಿ ॥
ತಾನೆ ತನ್ನಯ ಶೋಕವಿಂಗಿಸಿ]
ಸಾನುರಾಗ ದಲನುಜರಿಂಗೆಸ-]
ಮಾನ ಭೋಗಕ್ಕಿರಲಿ ಕಾಳ್ದ ಸಮೃದ್ಧ ರಾಜ್ಯವನು ॥ ೯೫

ಲೋಗರ ನೃತಪವಾದ ಕಂಜಾತ-]
ಲೇಕ ಸತಿ ಮೇಣ್ ಸಾಧ್ವಿಯಾದೊಡ-]
ಮೋಕರಿಸುತವಳಂ ತೊರೆದ ನೃಪ ನೆದೆಯ ಭಾಗದಲಿ ॥
ತಾ ಕುಳಿತು ತನಗೊದಗಿದಂತಿರು]
ವೇಕ ಸುಖವನು ಸವತಿ ಸಂಗನಿ-]
ರಾಕರಿಸಿಹಳೊ ತಾನೆನಲು ನೃಪಲಕ್ಷ್ಮಿ ಬೆಳಗಿದಳು ॥ ೮೬

ರಾವಣಾರಿಯು ಸೀತೆಯಂ ತೊರೆ-]
ದಾವಳನ್ಯಳ ಕೈ ಪಿಡಿಯ ದಾ-]
ದೇವಿ ವಿಗ್ರಹ ದೊಡನೆಯೇ ಯಾಗಗಳ ನಡೆಸಿಹನೋ ॥
ಆ ವಿಷಯ ಕಿವಿಮುಟ್ಟಿ ನಿಜಪತಿ]
ದೇವನಗಲಿಕೆ ತಡೆಯಲಾಗದ]
ನೋವನಿತ್ತರು ಹೇಗೊ ಸೈಸಿದಳವಳು ಬಿಡದದನು ॥ ೮೭

ಹದಿನಾಲ್ಕನೆಯ ಸರ್ಗದಲ್ಲಿನ ವಿಷಯಸಂಗ್ರಹ

ಶ್ರೀ ರಾಮಲಕ್ಷ್ಮಣರು ಸೀತಾದೇವಿಯೊಡನೆ ಲಂಕಾಪಟ್ಟಣದಿಂದ ಪುಷ್ಪಕ ವಿಮಾನದಲ್ಲಿ ಹೊರಟು ಅಯೋಧ್ಯೆಯ ಹೊರವಲಯದಲ್ಲಿನ ಕೈತೋಟದ ಸಮೀಪದಲ್ಲಿಳಿದು ಅವರ ಬರವನ್ನೇ ಹಾರೈಸುತ್ತಿದ್ದ ಕೌಸಲ್ಯಾ ಸುಮಿತ್ರೆಯರೆಂಬ ತಮ್ಮ ಜನನಿಯರನ್ನು ಕಂಡು ಭಕ್ತಿಯಿಂದ ಅವರಿಗೆ ನಮಿಸಿದರು, ಬಹುಕಾಲ ಅಗಲಿದ್ದ ತಮ್ಮ ಪುತ್ರರನ್ನು ಪ್ರೀತಿಯಿಂದ ಮೈದಡವಿದಾಗದೈತ್ಯರ ಶಸ್ತ್ರಗಳಿಂದ ಗಾಯಗೊಂಡು ಜಡ್ಡುಗಟ್ಟಿದುದನ್ನು ತಿಳಿದು ಕೋಮಲತನುವಿನಿಂದ ಕೂಡಿದ್ದ ಅವರ ಆ ಅವಸ್ಥೆಯನ್ನು ಕಂಡು ಬಹುದುಃಖಿತರಾದರು. ಇದನ್ನು ಕಂಡು ಸೀತಾದೇವಿಯು ಈ ಬಗೆಯಿಂದ ದುಃಖಕ್ಕೆ ತಾನೇ ಕಾರಣಳಾದಳೆಂದು ಹೇಳಿ ಕೊಂಡು ಅವರಿಗೆ ನಮಿಸಿದಾಗ ಅವರು 'ಮಗಳೇ ಮೇಲೇಳು ನಿನ್ನ ಪಾತಿ ವ್ರತ್ಯ ಮಹಿಮೆಯಿಂದಲೇ ನಮ್ಮ ಮಕ್ಕಳು ಜೀವಂತರಾಗಿ ಹಿಂತಿರುಗಿದರು' ಎಂಬ ತಮ್ಮ ಸತ್ಯವಚನಗಳಿಂದ ಆಕೆಯನ್ನು ಸಮಾಧಾನ ಮಾಡಿದರು. ಆ ಬಳಿಕ ಪುಷ್ಪರಥದಲ್ಲಿ ಸೊಸೆಯನ್ನು ಕೂಡಿಸಿಕೊಂಡು ಅಯೋಧ್ಯೆಯನ್ನು ಪ್ರವೇಶಿಸಿದಂದು ಅನಸೂಯಾದೇವಿಯಿಂದ ದತ್ತವಾದ ಅಂಗರಾಗದಿಂದ ಬೆಳಗು ತ್ತಿರುವ ಆ ದೇವಿಯನ್ನು ನೋಡಿ ಪುರಸ್ತ್ರೀಯರೆಲ್ಲರೂ ಆಕೆಯ ಪಾತೀವ್ರತ್ಯ ಮಹಿಮೆಗೆ ಮಣಿಯುತ್ತಿದ್ದರು.

ಇತ್ತ ಶ್ರೀರಾಮನು ತನ್ನೊಡನೆ ಬಂದ ವಿಭೀಷಣಸುಗ್ರೀವಾದಿಗಳಿಗೆ ತಕ್ಕ ಬಿಡಾರಗಳನ್ನು ಏರ್ಪಡಿಸಿ ತಾನು ಹಿಂದೆ ತೀರಿಹೋದ ತಂದೆಯ ಭಾವ ಚಿತ್ರದಿಂದ ಕೂಡಿದ ಅರಮನೆಯನ್ನು ಬಹುದುಃಖದಿಂದ ಪ್ರವೇಶಿಸಿ, ನಾಚಿಕೆ ಯಿಂದ ತಮ್ಮನ್ನು ಬರಮಾಡಿಕೊಳ್ಳಲು ಬಾರದಿದ್ದ ಕೈಕೇಯಿ ದೇವಿಯನ್ನು ಅರಸಿ ಕಂಡು 'ಅಮ್ಮಾ ತಾಯಿ! ನಿನ್ನ ಮಹಿಮೆಯಿಂದಲೇ ತನ್ನ ತಂದೆ ದಶರಥನಿಗೆ ಸ್ವರ್ಗದಲ್ಲಿ ಶಾಶ್ವತವಾದ ಸ್ಥಾನವೇರ್ಪಟ್ಟುದು, ಈ ಭಾಗ್ಯ ನಮ್ಮ

ಇತರ ಜನನಿಯರಿಗೆ ಲಭಿಸಲಿಲ್ಲ' ಎಂಬ ಸವಿನುಡಿಗಳಿಂದ ಆಕೆಯ ಲಜ್ಜೆಯನ್ನು ಕಳೆದನು. ಆ ಬಳಿಕ ವಸಿಷ್ಠರ ಆಜ್ಞೆಯಂತೆ ಶ್ರೀರಾಮನಿಗೆ ಪಟ್ಟಾಭಿಷೇಕವು ನೆರವೇರಿತು. ಅನಂತರ ಸೀತಾದೇವಿಯೇ ವಿಭೀಷಣ ಸುಗ್ರೀವಾದಿಗಳಿಗೆ ತಕ್ಕ ಆತಿಥ್ಯಾದಿಗಳನ್ನು ನಡೆಸಲು ಹದಿನೈದು ದಿವಗಳನ್ನು ಒಂದು ಕ್ಷಣದಂತೆ ಸುಖ ವಾಗಿ ಅವರು ಅಲ್ಲಿ ಕಳೆದು ಆ ಬಳಿಕ ಶ್ರೀರಾಮನ ಅನುಜ್ಞೆಯಂತೆ ತಮ್ಮ ತಮ್ಮ ಸ್ಥಾನಕ್ಕೆ ತೆರಳಿದರು. ಅದರಂತೆಯೇ ರಾಮನ ಅಪ್ಪಣೆಯ ಮೂಲಕ ತಮ್ಮನ್ನು ಹೊತ್ತುತಂದಿದ್ದ ಪುಷ್ಪಕ ವಿಮಾನವು ಮತ್ತೆ ಕುಬೇರನ ವಾಹನಕ್ಕಾಗಿ ಹೊರಟು ಹೋಯಿತು.

ಆ ಬಳಿಕ ಶ್ರೀರಾಮನು ಧರ್ಮದಿಂದ ರಾಜ್ಯವನ್ನಾಳುತ್ತ ಬಂದು ಸೀತೆ ಯೊಡನೆ ಕೆಲಕಾಲ ಸೌಖ್ಯದಿಂದಿದ್ದನು. ಸೀತೆಯು ಗರ್ಭಿಣಿಯಾದುದನ್ನು ಕಂಡು ಹಿಗ್ಗಿ, ಆಕೆಯ ಬಯಕೆಯನ್ನು ತೀರಿಸುವುದು ಧರ್ಮವೆಂದು ಬಗೆದು 'ನಿನ್ನ ಅತ್ಯಂತ ಬಯಕೆಯಾವುದು,' ಎಂದು ಕೇಳಲು ನಾಚಿಕೆಯಿಂದ 'ಮತ್ತೊಮ್ಮೆ ಗಂಗಾನದಿಯ ದಡದಲ್ಲಿ ವಾಸವಾಗಿರುವ ಆ ಋಷ್ಯಾಶ್ರಮದಲ್ಲಿನ ಮುನಿಸತಿಯರೊಡನೆ ಕೆಲಕಾಲ ಕಳೆಯಬೇಕೆಂಬುದು ನನ್ನ ಹೆಬ್ಬಯಕೆ' ಎಂದು ತಿಳಿಸಿದುದನ್ನು ಕೇಳಿ 'ಅದನ್ನು ಖಂಡಿತವಾಗಿ ಸಲ್ಲಿಸುವೆನು' ಎಂದು ಮಾತಿತ್ತು ತನ್ನ ಆಳ್ವಿಕೆಯ ವಿಷಯದಲ್ಲಿ ಪೌರರ ಅಭಿಪ್ರಾಯವನ್ನು ತಿಳಿಯುವ ಸಲುವಾಗಿ 'ಭದ್ರ' ಎಂಬ ಹೆಸರಿನ ನಂಬಿಕೆಯುಳ್ಳ ಗೂಢಚಾರನನ್ನು ಕಳುಹಿಸಿದನು. ಅವನು ತಿಳಿದು ಬಂದು 'ಮಹಾರಾಜ! ಮಹಾಕಾಮಿಯೆನಿಸಿದ ರಾವಣನ ರಾಜ ಧಾನಿಯಲ್ಲಿ ಒಂದು ವರ್ಷಕಾಲವಿದ್ದ ತನ್ನ ಹೆಂಡತಿಯನ್ನು ಮತ್ತೆ ಸ್ವೀಕರಿ ಸಿರುವ ವಿಷಯವನ್ನು ಬಿಟ್ಟು ಉಳಿದ ನಿನ್ನ ಆಳ್ವಿಕೆಯ ವಿಷಯವನ್ನು ಎಲ್ಲರೂ ಹೊಗಳುತ್ತಿದ್ದಾರೆ' ಎಂಬ ಮಾತನ್ನು ಕೇಳಿ ರಾಮನಿಗೆ ಎದೆಯೊಡೆದಂತಾಯಿತು 'ನಾನು ಪ್ರಜಾರಂಜಕನಾಗಿದ್ದರೆ ಮಾತ್ರ ಅವರಿಗೆ ರಾಜ! ಅವರನ್ನು ತೃಪ್ತಿ ಗೊಳಿಸಬೇಕಾದ್ದಲ್ಲಿ ನನ್ನ ಸತಿಯು ಪತಿವ್ರತೆಯಾಗಿರುವಳೆಂದು ತಿಳಿದಿದ್ದರೂ ಕೂಡ, ಪ್ರಜೆಗಳನ್ನು ಒಲಿಸಲು ಅವಳನ್ನು ತ್ಯಾಗಮಾಡಲೇ ಬೇಕು' ಎಂದು ನಿರ್ಧರಿಸಿ, ತಮ್ಮಂದಿರನ್ನು ಕರೆಸಿ, ತನ್ನ ನಿರ್ಧಾರಕ್ಕೆ ಅವರು ಒಪ್ಪದಿದ್ದಲ್ಲಿ

ತಾನು ಜೀವಿಸಲು ಸಾಧ್ಯವಿಲ್ಲವೆಂದು ತಿಳಿಸಿ, ತಮ್ಮ ಲಕ್ಷ್ಮಣನನ್ನು ಕರೆದು, 'ನಿಮ್ಮತ್ತಿಗೆಯು ಇನ್ನೊಮ್ಮೆ ಗಂಗೆಯ ತಡಿಯ ಆಶ್ರಮದಲ್ಲಿರಬೇಕೆಂದು ಬಯಸಿರುವಳಾಗಿ, ನೀನು ಆಕೆಯನ್ನು ಅಲ್ಲಿರುವ ವಾಲ್ಮೀಕಿಯಾಶ್ರಮದ ಬಳಿಯಲ್ಲಿರುವ ವನದಲ್ಲಿ ಬಿಟ್ಟು ಬಾ ನನ್ನ ಮಾತನ್ನು ಮೀರದಿರು' ಎಂಬ ಆಜ್ಞೆಯನ್ನು, ತನಗೆ ಇಷ್ಟವಿಲ್ಲದಿದ್ದರೂ ಶಿರಸಾವಹಿಸಿ ಸೀತಾದೇವಿಯನ್ನು ರಥವಲ್ಲಿ ಕೂಡಿಸಿಕೊಂಡುಗಂಗೆಯ ತಡಿಯನ್ನು ಸೇರಿ, ಗುಹನ ಸಹಾಯದಿಂದ ಗಂಗೆಯನ್ನು ದಾಟಿ ಅದರ ತಡಿಯಲ್ಲಿರುವ ವನಕ್ಕೆ ತೆರಳಿ ಅತ್ತಿಗೆಯನ್ನು ಕುರಿತು 'ಅಮ್ಮಾ ! ಲೋಕಾಪವಾದಕ್ಕೆ ಮಣಿದು ಶ್ರೀರಾಮನು ನಿನ್ನನ್ನು ವಾಲ್ಮೀಕಿ ಯಾಶ್ರಮದ ಬಳಿಯಲ್ಲಿರುವ ಅರಣ್ಯದಲ್ಲಿ ಬಿಟ್ಟು ಬಾ ಎಂದು ಶಾಪಿಸಲಾಗಿ ನಿನ್ನನ್ನು ಇಲ್ಲಿಗೆ ಕರೆತಂದೆ ಪಕ್ಕದಲ್ಲಿರುವುದೇ ವಾಲ್ಮೀಕಿಯಾಶ್ರಮ, ನನ್ನ ಅಪ ರಾಧವನ್ನು ಕ್ಷಮಿಸು' ಎಂದು ಆಕೆಗೆ ಮಣಿಯಲು 'ವತ್ಸ ಲಕ್ಷ್ಮಣ ! ನಿಮ್ಮಣ್ಣನ ಆಣತಿಯನ್ನು ಸಲ್ಲಿಸಿದ ನಿನ್ನಲ್ಲಿ ಯಾವ ದೋಷವೂ ಇಲ್ಲ, ನಿನಗೆ ಮಂಗಳ ವಾಗಲಿ ಅಯೋಧ್ಯೆಗೆ ಹಿಂದಿರುಗು' ಎಂದು ಆಶೀರ್ವದಿಸಿ, ನನ್ನ ಈ ವಿಜ್ಞಾಪನೆಯನ್ನು ಸಲ್ಲಿಸು. ಅದೇನೆಂದರೆ ನಮ್ಮತ್ತೆಯವರೆಲ್ಲರಿಗೂ ಕ್ರಮ ವಾಗಿ ನನ್ನ ವಂದನೆಗಳನ್ನು ಸಲ್ಲಿಸಿ ತಮ್ಮ ಪುತ್ರ ರಾಮಚಂದ್ರನ ವೀರ್ಯವು ನನ್ನ ಗರ್ಭದಲ್ಲಿ ಬೆಳೆಯುತ್ತಿದೆ. ಅದಕ್ಕೆ ಆತಂಕ ಬಾರದಂತೆ ನಿಮ್ಮ ಆಶೀರ್ವಾದ ಕವಚವನ್ನು ತೊಡಿಸಿ' ಎಂದು ಅವರನ್ನು ಬೇಡಿಕೊಂಡು ನನ್ನನ್ನು ಧರ್ಮಪತ್ನಿಯನ್ನಾಗಿ ಕೈಹಿಡಿದ ಶ್ರೀರಾಮನೆಂಬ ರಾಜನಿಗೆ ನನ್ನ ಮಾತಿನಿಂದಲೇ ಈ ಮುಂದಿನಂತೆ ತಿಳಿಸು "ಎಲೈ ಧರ್ಮೈಕಪಕ್ಷಪಾತಿಯೆನಿಸಿದ ರಾಜ ! ನಿನ್ನ ಕಣ್ಣ ಮುಂದೆಯೇ ಲಂಕೆಯಲ್ಲಿ ಅಗ್ನಿ ಮೂಲಕವಾಗಿ ನನ್ನ ಪಾತಿವ್ರತ್ಯದ ಮಹಿಮೆಯನ್ನು ತಿಳಿದಿದ್ದರೂ ಸಹ ಈಗ ಪಟ್ಟಣಿಗರ ಒಡಕುಮಾತುಗಳಿಗೆ ಬೆಲೆಕೊಟ್ಟು ಧರ್ಮಪತ್ನಿ ತ್ಯಾಗಮಾಡುದೆಂಬ ಈ ನಡೆವಳಿ ನೀನು ಹುಟ್ಟುವ ವಂಶಕ್ಕಾಗಲಿ ನಿನ್ನ ಶಾಸ್ತ್ರಜನ್ಯಜ್ಞಾನಕ್ಕಾಗಲಿ ಸರಿಯಾದುದೇ ? ಹೇಳು" ಎಂದು ತಿಳಿಸಿ ತಕ್ಷಣದಲ್ಲಿಯೇ ತನ್ನ ಭಾವವನ್ನು ಸರಿಪಡಿಸಿಕೊಂಡು ಸದಾ ಮಂಗಳ ಸ್ವಭಾವವನ್ನು ಹೊರ ತೋರಿರುವವನು ಕೈಹಿಡಿದ ಹೆಂಡತಿಯಲ್ಲಿ ಅಪಚಾರನ್ನೆಂದಿಗೂ ಮಾಡನು. ಆದರೆ ಇದಕ್ಕೆ ಕಾರಣವು ನನ್ನ ಪೂರ್ವ

ಜನ್ಮದ ಕರ್ಮಫಲವೇವಿನಾ, ನೀನು ಅದಕ್ಕೆ ಕಾರಣನಲ್ಲ, ಅಲ್ಲದೆ ಇನ್ನೊಂದು ಕಾರಣವೂ ಉಂಟು ಈ ಹಿಂದೆ ಯೌವರಾಜ್ಯ ಲಕ್ಷ್ಮಿಯು ಕೈ ಹಿಡಿಯಲು ಬಂದಾಗ ನನ್ನನ್ನು ಮೊದಲು ಕೈ ಹಿಡಿದವಳು ಈ ಸೀತೆ. ನಾನು ತಂದೆಯ ಮಾತಿನಂತೆ ಈಕೆಯೊಡನೆ ವನಕ್ಕೆ ತೆರಳುವೆನೇ ವಿನಾ ನಿನ್ನನ್ನು ನಾನೊಲ್ಲೆ ಎಂದು ಹೇಳಿ ಆಕೆಯನ್ನು ತೊರೆದುಬಿಟ್ಟೆ ಈಗ ನೀನು ಅವಳ ವಶವರ್ತಿಯಾದೊಡನೆ ಸವತಿ ಮಾತ್ಸರ್ಯದಿಂದ ಆಕೆಯೇ ನನ್ನನ್ನು ಕಾಡಿಗಟ್ಟಿದವಳು. ನಿನ್ನನ್ನು ತೊರೆದ ಬಳಿಕ ಜೀವವನ್ನು ತೊರೆಯುವುದೇ ನ್ಯಾಯವೆಂದೆಣಿಸಿದರೂ ಕೂಡ, ನನ್ನ ಗರ್ಭದಲ್ಲಿ ಬೆಳೆಯುತ್ತಿರುವ ಆತನ ವೀರ್ಯವನ್ನು ಕಾಪಾಡಬೇಕಾಗಿದೆಯಾದುದರಿಂದ ಆತ್ಮಹತ್ಯೆಕ್ಕೆ ಮನಗೊಡಲಾರೆ. ಗರ್ಭಮೋಚನೆಯಾದ ಬಳಿಕ ನಾನು ಸೂರ್ಯನಲ್ಲಿ ನೆಟ್ಟದೃಷ್ಟಿಯುಳ್ಳವಳಾಗಿ ಮುಂದಿನ ಜನ್ಮದಲ್ಲಿಯೂ ಕೂಡ ಒಡೆಯ ! ನೀನೇ ನನಗೆ ಪತಿಯಾಗಬೇಕು ಆದರೆ ಈ ವಿರಹವಿರಬಾರದು ಎಂಬ ಬಯಕೆಯಿಂದ ತಪಸ್ಸನ್ನಾಚರಿಸುವೆನು" ಎಂದು ಹೇಳಿ ಲಕ್ಷ್ಮಣನಿಗೆ ಆಶೀರ್ವದಿಸಿ ಅವನನ್ನ ಬೀಳ್ಕೊಟ್ಟಳು.

ಇತ್ತ ದಿಕ್ಕಿಲ್ಲದವಳಂತೆ ಅಳುತ್ತಿರುವ ಶಬ್ದವನ್ನು ಕೇಳಿ ಆ ಮಾರ್ಗವಾಗಿ ಪಕ್ಕದಲ್ಲಿನ ಆಶ್ರಮವಾಸಿಯಾದ ವಾಲ್ಮೀಕಿಮುನಿಯು ದರ್ಭೆಸಮಿತ್ತುಗಳನ್ನು ಅರಸಲು ಬಂದು ಅಳುತ್ತಿರುವ ಸೀತೆಯನ್ನು ಕಂಡೊಡನೆ ಕಣ್ಣೀರನ್ನು ಒರೆಸಿಕೊಂಡು ಆತನಗೆ ನಮಸ್ಕಾರ ಮಾಡಿದಳು. ತಕ್ಷಣ ಆಕೆಯು ಗರ್ಭಿಣಿಯಾಗಿರುವುದನ್ನು ಆಕೆಯ ಪೂರ್ವೋತ್ತರ ವಿಷಯಗಳನ್ನೂ ಯೋಗಬಲದಿಂದ ತಿಳಿದುಕೊಂಡು ಸತ್ಪುತ್ರರನ್ನು ಪಡೆಯುವವಳಾಗು ಎಂದು ಆಕೆಗೆ ಆಶೀರ್ವಾದಾನುಗ್ರಹವನ್ನು ತೋರಿದನು. ಅಲ್ಲದೆ ಆಕೆಯನ್ನು ಕುರಿತು, ಮಗಳೇ ಮಿಥ್ಯಾಪವಾದಕ್ಕೆ ಒಳಗಾಗಿ ನಿರಪರಾಧಿಯಾದ ನಿನ್ನನ್ನು ನಿನ್ನ ಪತಿಯು ತೊರೆದಿಹ್ನಾನೆಂಬ ವಿಷಯವನ್ನು ನಾನು ಯೋಗಬಲದಿಂದ ತಿಳಿದಿರುತ್ತೇನೆ. ಆದರೂ ನಿನ್ನ ತಂದೆಗೆ ಸಮನಾದ ನನ್ನ ಆಶ್ರಮಕ್ಕೆ ಬಂದರೆ ಇಲ್ಲಿಯೇ ಮುನಿಸುತೆಯರ ಸಹವಾಸದಲ್ಲಿದ್ದು ಸುಖ ಪ್ರಸವಳಾಗಿರುವಿ ದುಃಖಿಸಬೇಡ ನಿನ್ನ ಪತಿಯು ತ್ರಿಲೋಕಕಂಟಕನೆನಿಸಿದ್ದ ರಾವಣನನ್ನು ಕೊಂದು

ಶಿಷ್ಟಪರಿಪಾಲನೆಯನ್ನು ಮಾಡಿದ್ದರೂ ಪುರುಷೋತ್ತಮನ್ಲಿನ ಶ್ಲಾಘ್ಯವಾದ ಗುಣಗಳನ್ನು ತಿಳಿದಿದ್ದರೂ ಕೂಡ ನಿನ್ನ ವಿಷಯದಲ್ಲಿ ನಿಷ್ಕಾರಣವಾಗಿ ಈ ಅಪಚಾರವನ್ನೆಸಗಿದುದರಿಂದ ಆತನಲ್ಲಿ ನನ್ನ ಕೋಪವಿದೆ ಎಂದು ಭಾವಿಸಿ ನನ್ನಾಶ್ರಮಕ್ಕೆ ಬಂದು ಸುಖದಿಂದಿರು ಮಗಳೆ" ಎಂದು ಹೇಳಿದ ಮುನಿಯ ವಾಕ್ಯಗಳನ್ನು ಕೇಳಿ ಆ ಮುನಿಯ ಆಶ್ರಮಕ್ಕೆ ತೆರಳಿ, ಅಲ್ಲಿದ್ದ ಮುನಿಸುತೆಯರ ಕೈಂಕರ್ಯವನ್ನು ಸ್ವೀಕರಿಸುತ್ತ ತನ್ನ ಗರ್ಭಮೋಚನೆಯ ಕಾಲವನ್ನು ನಿರೀಕ್ಷಿಸುತ್ತಿದ್ದಳು, ಅಲ್ಲದೆ ಆಶ್ರಮದಲ್ಲಿರುವಂದು ಯಜ್ಞಯಾಗಾದಿಗಳನ್ನು 'ಕನಕಜಾನಕಿ ಸಹಿತವಾಗಿ ನೆರವೇರಿಸಿದ ವಿಷಯವನ್ನು ತಿಳಿದವಳಾಗಿ ಹೇಗೋ ಪತಿವಿರಹ ದುಃಖವನ್ನು ಶಾಂತಿಗೊಳಿಸಿ ಕಾಲ ಕಳೆಯುತ್ತಿದ್ದಳು. ಲಕ್ಷ್ಮಣನು ಹಿಂದಿರುಗಿ ತನ್ನಣ್ಣನಿಗೆ ತಾನು ನೆರವೇರಿಸಿದ ಕಾರ್ಯವನ್ನು ತಿಳಿಸಿದ ಬಳಿಕ ಆಕೆಯ ಮಾತುಗಳನ್ನು ರಾಜನಿಗೆ ತಿಳಿಯ ಪಡಿಸಿದನು. ಇದನ್ನು ಕೇಳಿ ಶ್ರೀರಾಮನಿಗೆ ಕಣ್ಣೀನಲ್ಲಿ ನೀರು ಬಂದಿತು. ಏಕೆಂದರೆ ಪೌರರ ಅಪವಾದದಿಂದ ತನ್ನ ಹೆಂಡತಿಯನ್ನು ತೊರೆದನೇ ವಿನ ಮನಸ್ಸಿನಿಂದ ಆಕೆಯ ಭಾವಚಿತ್ರವನ್ನು ತೊರೆದಿರಲಿಲ್ಲ. ಬಳಿಕ ದುಃಖವನ್ನು ಹೇಗೋ ಸಹಿಸಿ ರಾಜ್ಯವನ್ನಾಳ ತೊಡಗಿ ಯಜ್ಞಗಳನ್ನು ನಡೆಸಿದನು.

ಹದಿನೈದನೆಯ ಸರ್ಗದಲ್ಲಿನ ಕಥಾ ಸಾರಾಂಶವು ಈ ಕೆಳಗೆ ಕಂಡಂತಿದೆ. ಯಮುನಾ ತೀರ ವಾಸಿಗಳಾದ ಮುನಿಗಳು ಶ್ರೀರಾಮನ ಬಳಿಗೆ ಬಂದು, ತಾವು ಆಚರಿಸುವಂತಹ ಯಜ್ಞಗಳಿಗೆ ಕಂಟಕ ಪ್ರಾಯವಾಗಿರುವ ರಾವಣನ ತಂಗಿಯಾದ ಕುಂಭೀನಸನೆಂಬ ರಕ್ಕಸಿಯ ಮಗ ಮಧುಪಘ್ನನೆಂಬ ನಗರ ಪಾಲಕನು ಆದ ಲವಣಾಸುರನನ್ನು ಕೊಂದು ಯಜ್ಞ ರಕ್ಷಣೆಯನ್ನು ಮಾಡಬೇಕೆಂದು ಪ್ರಾರ್ಥಿಸುದುದನ್ನು ಕೇಳಿ ಶ್ರೀರಾಮನು ಆ ಕಾರ್ಯಕ್ಕೆ ಕಡೆಯ ತಮ್ಮನಾದ ಶತ್ರುಘ್ನನಿಗೆ ಅಪ್ಪಣೆ ಕೊಟ್ಟನು. ಆಗ ಮುನಿಗಳು ಶತ್ರುಘ್ನನನ್ನು ಕುರಿತು 'ಆ ರಕ್ಕಸನು ತನ್ನ ಶೂಲವನ್ನು ಹಿಡಿದುವೇ ಆದರೆ ಅಜೇಯನಾದುದರಿಂದ ಶೂಲರಹಿತನಾಗಿರುವಾಗ ಅವನನ್ನು ಕೊಲ್ಲಬೇಕು' ಎಂದು ತಿಳಿಸಿದರು. ಹಾಗೆಯೇ ಆಗಲೆಂದು ಸೈನ್ಯ ಸಮೇತನಾಗಿ ಅಲ್ಲಿಂದ ಹೊರಟ ಶತ್ರುಘ್ನನು ಹಾದಿಯಲ್ಲಿನ ವಾಲ್ಮೀಕಿ ಮುನಿಗಳ ಆಶ್ರಮವನ್ನು ಹೊಕ್ಕು ಆತನಿಂದ ಆತಿಥ್ಯ

ವನ್ನು ಸ್ವೀಕರಿಸಿದನು ಶತ್ರುಘ್ನನು ಆ ಆಶ್ರಮವನ್ನು ಹೊಕ್ಕ ರಾತ್ರಿಯಲ್ಲಿಯೇ ಅಲ್ಲಿದ್ದ ಸೀತಾದೇವಿಯು ಅವಳಿ ಮಕ್ಕಳಿಗೆ ಜನ್ಮವಿತ್ತಳು. ಮುನಿಯು ದರ್ಭೆಯನ್ನು ಮಂತ್ರಾಗ್ನಿಯಲ್ಲಿನೆನೆಸಿ ಅದರಿಂದ ಮಕ್ಕಳನ್ನು ಪ್ರೋಕ್ಷಿಸಿ ಕುಶ ಲವರೆಂಬ ಅನ್ವರ್ಥನಾಮವನ್ನು ಅವರಿಗೆ ಕರುಣಿಸಿದನು.

ಶತ್ರುಘ್ನನು ಅಲ್ಲಿಂದ ಹೊರಟು ಲವಣಾಸುರನ ಪಟ್ಟಣಕ್ಕೆ ಧಾಳಿ ಯಿಟ್ಟಾಗ ಅವನು ತನ್ನ ಶೂಲವನ್ನು ಅರಮನೆಯಲ್ಲಿಯೇ ಇಟ್ಟು ಬೇಟೆಗಾಗಿ ಹೊರ ಹೊರಟಿದ್ದನು. ಅವನು ಹಿಂದಿರುಗಿದಾಗ ಶತ್ರುಘ್ನನ ಸೈನ್ಯಗಳು ಧಾಳಿ ಯಿಟ್ಟಿರುವುದನ್ನು ಕಂಡು ಬೆಟ್ಟ ಮರ ಇವುಗಳನ್ನು ಕಿತ್ತು ಶತ್ರುಗಳ ಮೇಲೆ ಪ್ರಯೋಗಿಸಲು ಅವೆಲ್ಲವನ್ನೂ ಶತ್ರುಘ್ನನು ಹುಡಿಹುಡಿಮಾಡಿ ಅವನೊಡನೆ ಸೆಣೆಸಿ ಕಡೆಗೆ ಅವನನ್ನು ಕೊಂದು ಅವನ ಪಟ್ಟಣವನ್ನು ಆಕ್ರಮಿಸಿ ಆ ವಿಷಯ ವನ್ನು ಅಣ್ಣನಿಗೆ ತಿಳಿಸುವುದಕ್ಕಾಗಿ ಅಯೋಧ್ಯೆಗೆ ಹಿಂದಿರುಗಿ ನಡೆದ ವೃತ್ತಾಂತ ವೆಲ್ಲವನ್ನೂ ತಿಳಿಸಿದನೇ ವಿನಾ ಸೀತಾದೇವಿಯು ಮಕ್ಕಳನ್ನು ಪಡೆದಿದ್ದ ವಿಷಯ ವನ್ನು ಮಾತ್ರ ತಿಳಿಸಲಿಲ್ಲ.

ಇತ್ತ ವಾಲ್ಮೀಕಿಮುನಿಯು ಮಕ್ಕಳನ್ನು ಪ್ರೀತಿಯಿಂದ ಬೆಳೆಸಿ ಅವರಿಗೆ ತನ್ನಿಂದ ರಚಿತವಾದ ರಾಮಾಯಣವನ್ನು ಆ ಮೂಲಾಗ್ರವಾಗಿ ಗಾನ ರೂಪ ದಲ್ಲಿ ಕಲಿಸಿದನು. ಈ ಮಧ್ಯೆ ಶ್ರೀರಾಮನು ಕನಕ ಜಾನಕಿಯನ್ನೆಡೆಗೊಂಡು ಯಜ್ಞವನ್ನಾಚರಿಸುವುದಕ್ಕೆ ತೊಡಗಿದನು. ಬಾಲಕರಾದ ಕುಶಲವರಾದರೋ ಶ್ರೀರಾಮನ ಯಾಗ ಶಾಲೆಯನ್ನು ಹೊಕ್ಕು ಅಲ್ಲಿ ತಾವು ಕಲಿತಿದ್ದ ರಾಮಾಯಣ ಕಥೆಯನ್ನು ಹಾಡುವುದಕ್ಕೆ ತೊಡಗಿದರು. ಅವರ ರೂಪ ಮತ್ತು ಗಾನ ಇ ಗಳು ಶ್ರೀ ರಾಮನನ್ನು ಆಕರ್ಷಿಸಿ ಅವರಿಗೆ ಈ ಚಾತುರ್ಯವು ವಾಲ್ಮೀಕಿ ಮು ಗಳಿಂದ ಲಭಿಸಿತು ಎಂಬದನ್ನು ಕೇಳಿ ತನ್ನ ಮಕ್ಕಳೆ ಅವರು ಎಂದು ನಿರ್ಧರಿ ವಾಲ್ಮೀಕಿಮುನಿಗಳನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡನು ಅಲ್ಲದೆ ಮುನಿಯನ್ನು ಕುರಿತು 'ಮುನಿವರರೆ ! ತನ್ನ ಪತ್ನಿ ಮಹಾ ಪತಿವ್ರತೆ ಯೆಂ ದನ್ನು ಅಗ್ನಿ ಪರೀಕ್ಷೆಯ ಮೂಲಕ ತನ್ನ ಕಣ್ಣೆದುರಿಗೆ ತೋರಿಸಿದ್ದರೂ ಕೂ ಅಯೋಧ್ಯೆಯ ಜನಗಳು ಆಕೆಯ ವಿಷಯದಲ್ಲಿ ಶಂಕೆಯನ್ನು ಆರೋಪಿ

ದುದರಿಂದ ಪ್ರಜಾರಂಜನೆಯೇ ರಾಜನ ಮುಖ್ಯ ಕರ್ತವ್ಯನೆಂದೆಣಿಸಿ ನಿರಪರಾಧಿನಿಯಾದ ಆಕೆಯನ್ನು ತೊರೆಯಬೇಕಾಗಿ ಬಂದಿತು. ಈಗಲೂ ಆಕೆಯು ಇಲ್ಲಿಗೆ ಬಂದು ಅಯೋಧ್ಯೆಯ ಪುರ ಜನರಿಗೆ ಒಪ್ಪುವಂತೆ ತನ್ನ ಪಾತಿವ್ರತ್ಯದ ಮಹಿಮೆಯನ್ನು ಪ್ರದರ್ಶಿಸಿದ್ದಾದರೆ ತಮ್ಮ ಆಜ್ಞೆಯಂತೆ ಆ ಪತ್ನಿಯನ್ನೂ ಈ ಪುತ್ರರನ್ನು ಸ್ವೀಕರಿಸಲು ಸಿದ್ಧ' ಎಂದು ತಿಳಿಸಿದನು. ಇದನ್ನು ಕೇಳಿ ಮುನಿಯು ತನ್ನ ಶಿಷ್ಯರನ್ನು ಆಶ್ರಮಕ್ಕೆ ಕಳುಹಿಸಿ ಸೀತಾದೇವಿಯನ್ನು ಅಲ್ಲಿಗೆ ಬರಮಾಡಿಕೊಂಡು, 'ಮಗಳೇ ! ಈ ಪುರ ಜನಗಳು ಮೆಚ್ಚುವ ಬಗೆಯಲ್ಲಿ ನಿನ್ನ ಪಾತಿವ್ರತ್ಯವನ್ನು ಪ್ರದರ್ಶಿಸು' ಎಂದು ಹೇಳಲು ಆಕೆಯು 'ನಾನು ತ್ರಿಕರಣ ಶುದ್ಧಿಯಿಂದ ನನ್ನ ವಲ್ಲಭನನ್ನೇ ದೇವತೆಯೆಂದು ಭಾವಿಸಿನ್ನುದು ನಿಜವಾದಲ್ಲಿ ನನ್ನನ್ನು ಪಡೆದ ಭೂದೇವಿಯು ತನ್ನಲ್ಲಡಗಿಸಿಕೊಳ್ಳಲಿ' ಎಂದು ಪ್ರತಿಜ್ಞೆ ಮಾಡಿದ ತಕ್ಷಣವೇ ಭೂದೇವಿಯು ಇಬ್ಭಾಗವಾಗಿ ಒಡೆದು ಅದರ ಮೂಲಕ ಸಿಂಹಾಸನದ ಮೇಲೇರಿ ದೇವಿಯ ರೂಪವನ್ನು ತಳೆದು, ತನ್ನ ಪುತ್ರಿ ಸೀತಾದೇವಿಯನ್ನು ತೊಡೆಗೇರಿಸಿ, ಆ ರಂಧ್ರದ ಮೂಲಕವೇ ಕೆಳಗಿಳಿದಳು. ಸೀತಾದೇವಿಯನ್ನು ಮತ್ತೆ ಪಡೆಯುವ ಆತುರದಿಂದಿದ್ದ ಶ್ರೀರಾಮನು ಈ ದೃಶ್ಯವನ್ನು ನೋಡಿ ಕೋಪಗೊಂಡು ಭೂದೇವಿಯ ಮೇಲೆ ಬಾಣ ಪ್ರಯೋಗ ಮಾಡಲು ನಿಶ್ಚೈಸಿರುವುದದನ್ನು ಕಂಡು ಬ್ರಹ್ಮದೇವನು ಪ್ರತ್ಯಕ್ಷನಾಗಿ ರಾಮ ! ನಿನ್ನಿಂದ ದುಷ್ಟಶಿಕ್ಷಣ ಶಿಷ್ಟರಕ್ಷಣೆ, ಮತ್ತು ಧರ್ಮ ಸಂಸ್ಥಾಪನೆ ಈ ಕಾರ್ಯಗಳೆಲ್ಲವೂ ನೆರವೇರಿದವು. ಸೀತಾದೇವಿಯು ಲಕ್ಷ್ಮಿಸ್ವರೂಪಿಣಿಯಾಗಿ ತನ್ನ ಸ್ಥಾನವನ್ನು ಪಡೆದಿರುತ್ತಾಳೆ ನಿನ್ನಾಗಮನವನ್ನು ವೈಕುಂಠವು ನಿರೀಕ್ಷಿಸುತ್ತಿದೆ. ಈ ಕಾರಣ ಭೂದೇವಿಯ ಮೇಲಿನ ಕೋಪವನ್ನು ತ್ಯಜಿಸಿ ಶಾಂತನಾಗು' ಎಂದು ಹೇಳಿದುದನ್ನು ಕೇಳಿ ಶಾಂತನಾಗಿ ತನ್ನ ಪತ್ನಿಯಲ್ಲಿನ ಪ್ರೇಮವನ್ನು ಕುಶಲವರೆಂಬ ತನ್ನ ಮಕ್ಕಳಲ್ಲಿ ನೆಲೆಸುವಂತೆ ಮಾಡಿದನು.

ಆ ಬಳಿಕ ಭರತನ ಸೋದರಮಾವನಾದ ಯುಧಾಜಿತ್ತುವಿನ ಇಚ್ಛೆಯಂತೆ ಭರತನನ್ನು ಶ್ರೀರಾಮನು ಅಲ್ಲಿಗೆ ಕಳುಹಿಸಲು, ಯುಧಾಜಿತುವಿನ ಮೇಲೆ ಧಾಳಿಯಿಡಲು ಬಂದಿದ್ದ ಗಂಧರ್ವರನ್ನು ಗೆದ್ದು ತನಗೆ ಜನಿಸಿದ ತಕ್ಷ ಮತ್ತು

ಪುಷ್ಕಲ ಎಂಬ ಅವಳಿ ಮಕ್ಕಳನ್ನು ಅದೇ ಹೆಸರಿನಿಂದ ಪ್ರಸಿದ್ಧವಾದ ರಾಜ್ಯಗಳಲ್ಲಿ ಸ್ಥಾಪಿಸಿ ತಾನು ಅಣ್ಣನೆಡೆಗೆ ಹಿಂದಿರುಗಿದನು. ಇದರಂತೆಯೇ ಲಕ್ಷ್ಮಣನಿಗೆ ಜನಿಸಿದ ಅಂಗದ ಮತ್ತು ಚಂದ್ರಕೇತುವೆಂಬ ಅವಳಿ ಮಕ್ಕಳನ್ನು ಕಾರಾಪಥವೆಂಬ ರಾಜ್ಯದಲ್ಲಿ ಶ್ರೀರಾಮನ ಅಪ್ಪಣೆಯಂತೆ ನೆಲೆಗೊಳಿಸಿ ಅಯೋಧ್ಯೆಗೆ ಹಿಂದಿರುಗಿದನು. ಇದರಂತೆಯೇ ಶತ್ರುಘ್ನನ ಅವಳಿ ಮಕ್ಕಳನ್ನು ಲವಣನ ರಾಜಧಾನಿಯಾದ ಮಧೂಪಘ್ನ ಅಥವಾ ಮಧುರಾ ಪಟ್ಟಣದಲ್ಲಿ ಅಣ್ಣನ ಸೂಚನೆಯಂತೆ ನೆಲೆಗೊಳಿಸಿ ಹಿಂದಿರುಗಿದನು.

ಹೀಗಿರಲು ಒಂದು ದಿನ ಒಬ್ಬ ಬ್ರಾಹ್ಮಣನು ತನ್ನ ಕಣ್ಣ ಮುಂದೆ ಮರಣ ಹೊಂದಿದ ಶಿಶುವನ್ನು ಹೊತ್ತು ತಂದು ಅಯೋಧ್ಯೆಯಲ್ಲಿನ ಶ್ರೀರಾಮನ ಅರಮನೆಯ ಬಾಗಿಲಲಿಟ್ಟು 'ಓ ರಾಜ ! ರಾಜ್ಯದಲ್ಲಿ ಅಧರ್ಮವು ಹೆಚ್ಚಿದುದರಿಂದ ಇಂತಹ ಅಕಾಲ ಮರಣವು ನನ್ನ ಶಿಶುವಿಗೆ ಪ್ರಾಪ್ತವಾಗಿದೆ. ಅದನ್ನು ಕಂಡುಹಿಡಿದು ನನ್ನ ಶಿಶುವನ್ನು ಜೀವಿಸುವಂತೆ ಮಾಡಬೇಕು' ಎಂದು ಕೇಳಿದೊಡನೆಯೇ ಶ್ರೀರಾಮನು ಪುಷ್ಪಕ ವಿಮಾನವನ್ನು ನೆನೆಸಿದೊಡನೆಯೇ ಅದು ಸಿದ್ಧವಾದುದರಿಂದ ಅದನ್ನೇರಿ ಅಧರ್ಮಾಚರಣೆಯನ್ನು ಪರೀಕ್ಷಿಸಲು ಹೊರಟಾಗ ಒಂದೆಡೆಯಲ್ಲಿ ಶಂಬೂಕನೆಂಬ ಶೂದ್ರನು ವರ್ಣಾಶ್ರಮ ಧರ್ಮಾಚರಣೆಯನ್ನು ಬಿಟ್ಟು ತಲೆಕೆಳಗಾಗಿ ಗಿಡದ ರಂಬೆಯಲ್ಲಿ ತೂಗಾಡಿ ಧೂಮಪಾನವನ್ನು ಮಾಡುವುದಕ್ಕೆ ತೊಡಗಿ ಸ್ವರ್ಗವನ್ನು ಪಡೆಯುವುದಕ್ಕಾಗಿ ತಪಸ್ಸನ್ನಾಚರಿಸುತ್ತಿದ್ದುದನ್ನು ಕಂಡು, ಅಧರ್ಮಾಚರಣೆಯಲ್ಲಿದ್ದ ಅವನ ತಲೆಯನ್ನು ಕತ್ತರಿಸಲು, ಶ್ರೀರಾಮನ ಕೈಯಿಂದಲೇ ಹತನಾದ ಕಾರಣ ಅವನಿಗೆ ಸ್ವರ್ಗಪ್ರಾಪ್ತಿಯಾಯಿತು. ಇತ್ತ ಬ್ರಾಹ್ಮಣನ ಶಿಶು ಚೇತರಿಸಿಕೊಂಡಿತು. ಶ್ರೀರಾಮನು ಹಿಂದಿರುಗಿದ ಮೇಲೆ ಆತನ ಮಹಿಮೆಯನ್ನು ಹೊಗಳಿ ತನ್ನ ಸ್ಥಳಕ್ಕೆ ಆ ಬ್ರಾಹ್ಮಣನು ಹಿಂದಿರುಗಿದನು.

ತನ್ನ ತಮ್ಮಂದಿರು ತಮ್ಮ ತಮ್ಮ ಮಕ್ಕಳನ್ನು ನೆಲೆಗೊಳಿಸಿ ಹಿಂದಿರುಗಿದ ಬಳಿಕ ಶ್ರೀರಾಮನ ತಾಯಂದಿರಾದ ಕೌಸಲ್ಯೆ, ಸುಮಿತ್ರೆ, ಕೈಕೇಯಿಯರು ವಯಸ್ಕರಾದುದರಿಂದ ತಮ್ಮ ದೇಹಗಳನ್ನು ತ್ಯಜಿಸಿ ಭರ್ತೃಲೋಕವನ್ನು ಪಡೆದರು. ಹೀಗಿರಲು ಶ್ರೀರಾಮನಿಗೆ ಯಾವ ಆಸಕ್ತಿಯೂ ಇಲ್ಲದಾಯಿತು.

ಶ್ರೀರಾಮನು ಭೂಲೋಕದಲ್ಲಿ ತನ್ನ ಕಾರ್ಯವನ್ನು ಮುಗಿಸಿದುದನ್ನು ಗಮನಿಸಿ ಆತನನ್ನು ಸ್ವಸ್ಥಾನಕ್ಕೆ ಆಗಮಿಸಬೇಕೆಂಬ ಭಾವದಿಂದ ಯಮಧರ್ಮ ರಾಯನು ಶ್ರೀರಾಮನ ಆಸ್ಥಾನಕ್ಕೆಬಂದು ತಾನು ಶ್ರೀರಾಮನೊಡನೆ ಏಕಾಂತ ದಲ್ಲಿ ಮಾತನಾಡಬೇಕೆಂದು ಇಚ್ಛಿಸಿ ತಾವು ಗೌಪ್ಯವಾಗಿ ಸಂಭಾಷಿಸುತ್ತಿರುವಂದು ಯಾರೊಬ್ಬರೂ ಪ್ರವೇಶಿಸದಂತೆ ಏರ್ಪಡಿಸಬೇಕೆಂಬುದನ್ನು ತಿಳಿಸಲು ಆ ಕಾರ್ಯವನ್ನು ನೆರವೇರಿಸಲು ಲಕ್ಷ್ಮಣನನ್ನೇ ಬಾಗಿಲಬಳಿಯಿರುವಂತೆ ನಿಯೋ ಗಿಸಿದನು. ಹೀಗಿರಲು ದೂರ್ವಾಸ ಮಹರ್ಷಿಗಳು ಶ್ರೀರಾಮನನ್ನು ದರ್ಶಿಸುವ ಆತುರವನ್ನು ವ್ಯಕ್ತಪಡಿಸಿದ್ದರಿಂದ ತನ್ನ ಮುಂದಿನ ಪರಿಣಾಮವನ್ನು ಗಮ ನಿಸದೆ ಆ ಮುನಿಗೆ ವ್ಯತಿರಿಕ್ತವಾಗಿ ನಡೆದಲ್ಲಿ ಆ ಮುನಿಯ ಶಾಪಕ್ಕೆ ಒಳಗಾಗ ಬೇಕೆಂದು ಭಾವಿಸಿ, ಆ ಮುನಿಯನ್ನು ಒಳಕ್ಕೆ ಬಿಟ್ಟನು. ತಕ್ಷಣವೇ ಯಮನು ಹಿಂತಿರುಗಿದನು. ಅಣ್ಣನ ಆಜ್ಞೆಯನ್ನು ಮೀರಿದ್ದರಿಂದ ಮರಣವೇ ಶಿಕ್ಷೆ ಎಂಬುದಕ್ಕೆ ಒಳಗಾಗಿ ಅಣ್ಣನ ಅಪ್ಪಣೆಯಂತೆ ಹೊರ ಹೊರಟು ಸರಯೂ ನದಿಯ ದಡದಲ್ಲಿ ಯೋಗನಿಷ್ಠನಾಗಿ ಶರೀರವನ್ನು ಬಿಟ್ಟು ತನ್ನ ನಿಜಸ್ವರೂಪ ವಾದ ಆದಿ ಶೇಷನಾಗಿ ವೈಕುಂಠವನ್ನು ಸೇರಿದನು.

ಇತ್ತ ಶ್ರೀರಾಮನಿಗೆ ವೈರಾಗ್ಯ ಹುಟ್ಟಿ ಸೀತೆಯನ್ನೂ ಮತ್ತು ಲಕ್ಷ್ಮಣ ನನ್ನೂ ಕಳೆದು ಕೊಂಡು ಭೂಮಿಯಲ್ಲಿ ನೆಲೆಸುವುದು ಅನುಚಿತವೆಂದು ಭಾವಿಸಿ ಸರಯೂ ನದಿಯ ತೀರಕ್ಕೆ ಹೋಗಿ ಅಲ್ಲಿ ಭರತ ಶತ್ರುಘ್ನರನ್ನೂ ಸುಗ್ರೀವಾದಿ ವಾನರರನ್ನೂ ಅಲ್ಲದೆ ವಿಭೀಷಣನನ್ನು ಬಿಟ್ಟು ಉಳಿದ ರಾಕ್ಷಸರನ್ನೂ, ಮುಖ್ಯ ಪಟ್ಟಣಿಗರನ್ನೂ ಕೂಡಿಕೊಂಡು ಸರಯೂ ನದಿಯ ಪ್ರವೇಶವನ್ನು ಮಾಡಿ ದೈವಿ ಶರೀರಗಳನ್ನು ಪಡೆದು ಊರ್ಧ್ವ ಲೋಕಗಳನ್ನು ಪಡೆದಂಥವರಾದರು. ವಿಭೀಷಣ ಮತ್ತು ಹನುಮಂತ ಇವರಿಬ್ಬರನ್ನೂ ಭರತಖಂಡದ ಉತ್ತರ ದಕ್ಷಿಣ ಗಿರಿಗಳಲ್ಲಿ ನೆಲೆಸುವಂತೆ ಮಾಡಿ ಧರ್ಮವನ್ನು ಕಾಪಾಡಿಕೊಂಡು ಬರಲು ಅನುಜ್ಞೆಯಿತ್ತುದರಿಂದ ಅವರು ಚಿರಜೀವಿಗಳಾದರು.

ಹದಿನಾರನೆಯ ಸರ್ಗದಲ್ಲಿನ ವಿಷಯ ಸಂಗ್ರಹವು ಈ ಮುಂದಿನಂತಿದೆ :–
ಶ್ರೀರಾಮನು ತಾನು ರಾಜ್ಯವನ್ನು ಆಳುತ್ತಿರುವಂತೆಯೇ ತನ್ನ ಮಕ್ಕಳಾದ

ಕುಶಲವರಿಗೆ ಕುಶಾವತೀ ಮತ್ತು ಲವಾವತೀ ಎಂಬ ಹೆಸರಿನ ಎರಡು ಪಟ್ಟಣ ಗಳಲ್ಲಿ ಅವರನ್ನು ನೆಲೆಸುವಂತೆ ಮಾಡಿದ್ದನು. ಅದರಂತೆಯೇ ಅವರು ಅಲ್ಲಲ್ಲಿ ನೆಲೆಸಿ ಸುಖದಿಂದಿದ್ದರು. ಹಿಂದಿನ ಅಧ್ಯಾಯದಲ್ಲಿ ಸೂಚಿಸಿದಂತೆ ಶ್ರೀರಾಮ ಲಕ್ಷ್ಮಣ ಭರತ ಶತ್ರುಘ್ನರೊಡನೆ ಮತ್ತು ಮುಖ್ಯವಾದ ಅಯೋಧ್ಯಾ ಪೌರ ರೊಡನೆ ಸರಯೂ ನದಿಯನ್ನು ಪ್ರವೇಶಿಸಿದುದನ್ನು ತಿಳಿದು ತನ್ನ ತಂದೆ ಶ್ರೀರಾಮನಿಂದ ತ್ಯಜಿಸಲ್ಪಟ್ಟ ಅಯೋಧ್ಯೆಯನ್ನು ಪ್ರವೇಶಿಸ ಕೂಡದೆಂದು ನಿಶ್ಚೈಸಿ ಕುಶನು ಕುಶಾವತೀ ಗ್ರಾಮದಲ್ಲಿಯೇ ನೆಲೆಸಿದನು. ಅದರಂತೆ ಉಳಿದ ಅಯೋಧ್ಯೆಯ ಪ್ರಜೆಗಳೂ ಕೂಡ ಅಯೋಧ್ಯೆಯನ್ನು ಬಿಟ್ಟು ಕುಶಾವತಿ ಯನ್ನು ಸೇರಿ ಇಕ್ಷ್ವಾಕುರಾಜರ ರಾಜಧಾನಿಯೆನಿಸಿದ ಅಯೋಧ್ಯೆಯನ್ನು ನಿರಾ ಕರಿಸಿ ಹಾಳೂರಿನಂತೆ ಅದನ್ನು ಮಾಡಿದರು. ಲಕ್ಷ್ಮಣ ಭರತ ಶತ್ರುಘ್ನರಿಗೆ ಜನ್ಮಿ ಸಿದ ಆರು ಜನ ಗಂಡು ಮಕ್ಕಳೂ, ತನ್ನ ಜೊತೆಯಲ್ಲಿ ಹುಟ್ಟಿದ ಲವನೂ ಸೇರಿ ಏಳು ಜನರೂ ಹಿರಿಯಣ್ಣನಿಗೆ ಕುಶಾವತಿಯಲ್ಲಿಯೇ ಪಟ್ಟಕಟ್ಟಿ ನಮ್ರತೆಯಿಂದ ಸಾಮಂತರಂತೆ ನಡೆದುಕೊಂಡರು.

ಹೀಗಿರಲು ಒಂದು ದಿನ ಅರ್ಧರಾತ್ರಿಯಲ್ಲಿ ಕುಶನು ಹಾಸಿಗೆಯ ಮೇಲೆ ಸುಖ ನಿದ್ರೆಯನ್ನು ಮಾಡುತ್ತಿದ್ದಾಗ ತನ್ನ ಶಯ್ಯಾ ಗೃಹದಲ್ಲಿ ಇದ್ದಕ್ಕಿದ್ದಂತೆಯೇ ದಿವ್ಯಜ್ಯೋತಿಯೊಂದುಟಾಗಿ ಕುಶನಿಗೆ ಎಚ್ಚರವಾಯಿತು. ಆಗ ಆತನು ಕಂಡು ದೇನು ? ದಿವ್ಯಜ್ಯೋತಿಯಿಂದ ಮೆರೆಯುವ ಯೌವನ ಸ್ತ್ರೀ ವ್ಯಕ್ತಿಯೊಂದು. ಕಶಯ್ಯಾಗೃಹವನ್ನು ಭದ್ರಪಡಿಸಿದ್ದರೂ ಕೂಡ ಆ ವ್ಯಕ್ತಿಯು ಅಷ್ಟು ಹೊತ್ತಿ ನಲ್ಲಿ ಹೇಗೆ ಏಕೆ ಪ್ರವೇಶಿಸಿದಳು ಎಂಬ ಕುತೂಹಲದಿಂದ ಆಕೆಯನ್ನುದ್ದೇಶಿಸಿ ಹೀಗೆ ಕೇಳಿದನು.

ಕಾತ್ವಂ ಶುಭೇ ? ಕಸ್ಯಪರಿಗ್ರಹೋವಾ ।
ಕಿಂ ವಾ ? ಮದಭ್ಯಾಗಮ ಕಾರಣಂ ತೇ ? ॥
ಅಚಕ್ಷ್ವ ಮತ್ವಾ ವಶಿನಾಂ ರಘೂಣಾಂ ।
ಮನಃ ಪರಸ್ತ್ರೀ ವಿಮುಖ ಪ್ರವೃತ್ತಿ ॥

ಎಂಬಂತೆ 'ಎಲೌ ಮಂಗಳಾಂಗಿ ! ನೀನು ಯಾರು ? ನೀನು ಯಾರ

ಪೆತ್ನಿ ? ನೀನು ಇಷ್ಟು ಹೊತ್ತಿನಲ್ಲಿ ನನ್ನಲ್ಲಿಗೆ ಬರುವಕಾರಣವಾವುದು ? ರಘು ವಂಶೋತ್ಪನ್ನರು ಪರಸ್ತ್ರೀಯರಲ್ಲಿ ಎಂದಿಗೂ ಮನವನ್ನು ನೆಡರು ಎಂಬುದನ್ನರಿತು ನನ್ನ ಪ್ರಶ್ನೆಗಳಿಗೆ ಉತ್ತರ ನೀಡು" ಎಂದು ಕೇಳಲು ಆ ಸ್ತ್ರೀವ್ಯಕ್ತಿಯು ಈ ಮುಂದಿನಂತೆ ಉತ್ತರ ಕೊಟ್ಟಿತು ! ಎಲೌ ! ರಾಜಕುಮಾರ ! ನಾನು ಅಯೋಧ್ಯಾ ಪುರದ ಅಧಿದೇವತೆ, ಯೋಗಬಲದಿಂದ ಈ ರೂಪವನ್ನು ತಳೆದು ನಿನ್ನಲ್ಲಿಗೆ ಬಂದಿರುತ್ತೇನೆ. ಇಕ್ಷ್ವಾಕುವಿನಿಂದ ಪ್ರಾರಂಭವಾದ ನಿಮ್ಮ ಶ್ರೇಷ್ಠವಾದ ವಂಶದ ರಾಜರು ನನ್ನನ್ನೇ ಒಲಿದು ಅಲ್ಲಿಯೇ ನೆಲಸಿ ರಾಜ್ಯವನ್ನು ಆಳುತ್ತ ಬರುತ್ತಿದ್ದರು. ನಿಮ್ಮ ತಂದೆ ಶ್ರೀರಾಮನವರೆಗೂ ಇದೇಕಾರ್ಯ ನಡೆದು ಬಂದಿತು. ಆತನು ಕಣ್ಮರೆಯಾದ ಬಳಿಕ ಹಿರಿಯ ಮಗನಾದ ನೀನು ನನ್ನನ್ನು ತ್ಯಜಿಸಿ ಈ ಕುಶಾವತಿಯನ್ನು ರಾಜಧಾನಿಯನ್ನಾಗಿ ಮಾಡಿ ಕೊಂಡಿರುವೆ. ನಾನು ಈಗ ಅನಾಥಳಾದೆ. ಪ್ರಜೆಗಳೆಲ್ಲರೂ ರಾಜಧಾನಿಯನ್ನು ಬಿಟ್ಟು ಹಾಳೂರನ್ನಾಗಿ ಮಾಡಿಬಿಟ್ಟರು ಅವರು ವಿಹರಿಸುತ್ತಿದ್ದ ಕ್ರೀಡಾವನ, ಜಲಾಶಯ, ಮಂದಿರಗಳು, ದೇವಾಲಯಗಳು, ವಾಸಿಸುತ್ತಿದ್ದ ಗೃಹಗಳು, ಓಡಾಡುತ್ತಿದ್ದ ಬೀದಿಗಳು, ಇವೇ ಮೊದಲಾದುವೆಲ್ಲವೂ ಶೂನ್ಯಗಳಾಗಿ ನರಿ, ಹುಲಿ, ಸಿಂಹ, ಕರಡಿ ಸರ್ಪಗಳು ಇವುಗಳು ಅಲ್ಲಿ ವಿಹರಿಸುವ ದುಃಸ್ಥಿತಿಗೆ ಬಂದಿದೆ. ಮಂಗಳ ಕಾರ್ಯಗಳಿಂದ ಶೋಭಿತವಾದ ಅಯೋಧ್ಯಾ ನಗರಿಯು ಅಮಂಗಳವಾದ ಶೋಚನೀಯ ಸ್ಥಿತಿಗಿಳಿದಿದೆ. ನಾನು ಇಲ್ಲಿಗೆ ಬಂದಿರುವ ಉದ್ದೇಶವೆಂದರೆ ನಿಮ್ಮ ಪೂರ್ವಿಕರಿಂದ ಅಲಂಕೃತವಾಗಿದ್ದ ರಾಜಧಾನಿಯೆನಿಸಿದ ನನ್ನನ್ನು ಅನಾಥೆಯನ್ನಾಗಿ ಮಾಡುವುದು ಉಚಿತವಲ್ಲ. ನೀನು ನನ್ನಲ್ಲಿ ದಯೆ ಯಿಟ್ಟು ಹಿಂದಿರುಗಿ ಹಿಂದಿನಂತೆ ನನ್ನ ಸ್ಥಿತಿಯನ್ನು ಪರಿವರ್ತಿಸುವಂತೆ ನಿನ್ನನ್ನು ಅಂಜಲಿ ಬದ್ಧಳಾಗಿ ಬೇಡುತ್ತಿದ್ದೇನೆ. ಇವೆಲ್ಲವನ್ನೂ ಗಮನಿಸಿ ಪ್ರೀತಿಯಿಂದ ನನ್ನನ್ನು ರಾಜಧಾನಿಯನ್ನಾಗಿ ಪರಿವರ್ತಿಸು" ಎಂದು ಬೇಡಿಕೊಂಡಳು. ಇದನ್ನು ಸಾವಧಾನದಿಂದ ಕೇಳಿ ಆಕೆಯ ಮಾತಿನಲ್ಲಿ ಧರ್ಮನ್ಯಾಯಗಳು ತುಂಬಿವೆ ಎಂದೆಣಿಸಿ 'ನಿನ್ನ ಇಚ್ಛೆಯಂತೆಯೇ ನಡೆಯುತ್ತೇನೆ' ಎಂದು ನಂಬುಗೆ ಗೊಟ್ಟನು. ಇದನ್ನು ಕೇಳಿ ಸಮಾಧಾನ ಚಿತ್ತಳಾಗಿ ಅಯೋಧ್ಯಾಪುರವನಿತೆ ತಕ್ಷಣವೇ ಮಾಯವಾದಳು.

ಮಾರನೆಯ ದಿನ ಕುಶನು ಸಚಿವರನ್ನೂ ಸಭಾಸದರನ್ನೂ ಮುಖ್ಯ ರಾದ ಪೌರರನ್ನೂ ಕರೆಸಿ ಹಿಂದಿನ ರಾತ್ರಿ ನಡೆದ ಪ್ರಸಂಗವನ್ನು ಅವರಿಗೆ ತಿಳಿಯ ಹೇಳಿದನು. ಇದನ್ನು ಕೇಳಿದ ಅವರೆಲ್ಲ ಒಮ್ಮತದಿಂದ ಅಯೋಧ್ಯಾ ಪಟ್ಟಣಕ್ಕೆ ಹಿಂದಿರುಗುವ ಆತನ ಆಶಯವನ್ನು ಶ್ಲಾಘಿಸಿ ತಾವೆಲ್ಲರೂ ಪ್ರಯಾಣ ಸನ್ನದ್ಧರಾಗಿರುವುದಾಗಿ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದರು. ಅದರಂತೆ ಕುಶನು ಆ ಪುರವಾಸಿಗಳನ್ನೂ ಮತ್ತು ಚತುರಂಗ ಸೈನ್ಯವನ್ನೂ ಪಯಣ ಬೆಳೆಸುವಂತೆ ಮಾಡಿ ಅಯೋಧ್ಯಾಪಟ್ಟಣದಲ್ಲಿ ನೆಲೆಸುವಂತಾಗಿಸಿ ಮಾಡಿ ಹಿಂದಿನಂತೆ ಆ ಪುರವನ್ನು ವೈಭವಯುತವನ್ನಾಗಿ ಮಾಡಿದನು.

ಈ ಬಗೆಯಲ್ಲಿ ಕುಶನು ಕುಲರಾಜಧಾನಿಗೆ ಹಿಂದಿರುಗಿ ಸುಖದಿಂದ ರಾಜ್ಯ ಭಾರವನ್ನು ಮಾಡುತ್ತಿರುವಾಗ ಒಂದು ಸಲ ವಸಂತ ಋತು ಕಳೆದು ಗ್ರೀಷ್ಮ ರ್ತು ಆರಂಭವಾಗಿ ತಡೆಯಲಾರದ ಉಷ್ಣದಿಂದ ಎಲ್ಲರೂ ಪರಿತಪಿಸ ಲಾರಂಭಿಸಿದರು. ಇವರಂತೆಯೇ ರಾಣೀ ವಾಸದವರೂ ಕೂಡ ಬಳಲುತ್ತಿರು ವುದನ್ನು ಕಂಡು ಕುಶನು ಅವರಿಗೆ ತಂಪನ್ನುಂಟುಮಾಡುವುದಕ್ಕಾಗಿ ಪಟ್ಟಣದ ಸಮೀಪದಲ್ಲಿ ಹರಿಯುತ್ತಿದ್ದ ಸರಯೂ ನದಿಯಲ್ಲಿ ಜಲಕ್ರೀಡೆಯನ್ನು ಏರ್ಪಡಿಸಿದನು. ಇದಕ್ಕೆ ಮುನ್ನ ಜಾಲಗಾರರನ್ನು ಕರೆಸಿ ಆ ಆಳವಾದ ಮಡವುಗಳಲ್ಲಿ ಮೊಸಳೆಯೇ ಮೊದಲಾದ ದುಷ್ಟ ಜಲಚರಗಳು ಇರದಂತೆ ಮಾಡಿ ಜಲಕ್ರೀಡೆಗೆ ಅಣತಿಯಿತ್ತನು ಜಲಕ್ರೀಡೆಯಲ್ಲಿ ಕುಶನು ನಿರತನಾಗಿದ್ದಾಗ ತನ್ನ ತಂದೆ ತನಗೆ ಬಳುವಳಿಯಾಗಿ ಕೊಟ್ಟಿದ್ದ ತೋಳಿನ ನವರತ್ನಾಭರಣವು ಕಳಚಿ ನೀರಿನಲ್ಲಿ ಮುಳುಗಿ ಹೋದುದನ್ನು ಅವನು ತಿಳಿಯದಾದನು ಈ ಅನರ್ಘ್ಯವಾದ ರಾವಣಾದಿ ದುಷ್ಟರಾಕ್ಷಸರನ್ನು ಕೊಂದು ಶಿಷ್ಟ ಪರಿಪಾಲನ ಮಾಡಿದ ಶ್ರೀ ರಾಮನಿಗೆ ಅಭಿನಂದಿಸಲು ಅಯೋಧ್ಯೆಗೆ ಬಂದ ಅಗಸ್ತ್ಯ ಮುನಿಗಳಿಂದ ಪಾರಿತೋಷಕ ರೂಪವಾಗಿ ಆತನಿಗೆ ಕರುಣಿಸಿದುದು. ಆ ಆಭರಣವು ಮುನಿಯ ಕಾರಣಾಂತರದಿಂದ ಸಮುದ್ರದ ನೀರೆಲ್ಲವನ್ನು ಕುಡಿದು ಮತ್ತೆ ಅದನ್ನು ಹೊರಸೂಸಿದಂದು ಸಮುದ್ರರಾಜನು ಮುನಿಗೆ ಗೌರವಯುತ ವಾಗಿ ಕೊಟ್ಟನು. ಇದನ್ನು ಶ್ರೀರಾಮನು ತನ್ನ ಹಿರಿಯ ಮಗನಾದ ಕುಶನಿಗೆ ಪಟ್ಟಕಟ್ಟುವ ಸಮಯದಲ್ಲಿ ಕರುಣಿಸಿದುದು, ಜಲಕ್ರೀಡೆಯಾಡಿ ದಡ

ವನ್ನು ಸೇರಿದ ಮೇಲೆ ಆಭರಣವು ನಷ್ಟವಾದುದನ್ನು ತಿಳಿದು ಜಾಲಗಾರರನ್ನು ನೇಮಿಸಿ ಅದನ್ನು ನೀರಿನಲ್ಲಿ ಹುಡುಕುವಂತೆ ಮಾಡಿದನು. ಅವರು ಕುಶನಾಜ್ಞೆಯಂತೆ ಸಂಪೂರ್ಣವಾಗಿ ಸರಯೂ ನದಿಯಲ್ಲಿ ಹುಡುಕಿದರೂ ಅದು ಸಿಕ್ಕಲಿಲ್ಲವಾದುದರಿಂದ ಅವರು ಕುಶನನ್ನು ಕುರಿತು ಪ್ರಭು! ಎಷ್ಟು ಹುಡುಕಿದರೂ ಆಭರಣವು ನಮಗೆ ದೊರಕಲಿಲ್ಲ. ಅಲ್ಲಿಗೆ ಕುಮುದನೆಂಬ ನಾಗರಾಜನು ಬರುತ್ತಿರುವನು, ಆತನೇ ಇದನ್ನು ಅಪಹರಿಸಬೇಕು, ಎಂದು ಬಿನ್ನೈಸಿದರು. ಇವನ್ನು ಕೇಳಿ ಕುಶನು ಕುಪಿತನಾಗಿ ಆ ಕುಮುದನನ್ನು ನಿಗ್ರಹಿಸುವುದಕ್ಕಾಗಿ ಬಿಲ್ಲಿನಲ್ಲಿ ಗಾರುಡಾಸ್ತ್ರವನ್ನು ಹೂಡಿ ಅಭಿಮಂತ್ರಿಸಬೇಕೆಂದಿರುವಲ್ಲಿ ಈ ಸೂಚನೆಯನ್ನು ತಿಳಿದು, ಸರಯೂ ನದಿಯ ಮೂಲಕ ತನ್ನ ತಂಗಿಯನ್ನೂ ಹೊತ್ತು ತಂದು ಕುಶನಿಗೆ ನಮಿಸಿ, 'ಮಹಾರಾಜ! ನನ್ನ ಈ ತಂಗಿಯಾದ ಕುಮುದ್ವತಿಯು ಜಲಕ್ರೀಡೆಯಲ್ಲಿ ತೊಡಗಿದ್ದಾಗ ಈ ಆಭರಣವು ಒಂದು ಆಟದ ಚೆಂಡು ಎಂದು ಭಾವಿಸಿ ನನ್ನಲ್ಲಿಗೆ ಬಂದಳು. ನೀನು ಗಾರುಡಾಸ್ತ್ರ ಪ್ರಯೋಗಕ್ಕೆ ಸಿದ್ಧನಾಗಿರುವುದನ್ನು ತಿಳಿದು ಆ ಆಭರಣವನ್ನೂ ಮತ್ತು ಈ ಕನ್ಯಾಭರಣವನ್ನೂ ಒಪ್ಪಿಸಿ ಅಪರಾಧಕ್ಕೆ ಕ್ಷಮೆಯನ್ನು ಬೇಡುವ ಉದ್ದೇಶದಿಂದ ತಾನು ಬಂದಿರುವೆನು'' ಎಂದು ಬೇಡಿದನು. ಕುಶನಾದರೋ ಆ ಆಭರಣವನ್ನೂ ಮತ್ತು ಕುಮುದ್ವತಿಯೆಂಬ ಕನ್ಯಾರತ್ನವನ್ನೂ ಸಂತೋಷದಿಂದ ಸ್ವೀಕರಿಸಿ ಕುಮುದನೆಂಬ ನಾಗರಾಜನಿಗೆ ತಕ್ಕ ಬಹುಮಾನ ಮಾಡೀಕುಮುದ್ವತಿಯನ್ನು ತನ್ನ ಪಟ್ಟದರಸಿಯನ್ನಾಗಿ ಮಾಡಿಕೊಂಡನು. ಕುಮುದ್ವತಿಯನ್ನು ತನ್ನ ಪಟ್ಟದರಸಿಯನ್ನಾಗಿಮಾಡಿಕೊಂಡನು. ಕುಮುದ್ವತಿ,ಪರಿಣಯದಲ್ಲಿ ಕೊನೆಗೊಂಡ ಈ ಅಧ್ಯಾಯವು ಇಲ್ಲಿಗೆ ಮುಗಿದುದು.

ಹದಿನೇಳನೆಯ ಅಧ್ಯಾಯದಲ್ಲಿನ ವಿಷಯ ಸಂಗ್ರಹಣೆ ಈ ಮುಂದಿನಂತಿದೆ :- ಕುಶನ ದೆಸೆಯಿಂದ ಪಟ್ಟದರಸಿ ಕುಮುದ್ವತಿಯ ಉದರದಲ್ಲಿ ಅತಿಥಿಯೆಂಬ ಹೆಸರಿನ ಮಗನು ಹುಟ್ಟಿದನು ತಂದೆಯು ಅವನಿಗೆ ಸಮಸ್ತ ವಿದ್ಯಾಭ್ಯಾಸವನ್ನು ಮಾಡಿಸಿ, ಅವನು ಪ್ರಾಪ್ತವಯಸ್ಕನಾದಾಗ ಅವನಿಗೆ ಯೋಗ್ಯರಾದ ರಾಜಕನ್ಯೆಯರೊಡನೆ ವಿವಾಹ ಸಂಸ್ಕಾರವನ್ನೂ ನೆರವೇರಿಸಿದನು.

ಕುಶನು ಮಗನನ್ನು ತನ್ನ ಪ್ರತೀಕಾರವೆಂದೇ ಭಾವಿಸಿದನು. ಕುಶನು ಇಂದ್ರನಿಂದ ಆಹ್ವಾನಿತನಾಗಿ ತನ್ನ ಪೂರ್ವಿಕದಂತೆ ಇಂದ್ರನಿಗೆ ಯುದ್ಧದಲ್ಲಿ ಸಹಾಯ ಮಾಡಲು ಸ್ವರ್ಗಕ್ಕೆ ತೆರಳಿ ಅಲ್ಲಿ ದೈತ್ಯನಾದ ದುರ್ಜಯನೊಡನೆ ಸೆಣಸಿ ಅವನನ್ನು ಕೊಂದು, ಅವನಿಂದಲೇ ರಣರಂಗದಲ್ಲಿ ಮಡಿದು ಅರ್ಧಾಸನಕ್ಕೆ ಭಾಗಿಯಾದನು.

ಮಹಾಸತಿಯೆನಿಸಿದ ಕುಮುದ್ವತಿಯೂ ಕೂಡ ದೇಹತ್ಯಾಗ ಮಾಡಿದ ಬಳಿಕ ಶಚೀ ದೇವಿಯ ಸಖಿಯಾಗಿನಿಂತಳು. ಇತ್ತ ನುರಿತ ಮಂತ್ರಿಗಳು ಕುಶನು ಗತಿಸಿದ ಮೇಲೆ ಯೋಗ್ಯನಾದ ಅತಿಥಿಯೆಂಬ ಆತನ ಪುತ್ರನನ್ನು ಸಿಂಹಾಸನ ಕ್ಕೇರಿಸಲು ಪಟ್ಟಾಭಿಷಿಕ್ತನನ್ನಾಗಿ ಮಾಡಿದರು. ಅತಿಥಿಯೂ ಕೂಡ ತನ್ನ ಪೂರ್ವಿಕದಂತೆಯೇ ರಾಜ್ಯವನ್ನು ನ್ಯಾಯಧರ್ಮಗಳಿಂದ ಆಳತೊಡಗಿ ಆದರ್ಶನೃಪನೆನಿಸಿದನು. ಇವನು ರಾಜ್ಯವನ್ನು ಪರಿಪಾಲಿಸುತ್ತಿದ್ದಾಗ,

ಇಂದ್ರಾತ್ ವೃಷ್ಟಿಃ ನಿಯಮಿತಗದೋದ್ರೇಕ ವೃತ್ತಿಃ ಯಮೋಽಭೂತ್ ।
ಯಾ ದೋನಾಥಃ ಶಿವಜಲಪಥಃ, ಕ ರ್ಮಣೇ ನೌ ಚರಾಣಾಂ ॥
ಪೂರ್ವಾಪೇಕ್ಷೀ ತದನು ವಿದಧೇ ಕೋಪವೃದ್ಧಿಂ ಕುಬೇರಃ ।
ತಸ್ಮಿನ್ ದಂಡೋಪಚರಿತಂ ಭೇಜಿರೇ ಲೋಕಪಾಲಾಃ ॥

ಎಂಬಂತೆ ಅತಿಥಿಯು ರಾಜ್ಯ ಭಾರವನ್ನು ನಡೆಸುತ್ತಿರುವಾಗ ಇಂದ್ರನು ಕಾಲಕಾಲಕ್ಕೆ ಮಳೆ ಸುರಿಸುತ್ತಿದ್ದನು, ರಾಜ್ಯದಲ್ಲಿ ರೋಗರುಜಿನಾದಿಗಳು ಬಾರ ದಂತೆ ಯಮನು ನೋಡಿಕೊಳ್ಳುತ್ತಿದ್ದನು, ನಾವಿಕರ ಕರ್ಮಕ್ಕೆ ಅನುಗುಣ ವಾಗಿ ನಿರ್ವಿಘ್ನವಾಗಿ ಜಲಮಾರ್ಗವನ್ನು ವರುಣನು ಕಲ್ಪಿಸುತ್ತಿದ್ದನು, ಮತ್ತು ಕುಬೇರನು ಅತಿಥಿಯ ಕೋಶವನ್ನು ಅಂದರೆ ಭಂಡಾರದಲ್ಲಿ ಹಣವನ್ನು ಹೆಚ್ಚಿಸುತ್ತಿದ್ದನು. ಈ ಬಗೆಯಲ್ಲಿ ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಪಾಲಕರು ಕ್ರಮವಾಗಿ ಅತಿಥಿಯನ್ನು ಸೇವಿಸುತ್ತಿದ್ದರು.

ಹದಿನೆಂಟನೆಯ ಸರ್ಗದಲ್ಲಿನ ವಿಷಯ ಸಂಗ್ರಹವು ಹೀಗಿದೆ :–ಅತಿಥಿಯು ನಿಷಧ ದೇಶಾಧಿಪತಿಯ ಮಗಳನ್ನು ಪಟ್ಟದರಸಿಯನ್ನಾಗಿ ಮಾಡಿಕೊಂಡು ಆಕೆ ಯಲ್ಲಿ ನಿಷಧ ಎಂಬ ಹೆಸರಿನ ಪುತ್ರನನ್ನು ಪಡೆದನು. ಅವನು ಬೆಳೆದು ಅತಿ ಪರಾಕ್ರಮ ಶಾಲಿಯೆಂಬ ಯುವಕನಾಗಿದ್ದುದರಿಂದ ಅತಿಥಿಯು ಅಂತಹ ಪುತ್ರ

ನೆನ್ನು ಪಡೆದುದಕ್ಕಾಗಿ ಆನಂದಿಸಿದನು. ಅತಿಥಿಯು ಇಹಲೋಕದ ಸೌಖ್ಯ ವನ್ನು ಬಹುಕಾಲ ಅನುಭವಿಸಿ ಯಜ್ಞ ಯಾಗಾದಿಗಳನ್ನು ಆಚರಿಸಿದುದರ ಫಲ ವಾಗಿ, ಉತ್ತಮ ಲೋಕವನ್ನು ಪಡೆದನು. ಇದಕ್ಕೆ ಮುನ್ನ ತನ್ನ ಸತ್ಪುತ್ರನಿಗೆ ಪಟ್ಟಕಟ್ಟಿ ರಾಜ್ಯವನ್ನು ಸರಿಯಾದ ಬಗೆಯಲ್ಲಿ ಆಳುವಂತೆ ಮಾಡಿದ್ದನು: ನಿಷ ಧನು ಕೆಲ ಕಾಲ ಸುಖದಿಂದಾಳಿ ಬಳಿಕ ಯೋಗ್ಯವಾದ ನಳ ನೆಂಬ ತನ್ನ ಮಗ ನಿಗೆ ರಾಜ್ಯವಹಿಸಿ ಸ್ವರ್ಗವನ್ನು ಸೇರಿದನು. ನಳನಾದರೋ ತನ್ನ ಧರ್ಮ ಪತ್ನಿ ಯಲ್ಲಿ 'ನಭಃ ಶಬ್ದ' ಎಂಬ ಹೆಸರಿನ ಮಗನನ್ನು ಪಡೆದನು. ನಳನಿಗೆವಾರ್ಧಿಕ್ಯ ಬಂದಾಗ ರಾಜ್ಯವನ್ನು ಯೋಗ್ಯನಾದ ನಭನಿಗೆ ವಹಿಸಿ ಆರಣ್ಯವನ್ನು ಸೇರಿ ಯೋಗದ ಮೂಲಕ ಶರೀರವನ್ನು ತ್ಯಾಗಮಾಡಿ ಮುಕ್ತಿಯನ್ನು ಪಡೆದನು. ನಭನೂ ಕೂಡ ಬಹುದಿನ ರಾಜ್ಯವನ್ನು ಧರ್ಮದಿಂದಾಳುತ್ತಿರಲು ಅವನಿಗೆ ಪುಂಡರೀಕ ನೆಂಬ ಪುತ್ರನು ಜನಿಸಿದನು. ತನ್ನ ಅಪರ ವಯಸ್ಸಿನಲ್ಲಿ ಮಗನಿಗೆ ಪಟ್ಟಕಟ್ಟಿ ನಭನು, ಸ್ವರ್ಗವನ್ನು ಸೇರಿದನು. ಪುಂಡರೀಕನಿಗೆ ಕ್ಷೇಮಧನ್ವಾ ಎಂಬ ಪುತ್ರನನ್ನು ಪಡೆದು ತನ್ನ ಇಳಿವಯಸ್ಸಿನಲ್ಲಿ ರಾಜ್ಯವನ್ನು ಮಗನಿಗೆ ವಹಿಸಿ ತಪಸ್ಸಿಗಾಗಿ ವನಕ್ಕೆ ತೆರಳಿದನು. ಈ ಕ್ಷೇಮಧನ್ವನು ದೇವಾನೀಕ ಎಂಬ ಪುತ್ರ ನನ್ನು ಪಡೆದನು. ದೇವಾನೀಕನಿಗೆ ಅಹೀನಗು ಎಂಬ ಮಗನು ಜನಿಸಲು ಅವ ನನ್ನು ರಾಜ್ಯದಲ್ಲಿ ಪ್ರತಿಷ್ಠಿಸಿ ಸ್ವರ್ಗವನ್ನು ಸೇರಿದನು. ಅಹೀನಗುವಿನ ನಂತರ ಬಂದ ಅವನ ಮಗ ಪಾರಿಯಾತ್ರ. ಅವನ ನಂತರ ರಾಜ್ಯವಾಳಿದವನೆಂದರೆ ಅವನ ಮಗ ಶಿಲಾ ಎಂಬುವನು ಆ ಬಳಿಕ ರಾಜ್ಯವನ್ನು ಪಾಲಿಸಿದವನೆಂದರೆ ಅವನ ಮಗ ಉನ್ನಾಭ. ಅವನು ತೀರಿಕೊಂಡ ಬಳಿಕ ರಾಜ್ಯವಾಳಿದವನು ವಜ್ರನಾಭ. ಬಳಿಕ ಅವನನ್ನು ಹಿಂಬಾಲಿಸಿದನೆಂದರೆ ಅವನ ಹಿರಿಯಮಗ ಶಂಖಣ, ಇದಾದ ಮೇಲೆ ಬಂದವನು ಅವನ ಜ್ಯೇಷ್ಠಪುತ್ರ ವ್ಯುಷಿತಾಶ್ವ, ಇವನ ರಾಜ್ಯಭಾರವು ಕೊನೆಗೊಳ್ಳಲು ಬಂದವನು ಅವನ ಮಗ ಹಿರಣ್ಯನಾಭ, ಇವನ ಆಳ್ವಿಕೆ ಮುಗಿದ ಬಳಿಕ ಉತ್ತರಕೋಸಲವನ್ನಾಳಿದವನೆಂದರೆ ಅವನ ಮಗ ಕೌಸಲ್ಯ ನೆಂಬುವನು. ಅವನ ಬಳಿಕ ಪಟ್ಟಕ್ಕೆ ಬಂದವನು ಬ್ರಹ್ಮಿಷ್ಠ, ಈತನ ತರುವಾಯ ಜ್ಯೇಷ್ಠಪುತ್ರನೆನಿಸಿದ್ದ ಪುತ್ರ ನೆಂಬ ಹೆಸರು ತಳೆದವನು ಪಟ್ಟಕ್ಕೆ ಬಂದನು. ಪುತ್ರನು ಸ್ವರ್ಗಸ್ಥನಾದ ಬಳಿಕ ರಾಜ್ಯ ಸೂತ್ರಗಳನ್ನು ಕೈ

ಹಿಡಿದವನು ಅವನ ಜ್ಯೇಷ್ಠ ಪುತ್ರ ಪೌಷ್ಯ ನೆಂಬುವನು. ಈತನ ಸ್ವರ್ಗಸ್ಥನಾದ ಬಳಿಕ ಈತನ ಮಗ ಧ್ರುವಸಂಧಿಯು ಪಟ್ಟಕ್ಕೆ ಬಂದನು. ಧ್ರುವಸಂಧಿಯು ಬೇಟೆಗಾಗಿ ಹೋಗಿರುವಂದು ಆತನು ಸಿಹ್ಮವೊಂದರಿಂದ ಹತನಾದನು ಆಗ ಆತನ ಮಗ ಸುದರ್ಶನ ನೆಂಬಾತನು ಇನ್ನೂ ಶಿಶುವಾಗಿದ್ದನು. ಆತನಿಗೆ ಇನ್ನೂ ಆರುವರ್ಷಗಳು ತುಂಬಿರಲಿಲ್ಲ. ಆದರೂ ಇಕ್ಷ್ವಾಕು ವಂಶವು ಮುಂದು ವರಿಯುಬೇಕೆಂಬ ಬಯಕೆಯುಳ್ಳ ನುರಿತ ಮಂತ್ರಿಗಳು ಆ ಶಿಶುವನ್ನೇ ಪಟ್ಟಾಭಿಷಿಕ್ತನನ್ನಾಗಿ ಮಾಡಿ ಸಿಹ್ಮಾಸನದಲ್ಲಿ ಪ್ರತಿಷ್ಠಿಸಿ ರಾಜ್ಯಾಡಳಿತವನ್ನು ತಾವು ಕ್ರಮವಾಗಿ ನೆರವೇರಿಸಿದರೂ ಕೂಡ, ಆ ಶಿಸುವೇ ತಮ್ಮನ್ನಾಳುವ ಪ್ರಭುವೆಂದು ಭಾವಿಸಿ ಆತನಿಗೆ ರಾಜಮರ್ಯಾದೆಯನ್ನು ಮಾಡುತ್ತಿದ್ದರು. ಆ ಶಿಶುವಾದರೋ ಕ್ರಮವಾಗಿ ಬೆಳೆಯುತ್ತ ಶಾಸ್ತ್ರವಿಧ್ಯೆಯನ್ನೂ ಅದರಂತೆಯೇ ಧನುರ್ವಿಧ್ಯೆಯನ್ನು ಪಡೆಯುತ್ತ ಬಂದು ರಾಜ್ಯವನ್ನು ತನ್ನ ಪೂರ್ವಿಕರು ಆಳುತ್ತ ಬಂದ ಯಶಸ್ಸನ್ನು ಗಳಿಸಿದನು. ಹೀಗಿರಲು ಸುದರ್ಶನನಿಗೆ ಯೌವನವು ಪ್ರಾಪ್ತವಾಯಿತು. ಅದಕ್ಕಾಗಿ ಯೋಗ್ಯರಾದ ರಾಜಕುಮಾರಿಯರನ್ನು ತಂದು ಆತನಿಗೆ ವಿವಾಹದೀಕ್ಷೆಯನ್ನು ನೆರವೇರಿಸಿದರು. ಆತನಾದರೋ ರಾಜ್ಯ ಲಕ್ಷ್ಮಿಯನ್ನೇ ಭೂದೇವಿಯನ್ನೇ ಬಹಳ ವಿಚಕ್ಷಣೆಯಿಂದ ಆಳುತ್ತ ತನ್ನ ಕುಲಜರು ರಾಜ್ಯಾಡಳಿತವನ್ನು ನಡೆಸಿದಂತೆಯೇ ವರ್ತಿಸಿ ಪ್ರಜೆಗಳ ಪ್ರೀತಿಗೆ ಪಾತ್ರನಾದನು. ಅದರಂತೆಯೇ ತನ್ನ ರಾಣಿಯರಲ್ಲಿಯೂ ಅತ್ಯಂತ ಪ್ರೇಮವನ್ನು ತೋರುತ್ತಿದ್ದನು.

ಹತ್ತೊಂಭತ್ತನೆಯ ಸರ್ಗದಲ್ಲಿನ ಸಂಗ್ರಹವಿಷಯುವು ಈ ಮುಂದಿನಂತಿದೆ: ಸುದರ್ಶನ ಚಕ್ರವರ್ತಿಯು ರಾಜ್ಯವನ್ನು ದಕ್ಷತೆಯಿಂದ ಆಳಿ ಪ್ರಜೆಗಳ ಪ್ರೀತಿಗೆ ಪಾತ್ರನಾಗಿ ತನ್ನ ಪಟ್ಟದ ರಾಣಿಯಲ್ಲಿ ಜನಿಸಿದ ಅಗ್ನಿವರ್ಣ ನೆಂಬುವನಿಗೆ ತನ್ನ ಇಳಿವಯಸ್ಸಿನಲ್ಲಿ ರಾಜ್ಯವನ್ನರ್ಪಿಸಿ, ನೈಮಿಶಾರಣ್ಯಕ್ಕೆ ತೆರಳಿ ಅಲ್ಲಿ ಯೋಗದಿಂದ ಶರೀರ ಪತನದ ವೇಳೆಯನ್ನು ಕಾಯುತ್ತಿದ್ದನು. ಇತ್ತ ಅಗ್ನಿವರ್ಣನು ಶ್ಲಾಘ್ಯ ರೀತಿಯಲ್ಲಿ ಕೆಲಕಾಲ ರಾಜ್ಯವನ್ನು ಪಾಲಿಸಿ, ರಾಜ್ಯಾಡಳಿತ ಸೂತ್ರಗಳನ್ನು ನುರಿತ ಮುಖ್ಯಮಂತ್ರಿಗಳಲ್ಲಿರಿಸಿ ತಾನು ಕಾಮೋಪ ಭೋಗವನ್ನು ಅನುಭವಿಸುವುದ

ಕ್ಕಾಗಿ ರಾಣೀವಾಸವನ್ನು ಸೇರಿದನು. ಆ ರಾಣೀವಾಸದಲ್ಲಿ ಅನೇಕ ಸುಂದರ ಸ್ತ್ರೀಯರಿದ್ದರಾದುದರಿಂದ ಅವರೊಡನೆ ಸುರತ ಸುಖವನ್ನು ಅನುಭವಿಸುತ್ತಿದ್ದನಾದುದರಿಂದ ಪ್ರಜಾಪಾಲನೆಯಲ್ಲಿ ವಿಮುಖನಾದನು. ರತಿಸುಖದಲ್ಲಿಯೇ ಮನಸವನ್ನು ನೆಟ್ಟು ಅದರಲ್ಲಿಯೇ ಆಸಕ್ತನಾಗಿ, ವಿಷ್ಣು ಸುಖವನ್ನನುಭವಿಸುತ್ತಿದ್ದರು ಕೂಡ ತೃಪ್ತನಾಗದೆ ಇದ್ದನು. ಮಂತ್ರಿಗಳಾಗಲಿ ಪೌರಮುಖ್ಯಸ್ಥರಾಗಲಿ ತನ್ನನ್ನು ಭೇಟಿಮಾಡಲು ಬಂದಾಗ ರಾಣೀವಾಸದ ಬಾಗಿಲನ್ನು ತೆರೆಯದೆ ಬಾಗಿಲಕಂಡಿಯಲ್ಲಿ ಕೈಕಾಲುಗಳನು ತೋರಿಸುತ್ತಿದ್ದನೇ ವಿನಾ ರಾಜ್ಯಾಡಳಿತದಲ್ಲಿ ಸಲ್ಪವೂ ಆಸಕ್ತಿ ತೋರದೆ ಇಂದ್ರಿಯ ಭೋಗಗಳಲ್ಲಿಯೇ ನಿರತನಾದನು. ಹೀಗೆ ಅನೇಕ ದಿನಗಳು ಕಳೆದರೂ ಯಾರೊಬ್ಬರೂ ಗರ್ಭಧಾರಣೆ ಮಾಡಲಿಲ್ಲ. ಕಡೆಗೆ ತನ್ನ ಪಟ್ಟದರಸಿಯು ಗರ್ಭಿಣಿಯಾಗುವ ಸೂಚನೆಯಾಯಿತು. ಅತಿಯಾದ ರತಿಸುಖದಲ್ಲಿ ಮಗ್ನನಾಗಿದ್ದ ಕಾರಣ ಅಗ್ನಿವರ್ಣನಿಗೆ ಕ್ಷಯರೋಗ ಪ್ರಾಪ್ತಿಯಾಯಿತು. ಆದರೂ ಕೂಡ ರತಿಯಲ್ಲಿ ಅಸಕ್ತಿಯನ್ನು ಬಿಡಲಿಲ್ಲ. ಕಡೆಗೆ ಕ್ಷಯರೋಗವು ವೃದ್ಧಿಯಾಗಿ ರಾಜನ ಅಂಗಾಂಗಗಳೆಲ್ಲವೂ ಕೃಶವಾಗಿ ಕಡೆಗೆ ಆರೋಗಕ್ಕೆ ತುತ್ತಾದನು. ಇದನ್ನರಿತ ವೃದ್ಧ ಮಂತ್ರಿಗಳು ಅವನಿಗೆ ರಾಣೀವಾಸಕ್ಕೆ ಸೇರಿದ ಕೈತೋಟದಲ್ಲಿಯೇ ಅವನಿಗೆ ಅಗ್ನಿಸಂಸ್ಕಾರವನ್ನು ನೆರವೇರಿಸಿದರು. ಅದರಂತೆಯೇ ರಾಜನಿಗೆ ಸಲ್ಲಿಸಬೇಕಾದ ಅಂತ್ಯಸಂಸ್ಕಾರವನ್ನು ಪೂರೈಸಿದರು.

ರಾಜ್ಯವು ಅರಾಜಿಕವಾದುದನ್ನು ಯೋಚಿಸಿ ಪಟ್ಟದರಸಿಯು ಗರ್ಭಿಣಿಯಾಗಿರುವುದನ್ನು ತಿಳಿದು ಗಂಡು ಶಿಶುವನ್ನೇ ಪಡೆಯುವಳೆಂಬ ವಿಷಯವನ್ನು ದೈವಜ್ಞರಿಂದ ತಿಳಿದು, ಆರಾಣಿಯನ್ನೇ ಸಿಹ್ಮಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷಕ್ತಳನ್ನಾಗಿ ಮಾಡಿದರು. ರಾಣಿಯು ರಾಜ್ಯವನ್ನಾಳುವವರು ಮತ್ತಾರೂ ಇಲ್ಲವೆಂದು ತಿಳಿದು ತನ್ನ ಗರ್ಭಸ್ಥ ಶಿಶುವಿನ ಪರವಾಗಿ ರಾಜ್ಯವನ್ನು ಉತ್ತಮವಾದ ರೀತಿಯಲ್ಲಿ ಆಳುವುದಕ್ಕೆ ತೊಡಗಿದಳು ಇಲ್ಲಿಗೆ ಹತ್ತೊಂಭತ್ತನೆಯ ಅಧ್ಯಾಯದೊಡನೆ ಕವಿಯು ತನ್ನ ಅದ್ಭುತವಾದ ಈ ಕಾವ್ಯವನ್ನು ಮುಗಿಸಿದನು.

ಹಿನ್ನೆಲೆ

ಶ್ರೀ ಮಹಾಕವಿ ಕಾಳಿದಾಸನಿಂದ ರಚಿಸಲ್ಪಟ್ಟ ಮಹಾಕಾವ್ಯಗಳಲ್ಲಿ ಕುಮಾರ ಸಂಭವವೂ ಒಂದು ಎಂಬುದು ಬಲ್ಲವರ ನಿರ್ದಿಷ್ಟವಾದ ಅಭಿಪ್ರಾಯ, 'ರಘುವಂಶ' ಮತ್ತು 'ಮೇಘಧೂತ' ವೆಂಬದು ಉಳಿದ ಮಹಾಕಾವ್ಯಗಳು ರಘುವಂಶ ಕಾವ್ಯದಲ್ಲಿನ ಈಗ ಲಭ್ಯವಾಗಿರುವ ಹತ್ತೊಂಭತ್ತು ಸರ್ಗಗಳಲ್ಲಿ 'ಸೀತಾ ಪರಿತ್ಯಾಗ' ವೆಂಬ ವಿಷಯವನ್ನು ಪ್ರತಿಪಾದಿಸುವ ಹದಿನಾಲ್ಕನೆಯ ಸರ್ಗವು ಕವಿಯ ಕವಿತ್ವದ ಅತ್ಯಂತ ಪ್ರತಿಭೆಯನ್ನು ಹೊರಗಾಣಿಸುತ್ತದೆ ಎಂಬುದು ಪೌರ್ವಾತ್ಯ ಮತ್ತು ಪಾಶ್ಚಾತ್ಯ ವಿದ್ವಾಂಸರ ವಿಮರ್ಶಾತ್ಮಕವಾದ ಒಮ್ಮತವಾಗಿದೆ. ಅದಕ್ಕಾಗಿ ಈ ಹಿಂದೆ ಹದಿನಾಲ್ಕನೆಯ ಸರ್ಗದಲ್ಲಿನ ಶ್ಲೋಕಗಳಿಗೆ ಭಾಮಿನೀ ಷಟ್ಪದಿಯ ರೂಪವಾಗಿ ಕನ್ನಡದಲ್ಲಿ ಅನುವಾದಮಾಡಿದೆ. ಅದರಂತೆಯೇ ಕುಮಾರ ಸಂಭವದಲ್ಲಿನ ಐದನೆಯ ಸರ್ಗವೂ ಕೂಡ ಕವಿಯ ಪ್ರತಿಭೆಯೂ ಅಸದೃಶವಾದುದು ಎಂಬುದನ್ನು ವಿದ್ವನ್ಮಣಿಗಳು ಗಣಿಸಿರುತ್ತಾರಾಗಿ ಆ ಸರ್ಗದಲ್ಲಿನ ಶ್ಲೋಕಗಳಿಗೂ ಕೂಡ ಇದೇ ಭಾಮಿನೀ ಷಟ್ಪದಿಯಲ್ಲಿಯೇ ಕನ್ನಡಾನುವಾದವನ್ನು ತನ್ನ ಯೋಗ್ಯತೆಗೆ ತಕ್ಕಂತೆ ಅಳವಡಿಸಬೇಕೆಂಬ ಹೆಬ್ಬಯಕೆಯಿಂದ ಈ ಲೇಖಕನು ಪ್ರಯತ್ನಿಸಿರುತ್ತಾನೆ. ಇದರಲ್ಲಿನ ವಿಷಯವೆಂದರೆ ಪಾರ್ವತಿಗೆ ಲಭಿಸಿದ ಶಿವಸಾಕ್ಷಾತ್ಕಾರ. ಈ ವಿಷಯವನ್ನು ಪ್ರತಿಪಾದಿಸುವ ಮುನ್ನ ಹಿಂದಿನ ನಾಲ್ಕು ಸರ್ಗಗಳಲ್ಲಿ ವಿವರಿಸುವ ಕಥಾ ಭಾಗವನ್ನು ಹಿನ್ನೆಲೆಯ ರೂಪದಲ್ಲಿ ಈ ಮುಂದೆ ಸಂಗ್ರಹವಾಗಿ ನಿರೂಪಿಸಲಾಗಿದೆ :

ದಕ್ಷಪ್ರಜಾಪತಿಬ್ರಹ್ಮನ ಹೆಣ್ಣು ಮಕ್ಕಳಲ್ಲಿ ಅತ್ಯಂತ ಕಿರಿಯವಳೂ ಅಂತರ್ದೃಷ್ಟಿಯುಳ್ಳವಳು ಆದುದರಿಂದ ಗುಣಗ್ರಾಹಿಣಿಯೂ ಸೌಂದರ್ಯನಿಧಿಯೂ 'ಸತೀ' ಎಂಬ ಅನ್ವರ್ಥನಾಮದಿಂದ ಶೋಭಿತಳೂ ಆದ ಕನ್ಯಾತಿಲಕವು, ತನ್ನ ಹಿರಿಯ ಸಹೋದರಿಯರು ಬಾಹ್ಯಸೌಂದರ್ಯಕ್ಕೆ ಮರುಳಾಗಿ ಚಂದ್ರದೇವನನ್ನು ತಮ್ಮ ಪತಿಯನ್ನಾಗಿ ಸ್ವೀಕರಿಸಿದರೆ, ತನ್ನ ಅಂತರ್ದೃಷ್ಟಿಯಿಂದ ತತ್ವಜ್ಞಾನಸ್ವರೂಪಿಯೆನಿಸಿದ ಶಿವನನ್ನೇ ತನ್ನ ಪತಿಯನ್ನಾಗಿ ಮಾಡಿಕೊಳ್ಳುವ ಹೆಬ್ಬಯಕೆಯನ್ನು ತನ್ನ ಜನನಿಗೆ ತಾಯಿಯ ಮೂಲಕ ತಿಳಿಸಿದಳು. ದಕ್ಷಬ್ರಹ್ಮನಿಗೆ ಇದು ಒಪ್ಪಿಗೆಯಾಗಲಿಲ್ಲ, ಏಕೆಂದರೆ ಅವನು ತನ್ನ ಬಾಹ್ಯದೃಷ್ಟಿಯಿಂದ ವ್ಯಕ್ತಿಯ ಗುಣವನ್ನು ಅಳೆಯುವಂಥವನು. ಅವನ ದೃಷ್ಟಿಯಲ್ಲಿ

ಶಿವನು ಒಬ್ಬ ಬೈರಾಗಿ, ಶವಭಸ್ಮಧಾರಿ, ಶ್ಮಶಾನವಾಸಿ, ಕಡುಬಡವ, ವಿರೂಪಾಕ್ಷ ಅಂದರೆ ಕುರೂಪಿ, ಸರ್ಪಭೂಷ, ರುಂಡಮಾಲೆಯನ್ನು ಧರಿಸಿರುವವ, ಕಪಾಲಿ, ದಿಗಂಬರ, ಗಜಚರ್ಮಧಾರಿ. ಅವನ ತಂದೆ ತಾಯಿಗಳಾರೆಂಬುದು ಯಾರಿಗೂ ತಿಳಿಯದ ವಿಷಯ, ಅಂದರೆ ವರನಲ್ಲಿರಬೇಕಾದ ಗುಣಗಳೊಂದೂ ಅವನಲ್ಲಿ ಕಾಣಬರದು. ಹೀಗಿರುವಾಗ ತನ್ನ ಮುದ್ದಿನ ಮಗಳನ್ನು ಅಂಥವನಿಗೆ ಕೊಟ್ಟು ವಿವಾಹ ಮಾಡುವುದಕ್ಕೆ ದಕ್ಷನಿಗೆ ಸಮ್ಮತಿಯಿರಲಿಲ್ಲ, ಈ ಕಾರಣ ತನ್ನ ಮಗಳನ್ನು ಕುರಿತು "ಇಂತವನನ್ನು ನೀನು ವರಿಸುವುದು ಬೇಡ," ಎಂದು ಎಷ್ಟು ವಿಧವಾಗಿ ಬಲಾತ್ಕರಿಸಿದರೂ ಕೂಡ, ಶಿವನ ಮಹಿಮೆಯನ್ನು ತನ್ನ ಅಂತರ್ದೃಷ್ಟಿಯಿಂದ ತಿಳಿದು "ಶಿವನೇ ತನಗೆ ಪತಿ, ಆ ಮಹಾನುಭಾವನನ್ನು ಬಿಟ್ಟು ಮತ್ತಾರನ್ನು ನಾನು ವರಿಸಲಾರೆ, ಇದು ನನ್ನ ನಿರ್ಧಾರ" ಎಂದು ತಂದೆಗೆ ತಿಳಿಸಿಯೇ ಬಿಟ್ಟಳು. ತನ್ನ ಮಾತಿಗೆ ವ್ಯತಿರಿಕ್ತವಾಗಿ ವರ್ತಿಸುತ್ತಿರುವ ಆ ಮಗಳ ಚಾರಿತ್ರ್ಯಕ್ಕೆ ಬಹಳ ಬೇಜಾರುಪಟ್ಟು ತಿರಸ್ಕಾರ ಬುದ್ಧಿಯಿಂದ 'ಸತಿಯೇ ! ನಿನ್ನಿಷ್ಟದಂತೆ ವರ್ತಿಸು ಹೆತ್ತ ತಂದೆಯ ಮಾತನ್ನು ಲಕ್ಷಿಸದಿರುವುದರಿಂದ ನಿನ್ನನ್ನು ನಾನು ಮಗಳೆಂದೇ ಭಾವಿಸಲಾರೆ. ಇಂದಿನಿಂದ ನೀನು ತವರೂರಿನ ಆಸೆಯನ್ನೇ ಬಿಟ್ಟು ಬಿಡು' ಎಂದು ಹೇಳಿ ಆದರಂತೆಯೇ ವರ್ತಿಸಿದನು. ಸತಿಯಾದರೋ ತನ್ನ ಜನಕನ ಸಂಕುಚಿತ ದೃಷ್ಟಿಗೆ ಮರುಗಿ ಶಿವನನ್ನೇ ತನ್ನ ಪತಿಯನ್ನಾಗಿ ವರಿಸಿ ಆದೇವನೊಡನೆ ಸುಖದಿಂದಿದ್ದಳು. ಅಂದಿನಿಂದ ದಕ್ಷನಿಗೆ ತನ್ನ ಮಗಳಲ್ಲಿ ನಿರ್ಲಕ್ಷ್ಯಭಾವವೇ ಸ್ಥಿರವಾಯಿತು.

ಹೀಗಿರಲು ದಕ್ಷನು ಒಂದು ಮಹಾಯಜ್ಞವನ್ನು ನೆರವೇರಿಸ ಬೇಕೆಂದು ಬಗೆದು ಅದನ್ನು ಏರ್ಪಡಿಸಿ ಅದಕ್ಕಾಗಿ ಬ್ರಹ್ಮ ವಿಷ್ಣು ಮೊದಲಾದ ದೇವವರ್ಗವೆಲ್ಲವನ್ನೂ ಅದರಲ್ಲಿ ಪಾಲ್ಗೊಳ್ಳುವುದಕ್ಕಾಗಿ ಆಹ್ವಾನಿಸಿದುದು ಮಾತ್ರವಲ್ಲದ ತನ್ನ ಇತರ ಹೆಣ್ಣುಮಕ್ಕಳೆಲ್ಲರನ್ನೂ ಈ ಉತ್ಸವದಲ್ಲಿ ಭಾಗವಹಿಸುವುದಕ್ಕಾಗಿ ಕರೆಸಿದನು. ಆದರೆ ಕೊನೆಯ ಮಗಳೆನಿಸಿದ ಸತೀದೇವಿಯನ್ನು ತಿರಸ್ಕಾರ ಬುದ್ಧಿಯಿಂದ ಆಹ್ವಾನಿಸಲಿಲ್ಲ. ಆದರೂ ಸತಿಯು ತವರೂರಿನ ವಾಂಛಲ್ಯದಿಂದ ಈ ಯಜ್ಞದಲ್ಲಿ ಪಾಲ್ಗೊಳ್ಳಬೇಕೆಂದು ಬಯಸಿ ತನ್ನ ಪತಿಯಾದ ಶಿವನ ಸಮ್ಮತಿಯನ್ನು ಇದಕ್ಕಾಗಿ ಬೇಡಿದಳು, ಪರಶಿವನಿಗೆ ಭವಿಷ್ಯಜ್ಞಾನವು ಇದ್ದುದ

ರಿಂದ 'ಆಹ್ವಾನಿಸದಿರುವುದರಿಂದ ನೀನು ಅಲ್ಲಿಗೆ ಹೋಗುವುದು ಉಚಿತವಲ್ಲ: ನೀನು ಅಲ್ಲಿಗೆ ಹೋದರೆ ಅನರ್ಥಕ್ಕೆ ಕಾರಣವಾಗಬಹುದು' ಎಂದು ಹೇಳಿದರೂ ಕೂಡ ತನ್ನ ಹೆಬ್ಬಯಕೆಯನ್ನು ಪತ್ನಿಯು ಮುಂದೆ ಒಡ್ಡಿದುದರಿಂದ ಶಿವನು ಅದಕ್ಕೆ ಸಮ್ಮತಿಸಲು ಮಗನಾದ ಗಣಪತಿಯೊಡನೆ ವೃಷಭೇಶ್ವರನ ಮೇಲೇರಿ ತಂದೆಯ ಯಜ್ಞಶಾಲೆಗೆ ಪ್ರವೇಶಿಸಿದಳು, ಅಲ್ಲಿ ತಂದೆಯು ಮಗಳನ್ನು ನೋಡಿ ತಿರಸ್ಕಾರಬುದ್ಧಿಯಿಂದ ವರ್ತಿಸಿದುದು ಮಾತ್ರವಲ್ಲದೆ 'ನಿನಗೆ ಈ ಮನೆಯಲ್ಲಿ ಎಡೆಯಿಲ್ಲ' ಎಂದು ಹೇಳಿದರೂ ಕೂಡ, ಅದನ್ನು ಲಕ್ಷಿಸದೆ ಆ ಉತ್ಸವದಲ್ಲಿ ಪಾಲ್ಗೊಳ್ಳಲು ಅಲ್ಲಿಯೇ ನಿಂತುಬಿಟ್ಟಳು. ಯಜ್ಞವು ಆರಂಭವಾಯಿತು, ವಿವಿಧ ದೇವತೆಗಳಿಗೆ ಹವಿರ್ಭಾಗಗಳನ್ನು ಅರ್ಪಿಸಿದುದಾಯಿತು. ಆದರೆ ಶಿವನಿಗೆ ಸಲ್ಲ ಬೇಕಾದ ಹವಿರ್ಭಾಗವನ್ನು ಅರ್ಪಿಸಲೇಬೇಕೆಂದು ವಿಷ್ಣು ಬ್ರಹ್ಮಾದಿಗಳು ಬಲಾತ್ಕರಿಸಿದರೂ ಕೂಡ ಆ ದೇವನಲ್ಲಿನ ನಿಕೃಷ್ಟಬುದ್ಧಿಯಿಂದ ಹವಿರ್ಭಾಗ ವನ್ನು ಅವನಿಗೆ ಅರ್ಪಿಸದಿರುವುದು ಮಾತ್ರವಲ್ಲದೆ ಆ ದಿವ್ಯ ಮೂರ್ತಿಯನ್ನು ಹಳಿಯುವುದಕ್ಕೆ ಆರಂಭಿಸಿದನು, ಇದನ್ನು ಕೇಳಿ ಮಹಾಪತಿವ್ರತೆಯೆಂದು ಪ್ರಸಿದ್ಧಳಾದ ಸತೀದೇವಿಗೆ ಪತಿಯ ದೂಷಣೆಯು ಸಹಿಸದಂತಾಯಿತು. ದಕ್ಷ ನಿಂದ ಪಡೆದ ಆ ಶರೀರದೊಡನೆ ಮತ್ತೆ ಪತಿಯನ್ನು ಸೇರಲೊಲ್ಲದವಳಾಗಿ ಯೋಗಾಗ್ನಿಯಿಂದ ಆ ಯಾಗಶಾಲೆಯ ಆವರಣದಲ್ಲಿಯೇ ತನ್ನ ದೇಹವನ್ನು ದಗ್ಧಮಾಡಿದಳು. ದೇಹ ಬಿಡುವ ಮುನ್ನ ಮತ್ತೆ ಶರೀರವನ್ನು ಪಡೆದು ಆ ದೇವನನ್ನೇ ಪುನಃ ಒಡಗೂಡಬೇಕೆಂಬುದನ್ನು ಬಯಸಿದಳಾಗಿ ಅದರಂತೆ ಹಿಮವಂತನ ಮಗಳಾಗಿ ಬೆಳೆ ಬೆಳೆಯುತ್ತ ಶಿವನನ್ನೇ ಪತಿಯನ್ನಾಗಿ ಮಾಡಿಕೊ ಳ್ಳುವ ಹೆಬ್ಬಯಕೆಯಿಂದ ಅದಕ್ಕಾಗಿ ತಕ್ಕ ಸನ್ನಿವೇಶವನ್ನು ನಿರೀಕ್ಷಿಸುತ್ತಿದ್ದಳು.

ಇತ್ತ ಪರಶಿವನು ದಕ್ಷಯಜ್ಞ ಶಾಲೆಯಲ್ಲಿ ಪತ್ನೀ ದೇಹತ್ಯಾಗವೆಂಬ ಅನಾಹುತದ ವಿಷಯವನ್ನು ಕೇಳಿದೊಡನೆ ದುಷ್ಟ ಶಿಕ್ಷಣವಾದ ವಿನಾ ಶಿಷ್ಟ ಪರಿಪಾಲನೆಯಾಗಲಾರದೆಂದು ನೆನೆಸಿ ಕುಪಿತನಾಗಿ ತನ್ನ ಜಡೆಯೊಂದನ್ನು ನೆಲದ ಮೇಲೆಸ್ಪುಡಿಸಲು ವೀರಭದ್ರನ ಉತ್ಪತ್ತಿಯಾಯಿತು. ಕಾರಣ ಪುತ್ರನಾದ ಅವನಿಗೆ ದಕ್ಷಯಜ್ಞವನ್ನು ಧ್ವಂಸಮಾಡಿ ಆ ಮೂಲಕ ಅವನಿಗೆ ತಕ್ಕ ಶಿಕ್ಷೆಯನ್ನು

ವಿಧಿಸಬೇಕೆಂಬ ತನ್ನ ತಂದೆಯ ಆಣತಿಯನ್ನು ತಳೆದು ಅದರಂತೆಯೇ ಯಜ್ಞವನ್ನು ನಾಶಮಾಡಿ ತಪ್ಪಿತಸ್ಥವಾದ ದಕ್ಷನ ಶಿರಚ್ಛೇದನ ಕಾರ್ಯವನ್ನು ನೆರವೇರಿಸಿ ತನ್ನ ಉತ್ಪತ್ತಿಗೆ ಕಾರಣನಾದ ಪರಶಿವನಿಗೆ ಈ ವಿಷಯವನ್ನು ತಿಳಿಸಿದನು. ಪರಶಿವನಾದರೋ ತನ್ನ ಮೆಚ್ಚಿನ ಪತ್ನಿಯು ದೇಹತ್ಯಾಗ ಮಾಡಿದುದಕ್ಕೆ ಬಹಳ ಮರುಗೀ ತೀವ್ರ ವೈರಾಗ್ಯವನ್ನು ತಳೆದು, ಊರ್ಧ್ವರೇತಸುಳ್ಳವನಾಗಿ ಅಂದರೆ ಜಿತೇಂದ್ರಿಯನಾಗಿ ಹಿಮತ್ಪರ್ವತದ ತಪ್ಪಲಿನಲ್ಲಿ ಭೂತಗಣಗಳೊಡನೆ ಆವೃತನಾಗಿ ತೀವ್ರವಾದ ತಪಸ್ಸಿನಲ್ಲಿ ತೊಡಗಿದನು. ಬಹಿರ್ಮುಖನಾದಂದು ತತ್ವಬೋಧೆಯನ್ನು ವಹಿಸಿ ತನ್ನೆಡೆಗೆ ಬಂದ ಋಷಿಗಳಿಗೆ 'ದಕ್ಷಿಣಾಮೂರ್ತಿ' ಯೆಂಬ ಗುರುಸ್ಥಾನವನ್ನು ತಳೆದು ಜ್ಞಾನೋಪದೇಶವನ್ನು ಮಾಡತೊಡಗಿದರು.

ಈ ಮಧ್ಯೆ ಹಿಮವಂತನು ತನ್ನ ಪತ್ನಿಯಾದ ಮೇನಕೆಯೊಡನೆ ಪಾರ್ವತೀ ಎಂಬ ಅನ್ವರ್ಥನಾಮದಿಂದ ಬೆಳಗುವ ಗೌರಿ ದೇವಿಯು ವಿವಾಹ ವಯಸ್ಕಳಾದುದರಿಂದ ತಕ್ಕ ವರನನ್ನು ಆರಿಸಿ ಅವನಿಗೆ ಮದುವೆಮಾಡಿಕೊಡಬೇಕೆಂದು ಆಲೋಚಿಸುತ್ತಿದ್ದನು. ಹೀಗಿರುವಾಗ ನಾರದ ಮಹರ್ಷಿಯು ಹಿಮವಂತನ ಅರಮನೆಗೆ ಬಂದಾಗ' ಆ ಮಹರ್ಷಿಯೊಡನೆ ಪುತ್ರಿಯ ವಿವಾಹದ ವಿಷಯವನ್ನು ಪ್ರಸ್ತಾಪಿಸಿದಂದು ಆಕೆಯ ಪೂರ್ವಜನ್ಮದ ವೃತ್ತಾಂತವನ್ನು ತಿಳಿಯ ಹೇಳಿ, 'ಈ ನಿನ್ನ ಮಗಳಿಗೆ ಪರಶಿವನೇ ನಿರ್ದಿಷ್ಟನಾದ ವರನೆಂದು ಒತ್ತಿ ಹೇಳಿ, ಈ ಪರ್ವತದ ತಪ್ಪಲಿನಲ್ಲಿಯೇ, ತಪಸ್ಸಿನಲ್ಲಿ ತೊಡಗಿರುವ ಶಿವನನ್ನು ಹೇಗಾದರೂ ಒಪ್ಪಿಸಿ ತನ್ನ ಮಗಳನ್ನು ಆ ದೇವನೊಡನೆ ಸೇರಿಸಬೇಕಾಗಿದೆ ಆದುದರಿಂದ, ಬೇರೆ ಯಾವ ವರನನ್ನು ಅರಿಸುವ ಗೋಜಿಗೆ ಹೋಗಬಾರದು ಎಂದು ಎಚ್ಚರಿಸಿ ಅಲ್ಲಿಂದ ಹೊರಟು ಹೋದನು. ಆವರೆ ತೀವ್ರ ವೈರಾಗ್ಯದಿಂದ ತಪಸ್ಸನ್ನಾಚರಿಸುತ್ತಿದ್ದ ಆ ಶಿವನಿಗೆ ಮಗಳನ್ನು ವರಿಸುವಂತೆ ಮಾಡುವುದು ಅಸಾಧ್ಯವೆಂದೆನಿಸಿತಾದರೂ ಮಗಳ ಇಚ್ಛೆಯಂತೆ ಆ ದೇವನ ಸೇವೆಗೆ ನಿಯಮಿಸುವುದರ ಮೂಲಕ ಇದು ಸಾಧ್ಯವಾಗಬಹುದೆಂದೆಣಿಸಿ ಸೇವಾ ಕಾರ್ಯಕ್ಕಾಗಿ ಶಿವನ ಸಮ್ಮತಿ ಪಡೆದು ಇಬ್ಬರು ಸಖಿಯರ ಸಹಾಯವನ್ನೊದಗಿಸಿ ನೇಮಿಸಿದನು. ಸತಿಯಾದರೋ ತನ್ನ ಮನದಣಿಕೆಯು ಹೇಗಾದರೂ ನೆರವೇರಿಸಿಕೊಳ್ಳಬಹುದು ಎಂಬ ಆಸೆಯಿಂದ ಸೇವಾ ಕಾರ್ಯದಲ್ಲಿ ನಿರತಳಾದಳು.

ಈ ಮಧ್ಯೆ ತಾರಕಾಸುರನೆಂಬ ರಾಕ್ಷಸನ ಬಾಧೆಗೆ ಒಳಗಾಗಿದ್ದ ದೇವತೆಗಳು ಬ್ರಹ್ಮಾದಿ ದೇವತೆಗಳೊಡಗೂಡಿ ವಿಷ್ಣುಸ್ಥಾನಕ್ಕೆ ಹೋಗಿ ತಮ್ಮ ಸಮಸ್ಯೆಗೆ ಪರಿಹಾರವನ್ನು ಸೂಚಿಸಬೇಕೆಂದು ಬೇಡುತ್ತಿದ್ದ ದೇವತೆಗಳ ಇಷ್ಟಾರ್ಥವನ್ನು ಪೂರೈಸಲು ಈ ಮುಂದಿನಂತೆ ಅವರಿಗೆ ಸೂಚಿಸಿದನು. "ದೇವತೆಗಳಿರಾ! ಕೇಳಿರಿ ಈ ತಾರಕಾಸುರನೂ ಈ ಹಿಂದೆ ಶಿವನನ್ನು ಕುರಿತು ಉಗ್ರ ತಪಸ್ಸನ್ನಾಚರಿಸಿ, ಆ ದೇವನ ಮೆಚ್ಚಿಗೆಗೆ ಒಳಗಾಗಿ 'ನಿನ್ನ ಔರಸ ಪುತ್ರನಿಂದಲ್ಲದೆ ಮತ್ತಾರಿಂದಲೂ ತನಗೆ ಮರಣವಾಗದಿರಲಿ' ಎಂಬ ವರವನ್ನು ಪಡೆದಿರುತ್ತಾನೆ. ಶಿವನ ಪತ್ನಿಯಾದ ಸತೀದೇವಿಯು ಯೋಗಾಗ್ನಿಯಿಂದ ದಗ್ಧಳಾದುದರಿಂದಲೂ ಆ ಶಿವನು ಜಿತೇಂದ್ರಿಯನಾಗಿ ವೈರಾಗ್ಯ ಭಾವವನ್ನು ತಳೆದು ತೀವ್ರವಾದ ತಪಸ್ಸನ್ನಾಚರಿಸುತ್ತಿರುವುದರಿಂದಲೂ, ಆ ಶಿವನು ಬೇರೊಬ್ಬ ಹೆಂಡತಿಯನ್ನು ವರಿಸದಿರುವುದರಿಂದ ಅವನಿಗೆ ಔರಸ ಪುತ್ರನಾಗುವುದಕ್ಕೆ ಅವಕಾಶವೇ ಇರದು ಇದರಿಂದ ತನಗೆ ಮರಣ ಬಾರದು ಎಂಬ ಧೈರ್ಯ, ಹೀಗೆ ದೇವತೆಗಳಿಗೆ ಕಂಟಕಪ್ರಾಯನಾಗಿರುತ್ತಾನೆ. ಶಿವನು ಕೊಟ್ಟ ವರವನ್ನು ಯಾರೂ ಮೀರಲು ಸಾಧ್ಯವಿಲ್ಲ. ಆದರೆ ಇದಕ್ಕೆ ಒಂದುಪಾಯವುಂಟು, ಸತೀದೇವಿಯು ದೇಹವನ್ನೇ ಬಿಡುವಂದು, ಮುಂದಿನ ಜನ್ಮದಲ್ಲಿ ಆ ಶಿವನನ್ನೇ ಪತಿಯನ್ನಾಗಿ ಮಾಡಿಕೊಳ್ಳಬೇಕೆಂದು ಬಯಸಿ ಈಗ ಹಿಮವಂತ ಪುತ್ರಿಯಾಗಿ ಜನ್ಮವೆತ್ತಿರುತ್ತಾಳೆ. ಆ ಕುವರಿ ವಿವಾಹವಾಗುವ ವಯಸ್ಕಳಾಗಿರುತ್ತಾಳೆ. ಆ ಶಿವನನ್ನೇ ಪತಿಯನ್ನಾಗಿ ಮಾಡಿಕೊಳಬೇಕೆಂಬ ಹೆಬ್ಬಯಕೆಯಿಂದಈಗ ಹಿಮತ್ಪರ್ವತದ ತಪ್ಪಲಿನಲ್ಲಿ ತೀವ್ರ ತಪಸ್ಸಿನಲ್ಲಿ ತೊಡಗಿರುವ ಶಿವನನ್ನು ಸೇವೆಮಾಡಲೋಸುಗ ತನ್ನ ತಂದೆಯ ಒಪ್ಪಿಗೆಯನ್ನು ಪಡೆದು ಆ ಕೆಲಸಕ್ಕೆ ತೊಡಗಿರುತ್ತಾಳೆ, ಏನಾದರೂ ಮಾಡಿ ಆ ಶಿವನು ಆ ಕನ್ಯೆಯಲ್ಲಿ ಅನುರಕ್ತನನ್ನಾಗಿ ಮಾಡಿದರೆ ನಿಮ್ಮ ಕಾರ್ಯವು ಸಿದ್ಧಿಗೊಳ್ಳುವುದು. ಇದಕ್ಕೆ ನನ್ನ ಮಗನಾದ ಮನ್ಮಥನ ನೆರವನ್ನು ಪಡೆಯಬಹುದು" ಎಂದು ಹೇಳಿ ಮನ್ಮಥನನ್ನು ಆ ದೇವತೆಗಳಿಗೆ ಒಪ್ಪಿಸಿದನು.

ಈ ಸಲಹೆಯನ್ನು ವಿಷ್ಣುದೇವನಿಂದ ಪಡೆದು ಮದನನೊಡಗೂಡಿ ಜೊತೆಯಲ್ಲಿ ಮದನನ ಕಾರ್ಯಕ್ಕೆ ನೆರವಾಗುವ ವಸಂತನನ್ನೂ, ತೀವ್ರ ತಪಸ್ಸಿನಲ್ಲಿ ತೊಡಗಿದ್ದ ಶಿವನನ್ನು ಕೆಣಕುವುದರ ಪರಿಣಾಮವಾಗಿ ತನ್ನ ಪತಿಗೆ ಹಾನಿಯಾಗ

ಬಹುದೆಂಬ ಶಂಕೆಯಿಂದ ತನ್ನನ್ನೊಡಗೂಡಲೆಳೆಸಿದ ಪ್ರೇಯಸಿಯಾದ ಸತೀ ದೇವಿಯನ್ನು ಒಡಗೂಡಿಕೊಂಡು ಶಿವನ ತಪೋವನಕ್ಕೆ ದೇವತೆಗಳೆಲ್ಲರೂ ತೆರಳಿದರೂ ಮನ್ಮಥನು ಮೊದ ಮೊದಲು ತನ್ನ ಮಹಿಮೆಯ ವಿಷಯದಲ್ಲಿ ಬಹು ಗರ್ವದಿಂದ ಕೂಡಿದ್ದರೂ ಕೂಡ, ತಪೋವನದಲ್ಲಿ ಘೋರ ತಪಸ್ಸಿನಲ್ಲಿದ್ದ ಈ ಶಿವನನ್ನು ನೋಡಿದ ಕೂಡಲೆ ಎದೆಗುಂದಿದುದರಿಂದ ತನ್ನ ಕೈಲಿದ್ದ ಬಿಲ್ಲು ಬಾಣಗಳೆಲ್ಲವೂ ಕಳಚಿ ಬಿದ್ದವು.

ಆದರೆ ಅದೇ ತಾನೆ ಶಿವನು ಬಹಿರ್ಮುಖನಾಗಲಿಕ್ಕಾಗಿ ಶಿವನ ಸೇವಕನಾದ ನಂದಿಯು ಸೇವೆಗೆ ಕೈಗೊಟ್ಟಿದ್ದ ಪಾರ್ವತಿಯನ್ನು ಶಿವನಿಗೆ ಪರಿಚಯ ಮಾಡಿಕೊಟ್ಟಂದು ಪಾರ್ವತಿಯು ತನ್ನ ಅಚ್ಛಿನ್ನ ಭಕ್ತಿಯನ್ನು ತೋರಿಸುವ ಸಲುವಾಗಿ ಪದ್ಮಪುಷ್ಪದಲ್ಲಿರುವ ಬೀಜಗಳಿಂದ ರಚಿಸಲ್ಪಟ್ಟ ಹಾರವನ್ನು ಅರ್ಪಿಸುತ್ತಿರುವ ಸಂದರ್ಭವನ್ನು ವೀಕ್ಷಿಸಿ, ಇದು ತನ್ನ ಕಾರ್ಯದಕ್ಷತೆಗೆ ಸುಸಮಯವೆಂದೆಣಿಸಿ ಮನ್ಮಥನು ತನ್ನ ಐದು ಪುಷ್ಪಬಾಣಗಳನ್ನೂ ಒಮ್ಮೆಲೆ ಈಶ್ವರನ ಎದೆಗೆ ಗುರಿಯಿಟ್ಟು ಪ್ರಯೋಗಿಸಿದನು. ಇದರ ಪರಿಣಾಮವಾಗಿ ಶಿವನ ಮನಸ್ಸಿನಲ್ಲಿ ಕಾಮವಾಸನೆ ತಲೆದೋರಿತು, ತೀವ್ರ ವೈರಾಗ್ಯದಿಂದ ವರ್ತಿಸುತ್ತಿದ್ದ ತನ್ನಲ್ಲಿ ಈ ಭಾವನೆ ತಲೆದೋರಿದುದಕ್ಕಾಗಿ ಕಾರಣವನ್ನು ತಿಳಿಯುವ ಉದ್ದೇಶದಿಂದ ತನ್ನ ದೃಷ್ಟಿಯನ್ನು ಸುತ್ತಲೂ ಪಸರಿಸಿದನು. ಆಗ ಮನ್ಮಥನು ಬಿಲ್ಲನ್ನು ಹಿಡಿದಿರುವುದು ಕಂಡುಬಂದಿತು. ವೈರಾಗ್ಯಕ್ಕೆ ವಿಘ್ನವನ್ನೊಡ್ಡಿದುದಕ್ಕೆ ಕಾರಣನಾದ ಮನ್ಮಥನ ವಿಷಯದಲಿ ಶಿವನಿಗೆ ಭಯಂಕರವಾದ ಕೋಪವು ಮೂಡಿತು. ಇದರ ಪರಿಣಾಮವಾಗಿ ಆ ದೇವನುಹ ಣೆಗಣ್ಣು ತನ್ನ ತೆರೆದುದುದರಿಂದ ಅಗ್ನಿಯು ಹೊರಬಿದ್ದಿತು.

> ಕ್ರೋಧಂ ಪ್ರಭೋ ! ಸಂಹರ ಸಂಹರೇತಿ ।
> ಯಾವತ್ ಗಿರಸ್ತೇ ಮರುತಾಂ ಚರಂತಿ ॥
> ತಾವತ್ ಸ ವಹ್ನಿಃ ಭವನೇತ್ರ ಜನ್ಮಾ ।
> ಭಸ್ಮಾವಶೇಷಂ ಮದನಂ ಚಕಾರ ॥

ಎಂಬ ಕವಿಯ ಮಾತಿನಂತೆ 'ಮಹಾಶಿವ ಪ್ರಭೋ ! ದೇವತಾ ಕಾರ್ಯವನ್ನು ನೆರವೇರಿಸಲು ಸಹಾಯಕವಾಗಿ ತೊಡಗಿರುವ ಮನ್ಮಥನ ವಿಷಯದಲ್ಲಿ

ಕೋಪವನ್ನು ಹಿಂದಿರುಗಿಸು' ಎಂದು ದೇವತೆಗಳು ಶಿವನನ್ನು ಪ್ರಾರ್ಥಿಸುತ್ತಿರು ವಂತೆಯೇ ಶಿವನ ಹಣೆಗಣ್ಣಿನಿಂದ ಹೊರಬಿದ್ದ ಅಗ್ನಿಯು ಮನ್ಮಥನನ್ನು ಸುಟ್ಟು ಬೂದಿಮಾಡಿತು. ಶಿವನಾದರೂ ಸ್ತ್ರೀವ್ಯಕ್ತಿಯು ಸಮೀಪದಲ್ಲಿರು ವುದರಿಂದ ಈ ಅನರ್ಥಕ್ಕೆ ಕಾರಣವಾಯಿತು. ಈ ಕಾರಣದಿಂದ ಆ ಸ್ಥಳವನ್ನ ಬಿಟ್ಟುಹೋಗಬೇಕೆಂದೆಣಿಸಿ ಭೂತ ಪತಿಯಾದ ಶಿವನು ತನ್ನ ಭೂತ ಗಣಗ ಳೊಡನೆ ತಕ್ಷಣದಲ್ಲಿಯೇ ತನ್ನ ಮಹಿಮೆಯಿಂದ ಕಣ್ಮರೆಯಾದನು. ಇದರ ಪರಿಣಾಮವಾಗಿ ಪಾರ್ವತಿಗೆ ಆಶಾಭಂಗವಾಗಿ ಬಹು ದುಃಖದಿಂದ ತಂದೆಯ ಮನೆಗೆ ಹಿಂದಿರುಗಿದಳು.

ಇತ್ತ, ಪರಮಶಿವನ ವಿಷಯದಲ್ಲಿ ತನ್ನ ಪ್ರತಾಪವನ್ನು ತೋರಲು ತೊಡಗಿದ ತನ್ನ ಪತಿಯಾದ ಕಾಮದೇವನಿಗೆ ಅನಿಷ್ಟ ಫಲವುಂಟಾಗಬಹುದೆಂದು ಶಂಕಿಸಿ ಅವನೊಡಗೂಡಿ ಬಂದ ರತೀದೇವಿಯು ತಾನು ಶಂಕಿಸಿದಂತೆಯೇ ಈಶ್ವರನ ಕೋಪಾಗ್ನಿಗೆ ತುತ್ತಾಗಿ ಸುಟ್ಟು ಬೂದಿಯಾದುದನ್ನು ಕಂಡು ವಿರಹದುಃಖವನ್ನು ಸಹಿಸಲಾರದೆ ತಾನೂ ದೇಹವನ್ನು ತ್ಯಾಗಮಾಡಬೇಕೆಂದು ನಿರ್ಧರಿಸಿ, ಮದನನನ್ನು ಒಡಗೊಂಡು ಅವನ ಕಾರ್ಯಕ್ಕೆ ನೆರವು ನೀಡಲು ಬಂದಿದ ವಸಂತನನ್ನು ಕುರಿತು 'ವಸಂತ ರಾಜ ! ನಿನ್ನ ಪ್ರಾಣಮಿತ್ರನ ಗತಿ ಯೇನಾಯಿತು ಎಂಬುದು ನಿನ್ನ ಕಣ್ಣ ಮುಂದೆಯೇ ನಡೆಯಿತಲ್ಲವೇ ! ಆ ನಿನ್ನ ಮಿತ್ರನಿಗೆ ಅನಪಾಯಿನಿಯೆನಿಸಿದ ನಾನು ಅವನನ್ನು ಬಿಟ್ಟಿರಲಾರೆಯಾದುದರಿಂದ ಅವನ ಚಿತಾಭಸ್ಮದೊಡನೆ ನನ್ನದನ್ನೂ ಸೇರಿಸುವಂತೆ ಮಾಡಿ ಆ ಪುಣ್ಯಕ್ಕೆ ಭಾಗಿಯಾಗಿ ಆ ಮೂಲಕ ನಿನ್ನ ಮೈತ್ರೀ ಭಾವವನ್ನು ಪ್ರದರ್ಶಿಸು. ಏಕೆಂದರೆ ನನ್ನ ಪ್ರಿಯತಮನು ನನ್ನ ಅಗಲಿಕೆಯಿಂದುಟಾಗುವ ವಿರಹ ದುಃಖವನ್ನು ಎಂದಿಗೂ ಸಹಿಸಲಾರೆ' ಎಂದು ಅಂಗಲಾಚಿ ಮರಣೋನ್ಮುಖಿಯಾಗಿರುವ ಸಂಧರ್ಭದಲ್ಲಿ ಆಕಾಶವಾಣಿಯು 'ಮಂಗಳಾಂಗಿ' ! ಈ ಸಹಾಸಕ್ಕೆ ಯತ್ನಿಸ ಬೇಡ, ಈ ಮುಂದೆ ಪಾರ್ವತೀ ದೇವಿಯು ಪರಶಿವನನ್ನೇ ಪತಿಯನ್ನಾಗಿ ಗಳಿ ಸುವ ನಿರ್ಧಾರದಿಂದ ಅವನನ್ನುದ್ದೇಶಿಸಿ ತೀವ್ರ ತಪಸ್ಸನ್ನಾಚರಿಸಿ ಆ ಮೂಲಕ ಅವನ ಒಲವಿಗೆ ಪಾತ್ರಳಾಗಿ ತನ್ನಿಷ್ಟಾರ್ಥವನ್ನು ಪಡೆಯುತ್ತಾಳಾಗಿ ಆ ಸಂದರ್ಭದಲ್ಲಿ ನಿನ್ನ ಪತಿಗೆ ಪುನರ್ಜನ್ಮವು ದೊರಕುತ್ತದೆ ಆದರಿಂದ

ನಿನ್ನ ಇಷ್ಟಾರ್ಥವನ್ನು ಸಾಧಿಸಬಹುದಾದುದರಿಂದ ಅಲ್ಲಿಯವರೆಗೂ ನೀನೇ ಜೀವವನ್ನುಳಿಸಿಕೊಂಡಿರು 'ಆಶಾಬಂಧ ಃ ಕುಸುಮಸದೃಶಂ ಃ ಪ್ರಾಯಶ್ಯೇ ಹ್ಯಂಗ ನಾನಾಂ । ಸದ್ಯಪಾತಿ ಪ್ರಣಯ ಹೃದಯಂ ವಿಪ್ರಯೋಗೇ ರುಣದ್ಧಿ । ಎಂದು ಇದೇ ಕವಿಯು ಪ್ರತಿಪಾದಿಸಿದಂತೆ "ಅಂಗನೆಯರ ಹೃದಯವು ಕೋಮಲ ವಾದ ಹೂವಿನಂತೆ ತಕ್ಷಣವೇ ಬಾಡಿ ಕೆಳಕ್ಕೆ ಉದುರುವಂಥದಾದರೂ ಕೂಡ ಆಶೆಯೆಂಬ ಬಂಧವು, ಬಾಡಿದ ಹೂ ವೃತಾದೊಡನೆ ಸ್ವಲ್ಪಕಾಲ ಕಚ್ಚಿ ಕೊಂಡಿರುವಂತೆ, ತೊರೆಯಬೇಕೆಂದಿರುವ ಪ್ರಾಣವನ್ನು ಅದನ್ನು ತೊರೆಯ ದಂತೆ ತಡೆದಿರುತ್ತದೆ" ಎಂಬ ಈ ತತ್ವದ ಭಾವದಿಂದ ಮುಂದೆ ತನ್ನಿನಿಯನು ತನ್ನನ್ನು ಸೇರುವನು ಎಂಬ ಆಶೆಯಿಂದ ತನ್ನ ಪ್ರಾಣವನ್ನು ಕೊನೆಗಾಣಿಸಿ ಕೊಳ್ಳುವ ನಿರ್ಧಾರವನ್ನು ಹಿಮ್ಮೆಟ್ಟಿಸಿ ಮುಂದಿನ ಆ ಕಾಲದ ನಿರೀಕ್ಷಣೆಯಲ್ಲಿಯೇ ಕಾಲ ಕಳೆದಳು.

ಈ ಕತೆ ಪಾರ್ವತಿಯು ಹತಾಶಳಾಗಿ ಮನೆಗೆ ಹಿಂದಿರುಗಿದರೂ ಕೂಡ ತನ್ನ ಮನದೆಣಿಕೆಯನ್ನು ಸಾಧಿಸಲೇಬೇಕೆಂದು ನಿರ್ಧರಿಸಿ 'ಶಿವನು ಬಾಹ್ಯ ಸೌಂದರ್ಯಕ್ಕೆ ಮನಗೊಡನು. ಆ ದೇವನಿಗೆ ಬೇಕಾದುದು ಅಂತಸ್ಸೌಂದರ್ಯ ಅಂದರೆ ಮನಸ್ಸಿನ ಪಾರಿಸುದ್ಧ್ಯತೆ. ಇದನ್ನು ಪಡೆಯಲು ತಪಶ್ಚರಣೆಯೇ ಮುಖ್ಯಸಾಧನ' ಎಂದು ಬಗೆದು, ಅದಕ್ಕಾಗಿ ತಂದೆ ತಾಯಿಯರ ಒಪ್ಪಿಗೆ ಯನ್ನು ಪಡೆದು ಹಿಮಾಲಯದ ಅತ್ಯುನ್ನತ ಶಿಖರದೆಡೆಯನ್ನು ಸೇರಿ ಶಿವನನ್ನು ಕುರಿತು ಘೋರವಾದ ತಪಸ್ಸಿನಲ್ಲಿ ತೊಡಗಿದಳು. ಆಕೆಯ ಮನಸ್ಸನ್ನು ಪರೀಕ್ಷಿಸಲು ಬ್ರಹ್ಮಚಾರಿಯ ವೇಷದಲ್ಲಿ ಆಕೆಯನ್ನು ಸಮೀಪಿಸಿ ತ್ರಿಕರಣ ಶುದ್ಧಿಯಿಂದ ಶಿವನನ್ನು ಪತಿಯನ್ನಾಗಿ ವರಿಸಬೇಕೆಂಬ ಆಕೆಯ ನಿರ್ಧಾರಕ್ಕೆ ಮೆಚ್ಚಿ ಪ್ರತ್ಯಕ್ಷನಾಗಿ ಆಕೆಯ ಇಷ್ಟಾರ್ಥವನ್ನು ನೆರವೇರಿಸಲು ತಾನು ಸಿದ್ದ ಎಂಬ ವಿಷಯವೇ ಈ ಮಹಾಕಾವ್ಯದ ಐದನೆಯ ಸರ್ಗದ ವಸ್ತುವಾಗಿದೆ ಯಾಗಿರುವುದರಿಂದ ಅದರಲ್ಲಡಗಿರುವ ಶ್ಲೋಕರತ್ನಗಳನ್ನು ಕನ್ನಡ ಭಾಷೆಗೆ ಅನುವಾದಿಸಲು ಯತ್ನಿಸಲಾಗಿದೆ :–

ಮಹಾಕವಿ ಕಾಳಿದಾಸ ಕೃತ

ಕುಮಾರ ಸಂಭವದೊಳಗಿನ

5 ನೇ ಸರ್ಗದ ಕನ್ನಡಾನುವಾದ

ಭಾಮಿನೀ ಷಟ್ಪದಿ

ತಥಾ ಸಮಕ್ಷಂ ದಹತಾ ಮನೋಭವಂ ।
ಪಿನಾಕಿನಾ ಭಗ್ನಮನೋರಥಾ ಸತೀ ॥
ನಿನಿಂದ ರೂಪಂ ಹೃದಯೇನ ಪಾರ್ವತೀ ।
ಪ್ರಿಯೇಷು ಸೌಭಾಗ್ಯಫಲಾ ಹಿ ಚಾರುತಾ ॥ ೧

ಯೇಷಸಾ ಕರ್ತುಮವಂಧ್ಯರೂಪತಾಂ ।
ಸಮಾಧಿಮಾಸ್ಥಾಯ ತಪೋಭಿರಾತ್ಮನಃ ॥
ಅವಾಪ್ಯತೇ ವಾ ಕಥಮನ್ಯಥಾ ದ್ವಯಂ ।
ತಥಾವಿಧಂ ಪ್ರೇಮ ಪತಿಶ್ಚತಾ ದೃಶಃ ॥ ೨

ನಿಶಂಯ ಚೈನಾಂ ತಪಸೇ ಕೃತೋದ್ಯಮಾಂ ।
ಸುತಾಂ ಗಿರೀಶಪ್ರತಿಸಕ್ತಮಾನಸಾಂ ॥
ಉವಾಚ ಮೇನಾ ಪರಿರಭ್ಯ ವಕ್ಷಸಾ ।
ನಿವಾರಯಂತೀ ಮಹತೋ ಮುನಿವ್ರತಾತ್ ॥ ೩

ಮನೀಷಿತಾಃ ಸಂತಿ ಗೃಹೇಷು ದೇವತಾಃ ।
ತಪಃ ಕ್ವ? ವತ್ಸೇ !, ಕ್ವ? ಚ ತಾವಕಂ ವಪುಃ ॥
ಪದಂ ಸಹೇತ ಭ್ರಮರಸ್ಯ ಪೇಲವಂ ।
ಶಿರೀಷ ಪುಷ್ಪ ನ ಪುನಃ ಪತತ್ರಿಣಃ ॥ ೪

ಅಂತು ತನ್ನಯ ಕಣ್ಣ ಮುಂಗಡೆ ।
ಕಂತುದೇವನ ಸುಟ್ಟ ಶಿವನಿಂ ।
ದಂತ ರಂಗದ ಬಯಕೆ ಮುರಿಯಲಿಕಂದು ಗಿರಿಯಣುಗಿಯಾಗ ॥
ಚಿಂತೆಯಲಿ ತಾ ತನ್ನ ರೂಪವ-।
ನಂತದೊಳು ನಿಂದಿಪಳು ನಿಜವಿನ-।
ರಂತದೊಲುಮೆಯ ಪಡೆವುದೇ ಪಡೆವುದೇ ಫಲವೊಡಲ ಚೆಲುವಿಂಗೆ ॥ ೧

ಚಲಿಸದದರಿಂ ಮನವ ನೊಂದೆಡೆ ।
ನಿಲಿಸಿ ತಪವಂ ಮಾಡಿ ಮೃಡನ-।
ನ್ನೋಲಿಸಿ ಸತಿ ತನ್ನೊಡಲ ಸೊಬಗಿಗೆ ಫಲವನೆಳಸಿದಳು ॥
ಸಲುವರೀತಿಯದೆಂತು ಮಾಪರಿ-।
ಯೊಲುಮೆಯುಂ ಮತ್ತವನ ಪೋಲುತ
ನಿಲುವ ವಲ್ಲಭದೇವನುಂ ತಾವೆರಡುಮಲ್ಲದೊಡೆ ॥

ಶೂಲಿಯಲಿ ಮನನೆಟ್ಟು ತನ್ನಯ ।
ಬಾಲೆ ಯುವನನ್ನೊಲಿಸೆ ತಪಸಿನ ।
ಕೇಳಿಗೆಡೆಗೊಟ್ಟಿರುವ ವಾರ್ತೆಯನಂದು ಮೇನಕೆಯು ॥
ಕೇಳಿ ತನ್ನಣುಗಿಯನು ತನ್ನದೆ-।
ಗಾಲಿಸಿಕೊಂಡ ಮಿತರಾಗದಿ ।
ಪೇಳಿದಳು ತಪಸಿಂಗೆ ಮನಗೊಡಬೇಡಬೇಡೆಂದು ॥ ೩

ಅಮ್ಮ ಮಗಳೇ ? ಇಷ್ಟ ದೈವಗ-।
ಳೆಮ್ಮ ಮನೆಗಳಲಿರುವರವರೊಲಿ-।
ಸಮ್ಮ ಬಲುತಪವೆತ್ತ ? ನಿನ್ನೀ ಸೊಂಪಿನೊಡಲೆತ್ತ ? ॥
ಹೆಮ್ಮೆಯಿಂದಾರಡಿಯ ತುಳಿತ-।
ಕಮ್ಮು ಮಲರಹ ಮೃದು ಶಿರೀಷವು ।
ನಮ್ಮುವುದು ನೀಂ ಸೈಸದೆಂದಿಗು ಹಕ್ಕಿ ಹಜ್ಜೆಯನು ॥ ೪

ಇತಿ ಧೃವೇಚ್ಛಾಂ ಅನುಶಾಸತೀ ಸುತಾಂ |
ಶಶಾಕ ಮೇನಾ ನ ನಿಯಂತು ಮುತ್ಯಮಾತ್ ॥
ಕ ಈಪ್ಸಿತಾರ್ಥ ಸ್ಥಿರ ನಿಶ್ಚಯಂ ಮನಃ |
ಪಯಶ್ಚ ನಿಮ್ನಾಭಿಮುಖಂ ಪ್ರತೀಪಯೇತ್ ॥ ೫

ಕದಾಚಿದಾಸನ್ನ ಸುಖೀಮುಖೇನ ಸಾ |
ಮನೋರಥಜ್ಞಂ ಪಿತರಂ ಮನಸ್ವಿನೀ ॥
ಅಯಾಚದಾರಣ್ಯ ನಿವಾಸಮಾತ್ಮನಃ |
ಫಲೋದಯಾಂತಾಯ ತಪಸ್ಸಮಾದಯೇತ್ ॥ ೬

ಅಥಾನು ರೂಪಾಭಿ ನಿವೇಶತೋಷಿಣಾ |
ಕೃತಾಭ್ಯನುಜ್ಞಾ ಗುರುನಾಗರೀಯಸಾ ॥
ಪ್ರಜಾಸು ಪಶ್ಚಾತ್ ಪ್ರತಿತಂ ತದಾಖ್ಯಯಾ |
ಜಗಾಮ ಗೌರೀ ಶಿಖರಂ ಶಿಖಂಡಿ ಮತು ॥ ೭

ವಿಮುಚ್ಯ ಸಾ ಹಾರ ಮಹಾರ್ಯ ನಿಶ್ಚಯಾ |
ವಿಲೋಲಯಷ್ಟಿ ಪ್ರವಿಲುಪ್ತ ಚಂದನಂ ॥
ಬಬಂಧ ಬಾಲಾರುಣ ಬಭ್ರುವಲ್ಕಲಂ |
ಮಯೋದರೋತ್ಸೇಧ ವಿಶೀರ್ಣ ಸಂಹತಿ ॥ ೮

ಈ ತೆರೆದ ಬೋದೆಯಲಿ ಮೇನಕೆ-।
ತಾತಪಂಗೈದಿಚ್ಛೆ ಸಾಧಿಪ ।
ಜಾತಯುದ್ಯಮವನ್ನು ತಡೆಯಲು ಶಕ್ತಿಗುಂದಿದಳು ॥
ಆತನಾರ್ ಇಷ್ಟಾರ್ಥ ಸಾಧಿಸೆ ।
ಜಾತ ನಿಶ್ಚಯಮುಳ್ಳ ಮನವಂ ।
ಕಾತರಿಸಿ ಕೆಳಗಿಳಿವ ಜಲಮಂ ಪಿಂದಕಟ್ಟುವವಂ ॥ ೫

ಒಂದು ದಿನ ಬಳಿಕಾಪ್ತ ಸಖಿಮುಖ-।
ದಿಂದ ದೃಢಮನಸಿನಲಿ ಮೆರೆವರ-।
ನಿಂದ ಮುಖಿ ತನ್ನಿಚ್ಛೆಯಂದವ ಚೆಂದದಿಂದರಿದ ॥
ತಂದೆಯನು ಬೇಡಿದಳು ಬಲು ತಪ-।
ದಿಂದ ಮನದಭಿಲಾಷೆಯನು ತಾಂ ।
ಪೊಂದು ವರೆಗಂ ವಿಪಿನವಾಸಕೆ ತನಗನುಜ್ಞೆಯನು ॥ ೬

ತನುಜೆಯುಚಿತಾಗ್ರಹಕೆ ಮೋದದ ।
ಹೊನಲ ಪೊಕ್ಕತಿಪೂಜ್ಯನಾಗಿ ಹ ।
ಜನಕನಿಂದಪ್ಪಣೆಯ ಗೌರಿಯು ಪೊಂದಿ ತಾಂ ಬಳಿಕ ॥
ಜನತೆಯೊಳು ಮುಂದಕ್ಕೆ ತಪ್ಪೆಸ-।
ರಿನಲಿ ಜಸವೊಡೆದೆಸೆವ ಮೇಣ್ ಶಿಖಿ-।
ಗಣಗಳಿಂದೊಪ್ಪಿದ್ದ ಗೌರೀ ಶಿಖರ ಮನೆ ಸಾರ್ದಳ್ ॥ ೭

ಪೊತ್ತ ದೃಢನಿಶ್ಚಯವ ನೊತ್ತದ ।
ತತ್ತರುಣಿ ಕಂಠದಲಿ ತೂಗಾ-।
ಡುತ್ತ ಚಂದನ ಬಳಿದ ಮುತ್ತಿನಹಾರ ತೆಗೆದಿರಿಸಿ ॥
ಮತ್ತೆ ಶಿಶುರವಿಯಂತೆ ಪಿಂಗಳ-
ಕಿತ್ತನಾರುಡಿಯುತ್ತರೀಯವ-
ನೆತ್ತಿ ಬಿಗಿದಳು ಪರ್ಬುವಸ್ತ್ರನಯುಗ್ಮ ಒತ್ತರಿಸೇ ॥ ೮

ಯಥಾ ಪ್ರಸಿದ್ಧೈಃ ಮಧುರಂ ಶಿರೋರುಹೈಃ ।
ಜಟಾಭಿರಪ್ಯೇವಮಭೂತ್ತದಾನನಂ ॥
ನಷಟ್ಪದಶ್ರೇಣಿಭಿ ರೇವ ಪಂಕಜಂ ।
ಸಶೈವಲಾಸಂಗ ಮಪಿ ಪ್ರಕಾಶತೇ ॥ ೯

ಪ್ರತಿಕ್ಷಣಂ ಸಾ ಕೃತರೋಮ ವಿಕ್ರಿಯಾಂ ।
ವ್ರತಾಯ ಮೌಂಜೀಂ ತ್ರಿಗುಣಾಂ ಬಭಾರಯಾಂ, ॥
ಅಕಾರಿ ತತ್ಪೂರ್ವ ನಿಬದ್ಧಯಾ ತಯಾ ।
ಸರಾಗಮಸ್ಯಾಃ ರಶನಾ ಗುಣಾಸ್ಪದಂ ॥ ೧೦

ವಿಸೃಷ್ಟ ರಾಗಾದಧ ರಾನ್ನಿವರ್ತಿತಃ ।
ಸ್ತನಾಂಗ ರಾಗಾರುಣಿತಾಚ್ಚ ಕಂದುಕಾತ್ ॥
ಕುಶಾಂಕುರಾದಾನ ಪರಿಕ್ಷತಾಂಗುಳಿಃ ।
ಕೃತೋಽಕ್ಷಸೂತ್ರ ಪ್ರಣಯಾ ತಯಾ ಕರಃ ॥ ೧೧

ಮಹಾರ್ಹ ಶಯ್ಯಾ ಪರಿವರ್ತನಚ್ಯುತೈಃ ।
ಸ್ವಕೇಶಪುಷ್ಪೈ ರಪಿ ಯಾಸ್ಮ ದೂಯಕೇ ॥
ಅಶೇಕ ಸಾ ಬಾಹುಲತೋಪಧಾಯಿನೀ ।
ನಿಷೇದುಷೀ ಸ್ಥಂಡಿಲ ಏವ ಕೇವಲೇ ॥ ೧೨

ಎಂತವಳ ಸಿರಿಮೊಗವು ಕುರುಳಿನ ।
ಪಂತಿಯಿಂ ರಮ್ಯತೆಯ ಗಳಿಸಿ ।
ತಂತು ಜಟೆಗಳ ಭಾರದಿಂದಲಿ ಚೆಲುವನೊಂದಿತದು ॥
ಇಂತಿಹುದು ನಿಜವಕ್ಷವಾರಡಿ ।
ಹಂತಿಯಿಂ ತಾಂ ಮೆರೆವುದಲ್ಲದೆ ।
ನಿಂತ ನೀರೊಳು ಪಾಚಿಯಿಂದೊಡಗೂಡಿ ಮೆರೆಯುವುದು ॥ ೯

ಮುಟ್ಟಲೆಡೆ ಬಿಡದೊಡಲ ಹೊಂಪುಳಿ ।
ಪುಟ್ಟಿ ಪೆಳಿವಮೂರಾದ ಮೌಂಜಿಯು ।
ತೊಟ್ಟಳಾ ಹೆಬ್ಬೆಟ್ಟದಣುಗಿಯು ನಿಯಮ ಪಾಲಿಸಲು ॥
ತೊಟ್ಟುದಾ ಶೋಭೆಯನು ಪಿಂದೀ ।
ಕಟ್ಟಿನಿಂದೊಡ್ಯಾಣವನು ತಾ ।
ತೊಟ್ಟು ಬೆಳಗುತಲಿರ್ದ ಸತಿಯಳ ಜಘನದೇಶಕ್ಕೆ ॥ ೧೦

ತೊರೆದಲಾಕ್ಷಾರಸವನ ಧರದ ।
ಸರಿಸಮಂ ಮೊಲೆಯುಗಲಾಗದ ।
ಅರುಣವರ್ಣವ ತಳೆದ ಚಂಡಿನ ಸಂಗಮಂ ತೊರೆದು ॥
ತಿರುಗಿ ಕುಶಗಳಗರಿಯ ಕೊರೆಯಲು ।
ಬೆರಳಗಾಯವೆ ಪಡೆದ ತರುಣಿಯ ।
ಕರವು ಜೊತೆಗೂಡಿರ್ದುದವಳಿಂದಕ್ಷಮಾಲೆಯೊ ॥ ೧೧

ಬಹು ಬೆಲೆಯ ಸಜ್ಜೆಯೊಳು ಹೊರಳುತ ।
ಲಿಹಳ ಮುಡಿಯಿಂದುದುರಿದಲರಿಂ ।
ದಹುದು ತನ್ನವಯವಕೆ ನೋವೆಂಬೆವ ಸುಕುಮಾರಿ ॥
ಮಹಿಮೆ ಹಾಸಿಗೆ ತೋಳೆ ಕಲೆಗಿಂ ।
ಬಿಹವು ತತ್ಸತಿಗೆನಲು ನಿಯಮದ ।
ವಹಿಸಿ ನೆಲದೊಳೆ ಮಲಗುವಳು ಮೇಣಲ್ಲೆ ಕುಳ್ಳಿಹಳು ॥ ೧೨

ಪುನರ್ಗ್ರಹೀತುಂ ನಿಯಮಸ್ಥಯಾ ವಯಾ ।
ದ್ವಯೇಽಪಿ ನಿಕ್ಷೇಪ ಇವಾರ್ಪಿತಂ ದ್ವಯಂ ॥
ಲತಾಸು ತನ್ವೀಷು ವಿಲಾಸಚೇಷ್ಟಿತಂ ।
ವಿಲೋಲ ದೃಷ್ಟಿಂ ಹರಿಣಾಂಗನಾಸು ಚ ॥ ೧೩

ಅತಂದ್ರಿತಾ ಸಾ ಸ್ವಯಮೇವ ವೃಕ್ಷಕಾ೯ ।
ಘಟಸ್ತನಪ್ರಸ್ರವಣೈರ್ವ್ಯವರ್ಧಯತ್ ॥
ಗುಹೋಽಪಿ ಯೇಷಾಂ ಪ್ರಥಮಾಪ್ತ ಜನ್ಮನಾಂ ।
ನ ಪುತ್ರವಾತ್ಸಲ್ಯ ಮಪಾಕರಿಷ್ಯತಿ ॥ ೧೪

ಅರಣ್ಯ ಬೀಜಾಂಜಲಿದಾನ ಲಾಲಿತಾಃ ।
ತಥಾ ಚ ತಸ್ಯಾರ ಹರಿಣಾ ವಿಶಸ್ವಸುಃ ॥
ಯಥಾ ತದೀಯೈಃ ನಯನೈಃ ಕುತೂಹಲಾತ್ ।
ಪುರಸ್ಸಖೀನಾ ಮಮಿಮೀತ ಲೋಚನೇ ॥ ೧೫

ಕೃತಾಭಿಷೇಕಾಂ ಹುತಜಾತವೇದಸಂ ।
ತ್ವಗುತ್ತರಾ ಸಂಗವತೀಮ ಧೀತಿ ನೀಂ ॥
ದಿದೃಕ್ಷ ವಸ್ತಾಮೃಷಯೋಽಭ್ಯು ಪಾಗರ್ಮ ।
ನ ಧರ್ಮವೃದ್ಧೇಷು ವಯಸ್ಸಮೀಕ್ಷ್ಯತೇ ॥ ೧೬

ವ್ರತವ ಕೈ ಕೊಂಡದನು ಪಾಲಿಪ ।
ಸತಿಯು ತನಗಿರುವೆರಡನೆರಡಲಿ ।
ಜೊತೆಯಲಿಟ್ಟಳು ನಿಧಿಯತೆರದಲಿ ಮತ್ತೆ ಕೈ ಕೊಳಲು ॥
ಮತದೊಳವಳವಿಲಾಸ ಚೇಷ್ಟೆಯು ।
ಗತಿಯನೆಳೆವಳ್ಳಿಗಳ ತತಿಯಲ್ಲಿ ।
ಹಿತದಿ ಚಂಚಲ ದೃಷ್ಟಿಯನು ವೇಣೆರಳೆ ವೆಣ್ಗಳೊಳು ॥ ೧೩

ಬೇಸರಿಲ್ಲದ ಗಿಡಗಳ ।
ಗಾಸತಿಯು ಮೊಲೆಯೊಲ್ವ ಕೊಡದಿಂ । ಸುರಿ ।
ಸೂಸಿ ಜಲಧಾರೆಗಳನವು ತಾನೆ ಬೆಳಸಿದಳು ॥
ಆ ಸುಪುತ್ರಕ ಗುಹನು ಮಾದಿಯೊ ।
ಳಾಸೆಯಿಂ ಸಲಹಿರ್ಪ ತರುಗಳ ।
ಲಾಸುದ ತಿಗಿಹ ಪುತ್ರವಾತ್ಸಲ್ಯವನು ಕುಂದಿಸನು ॥ ೧೪

ಕಾಡೊಳಿಹ ತೃಣ ಬೀಜಗಳ ತಾಂ ।
ನೀಡಿ ಬೊಗಸೆಗಳಿಂದ ಲಾಲನೆ ।
ಮಾಡಲಂ ತೆರಳೆಗಳು ನಂಬುಗೆಯಿಟ್ಟವವಳಲ್ಲಿ ॥
ನೋಡು ತವುಗಳ ಕುಗಳಿಂ ।
ದೊಡನಾಡಿಯರ ಮುಂದವಳ ತನ್ನಯ ।
ಜೋಡಿ ಕಂಗಳನಳತೆಯಿಟ್ಟಳು ಕುತು ಕದಿಂದೆಂತೊ ॥ ೧೫

ಸ್ನಾನಗೈದಗ್ನಿಯನು ಸೇವಿಸಿ ।
ಸಾನುರಾಗದಿ ನಾರು ಮಡಿಯಂ ।
ತಾನೆ ಹೊದೆದಧ್ಯಯನ ಮಾಳ್ಪಳ ಕಾಂಬ ಬಯಕೆಯಲಿ ॥
ಮೌನಿಗಳು ತಾವ್ ಬಂದರವಳಿಹ ।
ತಾಣ ಕೇದೊಡೆ ನಿಜವು ಧರ್ಮ ।
ಜ್ಞಾನದಿಂದತಿ ಬೆಳದವರರೊಳು ವಯುವ ನ್ನೀಕ್ಷಿಸರು ॥ ೧೬

ವಿರೋಧಿಸತ್ತ್ವೋಜ್ಝಿತ ಪೂರ್ವಮತ್ಸರಂ ।
ದ್ರುಮೈರಭೀಷ್ಟ ಪ್ರಸವಾರ್ಚಿತಾ ತಿಥಿ ॥
ನವೋಟ ಜಾಭ್ಯಂತರ ಸಂಭೃತಾನಲಂ ।
ತಪೋವನಂ ತಚ್ಚ ಬಭೂವ ವಾಹನಂ ॥ ೧೭

ಯದಾಫಲಂ ಪೂರ್ವತಪಸ್ಸಮಾಧಿನಾ ।
ನ ತಾವತಾ ಲಭ್ಯಮಮಂಸ್ತ ಕಾಂಕ್ಷಿತಂ ॥
ತದಾನಪೇಕ್ಷ್ಯ ಸ್ವಶರೀರಮಾರ್ದವಂ ।
ತಪೋಮಹಂ ಸಾಚರಿತುಂ ಪ್ರಚಕ್ರಮೇ ॥ ೧೮

ಕ್ಲಮಂ ಯಯೌ ಕಂದುಕಲೀಲಯಾಪಿ ಯಾ ।
ತಯಾ ಮುನೀನಾಂ ಚರಿತಂ ವ್ಯಗಾಹ್ಯತ ॥
ಧ್ರುವಂವಪುಃ ಕಾಂಚನ ಪದ್ಮ ನಿರ್ಮಿತಂ ।
ಮೃದು ಪ್ರಕೃತ್ಯಾ ಚ ಸಸಾರಮೇವ ಚ ॥ ೧೯

ಶುಚೌ ಚತುರ್ಣಾಂ ಜ್ವಲತಾಂ ಹವಿರ್ಭುಜಾಂ ।
ಶುಚಿ ಸ್ಮಿತಾ ಮಧ್ಯಗತಾ ಸುಮಧ್ಯಮಾ ॥
ವಿಜಿತ್ಯ ನೇತ್ರಪ್ರತಿ ಘಾತಿನೀಂ ಪ್ರಭಾಂ ।
ಅನನ್ಯದೃಷ್ಟಿ ಸ್ಸವಿತಾರ ಮೈಕ್ಷತ ॥ ೨೦

ವೈರಿ ಸತ್ವಗಳೆಲ್ಲಿ ಪೂರ್ವದ ।
ವೈರ ಮಂಬಿಟ್ಟ ಹವೊ, ತರುಗಳು ।
ತೋಱಿ ದಿಪ್ಪವನೆಲ್ಲಿಪೆತ್ತತಿಥಿಗಳ ನರ್ಚಿಪವೋ ॥
ಆರದಿಹ ಹೋಮಾಗ್ನಿ ಪರ್ಣಕು ।
ಟೀರ ವೊಳಪೊಕ್ಕೆಲ್ಲಿ ಮೆರೆದುದೊ ।
ಗೌರಿ ನೆಲೆಸಿರ್ದಾ ತಪೋವನ ಪೂತಮಂದಾಱಯ್ತು ॥ ೧೭

ಪಿಂದೆ ಪೇಳಿದ ತಪಸಿನ ಕ್ರಮ ।
ದಿಂದ ತನ್ನಿಷ್ಟಾರ್ಥಲಾಭವ ।
ನೊಂದಲಸದಳವೆಂದು ಸುಂದರಿಗೆಂದಿಗರಿವಾಯ್ತೊ ॥
ಅಂದು ತನ್ನಯ ಕೋಮಲಾಂಗದ ।
ಚಂದವನು ಲೆಕ್ಕಿಸದೆ ದೃಢಮನ ।
ಸಿಂದೆ ಬಲು ಬಿರುಸಾದ ತಪವನು ಮಾಡೆ ತೊಡಗಿದಳು ॥ ೧೮

ಮುನ್ನಮಾವಳು ಚಂಡಿನಾಟದಿ ।
ತನ್ನ ತನುಬೇಸತ್ತುದೆನ್ವಳೊ ।
ತನ್ನತಾ ಮುನಿಪಥವ ಪಿಡಿದಳು ತೀವ್ರ ತಪಸಿನಲಿ ॥
ಸನ್ನು ತಿಱಂಗಿಯು ದೇಹರಚನೆಯು ।
ಹೊನ್ನ ತಾವರೆಯಿಂದಲೇ ನಿಜ ।
ವೆನ್ನ ಲತಿಮೃದು ಮತ್ತೆ ಕಠಿಣವು ನೈಜಭಾವದಲಿ ॥ ೧೯

ಮಂದಹಾಸದಲಿಂದು ಮುಖಿ ಬಳಿ ।
ಸಂದ ಬೇಸಗೆಯಲ್ಲಿ ಬಲು ಬಿರು-।
ಸಿಂದಲುರಿಯುವ ಮೆಂಕಿನಾಲ್ಕರ ನಡುವೆ ತಾಂ ನಿಂದು ॥
ಪಿಂದಕಿಕ್ಕುವೆ ಕಣ್ಣ ನೋಟವ ।
ನೆಂದೆನುವ ಝುಳವನ್ನು ಗೆಲಿದಿ ।
ನ್ನೊಂದನುಂ ನಿಟ್ಟಿಸದೆ ದಿಟ್ಟಿಯನಿಟ್ಟಳಿನನೊಳಗೆ ॥ ೨೦

ಕಥಾತಿತಪ್ತಂ ಸವಿ ಸುರ್ಗಭಸ್ತಿಭಿಃ ।
ಮುಖಂತದೀಯಂ ಕಮಲಶ್ರಿಯಂ ದಧೌ ॥
ಅಪಾಂಕೆಯೋಃ ಕೇವಲ ಮಸ್ಯದೀರ್ಘಯೋಃ ಃ ।
ಶನ್ನೈಃ ಶ್ಯಾಮಿಕಯಾ ಕೃಶಂ ಪದಂ ॥ ೨೧

ಅಯಾಚಿತೋಪಸ್ಥಿತ ಮಂಬು ಕೇವಲಂ ।
ರಸಾತ್ಮಕಸ್ಯೋ ಡುಪಶೇಶ್ಚ ರಶ್ಮಯಃ ॥
ಬಭೂವ ತಸ್ಯಾಃ ಕಿಲ ಪಾರಣಾವಧಿಃ ।
ನವೃಕ್ಷವೃತ್ತಿ ವ್ಯತಿರಿಕ್ತ ಸಧಾನಃ ॥ ೨೨

ನಿಕಾಮತಪ್ತಾ ವಿವಿಧೇನ ವಹ್ನಿನಾ ॥
ನಭಶ್ಚರೇಶೇಂಧನಸಂಭೃತೇನ ಸಾ ।
ತಪಾಶ್ಯಯೇ ವಾರಿಭಿರುಕ್ಷಿಕಾ ನವೈಃ ।
ಭುವಾ ಸಹೋಷ್ಮಾಣ ಮಮುಂಚ ದೂರ್ಧ್ವರಂ ॥ ೨೩

ಸ್ಥಿತಾಃ ಕ್ಷಣಂ ಪಕ್ಷ್ಮಸು ತಾಡಿತಾಧರಾಃ ।
ಪಯೋಧರೋತ್ಸೇಧನಿಪಾಶ ಚೂರ್ಣಿಕಾಃ ॥
ವಲೀಷುತಸ್ಯಾಃ ಸ್ಪಲಿಕಾಃ ಪ್ರಾಪೇ ದಿರೇ ।
ಚಿರೇಣ ನಾಭಿಂ ಪ್ರಥಮೋದ ಬಿಂದವಃ ॥ ೨೪

ರವಿಯು ಕಿರಣಗಳಿಂದ ಲಂತಾ-।
ಯುವತಿಮುಖಸಲೆ ಬೆಂದು ಬಹು ವ್ಯ-।
ಭವದಿ ಮೆರೆದುದು ಕಮಲ ಪುಷ್ಪದರಿಸಿಯು ತಾಂ ಪಡೆದು ॥
ಅವನ ಮೊಗದಲ್ಲಿಸೆವ ಬಹು ನೀ ।
ಳಹವ ಕಣ್ಗೊನೆಯೆರಡರೋಳ್ತಾ ।
ಣವಸೆ ಮಾಡಿತು ಮೆಲ್ಲ ಮೆಲ್ಲನೆ ಶ್ಯಾಮಿಕೆಯು ಮಾತ್ರ ॥ ೨೧

ಬೇಡದೆಯೆ ಕೈಸಾರ್ದ ಜಲ ವುಂ ।
ನೋಡಲಮೃತದ ಬೀಡಿನುಡು ಪತಿ ।
ನೀಡುವ ಸುಧಾಂಶುಗಳ ತತಿಯುಂ ಮಾತ್ರ ಮಿಯರಡು ॥
ಗಾಡಿಗಾರ್ತಿಗೆ ಪಾರಣೆಯ ವಿಧಿ ।
ಮಾಡಿದವಲಾ ಗಿಡದ ಬೇಳಸಿನ ।
ಪಾಡಿನಿಂಬೇರಲ್ಲ ಸತಿಜೀವನದ ಸಾಧನೆಯು ॥ ೨೨

ಆಗಸ ದೊಳತಿವಗ್ನಿ, ಯಿದ್ದ್ಕೆ ।
ಬಾಗಿ ಪಜ್ಜ್ವಲಿಸಗ್ನಿಯಿಳೆಯೊಳು ।
ಹೀಗೆನುವ ವಿವಿಧಾಗ್ನಿ ಮಧ್ಯದೊಳಿದ್ರ್ಕಡುಬೆಂದು ॥
ಆ ಗರತಿ ಬೇಸಗೆಯ ಕಡೆಯೊಳು ।
ತಾಗರೆವನವಮಾರಿಧಾರೆಯು ।
ತಾಗಿಧರಣಿಯ ಜೊಶಯುಲುಗಿವಳು ಮೇಲೆ ಬಿಸಿಯುಸಿರಂ ॥ ೨೩

ಮಳೆಯುಕಾಲದ ಮೊದಲಹನಿಗಳು ।
ಗಳಿಗೆ ಹೊತ್ತ್ರೆವೆಗಳಲಿ ನಿಂತಾ ।
ಬಳಿಕ ಚಂದುಟಿಯನ್ನು ತಾಡಿಸಿಯೊಡನೆ ಮುಂದರಿದು ॥
ಮೊಲೆಗಳಗ್ರದೊಳೊಡೆದು ತುಂತುರು ।
ಗಳಲಿವಳಿಗಳೊಳೆಡವು ಕೇಳುತ ।
ಲಿಳಿದು ಪೊಕ್ಕವು ಬಹು ನಿಧಾನದಲಿವಳ ಹೊಕ್ಕಳನು ॥ ೨೪

ಶಿಲಾಶಯಾಂ ತಾ ಮುನಿಕೇತವಾಸಿನೀಂ ।
ನಿರಂತರಾಸ್ವಂತರವಾಶ ವೃಷ್ಟಿಷು ॥
ವ್ಯಲೋಕಯನ್ನುನ್ಮಿಷಿತೈಸ್ತಡಿ ತಿನ್ಮಯೈಃ ।
ಮಹಾತಿಪಸ್ಸಾಕ್ಷ್ಯ ಇವಸ್ಥಿತಾಃ ಕ್ಷಪಾಃ ॥ ೨೫

ನಿನಾಯ ಸಾತ್ಯಂತ ಹಿಮೋತ್ಕಿರಾ ನಿಲಾಃ ।
ಸಹಸ್ಯರಾತ್ರೀ ರುದವಾಸ ತತ್ಪರಾ ॥
ಪರಸ್ಪರಾಕ್ರಂದಿನಿ ಚಕ್ರವಾಕಯೋಃ ।
ಪುರೋವಿಯುಕ್ತೇ ಮಿಥುನೇ ಕೃಪಾವತೀ ॥ ೨೬

ಮುಖೇನ ಸಾ ಪದ್ಮಸುಗಂಧಿನಾ ನಿಶಿ ।
ಪ್ರವೇಪಮಾನಾಧರ ಪತ್ರ ಶೋಭಿನಾ ॥
ತುಷಾರ ವೃಷ್ಟಿಕ್ಷತ ಪದ್ಮಸಂಪದಾಂ ।
ಸರೋಜ ಸಂಧಾನ ಮಿವಾಕರೋದಪಾಂ ॥ ೨೭

ಸ್ವಯಂ ವಿಶೀರ್ಣದ್ರುಮ ಪರ್ಣವೃತ್ತಿತಾ ।
ಪರಾ ಹಿ ಕಾಷ್ಠಾ ತಪಸಸ್ತಯಾ ಪುನಃ ॥
ತದಪ್ಯಪಾಕೀರ್ಣಮತಃ ಪ್ರಿಯಂವದಾಂ ।
ವದಂತ್ಯಪರ್ಣೇತಿ ಚ ತಾಂ ಪುರಾವಿದಃ ॥ ೨೮

ನಡುವೆ ಗಾಳಿಯನೊಂದಿ ತಾನೆಡೆ ।
ಬಿಡದೆ ಸುರಿವಾ ಮಳೆಯೊಳಾಲಯು ।
ದೊಡಲಪಿಡಿಯದೆ ಬಯಲ ಬಂಡೆಯೊಳೊಡಲನೊಟ್ಟಿಹಳು ॥
ತೊಡಗಿದದ್ಭುತ ತಪಕೆ ಸಾಕ್ಷ್ಯಂ ।
ಗುಡುವರಾತ್ರಿಗಳಾಗ ಮಿಂಚಿನ ।
ಮಡಲಿನೀಕ್ಷಣಗಳಲಿ ತೋರಿತು ನೋಡಿತಿದುರ್ಜಪೆನೆ ॥ ೨೫

ಸುದತಿ ಹೇಮಂತದೊಳು ಜಲಪಾ ।
ಸವಲಿ ಮನನೆಡುತವಳ ಮುಂಭಾ ।
ಗದಲಿ ಚರಿಪೆಣೆವಕ್ಕಿಗಳ ಜೊತೆಯೊಂದನೊಂದದಲಿ ॥
ಉದಿತ ಶೋಕದಲಳುವ ದನಿಗವ ।
ಳಿದೆಯು ಕರಗು ತಲಮಿಶಹಿಮವಂ ।
ಚಮರಿಪ ನಿಲಗಳುಳ್ಳ ನಿಶಿಗಳನಂತು ನೂಕಿದಳು ॥ ೨೬

ಇರುಳೊಳತಿ ಚಳಿಯಿಂದ ನಡುಗುತ ।
ಲಿರುವ ಜಂಪುವಟಿಯೆಂಬ ದಳದಿಂ ।
ಮೆರೆವ ತಾವರೆಯಿಂಪು ಕಂಪೊಡೆದಾಸ್ಯದಿಂದವಳು ॥
ಸುರಿವ ಮಂಜಿನ ಮಳೆಯಾಳಳಿಯು ।
ತ್ತಿರುವ ಕಮಲದ ಸಿರಿಯನುಳ್ಳ ।
ಸರದ ಜಲಕೆ ಸರೋಜ ಶೋಭೆಯನಿತ್ತಳೆನೆ ಮೆರೆದಳ್ ॥ ೨೭

ಮರಗಳಿಂತಾ ನಾಗಿಯುದುರಿದ ।
ತರಗೆಲೆಗಳಂತಿಂದು ಜೀವವ ।
ಪೊರೆವುದೇ ತಪಸಿಂಗೆ ಪರಮುಕ್ಕರ್ಷಮಹುದು ನಿಜ ॥
ಗಿರಿಜೆಯಾ ಪರಿಜೀವನವನುಂ ।
ತೊರೆದ ಕಾರಣ ಪೂರ್ವವೃತ್ತಗ ।
ಳರಿದ ರಿತ್ತರು ಸವಿನುಡಿಯಳಿಗಪರ್ಣೆ ನಾಮವನು ॥ ೨೮

ಮೃಣಾಳಿಕಾ ಪೇಲ ವಮೇವಮಾಧಿ ಭಿಃ ।
ವ್ರತೈಃ ಸ್ವಮಂಗಂ ಗ್ಲಪಯಂತ ಹರ್ನಿಶಂ ॥
ತಪಶ್ಯರೀರ್ರೈಃ ಕಠಿಣೈರುಪಾರ್ಜಿತಂ ।
ತಪಸ್ವಿನಾಂ ದೂರ ಮಧಶ್ಚಕಾರ ಸಾ ॥ ೨೯

ಅಥಾಜಿನಾಷಾಢಧರಃ ಪ್ರಗಲ್ಭವಾಕ್ ।
ಜ್ವಲನ್ನಿವ ಬ್ರಹ್ಮಮಯೇನ ತೇಜಸಾ ॥
ವಿವೇಶ ಕಶ್ಚಿಜ್ಜಟಿಲಸ್ತ ಪೋವನಂ ।
ಶರೀರ ಬದ್ಧಃ ಪ್ರಥಮಾಶ್ರಮೋ ಯಥಾ ॥ ೩೦

ತಮಾತಿಥೇಯೀ ಬಹುಮಾನ ಪೂರ್ವಯಾ ।
ಸಪರ್ಯಯಾ ಪ್ರತ್ಯುದಿಯಾಯ ಪಾರ್ವತೀ ॥
ಭವಂತಿ ಸಾಮ್ಯೇಪಿ ನಿವಿಷ್ಟ ಚೇತಸಾಂ ।
ವಪುರ್ವಿ ಶೇಷೇಷ್ವತಿ ಗೌರವಾಃ ಕ್ರಿಯಾಃ ॥ ೩೧

ವಿಧಿಪ್ರಯುಕ್ತಾಂ ಪರಿಗೃಹ್ಯ ಸತ್ಕ್ರಿಯಾಂ ।
ಪರಿಶ್ರಮಂ ನಾಮವಿನೀಯ ಚ ಕ್ಷಣಂ ॥
ಉಮಾಂ ಸ ಪಶ್ಯನ್ ಋಜುನೈವ ಚಕ್ಷುಷಾ ।
ಪ್ರಚಕ್ರಮೇವಕ್ತು ಮನುಜ್ಝಿತ ಕ್ರಮಃ ॥ ೩೨

ಮುನ್ನೊರೆದ ತೀವ್ರ ವ್ರತಗಳಿಂ ।
ತನ್ನ ತಾವರೆದಂಟ ಸೊಂಪಿನ ।
ತನ್ನ ತನುವನು ತೇದು ಹಗಲಿರುಳೆನದೆ ಸವೆಸುತ್ತ ॥
ಇನ್ನು ಕಷ್ಟವ ಸಹಿಪ ದೇಹಗ ।
ಳನ್ನು ದಂಡಿಸಿ ಗಳಿಸಿದುದ ನತಿ ।
ಸಣ್ಣವೆಂದಿನಿಸಿದಳು ಮುನಿಗಳ ಘೋರ ತಪವನ್ನು ॥ ೨೯

ಬ್ರಹ್ಮತೇಜದಿ ಪಜ್ಜಳಿಪ ಸು- ।
ಬ್ರಹ್ಮಚಾರಿಯುವೇಷಿ, ವಚನ ।
ಬ್ರಹ್ಮ, ಜಟಿಲಂ, ಮೇಣಜಿನ ಪಾಲಾಶದಂಡಧರಂ ॥
ಬ್ರಹ್ಮಚರ್ಯಾಶ್ರಮವೆ ತಾನೀ ।
ಬ್ರಹ್ಮಿಯೊಡಲನು ತಾಳ್ದದೆನಲಾ ।
ಬ್ರಹ್ಮ ಕರ್ಮದೊಳಿಹಳ ತಪೋವನವೊಕ್ಕ ಬಳಿಕೋರ್ವಂ ॥ ೩೦

ಅತಿಥಿಗಳ ನೆರೆಸತ್ಕರಿಪ ಪಾ- ।
ರ್ವತಿಯು ಗೌರವದಿಂದ ಪೂಜಾ ।
ತತಿಯುಲುಪಚರಿಸಿದಳು ವರ್ಣಿಯನ್ನಾಗಲಿದಿರೆದೆದ್ದು ॥
ಸ್ಥಿತಿಯೊಳಗೆ ಸಮನಾದೊಡಂ ಮ- ।
ಗಿತರಿ ಜನಗಳ ವಿಷಯದಲ್ಲಿಯು ।
ಜಿತ ಮನಸ್ಕರ ಕರ್ಮಗಳು ಬಹು ಗೌರವವ ಸುರಿಸುವುದು ॥ ೩೧

ನಿಯಮದಿಂದವಳೆಸಗಿದಾಪೂ ।
ಜೆಯನು ಕೈ ಕೊಂಡವನು ವಿಶ್ರಾಂ- ।
ತಿಯನು ಪಡೆದನು ಗಳಿಗೆಯೊಂದರಲಂದು ಬಳಿಕವನು ॥
ನಯದಲುಮೆಯನು ಭಾವ ತೋರದ ।
ನಯನದಿಂದಲೆ ನೋಡುತಲಿ ತಾಂ ।
ನಿಯಮ ವಿಚಾರದ ರೀತಿಯಲಿ ಮಾತಾಡ ತೊಡಗಿದನು ॥ ೩೨

ಅ ಪಿಕ್ರಿಯಾರ್ಥಂ ಸುಲಭಂ ಸಮಿಕ್ಕ್ಕುಶಂ ? ।
ಜಲಾನ್ಯಪಿಸ್ನಾನ ವಿಧಿ ಕ್ಷಮಾಣಿಕೇ ॥
ಅಪಿಸ್ವಶಕ್ತ್ಯಾ ತಪಸಿ ಪ್ರವರ್ತಸೇ ।
ಶರೀರಮಾದ್ಯಂ ಖಲುಧರ್ಮಸಾಧನಂ ॥ ೩೩

ಅಪಿತ್ವದಾವರ್ಜಿತವಾರಿ ಸಂಭೃಶಂ ।
ಪ್ರವಾಳ ಮಾಸ ಮನು ಬಂಧಿ ವೀರುಧಾಂ ॥
ಚಿರೋಜ್ಝಿತಾಲಕ್ತಕ ಪಾಟಲೇನತೇ ।
ತುಲಾಂ ಯದಾರೋ ಹತಿ ದಂಡತವಾಸಸಾ ॥ ೩೪

ಅಪಿಪ್ರಸನ್ನಂ ಹರಿಣೇಷು ತೇ ಮನಃ ।
ಕರಸ್ಥ ದರ್ಭಪ್ರಣಯಾಪಹಾರಿಷು ॥
ಯ ಉತ್ಪಲಾಕ್ಷಿ ! ಪ್ರಚಲೈರ್ವಿಲೋಚನೈಃ ।
ಕವಾಕ್ಷಿ ಸಾದೃಶ್ಯಮಿವ ಪ್ರಯುಂಜ ತೇ ॥ ೩೫

ಯದುಚ್ಯತೇ ಪಾರ್ವತಿ ! ಪಾಪವೃತ್ತಯೇ ।
ನ ರೂಪ ಮಿಶ್ಯವ್ಯಭಿಚಾರಿ ತದ್ವಚಃ ॥
ಕಥಾ ಹಿ ತೇ ಶೀಲಮುದಾರದರ್ಶನೇ ! ।
ತಪಸ್ವಿ ನಾಮಪ್ಯುಪದೇಶ ತಾಂಗಕಂ ॥ ೩೬

ಅಮ್ಮ ನಿನ್ನಯ ಹೋಮ ಕರ್ಮ ।
ಕ್ಕಮ್ಮ ಕುಶಸಮಿದುಗಳು ಸುಲಭವೆ ? ।
ಸಮ್ಮದದಿ ವ್ಯೆಕೊಳಿಪ ವಿಧಿ ಗುಚಿತಾಂಬುನಿನಗಿಹುದೇ ? ॥
ಅಮ್ಮಾ ನಿನ್ನೀ ದೇಹಶಕ್ತಿಯು ।
ನಮ್ಮಿ ಮಾಡುವಿಯೇನು ತಪವನು ? ।
ದಮ್ಮಾಗಳಿಸಲು ಮೊದಲಸಾಧನ ನಿಜವೀದಿತನುವು ॥ ೩೩

ಇಲ್ಲಿ ಬೆಳೆದಿಪ ಬಳ್ಳಿಗಳಿಗೆ ಸ !
ಮುಲ್ಲಸದೀ ನೀ ನೆರೆದ ಜಲದಿಂ ।
ಮೆಲ್ಲಮುದಿಸಿದ ಪಲ್ಲವವು ತಾನವನು ಕೂಡಿಹುದೇ ? ।
ನಲ್ಲೆ ಬಹುದಿನವರಗರಸವನು ।
ಸಲ್ಲಿಸದೇ ನೀನಿರ್ದೊಡೆಂ ಪೊಳೆ–।
ವಲ್ಲ ಮುಸುಕಿದ ನಿನ್ನ ಚಂದುಟಿಯೋಲ್ವು ಚಂಚಿಗುರು ॥ ೩೪

ಕಯ್ಕೊಳಿಪ ಕುಶವೆಳಸಿ ಪಿಡಿದೆಳೆ ।
ದೊಯ್ಯೆ ದುಷ್ಟಿಗಳವನು ನೀಂನೆರೆ ।
ಪುಯ್ಯಲೆಳೆವಾ ಮನಕೆ ಶಾಂತಿಯನಿತ್ತು ಮನ್ನಿಸೆಯಾ ? ॥
ಮುಯ್ಯನು ತ್ಪಲನೇತ್ರೆ ! ನಿನಗವು ।
ಗ್ಯೆಯ್ಯೆ ನಿಮ್ಮಕ್ಷಿಗಳ ಸಾಮ್ಯವ–।
ನೊಯ್ಯವಂತೆಸೆಯುವುದು ತಮ್ಮಯ ಚಪಲ ನಯನಗಳಿಂ ॥ ೩೫

ಉತ್ತಮಾಕೃತಿಯಿರಲು ಪಾಪದ ।
ವೃತ್ತಿಯೆತ್ತಣದೆಂಬರಾನುಡಿ ।
ಯೆತ್ತಲುಂ ಮತ್ತೆಂದಿರ್ಗಂ ಪುಸಿಯಲ್ಲಗಿರಿರಾಜಂ ॥
ಪೆತ್ತಮಗಳೇ ! ನಿಜವು ನಿನ್ನೀ–।
ವೃತ್ತಮಹುದು ತಪಸ್ವಿಗಳಲ–।
ತ್ಯುತ್ತಮರಿಗುಂಭೋಧೆಯಾಯತನೇತ್ರೆ ! ಸದೃಸ್ತ್ರೀ ॥ ೩೬

ವಿಕೀರ್ಣ ಸಪ್ತರ್ಷಿ ಬಲಿಪ್ರಹಾಸಿಭಿಃ ।
ತಥಾನ ಗಾಂಗೈಃ ಸಲಿಲೈ ದಿವಶ್ಚ್ಯುತೈಃ ॥
ಯಥಾ ತ್ವದೀಯೈ : ಶ್ಚರಿತೈರನಾವಿಲೈಃ ।
ಮಹೀಧರಃ ಪಾವಿತ ಏಷಸಾನ್ವಯಃ ॥ ೩೭

ಅನೇನಧರ್ಮಃ ಸವಿಶೇಷಮದ್ಯಮೇ ।
ತ್ರಿವರ್ಗಸಾರಃ ಪ್ರತಿಭಾತಿ ಭಾಮಿನಿ ॥
ತ್ವಯಾಮನೋ ನಿರ್ವಿಷಯಾರ್ಥ ಕಾಮಯಾ ।
ಯದೇಕ ಏವಪ್ರತಿಗೃಹ್ಯ ಸೇವ್ಯತೇ ॥ ೩೮

ಪ್ರಯುಕ್ತ ಸತ್ಕಾರ ವಿಶೇಷ ಮಾತ್ಮನ ।
ನ ಮಾಂ ಪರಂ ಸಂಪ್ರತಿ ಪತ್ತು ಮರ್ಹಸಿ ॥
ಯತಸ್ಸತಾಂ ಸನ್ನತಗಾತ್ರಿ! ಸಂಗತಂ।
ಮನೀಷಿಭಿ ಸ್ಸಾಪ್ತ ಪದೀನ ಮುಚ್ಯತೇ ॥ ೩೯

ಅತೋಽತ್ರ ಕಿಂಚಿದ್ಭವತೀಂ ಬಹುಕ್ಷಮಾಂ ।
ದ್ವಿಜಾತಿ ಭಾವಾದುಪಪನ್ನ ಚಾಪಲಃ ॥
ಅಯಂಜನಃ ಪ್ರಷ್ಟು ಮನಾಸ್ತಪೋಧನೇ ! ।
ನ ಚೇದ್ರಹಸ್ಯಂ ಪ್ರತಿವಕ್ತು ಮರ್ಹಸಿ ॥ ೪೦

ಎಂತು ನಿನ್ನಯಂ ತಾತನೀ ಹಿಮ–|
ವಂತನುಂ ಮೇಣವನ ವಂಶದ–|
ಹಿರಿಯರುಂ ನಿನ್ನ ಮಲಚರಿತೆಗಳಿಂದ ಪಾವನರೋ ‖
ಅಂತುಸಪ್ತರ್ಷಿಗಳು ನೆಗಹಿದ–|
ನಂತುಸುಮ ಪೂಜೆಯಲಿ ನಗುತಿರು–|
ವಂತರಿಕ್ಷದಿ ಸುರಿವ ಗಂಗಾ ಜಲಗಳಿಂದಲ್ಲ ‖ ೩೭

ಯಾವ ಕಾರಣದಿಂದ ಮನದೊಳು |
ಭಾವಿಸದೆ ಕಾಮಾರ್ಥವೆರಡನು |
ಸೇವಿಸುತಿಹೆಯೊ ಧರ್ಮವೊಂದನ್ನಡನು ನೀನೊಲಿದು ‖
ಆ ವಿವರದಿಂದೀಗಲೆನ್ನಯ |
ಭಾವನೆಯೊಳುಂ ಧರ್ಮಮತಿಸಂ |
ಭಾವಿಕವು ಪುರುಷಾರ್ಥ ಮೂರರೊಳೀಡಿ ತೆಂಗಿಕಳೇ ‖ ೩೮

ನಿನ್ನ ಕೈಯ್ಯಿಂಪ್ರಧಿಕ ಸತ್ಕೃತಿ |
ಯನ್ನು ಮುದದಿಂ ಸೂರೆ ಗೊಂಡಿರು–|
ವೆನ್ನನೆಂದಿಗು ಮನ್ಯನಿವನೆಂದಣಿಸಬಾರದು ನೀಂ ‖ ಪ್ರದನುಚಿತವು
ಸನ್ನು ತಾಂಗಿಯೇ ! ಕೇಳು ಕಾರಣ |
ವನ್ನು ಮತಿಸಂಪನ್ನರೊರೆವರು |
ಪಣ್ಣುವುದು ಮಾಕೇಳ ಗಲಿ ಸಜ್ಜನರ ಮೈತ್ರಿಯೆನೆ. ‖ ೩೯

ಆದಕಾರಣ ವಿಂದರೊಳತಿಶಯ |
ಮಾದಸಹನೆಯಸುಳ್ಳ ನಿನ್ನನು |
ವೋದದಿಂ ಹಾರುವನ ಚಪಲತೆಯಿಂದಲೇನನ್ನೋ ‖
ಹಾದೊರೆದು ಕೇಳುವನು ನಿರನಿವ |
ನಾವರದಿ ಮಾವತ್ತರವ ಗು–|
ಟ್ಟಾದುದಿರ ದೊಡೆ ಪೇಳು ತಪದ್ಮೈಸಿರಿಯುಗಳಿಸಿಹಳೇ ! ‖ ೪೦

ಕುಲೇ ಪ್ರಸೂತಿಃ ಪ್ರಥಮು ಸ್ಯವೇಧಸಃ ।
ತ್ರಿಲೋಕ ಸೌಂದರ್ಯ್ಯ ಮಿವೋದಿತಂವಪುಃ ॥
ಅವ್ಮೃಗ್ಯ ಮೈಶ್ವರ್ಯ್ಯ ಸುಖಂ ನವಂ ವಯಃ ।
ತಪಃ ಫಲಂ ಸ್ಯಾತ್ಕಿಮತಃ ಪರಂವದ ॥ ೪೧

ಭವತ್ಯನಿಷ್ಟಾದಪಿ ನಾಮದುಸ್ಸಹಾತ್ ।
ಮನಸ್ವಿನೀನಾಂ ಪ್ರತಿಪಕ್ತಿರೀದೃಶೀ ॥
ವಿಚಾರಮಾರ್ಗ ಪ್ರಹಿತೇನ ತೇಜಸಾ ।
ನ ದೃಶ್ಯಕೇ ಶಚ್ಚ ಕೃಶೋದರಿತ್ವಯಿ ! ॥ ೪೨

ಅಲಭ್ಯಶೋಕಾಭಿಭವೇಯ ಮಾಕೃತಿಃ ।
ವಿಮಾನನಾ ಸುಭ್ರು ! ಕುತಃ ಪಿತುರ್ಗೃಹೇ ॥
ಪರಾಭಿಮರ್ಶೋ೯ನ ತವಾಸ್ತಿ ಕಃ ಕರಂ ।
ಪ್ರಸಾರಯೇತ್ಪನ್ನಗರತ್ನ ಸೂಚಯೇ ॥ ೪೩

ಕಿಮಿತ್ಯಪಾಸ್ಯಾಭರಣಾನಿ ಯೌವನೇ ।
ಧೃತಂ ತ್ವಯಾವಾರ್ಧಕ ಶೋಭಿವಲ್ಕಲಂ ॥
ವದಪ್ರದೋಷೇಸ್ಫುಟ ಚಂದ್ರತಾರಕಾ ।
ವಿಭಾವರೀ ಯದ್ಯರುಣಾಯ ಕಲ್ಪತೇ ॥ ೪೪

ಮೊದಲ ಬೊಮ್ಮನವಂಶದೊಳು ನಿನ ।
ಗುದುಭವವು ಮೂಲೋಕದಲಿ ಚೆಲು ।
ವುದಿಕ ಮಾಗಿಹುದೆನಲು ಮೆರೆವುದು ನಿನ್ನ ದೇಹವಿದು ॥
ಕದಲದ್ಯೆ ಸಿರಿಸೊಗವು ನೀನರ ।
ಸದೆಯೊಲಭಿಸಿದೆ ಯೌವನವ ಮೀ–।
ರದಿರು ವಿವುಗಳನುಳಿದು ತಪಕಿನ್ನೇನು ಫಲಪೇಳು ॥ ೪೧

ಸೈಸಲಾಗದನಿಷ್ಟ ವೀಡೆಯು ।
ಜೈಸಲಾರದೆ ಧೀರನಾರಿಯು ।
ರೈಸೆ ಕಾವೀ ಪರಿಯು ತಪವನು ಮಾಡಲೆತ್ನಿಪರು ॥
ಸೈ ಸುದತಿ ಸುವಿಚಾರ ಪಥದೊಳ !–।
ಗೈಸಿದೊಡೆ ಮನವನ್ನು ಮೇಲೇರಿ ।
ದೈಸ ನಿನ್ನೊಳು ಕಾಣದೌ ತೆಳ್ಯಾಸಿಯುಳ್ಳವಳೇ ॥ ೪೨

ಶೋಕದಿಂದಲವಜ್ಞೆ ದೈನ್ಯತ ।
ಸೋಕದಿಹುದೀ ರೂವು ನಿನಗಹು ।
ದೇಕೆ ? ತಂದೆಯು ಮನೆಯೊಳವ ಮತಿಹುಬ್ಬೊಳಕಿ ಚಲುವೆ ! ॥
ಲೋಕವನ್ನಮ್ಮ ನಿನ್ನ ಕೆಣಕಲು ।
ಸಾಕೆಸದು ನಿಜವಾದ ಮನುಜನು ।
ತಾ ಕರವ ಚಾಚುವನು ಕೊಳ್ಳಲು ಹಾವಹೆಡೆ ಮಣಿಯು ॥ ೪೩

ಹರೆಯುದೊಳು ಭೂಷಣಗಳಂ ನೀಂ ।
ತೊರೆದು ಮುದಿತನದಲ್ಲಿ ಧರಿಸಲು ।
ಮೆರೆವ ನಾರ್ಮಡಿಯುಡಿಗೆ ನಿನಗಿಹುದೇನು ಕಾರಣವೋ ॥
ಇರುಳು ಮೊಗದೊಳು ಬೆಳಗುತಿಹ ಹಿಮ–।
ಕಿರಣ ತಾರಾಭರಣ ದಾನಿಶಿ–।
ಗರುಣ ನೊಡಗೊಂಡಿರಲು ಬಯಕೆಯು ಪೇಳು ಗುಣಮಣಿಯೆ ! ॥ ೪೪

ದಿವಂ ಯದಿ ಪ್ರಾರ್ಥಯಸೇ ವೃಥಾಶ್ರಮಃ ।
ಪಿತುಃ ಪ್ರದೇಶಾಸ್ತವದೇವಭೂಮಯಃ ॥
ಅಥೋಪಯಂತಾರಮಲಂ ಸಮಾಧಿನಾ ।
ನ ರತ್ನಮನ್ವಿಷ್ಯತಿ ಮೃಗ್ಯತೇ ಹಿ ತತ್ ॥ ೪೫

ನಿವೇದಿತಂ ನಿಶ್ವಸಿತೇನ ಸೋಷ್ಮಣಾ ।
ಮನಸ್ತುಮೇ ಸಂಶಯಮೇವ ಗಾಹತೇ ॥
ಸ ದೃಶ್ಯತೇ ಪ್ರಾರ್ಥಯಿತವ್ಯ ಏವತೇ ।
ಭವಿಷ್ಯತಿ ಪ್ರಾರ್ಥಿತ ದುರ್ಲಭಃ ಕಥಂ ॥ ೪೬

ಅಹೋಸ್ಥಿರಃ ಕೋಽಪಿ ತವೇಪ್ಸಿತೋ ಯುವಾ ।
ಚಿರಾಯ ಕರ್ಣೋತ್ಪಲಶೂನ್ಯತಾಂ ಗತೇ ॥
ಉಪೇಕ್ಷತೆ ಯಃ ಶ್ಲಥಲಂಬಿನೀರ್ಜಟಾಃ ।
ಕಪೋಲದೇಶೇ ಕಲಮಾಗ್ರಪಿಂಗಳಾಃ ॥ ೪೭

ಮುನಿವ್ರತೈಸ್ತ್ವಾ ಮತಿಮಾತ್ರಕರ್ಶಿತಾಂ ।
ದಿವಾಕರಾಪ್ಲುಷ್ಟವಿಭೂಷಣಾಸ್ಪದಾಂ ॥
ಶಶಾಂಕಲೇಖಾಮಿವ ಪಶ್ಯತೋದಿವಾ ।
ಸಚೇತಸಃ ಕಸ್ಯ ಮನೋ ನ ದೂಯತೇ ॥ ೪೮

ಸಗ್ಗವನು ನಿಂಬೇಡುವೊಡೇಬಯ-।
ಲಗ್ಗವ ಹುದೌ ನಿನ್ನ ಬಳಲಿಕೆ ।
ಸಗ್ಗಿಗಳವಸತಿಗಳೇ ನಿನ್ನಯ ಪಿತನ ದೇಶಗಳು ॥
ಕುಗ್ಗಿಸಿನ್ನೀ ತಪವ ನೀಂಮನ-।
ಕೊಗ್ಗು ವಾಮ:ದುಮನ ಪಡೆವೊಡೆ ।
ನುಗ್ಗಿರತ್ನವ ಹುಡುಕುವರು ಕಾನರಸದಾರನ್ನ ॥ ೪೫

ಬಿಸಿಯ ನಿಟ್ಟುಸಿರಿಂದಲೀ ಮಾ ।
ನಸದ ಬಗೆಯನ್ನರಿದೊಡಂ ತಾಂ ।
ಮುಸುಕುವುದು ಸಂದೇಹವೆನ್ನ ಮನದ ವಿಷಯವನು ॥
ಸಸಿ ಮುಖಿಯೇ ನಾ ! ಕಾಣೆ ನೀಂಪ್ರಾ ।
ರ್ಥಿನುವ ವಸ್ತುವದಾವುದೆಂಬುದ ।
ನೊಸೆದು ನೀಂ ಬೇಡಿದುದ ಪಡೆಯಲಸಾಧ್ಯಮಹುದೆಂತು॥ ೪೬

ಕಲಮಗಳ ಕುಡಿಗೊನೆಗಳೊಲು ಪಿಂ-।
ಗಳದ ಮೋಣ್ಬಹುದಿನದ ಕರ್ಣೋ-।
ತ್ಪಲಗಳಿಂ ಬಂದಾದ ಗಂಡಸ್ಥಳಗಳೊಳು ಸಡಿಲಿ ॥
ಇಳಿದು ಜೋಲುತ್ತಿರುವ ಜಡೆಗೂ-।
ದಲನು ವಿಕ್ಷಿಸಿ ಮರುಗದಿಹ ನೀ ।
ನೊಲಸಲೆಳಸಿದ ಯುವಕನಾವನೊ ಕಠಿಣಹೃದಯ ನಹೋ ॥ ೪೭

ವ್ರತಿಗಳಾಚರಿಪಂಥ ಕಠಿಣ ।
ವ್ರತಗಳಿಂ ಕಡುಸರೆದು ಮೋಣ್ಗ್ರಹ-।
ಪತಿಯ ಹತಿಯಿಂಬೆಂದ ಭೂಷಣ ದೇಶಗಳನುಳ್ಳ ॥
ಸತಿಯೆ ಹಗಲೊಳು ಚಂದ್ರಲೇಖೆಯ ।
ಗತಿಯನೊಂದಿದ ನಿನ್ನ ನೀ ದುಃ ।
ಸ್ಥಿತಯುಲೀಕ್ಷಿಸುವಾವ ಜೀವಿಯಮನವುದೆ ಥವಡದು ॥ ೪೮

ಅವೈಮಿ ಸೌಭಾಗ್ಯಮದೇನವಂಚಿತಂ ।
ತವ ಪ್ರಿಯಂ ಯಶ್ಚತುರಾವಲೋಕಿನಃ ॥
ಕರೋತಿ ಲಕ್ಷ್ಯಂ ಚಿರಮಸ್ಯ ಚಕ್ಷುಷಃ ।
ನವಕ್ತ್ರಮಾತ್ಮೀಯಮರಾಳಪಕ್ಷ್ಮಣಃ ॥ ೪೯

ಕಿಯಚ್ಚಿರಂ ಶ್ರಾಮ್ಯಸಿ ಗೌರಿ ವಿದ್ಯತೇ ।
ಮಮಾಪಿ ಪೂರ್ವಾಶ್ರಮಸಂಚಿತಂತಪಃ ॥
ತದರ್ಧಭಾಗೇನ ಲಭಸ್ವಕಾಂಕ್ಷಿತಂ ।
ವರಂ ತಮಿಚ್ಛಾಮಿ ಚ ಸಾಧು ವೇದಿತಂ ॥ ೫೦

ಇತಿ ಪ್ರವಿಶ್ಯಾಭಿಹಿತಾ ದ್ವಿಜನ್ಮನಾ ।
ಮನೋಗತಂ ಸಾ ನ ಶಶಾಕ ಶಂಸಿತುಂ ॥
ಅಥೋ ವಯಸ್ಯಾಂ ಪರಿಪಾರ್ಶ್ವವರ್ತಿನೀಂ ।
ವಿವರ್ತಿತಾನಂಜನನೇತ್ರಮೈಕ್ಷತ ॥ ೫೧

ಸಖೀ ತದೀಯಾ ತಮುವಾಚ ವರ್ಣಿನಂ ।
ನಿಬೋಧ ಸಾಧೋ ತವ ಚೇತ್ಕುತೂಹಲಂ ॥
ಯದರ್ಥಮಂಭೋಜಮಿವೋಷ್ಣವಾರಣಂ ।
ಕೃತಂ ತಪಸ್ಸಾಧನಮೇತಯಾ ವಪುಃ ॥ ೫೨

ಎಲ್ಲಿವರೆಗುಂ ಕೊಂಕುಕಣ್ಣವೇ ! ।
ಯಲ್ಲೆಸೆವ ಮೋಹನ್ನೊಂಪುನೋಟವ ।
ನುಳ್ಳ ನಿನ್ನೀ ಕಣ್ಣ ಗುರಿಯಲಿ ಬಹುದಿನದಿ ನಿನ್ನ ॥
ನಲ್ಲನಾನನವಿಲ್ಲದಿಹುದೋ ।
ಬಲ್ಲೆ, ಸುಂದರನೆಂಬಮುದಜಲ ।
ದಲ್ಲಿ ನೆನೆದವ ಮೋಸಪೋಗುವನಲ್ಲಿವರೆಗೆಂದು ॥ ೪೯

ಎಷ್ಟುಕಾಲವು ತಪದಲೀಪರಿ ।
ಕಷ್ಟಪಡುತಿಹೆ ಮೊದಲಿನಾ ಕ್ರಮ ।
ದೆಷ್ಟೊತಪಸಿನ ಫಲವು ನನಗುಂ ಕೂಡಿಹುದು ಗೌರಿ ! ।
ಅಷ್ಟರಲ್ಲರ್ಥವನು ನೀಂ ಕೊಂ ।
ಡಿಷ್ಟನಾಗಿಹ ವರನ ಪೊಂದವ ।
ಶಿಷ್ಟನೋ ತಾನಲ್ಲಪೆಂಬುದ ತಿಳಿಯಬಯಸುವೆನು ॥ ೫೦

ಇಂತು ಪಾರ್ವತಿಯಾದ್ವಿಜಂ ತ-।
ನ್ನಂತರಂಗವನೊಕ್ಕು ತನಗುಪ-।
ಯಂತ್ಯವಾರೆಂದರಿಯೆ ಕೇಳಲು ಪೇಳಲಳಾವಡಳು ॥
ಸಂತಳುತ್ತರವೀಯೆ ಕೆಲದಲಿ ।
ನಿಂತಿರುವ ಸಖಿಯನ್ನು ಕಾಡಿಗೆ-।
ಯಂ ತೊರೆದನೇತ್ರವನು ತಿರುಗಿಸಿ ನೋಡಿದಳು ಬಳಿಕ ೫೧

ವರ್ಣಿಗಿರಿತುತ್ತರವ ? ತ್ರಳ ।
ಪರ್ಣಯಾಳಿಯು 'ಸಾಧು ನೀನಾ ।
ಕರ್ಣಿಸೈ ಕೌತುಕವು ನಿನಗಿರ್ದಲ್ಲಿ ಕಾರಣವ ॥
ವರ್ಣಿಸುವೆ ನಾಂ ಬಿಸಿಲ ತಡೆಯೆಸು-।
ವರ್ಣ ಕಮಲದ ಕೊಡೆಯಾ ಒಡಿದೊಲು ।
ನಿರ್ಣಯವು ಸತಿಗೊಡಲು ತಪಸಂದಿಬ್ಬೆ ಸಾದಿಸಲು ॥ ೫೨

ಇಯಂ ಮಹೇಂದ್ರಪ್ರಭೃತೀನಧಿಶ್ರಿಯಃ ।
ಚತುರ್ದಿಗೀಶಾನವಮತ್ಯ ಮಾನಿನೀ ॥
ಅರೂಪಹಾರ್ಯಂ ಮದನಸ್ಯನಿಗ್ರಹಾತ್ ।
ಪಿನಾಕಪಾಣಿಂ ಪ್ರತಿಮಾಪ್ತುಮಿಚ್ಛತಿ ॥ ೫೩

ಅಸಹ್ಯಹುಂಕಾರನಿವರ್ತಿತಃ ಪುರಾ ।
ಪುರಾರಿಮಪ್ರಾಪ್ತಮುಖಶ್ಶಿಲೀಮುಖಃ ॥
ಇಮಾಂ ಹೃದಿ ವ್ಯಾಯತಪಾತಮಕ್ಷಿಣೋತ್ ।
ವಿಶೀರ್ಣಮೂರ್ತೇರಪಿ ಪುಷ್ಪಧನ್ವನಃ ॥ ೫೪

ತದಾಪ್ರಭೃತ್ಯುನ್ಮದನಾ ಪಿತುರ್ಗೃಹೇ ।
ಲಲಾಟಿಕಾ ಚಂದನ ಧೂಸರಾಲ ಕಾ ॥
ನ ಜಾತು ಬಾಲಾ ಲಭತೇಽಸ್ಮನಿರ್ವೃತಿಂ ।
ತುಷಾರಸಂಘಾತ ಶಿಲಾತಲೇಷ್ವಪಿ ॥ ೫೫

ಉಪಾತ್ತವರ್ಣೇ ಚರಿತೇಪಿನಾಕಿನಃ ।
ಸಬಾಷ್ಪಕಂಠಸ್ಖಲಿತೈಃ ಪದೈರಿಯಂ ॥
ಅನೇಕಶಃ ಕಿನ್ನರರಾಜಕನ್ಯಕಾಃ ।
ವನಾಂತಸಂಗೀತಸಖೀರರೋದಯತ್ ॥ ೫೬

"ಮಾನಿನೀ ಮಣಿಯಿವಳು ಸಿರಿಯಿಂ ।
ಮಾನಿತರು ಮೇಣೌಕುದೆಸೆಗಳಿ ।
ಮಾನದೈವಗಳಹ ಮಹೇಂದ್ರಾದಿಗಳ ನಪಮತಿಸಿ ॥
ತಾನೆ ಮದನನ ಗೆಲಿದಕಾರಣ ।
ನೂನ ರೂಪಿನ ಬಲೆಗೆ ಸಿಕ್ಕದೆ ।
ತಾಣುವೆನಿಪಪಿನಾಕಪಾಣಿಯ ನೊಲಿಸೆ ಬಯಸಿಹಳು ॥ ೫೩

ಹಿಂದೆರುದ್ರನ ಹೂಂ ಕೃತಿಯ ಕೇ–।
ಳ್ದಂದು ಸಹಿಸದೆ ಭಯದಿ ಪುರಹರ–।
ನೊಂದದಿರೆ ತನ್ನಿಷ್ಟಫಲ ಸಾಧಿಸದೆ ಹಿಂದಿರುಗಿ ॥
ಅಂದು ಭರ್ಗನ ನೇತ್ರದುರಿಯಿಂ ।
ಬೆಂದರುಂ ಸ್ಮರನಿಟ್ಟ ಶರವೀ–।
ಸುಂದರಿಯ ಹೃದಯದೊಳು ಕೀಲಿಸಿ ಕೊರೆದು ಭಾದಿಸಿತು ೫೪

ಅಂದಿನಿಂದಂ ತಂದೆಮನೆಯೊಳು ।
ನಿಂದು ಮನ್ಮಥನಿಂದ ನೊಂದುರೆ ।
ಚಂದನದ ತಿಲಕದೊಳು ದೂಸರವೊಂದಿದಲಕಗಳ ॥
ಚಂದದಿಂ ಮೆರೆವಿಂದುಮುಖಿ ಹಿಮ–।
ಬೃಂದದಿಂ ತುಂಬಿರುವ ಬಂಡೆಗ ।
ಳೊಂದಿಯುಂ ಸುಖವೆಂದಿಗುಂ ತಾಂ ಪೊಂದಳವುಗಳಲಿ ॥ ೫೫

ಕನ್ಯೆಯಿವಳು ಪಿನಾಕಿಚರಿತವ ।
ನನ್ನಿಯಿಂ ಗಾನದಲಿ ಬಣ್ಣಿಸು ।
ವನ್ನೆಗಂ ಗದ್ಗದದ ಕಂಠದೊಳೊಡೆದ ಪದಗಳಲಿ ॥
ತನ್ನ ಗೆಳೆತನವನದಿ ಹಾಡೊಳು ।
ಮುನ್ನ ಪಣ್ಣಿಹ ಕಿನ್ನರಾಧಿಪ ।
ತನ್ನಿಕೆಯರನ್ನಳಿಸಿದಳು ಬಹುವಾಗಿ ಗುಣರನ್ನೆ ॥ ೫೬

ತ್ರಿಭಾಗಶೇಷಾಸು ನಿಶಾಸು ಚ ಕ್ಷಣಂ ।
ನಿಮೀಲ್ಯ ನೇತ್ರೇ ಸಹಸಾ ವ್ಯಬುಧ್ಯತ ॥
ಕ್ವ ನೀಲಕಂಠ ವ್ರಜಸೀತ್ಯಲಕ್ಷ್ಯವಾತ್ ।
ಅಸತ್ಯಕಂಠಾರ್ಪಿತಬಾಹುಬಂಧನಾ ॥ ೫೭

ಯಧಾ ಬುಧ್ಯೈ ಸ್ಸರ್ವಗತತಸ್ತ್ವಮುಚ್ಯಸೇ ।
ನ ವೇತ್ಸಿ ಭಾವಸ್ಥಮಿಮಂ ತಥಂ ಜನಂ ॥
ಇತಿ ಸ್ವಹಸ್ತೋಲ್ಲಿಖಿತಶ್ಚ ಮುಗ್ಧಯಾ ।
ರಹಸ್ಯುಪಾಲಂಭತ ಚಂದ್ರಶೇಖರಃ ॥ ೫೮

ಯದಾ ಚ ತಸ್ಯಾಧಿಗಮೇ ಜಗತ್ಪತೇಃ ।
ಅಪಶ್ಯದನ್ಯಂ ನ ವಿಧಿಂ ವಿಚಿನ್ವತೀ ॥
ತದಾ ಸಹಾಸ್ಮಾಭಿರನುಜ್ಞಯಾ ಗುರೋಃ ।
ಇಯಂ ಪ್ರಪನ್ನಾ ತಪಸೇ ತಪೋವನಂ ॥ ೫೯

ದ್ರುಮೇಷು ಸಖ್ಯಾ ಕೃತಜನ್ಮಸು ಸ್ವಯಂ ।
ಫಲಂ ತಪಸ್ಸಾಕ್ಷಿಷು ದೃಷ್ಟಮೇಷ್ವಪಿ ॥
ನ ಚ ಪ್ರರೋಹಾಭಿಮುಖೋಽಪಿ ದೃಶ್ಯತೇ ।
ಮನೋರಥೋಽಸ್ಯಾಃ ಶಶಿಮೌಳಿ ಸಂಶ್ರಯಃ ॥ ೬೦

ನಲ್ಲೆ ಮೂರನೆ ಜಾವದಿರುಳಾಗ ।
ಳಲ್ಲಿ ಯೊಂದರಗಳಿಗೆ ಮುಚ್ಚಿರು ।
ಪಲ್ಲಿ ಕಂಗಳ 'ನೆಲ್ಲಿಪೋಗುವೆ ನೀಲಕಂಧರನೆ ! ।
ನಿಲ್ಲೆ' ನುವ ಗುರಿಯಿಡದ ಸೊಲ್ಲ ।
ನ್ನಳ್ಳ ವೋಣ್ವಲ್ಲಭನ ಕೊರಳೊಳು ।
ಸುಳ್ಳು ಕೈ ಬಿಗಿಯುಳ್ಳ ಸಖಿ ತಕ್ಷಣವೆ ಕಂದೆರೆವಳ್ ॥ ೫೭

ನೀನು ಸರ್ವವ್ಯಾಪಿಯೆನುತಂ ।
ಜ್ಞಾನಿಗಳು ಪೇಳುವರು ನಿಜವೀ-।
ಶಾನ! ನಿನ್ನೊಲಿದೀ ಜನವನೆಂತರಿಯೋ ನೀನೆಂದು ॥
ತಾನೆ ಕೈಯೊಳು ಬರೆದ ಚಿತ್ರ-।
ಸ್ಥಾನವೊಂದಿದ ಚಂದ್ರಚೂಡನ ।
ಮಾನಿನಿಯು ಗುಟ್ಟಿಸಲಿ ಪಳಿವಳು ಮೌಢ್ಯದಿಮತ್ತೆ ॥ ೫೮

ಎಂದು ತಾನಾವಿಶ್ವವಿಭುವಂ ।
ಪೊಂದಲೋ ಸುಗ ಮಿಂದುಮುಖಿ ಬೇ ।
ರೊಂದುಪಾಯುವ ಚಂದದಿಂದರಸಿದರು ವೀಕ್ಷಿಸಲೋ ॥
ಅಂದು ನಮ್ಮೊಡಗೂಡಿ ತನ್ನಯ ।
ತಂದೆಯಪ್ಪಣೆ ಗಳಿಸಿ ತಪಸಿಂ-।
ದೊಂದು ವಿಚ್ಛೆಯಲೀ ಸಖಿ ಸೇರಿದಳೀ ತಪೋವನವ ॥ ೫೯

ಲಲನೆಯೆಸಗಿದ ತಪವಕಂಡಿ ।
ತೆಳದಿಯಳ ಕೈಯಿಂದ ಜನ್ಮಂ ।
ಗಳನು ಪೂತ್ತಾ ಮರಗಳೊಳಗುಂ ಫಲವಕಂಡಿಹೆವು ॥
ಒಲುಮೆಯಿಂ ಶಶಿಮೌಳಿಯನುತಾ ।
ನೊಲಸಲೆಳೆಸಿದ ಸಖಿಯು ಬಯಕೆಗೆ ।
ಮೊಳಕೆವೊಳೆಯುವ ಸುಳಿವನೆಂದುಂ ಕಾಣದಿಹೆವಾವು ॥ ೬೦

ನ ವೇದ್ಮಿ ಸ ಪ್ರಾರ್ಥಿತದುರ್ಲಭಃ ಕದಾ ।
ಸಖೀಭಿರಸ್ರೋತ್ತರಮೀಕ್ಷಿತಾಮಿಮಾಂ ॥
ತಪಃಕೃಶಾಮಭ್ಯುಪಸತ್ಸ್ಯತೇ ಸಖೀಂ ।
ವೃಷೇವಸೀತಾಂ ತದವಗ್ರಹಕ್ಷತಾಂ ॥ ೬೧

ಅಗೂಢಸದ್ಭಾವಮಿತೀಂಗಿತಜ್ಞಯಾ ।
ನಿವೇದಿತೋ ನೈಷ್ಠಿತಸುಂದರಸ್ತಯಾ ॥
ಅಯೀದಮೇವಂ ಪರಿಹಾಸಇತ್ಯುಮಾಂ ।
ಅಪೃಚ್ಛದವ್ಯಂಜಿತಹರ್ಷಲಕ್ಷಣಃ ॥ ೬೨

ಅಥಾಗ್ರಹಸ್ತೇ ಮುಕುಳೀಕೃತಾಂಗುಳೌ ।
ಸಮರ್ಪಯಂತೀ ಸ್ಫಟಿಕಾಕ್ಷಮಾಲಿಕಾಂ ॥
ಕಥಂಚಿದದ್ರೇಸ್ತನಯಾ ಮಿತಾಕ್ಷರಂ ।
ಚಿರವ್ಯವಸ್ಥಾಪಿತವಾಗಭಾಷತ ॥ ೬೩

ಯಥಾಶ್ರುತಂ ವೇದವಿದಾಂ ವರ ತ್ವಯಾ ।
ಜನೋಽಯಮುಚ್ಚೈಃ ಪದಲಂಘನೋತ್ಸುಕಃ ॥
ತಪಃಕಿಲೇದಂ ತದವಾಪ್ತಿಸಾಧನಂ ।
ಮನೋರಥಾನಾಮಗತಿರ್ನವಿದ್ಯತೇ ॥ ೬೪

ಮಳೆಗಳಿಲ್ಲದೆ ಬೆಳೆಗಳೊಣಗಲು ।
ಹೊಲದ ನೇಗಿಲ ಸಾಲನುಂ ವೃಷ ।
ನೋಲವವೋಲ್ ಬೇಡಿದರು ಮೊಲಿಯದ ಚಂದ್ರಶೇಖರನು ॥
ಬಲುತಪದಿ ಕೃಶೆಯಾದ ಮೇಣ್ಸಖಿ ।
ಗಳೊಲವಿಂದಳುತಳುತಲೀಕ್ಷಿಪ ।
ಕೆಳದಿಯಿವಳನು ಮೆಂದನು ಗ್ರಹಿಸುವನೊ ನಾನರಿಯೆ ॥ ೬೧

ತರಳೆಯಿಂಗಿತವರಿದ, ಗುಟ್ಟನು ।
ತೊರೆದು ಸದ್ಭಾವವನೆ ತಾನಿಂ ।
ತರುಪಲಾ ಸಖಿಯುವಗೆ ನಿತ್ಯಬ್ರಹ್ಮಚರ್ಯೆಯಲಿ ॥
ನಿರತನಹ ಸುಂದರನು ಹರ್ಷದ ।
ಗುರುತ ತೋರದೆ, 'ಉಮೆಯೆ ! ನುಡಿಯಿದು ।
ಸರಿಯ್ ! ಮೇಣ್ಪರಿಹಾಸವೋ ಪೇಳೆನುತ ಕೇಳಿದನು ॥ ೬೨

ಬೆಟ್ಟದಣುಗಿಯುಃ ಬಳಿಕ ತನ್ನಯ ।
ಬೆಟ್ಟುಗಳ ಮುಗುಳಿಟ್ಟು ಕೈಹಿಡಿ- ।
ಗಟ್ಟಿನೋಳೆ ಸ್ಫಟಿಕಾಕ್ಷಮೊಲೆಯನರ್ಪಿಸುತ್ತವಳು ॥
ಕಟ್ಟಿಗಿಟ್ಟಕ್ಷರದ ಸಾಚಿಕೆ ।
ವಟ್ಟು ಬಹುಕಷ್ಟದಲಿ ಮಾತುಗ ।
ಳೊಟ್ಟುಗೂಡಿಸಿ ನುಡಿದಳಾ ನೈಷ್ಠಿಕಗೆ ಹೀಗೆಂದು ॥ ೬೩

ವೇದವಿದರೊಳಗಗ್ರಗಣ್ಯನೆ ! ।
ಹೌದು ನೀಂ ಕೇಳಿದುದು ದುರ್ಲಭ ।
ವಾದ ಪದವಂ ಪಡೆಯಲಿಕೆ ಬಾಯ್ದೆರೆವುದೀ ಜನವು ॥
ಆದಪುದು ಗಡ ಪೊಂದಲದ ನಾಂ ।
ಗೈದತಪವಿದು ಸಾಧನವು ಬೇ ।
ಕಾದ ವಸ್ತುಗಳೊಂದಲೆಳೆಸುವ ಮನಕೆ ತಡೆಯಿಲ್ಲ ॥ ೬೪

ಅಥಾಹವರ್ಣೀ ವಿದಿತೋ ಮಹೇಶ್ವರಃ ।
ತದರ್ಥಿನೀತ್ವಂ ಪುನರೇವ ವರ್ತಸೇ ॥
ಅಮಂಗಳಾಭ್ಯಾಸ ರತಿಂ ವಿಚಿಂತ್ಯತಂ ।
ತವಾನುವೃತ್ತಂ ನ ಚ ಕರ್ತುಮುತ್ಸಹೇ ॥ ೬೫

ಅವಸ್ತುನಿರ್ಬಂಧ ಪರೇ ಕಥಂನುತೇ ।
ಕರೋಽಯಮಾಮುಕ್ತ ವಿವಾಹ ಕೌತುಕಃ॥
ಕರೇಣ ಶಂಭೋರ್ವಲಯಿಾ ಕೃತಾಹಿನಾ ।
ಸಹಿಷ್ಯತೇ ತತ್ಪ್ರಥಮಾವಲಂಬನಂ ॥ ೬೬

ತ್ವಮೇವ ತಾವತ್ಪರಿ ಚಿಂತಯಸ್ವಯಂ।
ಕದಾಚಿದೇತೇ ಯದಿಯೋಗಮರ್ಹತಃ ॥
ವಧೂದುಕೂಲಂ ಕಲಹಂಸಲಕ್ಷಣಂ ।
ಗಜಾಜಿನಂ ಶೋಣಿತ ಬಿಂದುವರ್ಷಿ ಚ ॥ ೬೭

ಚತುಷ್ಕ ಪುಷ್ಪಪ್ರಕರಾವಕೀರ್ಣಯೋಃ ।
ಪರೋಽಪಿ ಕೋ ನಾಮ ತವಾನುಮನ್ಯತೇ ॥
ಅಲಕ್ತಕಾಂಕಾನಿ ಪದಾನಿ ಪಾದಯೋಃ ।
ವಿಕೀರ್ಣಕೇಶಾಸು ಪರೇತಭೂಮಿಷು ॥ ೬೮

ಬಳಿಕ ನೈಷ್ಠಿಕನುಮೆಗೆ ಪೇಳ್ದನು ।
"ಲಲನೆ ! ನೆರೆಬಲ್ಲೆನು ಮಹೇಶ್ವರ ।
ನೊಲಿಸಲವನಂ ಬೇಡುವೆಯ ? ಮತ್ತೊಮ್ಮೆಯುಂ ನೀನು ॥
ತಿಳಿದು ಯೋಚಿಸಿ ನೋಡಲಿಕವಂ– ।
ಗಳ ಚರಿತನಹನಾ ಶಿವನೊಲುಮೆ– ।
ಗೆಳಸಿ ನೀನನುಸರಣೆ ಮಾಡುವ ಬಗೆಯ ನಾನೊಪ್ಪೆ ॥ ೬೫

ತುಚ್ಛ ವಸ್ತುಗಳಲ್ಲಿ ನೆಟ್ಟಿರು– ।
ವಿಚ್ಛೆ ತೋರ್ಪಳಿ ಪರಿಣಯದೊಳು ಮ– ।
ಹೆಚ್ಛ ಭಂಕರ ಹಸ್ತಸೂತ್ರದೊಳೆಸೆವ ನಿನ್ನೀ ಕೈ ॥
ಉಚ್ಛಿರದ ಫಣಿವಲಯವೊಂದಿದ ।
ತಚ್ಛಿವನ ಕೈಯ್ಯೊಡನೆ ನಿನ್ನನು ।
ವೃಚ್ಛಿಪೆನು ಪೇಳೆಂದು ಸಹಿಪುದು ಮೊದಲ ಜೋಡಣೆಯು ॥ ೬೬

ಮಾನಿನಿಯೆ ಕಲಹಂಸವರ್ಣ ಸ– ।
ಮಾನವಹ ಮದುಮಗಳು ಧರಿಪ ನ– ।
ವೀನವಾದದು ಕೂಲವುಂ, ಮದುಮಗನು ಧರಿಸುತಿ ಹ ॥
ಶೋಣಿತದ ಹಸಿಗಳನು ವರ್ಷಿಸು– ।
ವಾನೆ ತೊಗಲುಂ, ಪೇಳಿವೆರಡುಂ ।
ನೀನೆ ನಿನ್ನೊಳು ಯೋಚಿಸೆಂದುಂ ಜೊತೆಗೆ ಸರಿಯುಂಟೇ ॥ ೬೭

ನವ್ಯಸುಮಸಂಕೀರ್ಣ ಮಾಗಿಹ ।
ದಿವ್ಯಭವನೋರ್ವಿಯಲಿ ನಿನ್ನೀ ।
ಸ್ತವ್ಯ ಪದಗಳಲೆಸೆವರಗ ರಸದಡಿಯ ಗುರುತುಗಳಂ ॥
ಕ್ರವ್ಯ ಭಕ್ಷಕರಾಲಯದ ಜೀ– ।
ವವ್ಯಯಿಸೆ ಶವಕೇಶಗಳಿರಲ– ।
ಭವ್ಯ ಭುವಿಗಳಲಾವಹಗೆ ತಾಂ ನೋಡಲೊಪ್ಪುವನು ॥ ೬೮

ಅಯುಕ್ತರೂಪಂ ಕಿಮತಃ ಪರಂ ವದ ।
ತ್ರಿನೇತ್ರವಕ್ಷಃ ಸ್ಸುಲಭಂ ತವಾಪಿ ಯತ್ ॥
ಸ್ತನದ್ವಯೇಽಸ್ಮಿನ್ ಹರಿಚಂದನಾಸ್ಪದೇ ।
ಪದಂ ಚಿತಾಭಸ್ಮರಜಃ ಕರಿಷ್ಯತಿ ॥ ೬೯

ಇಯಂ ಚತೇಽನ್ಯಾ ಪುರತೋ ವಿಡಂಬನಾ ।
ಯದೂಢಯಾ ವಾರಣರಾಜ ಹಾರ್ಯಯಾ ॥
ವಿಲೋಕ್ಯವೃದ್ಧೋಕ್ಷ ಮಧಿಷ್ಠಿತಂ ತ್ವಯಾ ।
ಮಹಾಜನಸ್ಸ್ಮೇರಮುಖೋ ಭವಿಷ್ಯತಿ ॥ ೭೦

ದ್ವಯಂ ಗತಂ ಸಂಪ್ರತಿ ಶೋಚನೀಯತಾಂ ।
ಸಮಾಗಮಃ ಪ್ರಾರ್ಥನಯಾ ಪಿನಾಕಿನಃ ॥
ಕಲಾ ಚ ಸಾ ಕಾಂತಿಮತೀ ಕಲಾವತಃ ।
ತ್ವಮೇವಲೋಕಸ್ಯ ಚ ನೇತ್ರ ಕೌಮುದೀ ॥ ೭೧

ವಪುರ್ವಿರೂಪಾಕ್ಷ ಮಲಕ್ಷ್ಯ ಜನ್ಮತಾ ।
ದಿಗಂಬರತ್ವೇನ ನಿವೇದಿತಂ ವಸು ॥
ವರೇಷು ಯದ್ಬಾಲಮೃಗಾಕ್ಷಿ ಮೃಗ್ಯತೇ ।
ತದಸ್ತಿ ಕಿಂ ವ್ಯಸ್ತಮಿತಿ ತ್ರಿಲೋಚನೇ॥ ೭೨

ನಿನಗೆ ಮುಕ್ಕಣ್ಣನೊಡ ನಾಲಿಂ-।
ಗನವು ಬಹು ಸುಲಭ ಮಾದೊಡ ।
ಮೆನಗೆ ಪೇಳ್ ಇದಕಿಂತ ಲತ್ಯಂತಾನುಚಿತ ಮುಂಟೇ ॥
ವಿನುತ ಹರಿಚುಂದನಕೆ ನೆಲೆಯಿಾ-।
ಸ್ತನ ಯುಗಳ ದೇಶದಲಿ ತಾನೆಡೆ-।
ಯ ನಿಡುವುದು ಶಿವನಂಗರಾಗದ ಮಸಣ ಬೂದಿ ಹುಡಿ ॥ ೧೯

ಮದಗಜಾಧಿಪ ಗಮನ ವಿಹ ನೀಂ ।
ಮದುವೆಯಾದೊಡ ನಿನೆಯನೊಂದಿಗೆ ।
ಮುದಿಬಸವನಾ ನಂದಿ ಹೆಗಲಲಿ ಕುಳಿತು ಬರುತಿರಲು !
ಮುದದಲೀಕ್ಷಿಪ ಸಾಧು ಜನಗಳ ।
ವದನ ಮೆಳೆನಗುವನ್ನು ತೋರ್ಪುದು ।
ಮೊದಲೆ ನೀನಗೋಸುಗವೆ ಬರುವಪಹಾಸ್ಯವಿದು ಬೇರೆ ॥ ೨೦

ಪೊಂದಲೆಳಸಿ ಪಿನಾಕಿ ಸಂಗಮ-।
ದಂದವಂ ಪ್ರಾರ್ಥಿಸು ತಲವನಂ ।
ಪೊಂದಿಹುದು ಬಹುದುಃಸ್ಥಿತಿಯನಿದೊಂದು ಜೊತೆ ಮಾತ್ರ ॥
ಅಂದು ಬಹುಕಾಂತಿಯುಲಿ ಮೆರೆದಿಹ ।
ಚಂದಿರನ ಕಳೆಯೊಂದು ; ಜನಗಳಿ ।
ಗಿಂದು ನೇತ್ರಾನಂದ ಕೊಡುತಿಹ ನೀನೆ ಮಾತ್ತೊಂದು ॥ ೨೧

ತನುವ ಸೊಬಗನು ನೋಡೆ ಮುಕ್ಕ-।
ಣ್ಣನವನು, ಕುಲವನೆಣಿಸಲಿಕ ವನ ।
ಜನುಮ ಕಂಡವರಿಲ್ಲ ; ಬೆತ್ತಲೆಯೋ ಶಿವಗೆ ವಿತ್ತ ॥
ಜನಕಿ ವರನೊಳಗಾವ ಗುಣಗಣ ।
ವನರಸುವುದೋ ತ್ರ್ಯಕ್ಷನೊಳಗೊಂ-।
ದಿಸಿತುಮುಂ ನಾ ಕಾಣೆನಿಹುದೇಸೆಳೆಯೆಂರಳೆ ಗಣ್ಣೆ ! ೨೨

ನಿವರ್ತಯಾಸ್ಮಾ ದಸದೀಪ್ಸಿತಂ ಮನಃ
ಕ್ವತದ್ವಿಧಸ್ತ್ವಂ ಕ್ವ ಚ ಪುಣ್ಯಲಕ್ಷಣಾ ॥
ಅಪೇಕ್ಷ್ಯತೇ ಸಾಧು ಜನೇನ ವೈದಿಕೀ ।
ಶ್ಮಶಾನ ಶೂಲಸ್ಯ ನಯೂಪ ಸತ್ಕ್ರಿಯಾ ॥ ೭೩

ಇತಿದ್ವಿಜಾತ ಪ್ರತಿ ಕೂಲವಾದಿನಿ ।
ಪ್ರವೇಪಮಾನಾಧರ ಲಕ್ಷ್ಯಕೋಪಯಾ ॥
ವಿಕುಂಚಿತಭ್ರೂಲತ ಮಾಹಿತೇ ತಯಾ ।
ವಿಲೋಚನೇ ತಿರ್ಯಗುಪಾಂತಲೋಹಿತೇ ॥ ೭೪

ಉವಾಚ ಚೈನಂ ಪರಮಾರ್ಥತೋ ಹರಂ ।
ನ ವೇತ್ಸಿ ನೂನಂ ಯತಏವಮಾತ್ಥ ಮಾಂ ॥
ಅಲೋಕ ಸಾಮಾನ್ಯ ಮಚಿಂತ್ಯ ಹೇ ತುಕಂ ।
ದ್ವಿಷಂತಿ ಮಂದಾಶ್ಚರಿತಂ ಮಹಾತ್ಮನಾಂ ॥ ೭೫

ವಿಪತ್ಪ್ರತೀಕಾರ ಪರೇಣ ಮಂಗಳಂ।
ನಿಷೇವ್ಯತೇ ಭೂತಿ ಸಮುಂತ್ಸುಕೇನವಾ ॥
ಜಗಚ್ಛರಣ್ಯಸ್ಯನಿ ರಾಶಿಷಸ್ಸತಃ ।
ಕಿಮೇಭಿರಾಶೋ ಪಹತಾತ್ಮವೃತ್ತಿಭಿಃ ॥ ೭೬

ಯುಕ್ತವಿರದೀ ಬಯಕೆಯಿಂ ನೀಂ ।
ಮುಕ್ತಳಾಗೌ ಹಿಂದೆ ಬಣ್ಣಿಸಿ ।
ದುಕ್ತಿ ಯಿಂದವನೆಲ್ಲಿ ? ಬಹು ಸೌಭಾಗ್ಯ ಲಕ್ಷಣದಿಂ ॥
ಯುಕ್ತಳಹ ನೀನೆಲ್ಲಿ ? ಮಸಣದ ।
ಶಕ್ತಿ ಶೂಲಕೆ ಸಾಧುಜನ (ಗುಣ) ಸಂ- ।
ಸಕ್ತ (ಯುಕ್ತ) ರೊಪ್ಪರು ಯೂಪಕಿಹ ವೇದೋಕ್ತ ಸತ್ಕ್ರಿಯುಂ ॥ ೭೩

ಈ ಪರಿಯೊಳಾದ್ವಿಜನು ಬಯಕೆಗೆ ।
ತಾಪವೀವ ವಿರೂಪವನವಗೆ ನಿ- ।
ರೂಪಿಸುತ್ತಿರೆ ಕಂಪಿಪಾ ಕೆಳತುಟಿಯುಲೂಹಿಸುವ ॥
ಕೋಪವಿಹ ಕೋಪನೆಯು (ರೂಪಿಣಿಯು) ಹುಬ್ಬಿನ ।
ಚಾಪಮಂ ಗಂಟಿಕ್ಕಿ ಕೆಂಪಿಂ- ।
ದೀಪಿಸುವ ಕಣ್ಗೊನೆಗಳಲಿ ದೃಷ್ಟಿಯನಡ್ಡಗೈಸಿದಳು ॥ ೭೪

ಇಂದು ಮುಖಿ ಬಳಿಕವಗೆ ಪೇಳಿದ ।
ಳಿಂದು ಮೌಳಿಯನರಿಯೆ ತತ್ವದ- ।
ಲಿಂದು ನೀನದರಿಂದ ನಿಂದಿಪೆಯುನ್ನಮುಂದವನ ॥
ಮಂದ ಬುದ್ಧಿಗಳದಕೆ ಕಾರಣ ।
ದಂದವರಿಯದ ಲಿತರ ಜನದೊಡ- ।
ನೊಂದದಿಶಪ ಮಹಾನುಭಾವರ ಚರಿತೆಯನು ಪಳಿವೆ ॥ ೭೫

ಕೇಡು ಬರದಂತದಕೆ ವಿಘ್ನವ- ।
ಬೇಡುವವನಿಂದತವ ಹಣ ಕೈ ।
ಗೂಡಲೆಳೆಸುವ ನಿಂದ ಶುಭಗಳು ಸೇವ್ಯ ಮಾಗಿಹವು ॥
ನೋಡೆ ಲೋಕಶರಣ್ಯ ನಾಸೆಯು ।
ದೂಡಿದವ ಶಿವ ನವನಿಗಾಶಾ ।
ಪೀಡೆಯಿಂ ಹತಚಿತ್ತವೃತ್ತಿಗಳಿವುಗಳಿಂದೇನು ? ॥ ೭೬

ಅಕಿಂಚನಸ್ಸನ್ ಪ್ರಭವಸ್ಸ ಸಂಪದಾಂ।
ತ್ರಿಲೋಕನಾಥಃ ಪಿತೃಸದ್ಮ ಗೋಚರಃ ॥
ನ ಭೀಮರೂಪ ಶಿವಇತ್ಯುದೀರ್ಯತೇ ।
ನ ಸಂತಿಯಾತಾರ್ಥ್ಯ ವಿದಃ ಪಿನಾಕಿನಃ ॥ ೭೭

ವಿಭೂಷಣೋದ್ಭಾಸಿ ಪಿನದ್ಧಭೋಗಿ ವಾ ।
ಗಜಾಜಿನಾಲಂಬಿ ದುಕೂಲಧಾರಿ ವಾ ॥
ಕಪಾಲಿ ವಾ ಸ್ಯಾದಥವೇಂದು ಶೇಖರಂ ।
ನ ವಿಶ್ವಮೂರ್ತೇರ್ ರವಧಾರ್ಯತೇ ವಪುಃ ॥ ೭೮

ತದಂಗಸಂಸರ್ಗ ಮವಾಸ್ಯ ತಲ್ಪಶೇ ।
ಧ್ರುವಂಚಿತಾಭಸ್ಮ ರಜೋವಿಶುದ್ಧಯೇ ॥
ತಥಾ ಹಿ ನೃತ್ಯಾಭಿನಯಕ್ರಿಯಾಚ್ಯುತಂ ।
ವಿಲಿಪ್ಯತೇ ಮೌಳಿಭಿ ರಂಬರೌಕಸಾಂ ॥ ೭೯

ಅಸಂಪದಸ್ತಸ್ಯ ವೃಷೇಣ ಗಚ್ಛತಃ ।
ಪ್ರಭಿನ್ನ ದಿಗ್ವಾರಣ ವಾಹನೋ ವೃಷಾ ॥
ಕರೋತಿ ಪಾದಾವುಪಗಮ್ಯ ಮೌಳಿನಾ ।
ವಿನಿದ್ರಮಂದಾರರಜೋರುಣಾಂಗುಳೀ ॥ ೮೦

ಏನನೊಂದದ ಬಡವನಾದರು ।
ತಾನೆ ನಿಖಿಲೈಶ್ವರ್ಯಗಳಿಗೆ ನೀ–।
ದಾನ, ಮಸಣದಿ ನೆಲೆಸಿದರು ಮೂಲ್ಲೋಕಕವನೋಡೆಯು ॥
ಸ್ಥಾಣು ಭೀಷ್ಮಾಕಾರನಾದರು ।
ಮೌನಿಗಳು ಶಿವನೆಂಬರವನಂ ।
ಜ್ಞಾನಮೂರ್ತಿ ಪಿನಾಕತತ್ವನನಿಲ್ಲ ತಿಳಿದವರು ॥ ೭೭

ಭೋಗ ದೊಡವಗಳಿಂದ ಮೆರೆದರು ।
ಭೋಗಿ ಭೂಷಿತನಾದರಥವಾ ।
ನಾಗ ಕೃತ್ತಿಯನುಟ್ಟರಥವ ದುಕೂಲಧರಿಸಿದರುಂ ॥
ರಾಗದಿಂದುವ ತಳೆದರಥವ ವಿ–।
ರಾಗದಿಂದ ಕಪಾಲಕೊಂಡರು ।
ಹೀಗೆನುತ ನಿರ್ಧರಿಸಲರಿದಾ ವಿಶ್ವಮೂರ್ತಿತನು ॥ ೭೮

ಶಿವನ ತನು ಸಂಸರ್ಗವೊಂದಿದ ।
ಶವದ ಬೂದಿಯು ಧೂಳಿ ಕಲುಷವ ।
ಸವೆಸಿ ಶುದ್ಧಿಯಂಮಾಡೆ ಸಾಕ್ಯೆ ಸಪ್ರಮಾಣವಿದು ॥
ಸವಡಿನುಡಿಯಲ್ಲ ಭವನಾ ತಾಂ ।
ಡವದೊಳಭಿನಯಕಾರ್ಯದಿಂ ಜಾ–
ರುವುದನಂ ಮಸ್ತಕದೊಳಗೆ ತಳೆವರು ದಿವೌಕಸರು ॥ ೭೯

ಮತ್ತದಿಗ್ವಾರಣದ ಬೆನ್ನನು ।
ಹತ್ತಿ ಬರುತಿಹ ಹಸ್ತಿವಾಹನ–।
ನೆತ್ತ ನೇರಿಯೆ ಸುತ್ತುವೇನೂ ವಿತ್ತವಿಲ್ಲದಲೆ ॥
ಕೃತ್ತಿವಾಸನ ಪಾದಯುಗ್ಮಕೆ ।
ತೆತ್ತು ಮೌಳಿಯ ಕಾಲಬೆರಳಿಂ–।
ಗಿತ್ತಪನು ಮಂದಾರಪುಷ್ಪಪರಾಗದರುಣತೆಯಂ ॥ ೮೦

ವಿವಕ್ಷತಾ ದೋಷಮಪಿಚ್ಯುತಾತ್ಮನಾ ।
ತ್ವಯೈಕಮೀಶಂ ಪ್ರತಿ ಸಾಧು ಭಾಷಿತಂ ॥
ಯಮಾಮನಂತ್ಯಾತ್ಮಭುವೋಽಪಿ ಕಾರಣಂ ।
ಕಥಂಸಲಕ್ಷ್ಯಪ್ರಭವೋ ಭವಿಷ್ಯತಿ ॥ ೮೧

ಅಲಂ ವಿವಾದೇನ ಯಥಾಶ್ರುತಸ್ತ್ವಯಾ ।
ತಥಾವಿಧಸ್ತಾವದಶೇಷ ಮಸ್ತು ಸಃ ॥
ಮಮಾತ್ರ ಭಾವೈಕರಸಂ ಮನಃ ಸ್ಥಿತಂ ।
ನಕಾಮವೃತ್ತಿರ್ವಚನೀಯ ಮೀಕ್ಷತೇ ॥ ೮೨

ನಿವಾರ್ಯತಾಮಾಲಿ ಕಿಮಪ್ಯಯಂಬಟುಃ ।
ಪುನರ್ವಿವಕ್ಷುಸ್ಫುಟಿತೋತ್ತರಾಧರಃ ॥
ನ ಕೇವಲಂ ಯೋ ಮಹತೋಽಪಭಾಷತೇ ।
ಶೃಣೋತಿ ತಸ್ಮಾದಪಿ ಯ ಸ್ಸ ಪಾಪಭಾಕ್ ॥ ೮೩

ಇತೋಗಮಿಷ್ಯಾಮ್ಯಥ ವೇತಿವಾದಿನೀ ।
ಚಚಾಲ ಬಾಲಾಸ್ತನ ಭಿನ್ನವಲ್ಕಲಾ ॥
ಸ್ವರೂಪ ಮಾಸ್ಥಾಯ ಚ ತಾಂ ಕೃತಸ್ಮಿತಃ ।
ಸಮಾಲಲಂಬೇ ವೃಷರಾಜ ಕೇತನಃ ॥ ೮೪

ಕಲುಷಮನಸಿಂ ದೋಷವಂತನವ ।
ನುಲಿಯುನಿಚ್ಛೆಸುತ ಭವನಂ ಕುರಿ–।
ತೊಲಿದು ನೀಂ ಪೇಳ್ದುಕ್ತಿಯೊಳಗೊಂದುಚಿತ ವಾಗಿಹುದು ॥
ತಿಳಿದರಾವನನಾತ್ಮ ಭುವಗುಂ ।
ಬಲಿದ ಕಾರಣನೆಂದು ಪೇಳ್ವರೊ ।
ತಿಳಿವರೇ ತಾ ಹಿರಿಯು ಸಾವಿಯು ಜನ್ಮ ಕಾರಣವಂ ೮೧

ಸಾಕು ಮಾಡೈ ಕಲಹ ನೀನು ಪಿ–
ನಾಕಪಾಣಿಗದಾವ ಗುಣ ವಿರ–
ಬೇಕೆನುತ ಕೇಳಿಹೆಯೋ ಶಿವನದೆಲ್ಲ ತಳೆದಿರಲಿ ॥
ಆ ಕಪಾಲಿಯುಲೆನ್ನ ಮನ ಭಾ–।
ವೈಕರಸದಿಂ ನೆಲೆಸಿಹುದು ತಿಳಿ ।
ಲೋಕವಾದವ ಗಣಿಸರ್ಕೈ ತಮ್ಮಿಚ್ಛೆ ಗೊಲಿದವರು ॥ ೮೨

ತುಟಿಗಳನು ನೆಲೆಕದಲಿಸುತ್ತಿಹ ।
ಒಟುವಿವನು ಮತ್ತೇನೊ ಗಳುಹಲು ।
ಹಟವ ತೊಟ್ಟಿಹನಂತೆ ಕಾಂಬಿನು ಸಖಿಯೆ ! ತಡೆಯುವನ ॥
ಘಟಿಪುವಘ ಪೂಜ್ಯರನು ತೆಗಳುವ ।
ಪಟುಗಳಿಗು ತಾಂ ಮಾತ್ರವಲ್ಲದೆ ।
ಸಟೆಯು ನುಡಿವವನಿಂದ ಕೇಳ್ವರು ಪಾಪಭಾಜನರು ॥ ೮೩

ಹೊರಟೆ ನಾನಿಲ್ಲಿಂದಲಥವಾ ।
ತರಳೆ ತಾ ನಿಂತೆನುತ ಚಲಿಸುವ ।
ಭರಕೆ ಚೇರದ ಮೊಲೆಯು ಮೇಲುದ ಜಾರೆ ಸರಿವನ್ನಂ ॥
ಇರದೆ ನೀಜರೂಪವನೆ ತಾಳುತ ।
ಮೆರೆವ ನಸುನಗೆಯುನ್ನು ತೋರುತ ।
ಗಿರಿಸುತೆಯು ಕೈವಿಡಿದನಾ ವೃಷರಾಜಕೇತನನು ॥ ೮೪

ತಂವೀಕ್ಷ್ಯ ವೇಪಥುಮತೀ ಸರಸಾಂಗಯಷ್ಟಿಃ ।
ನಿಕ್ಷೇಪಣಾಯ ಪದಮುದ್ಧೃತಮುದ್ವ ಹಂತೀ ॥
ಮಾರ್ಗಾಚಲವ್ಯತಿಕರಾ ಕುಲಿತೇವ ಸಿಂಧುಃ ।
ಶೈಲಾಧಿರಾಜತನಯಾ ನ ಯಯೌ ನ ತಸ್ಥೌ ॥ ೮೫

ಅದ್ಯಪ್ರಭೃತ್ಯವನತಾಂಗಿ ತವಾಸ್ಮಿದಾಸಃ ।
ಕ್ರೀತಸ್ತಪೋಭಿರಿತಿವಾದಿನಿ ಚಂದ್ರಮೌಳೌ ॥
ಅಹ್ನಾಯಸಾ ನಿಯಮಜಂ ಕ್ಲಮಮುತ್ಸಸರ್ಜ ।
ಕ್ಲೇಶಃ ಫಲೇನ ಹಿ ಪುನರ್ನವತಾಂ ವಿಧತ್ತೇ ॥ ೮೬

ಖಂಡ ಪರಶುವ ತನ್ನ ಮುಂಗಡೆ ।
ಕಂಡು ಮೈ ಬೆವರುತಿರೆ ಮೇಣ್ ತನು-।
ದಂಡೆ ರೋಮಾಂಚಿಸಲೆತ್ತಿ ಮುಂದಿಡಲಡಿಯ ನೆತ್ತಿರುವ ।
ಗಂಡು ಬೆಟ್ಟದ ಮಗಳು ಮಾರ್ಗದಿ ।
ಗಂಡ ಶೈಲವು ತಡೆಯಲುದ್ಭ್ರಮೆ-।
ಗೊಂಡ ನದಿಯೊಲು ಬಿಟ್ಟು ಪೋಗಳು ಬಿಡದೆ ನಿಂತಿಹಳು ॥ ೮೫

"ಸುಂದರಾಂಗಿಯೇ ! ನನ್ನ ನೀಂ ತಪ-।
ಸಿಂದ ಕೊಂಡಿಹೆ; ನಿನ್ನ ದಾಸ್ಯವ-।
ನಿಂದು ಮೊದಲಿಂ ಪೊಂದಿರುವೆನೆಂ" ದೆನಲು ಶಶಿಮೌಳಿ ॥
ಇಂದುಮುಖಿ ಯಾಕ್ಷಣವೇ ಬಲು ತಪ-।
ದಿಂದಲಹ ಕಷ್ಟವನೆ ತೊರೆದಳು ।
ಸಂದ ಕಷ್ಟವು ಫಲಿಸೆ ನಿಜವದು ಮತ್ತೆ ಪೊಸತಹುದು ॥ ೮೬

ಕಾಳಿದಾಸ ಮಹಾಕವಿಯ ಮಹಾಕಾವ್ಯಗಳಲ್ಲೊಂದೆನಿಸಿದ 'ಕುಮಾರ ಸಂಭವ' ದಲ್ಲಿನ ಐದನೆಯ ಸರ್ಗದಲ್ಲಡಗಿರುವ ವಿಷಯದ ಸಂಕ್ಷೇಪ ವಿವರಣೆ ಈ ಮುಂದಿನಂತಿದೆ.

ಹಿಮವಂತನ ಮಗಳೆನಿಸಿದ ಪಾರ್ವತಿ ದೇವಿಯು, ಆ ಬೆಟ್ಟದ ಕಿಬ್ಬಿಯಲಿದ್ದು ತಪಸ್ಸಿನಲ್ಲಿ ಮಗ್ನನಾದ ಪರಮಶಿವನನ್ನು ವರಿಸಬೇಕೆಂಬ ಹೆಬ್ಬಯಕೆಯಿಂದ ತಂದೆಯ ಸಮ್ಮತಿಯನ್ನು ಪಡೆದು ಶ್ರೀ ಶಿವನನ್ನು ಸೇವೆಮಾಡುವ ಸಲುವಾಗಿ ಆ ಕಾರ್ಯದಲ್ಲಿ ನಿರತಳಾಗಿದ್ದಂದು ದೇವ ಕಾರ್ಯಕ್ಕಾಗಿ ಮನ್ಮಥನು ಮಹೇಶ್ವರನಿಗೆ ಗುರಿಯಿಟ್ಟು ಪುಷ್ಪ ಬಾಣಗಳನ್ನು ಪ್ರಯತ್ನಿಸಿದಾಗ ಅದರಿಂದ ಚಂಚಲಮನಸ್ಕನಾದ ಶಿವನು ಅದಕ್ಕೆ ಕಾರಣವನು ಮನ್ಮಥನೆಂದು ಭಾವಿಸಿ ಕೋಪಗೊಂಡುದರಿಂದ ಆ ದೇವನ ಹಣೆಗಣ್ಣಿನಿಂದ ಹೊರ ಹೊರಟ ಅಗ್ನಿಯು ಮನ್ಮಥನನ್ನು ಸುಟ್ಟು ಬೂದಿಮಾಡಿತು. ಇದಕ್ಕೆ ಕಾರಣ ಸ್ತ್ರೀಸನ್ನಿಕರ್ಷವೆಂದು ಭಾವಿಸಿ ತನ್ನ ಭೂತಗಣಗಳೊಡನೆ ಭೂತಪತಿಯು ಕಣ್ಮರೆಯಾದನು. ಇದರಿಂದ ಪಾರ್ವತಿಗೆ ಆಶಾಭಂಗವುಂಟಾಗಿ ಬಹುದುಃಖದಿಂದ ತಂದೆಯ ಬಳಿಗೆ ಹಿಂದಿರುಗಿದಳು ತಂದೆ ಹಿಮವಂತನು ಆಕೆಗೆ ಸಮಾಧಾನ ಹೇಳಿದರೂ ಕೂಡ ಶಿವನನ್ನೇ ಸೇರುವ ನಿರ್ಧಾರದಿಂದ ಕೂಡಿ 'ಶಿವನು ಬಾಹ್ಯಸೌಂದರ್ಯಕ್ಕೆ ಮಣಿಯುವವನಲ್ಲ. ಆ ದೇವನಿಗೆ ಬೇಕಾದುದು ಅಂತಸೌಂದರ್ಯವೆಂದು ಭಾವಿಸಿ, ಅದನ್ನು ಸಾಧಿಸಲು ನಿಷ್ಠೆಯಿಂದ ತಪಸ್ಸನ್ನು ಮಾಡುವುದೊಂದೇ ಹಾದಿ ಎಂದು ನಿರ್ಧರಿಸಿ ತನ್ನ ಮನೋಭಾವವನ್ನು ತನ್ನ ತಾಯಿ ಮೇನಕೆಗೆ ತಿಳಿಸಿದಳು. ಆಕೆಯು 'ಕೋಮಲವಾದ ಮಗಳ ಶರೀರಕ್ಕೆ ತಪಸ್ಸಿನ ಬೇಗೆಯು ಸಲ್ಲದು' ಎಂದು ಎಷ್ಟು ವಿಧವಾಗಿ ಸಮಾಧಾನ ಹೇಳಿದರೂ ಕೂಡ ತನ್ನ ನಿರ್ಧಾರವನ್ನು ಸಾಧಿಸಲೇಬೇಕೆಂಬ ಮಗಳ ಬಯಕೆಗೆ ತನ್ನ ಮತ್ತು ತನ್ನ ಪತಿ ಹಿಮವಂತನ ಒಪ್ಪಿಗೆಯನ್ನಿತ್ತಳು.

ಹೀಗೆ ಮಾತಾ ಪಿತೃಗಳ ಸಮ್ಮತಿಯನ್ನು ಪಡೆದು ಪಾರ್ವತಿಯು ಇಬ್ಬರು ಸಖಿಯರೊಡನೆ ಹಿಮವತ್ಪರ್ವತದ ಎತ್ತರವಾದ ಶಿಖರದಲ್ಲಿ ತನ್ನದೇ ಆದ ಆಶ್ರಮವನ್ನು ಕಲ್ಪಿಸಿ ಅಲ್ಲಿ ಶಿವನನ್ನು ಕುರಿತು ಘೋರವಾದ ತಪಸ್ಸನ್ನಾಚರಿಸಿದಳು. ಆಕೆಯ ತಪಸ್ಸಿನ ಮಹಿಮೆಯು ಅಲ್ಲಿ ತಪಸ್ಸನ್ನಾಚರಿಸುತ್ತಿದ್ದ

ಇತರ ತಪಸ್ವಿಗಳು ತಿಳಿದು ಆಕೆಗೆ ತಮ್ಮ ಗೌರವವನ್ನು ತೋರುವ ಸಲುವಾಗಿ ಆಕೆಯ ತಪೋವನಕ್ಕೆ ತೆರಳುತ್ತಿದ್ದರು. 'ನ ಧರ್ಮ ವೃದ್ಧೇಷು ವಯಃ ಸಮೀಕ್ಷ್ಯತೇ' ಗುಣಾಃ ಪೂಜಾಸ್ಥಾನಂ ಗುಣಿಷ ನ ಚ ಲಿಂಗಂ ನ ಚ ವಯಃ ಎಂಬಂತೆ ಧರ್ಮವೃದ್ಧರಾದವರಲ್ಲಿ ವಯಸ್ಸಿಗೆ ಪ್ರಾಮುಖ್ಯತೆ ಇರದು ಗುಣಕ್ಕೆ ಗೌರವ ವಯಸ್ಸು ಮತ್ತು ಲಿಂಗಗಳಿಗೆ ಬೆಲೆಯಿಲ್ಲ ಎಂಬ ನಾಣ್ಣುಡಿಯಂತೆ ತಪಸ್ವಿಗಳ ಮನೋವೃತ್ತಿ.

ಹೀಗಿರುವಾಗ ಒಂದುದಿನ ಒಬ್ಬ ಬ್ರಹ್ಮಚಾರಿಯಾದ ತಪಸ್ವಿಯು ಪಾರ್ವತಿಯ ಆಶ್ರಮವನ್ನು ಹೊಕ್ಕು ಆಕೆಗೆ ತನ್ನ ಗೌರವವನ್ನು ಸಲ್ಲಿಸಿ, ತನ್ನ ಸ್ವಭಾವವೆನಿಸಿದ ಚಾಪಲ್ಯದಿಂದ 'ಯುವತಿ! ಯಾವ ಉದ್ದೇಶದಿಂದ ನೀನು ತಪಸ್ಸನ್ನು ಆಚರಿಸುತ್ತಿದ್ದೀಯೆ? ಹುಟ್ಟಿರುವುದು ದೇವಭೂಮಿ, ಆಗರ್ಭ ಶ್ರೀಮಂತಳು, ಯೋಗ್ಯನಾದ ವರನನ್ನು ಪಡೆಯಬೇಕೆಂಬುದು ಉದ್ದೇಶವಾಗಿದ್ದಲ್ಲಿ ಸೌಂದರ್ಯನಿಧಿಯೆನಿಸಿದ ಇಂತಹ ಸ್ತ್ರೀ ರತ್ನವನ್ನು ಹುಡುಕಿಕೊಂಡು ಶ್ರೇಷ್ಠವಾದ ವರನು ತಾನಾಗಿಯೇ ಬರಬೇಕೇ ವಿನಾ ಇಂತಹ ರತ್ನವು ವರನನ್ನು ಹುಡುಕುವುದು ಅನುಚಿತ ಎಂದು ಹೇಳಲು ಸಖಿಯರು ಅವನನ್ನು ಕುರಿತು ಯೋಗ್ಯನಾದ ಪತಿಯನ್ನು ಪಡೆಯಲು ಈತಪಸ್ಸು ಆ ವರನಾರೆಂದರೆ ಪರಮೇಶ್ವರನೇ ಹೌದು' ಎಂದು ಉತ್ತರ ಕೊಟ್ಟರು. ಇದನ್ನು ಕೇಳಿ ಆ ಕಪಟ ಬ್ರಹ್ಮಚಾರಿಯು ಶಿವನಲ್ಲಿನ ದೋಷಗಳನ್ನಾರೋಪಿಸುತ್ತ.

ವಪುಃ ವಿರೂಪಾಕ್ಷಂ ಅಲಕ್ಷ್ಯಜನ್ಮತಾ ।
ದಿಗಂಬರ ತ್ವೇನ ನಿವೇದಿತಂ ವಸು ॥
ವರೇಷು ಯತ್ ಬಾಲಮೃಗಾಕ್ಷಿ! ಮೃಗ್ಯತೇ ।
ತದಸ್ತಿಕಿಂ ವ್ಯಸ್ತಮಪಿ ತ್ರಿಲೋಚನೇ ॥

ಎಂಬಂತೆ ವರರನಲ್ಲಿರಬೇಕಾದ ಗುಣಗಳೊಳಗೆ ಶಿವನಲ್ಲಿ ಒಂದು ಕೂಡ ನಾಕಾಣೆ ಕನ್ಯೆಯು ವರನಲ್ಲಿ ಬಯಸುವುದು ಸುಂದರವಾದರೂಪು ಆದರೆ ಶಿವನಿಗೆ ಮೂರು ಕಣ್ಣುಗಳಿರುವುದರಿಂದ ಅವನು ಕುರೂಪಿ, ತಂದೆಗೆ ಬೇಕಾದುದು ಪ್ರಖ್ಯಾತರಾದ ತಂದೆತಾಯಿಗಳು, ಆದರೆ ಈಶ್ವರನಿಗೆ ತಂದೆ ತಾಯಿಯರೇ ಇರರು. ತಾಯಿಗೆ ಆವಶ್ಯಕವೆನಿಸುವುದುದು 'ವರನಲ್ಲಿರುವ ಸಂಪತ್ತು ಆದರೆ

ಶಿವನು ದಿಗಂಬರ ಅಂದರೆ ಕಡುಬಡವ ಅವನು ಅಮಂಗಳ ಹೀಗಿರುವಂದು ಅಂಥವನನ್ನು ಪತಿಯನ್ನಾಗಿ ವರಿಸುವುದು ಅಯುಕ್ತ ಈ ಕಾರಣಗಳಿಂದ 'ಅವನ ವಿಷಯವನ್ನು ಮರೆತುಬಿಡು' ಎಂದು ಹೇಳಿ ಮತ್ತೆ ಅನೇಕ ದೋಷ ಗಳನ್ನು ಶಿವನಿಗೆ ಆರೋಪಿಸಿದನು. ಇದನ್ನು ಕೇಳಿ ಗಿರಿಜೆಯು ಆ ಬ್ರಹ್ಮಚಾರಿ ಯನ್ನು ಕುರಿತು ; ಗುಣಗಳೆಲ್ಲವೂ ಅವಗುಣಗಳನ್ನಾಗಿ ಭಾವಿಸುವುದು ಅಜ್ಞರ ಸ್ವಭಾವ ತಜ್ಞರು ಒಳ ಹೊಕ್ಕುನೋಡುತ್ತಾರೆ. ಆ ಗುಣ ನಿನಗಿಲ್ಲ, ಮಹಾತ್ಮರ ಚರಿತ್ರೆಗಳು ಮೂಢರಿಗೆ ಗೋಚರವಾಗದು ಅವನು ಬಡವನೆಂದು ನೀನು ತಿಳಿ ದಿದ್ದರೂ ಕೂಡ ಅವನಿಗೆ 'ಈಶ್ವರ' ಅಂದರೆ ಐಶ್ವರ್ಯದಾತಾ ಎಂಬ ಹೆಸರು ಅವನು ಅಮಂಗಲನೆಂದು ನೀನು ಕರೆದರೂ ಕೂಡ ಅವನಿಗೆ ಶಿವ ಅಂದರೆ ಮಂಗಳಂ ಪ್ರದ ಎಂಬ ಹೆಸರು, ವಿಷ್ಣು ಬ್ರಹ್ಮರ ಉತ್ಪತ್ತಿಗೆ ಕಾರಣನಾದುದ ರಿಂದ ಅವನಿಗೆ ತಂದೆತಾಯಿಗಳಾರು! ಹೀಗೆ ನೀನು ಹೆಸರಿಸುವ ದೋಷ ಗಳೆಲ್ಲಕ್ಕೂ ಪ್ರತಿಯಾದ ಗುಣಗಳು ತುಂಬಿದ ಆ ದೇವನಲ್ಲಿ ನೀ ದೋಷಜ್ಞನೇ ವಿನಾ ಗುಣಜ್ಞನಲ್ಲ. ಆದೇವನ ರಹಸ್ಯಗಳೆಲ್ಲವನ್ನೂ ಅರಿತವಳು ನಾನು, ಆದರೆ ಅವನು ಹೇಗೆಯೇ ಇರಲಿ ಆತನನ್ನೇ ನಾನು ವರನನ್ನಾಗಿ ಬಾವಿಸುತ್ತೇನೆ. ನನ್ನ ಆಶ್ರಮಕ್ಕೆ ಅಥಿತಿಯಾಗಿ ಬಂದಿರುವ ನಿನಗೆ ಶಾಪವನ್ನು ನೀಡುವುದು ಯುಕ್ತ ವಲ್ಲ." ಎಂದು ಹೇಳಿ ತನ್ನ ಸಖಿಯರ ಕಡೆ ತಿರುಗಿಕೊಂಡು ಸಖಿಯರೆ ! ಈ ಚಪಲಚಿತ್ತನಾದ ಬ್ರಹ್ಮಚಾರಿಯು ಮತ್ತೆ ಉತ್ತರಿಸುವುದಕ್ಕೆ ತುಟಿಯನ್ನು ಅಲುಗಾಡಿಸುತ್ತಿರುತಾನೆ. ಅಂಥವರೊಡನೆ ಸಂಭಾಷಣೆಯು ಯೋಗ್ಯವಾದುದಲ್ಲ ಇಂತವರ ಸಾನ್ನಿಧ್ಯವೇ ಒಂದು ಕಳಂಕ. ಆಕಾರಣ ಆತನಿರುವ ಸ್ಥಳವನ್ನು ಬಿಟ್ಟು ನಾವು ಬೇರೆಲ್ಲಿಯಾದರೂ ಹೋಗೋಣ ಎಂದು ಹೇಳಿ ಅಲ್ಲಿಂದ ಒಂದು ಹೆಜ್ಜೆಯನ್ನಿತ್ತು ಹೊರ ಹೊರಡುವ ಪ್ರಯತ್ನದಲ್ಲಿರುವಾಗ ಬ್ರಹ್ಮಚಾರ ರೂಪ ವನ್ನು ಧರಿಸಿ ಬಂದಿದ್ದ ಶಿವನು ಆ ತರುಣಿಯ ನಿಷ್ಕಳಂಕ ಮನೋಭಾವವನ್ನು ತಿಳಿದು ತನ್ನ ನಿಜಸ್ವರೂಪವನ್ನು ಪ್ರದರ್ಶಿಸಿ ಆಕೆಯನ್ನು ಕುರಿತು ಹೀಗೆ ಹೇಳುತ್ತಾನೆ.

ಅದ್ಯ ಪ್ರಭೃತಿ ಅವನತಾಂಗಿ ! ತವಾಸ್ಮಿ ದಾಸಃ ।
ಕ್ರೀತಃ ತಪೋಭಿರಿತಿ ವಾದಿನಿ ಚಂದ್ರಮೌಳೌ ॥

ಅಹ್ನಾಯ ಸಾ ನಿಯಮಜಂ ಕ್ಲಮ ಮುತ್ಸಸರ್ಜ ।
ಕ್ಲೇಶಃ ಫಲೇನ ಹಿ ಪುನಃ ನವತಾಂ ವಿಧತ್ತೇ ॥

ಎಂಬಂತೆ 'ಓ ಮಂಗಳಾಂಗಿ ! ಇಂದಿನಿಂದ ನಿನ್ನ ಇಷ್ಟದಂತೆ ನಡೆಯಲು ಸಿದ್ಧವಾಗಿರುತ್ತೇನೆ. ಏಕೆಂದರೆ ನೀನು ನಿನ್ನ ತಪಸ್ಸೆಂಬ ಧನವನ್ನು ಕೊಟ್ಟು ನನ್ನನ್ನು ವಶಪಡಿಸಿ ಕೊಂಡಿರುತ್ತೀಯೆ" ಎಂದು ಹೇಳಿದೊಡನೆಯೇ ಗಿರಿಜೆಯು ತಾನು ತಪಸ್ಸು ಮಾಡಿದಂದು ಅನುಭವಿಸಿದ ಕಷ್ಟಗಳೆಲ್ಲವನ್ನೂ ಮರೆತು ಬಿಟ್ಟಳು. ಏಕೆಂದರೆ ಕಷ್ಟಕ್ಕೆ ತಕ್ಕಫಲ ದೊರಕಿದಂದೇ ಆದರೆ ಆ ಕ್ಲೇಷ ದಿಂದಾದ ದುಃಖವೆಲ್ಲವೂ ಮರೆತು ಹೋಗುತ್ತದೆ.

ಇದು ಐದನೆಯ ಸರ್ಗದಲ್ಲಿಡಗಿರುವ ವಿಷಯಸಂಗ್ರಹ ಈ ಮುಂದೆ ಆರನೆಯ ಸರ್ಗದಲ್ಲಿನ ವಿಷಯಗಳ ಸಂಗ್ರಹ ಈ ಮುಂದಿನಂತಿದೆ.

ಪಾರ್ವತಿಯು ತನ್ನ ತಪೋಬಲದಿಂದ ತನ್ನ ಆರಾಧ್ಯ ದೇವನನ್ನು ಒಲಿಸಿ ಕೊಂಡ ಬಳಿಕ ಆಕೆಯನ್ನು ತಕ್ಷಣವೇ ಪರಿಗ್ರಹಿಸಲುಳ್ಳ ದೇವನಿಗೆ ನಾಚಿ ತಲೆ ತಗ್ಗಿಸಿಕೊಂಡು ಸಖಿಯರನ್ನು ಕುರಿತು, 'ತಪಸ್ಸಿನಿಂದ ಶಿವನನ್ನು ಮನಸ್ಸಿನ ಮೂಲಕ ವಶಪಡಿಸಿಕೊಂಡುದಾಯಿತು. ಆದರೆ ಈ ದೇಹವು ಹಿಮವಂತನಿಂದ ತನಗೆ ದೊರಕಿದುದರಿಂದ, ಆತನೊಡನೆ ಸರಿಯಾದ ಕ್ರಮದಲ್ಲಿ ವ್ಯವಹರಿಸ ಬೇಕೆಂಬುದನ್ನು ತಿಳಿಸಿ ಬಿಡು' ಎಂದು ಹೇಳಿದುದನ್ನು ಶಿವನಿಗೆ ತಿಳಿಸಲು ಶಿವನು, 'ಇದು ಸರಿಯಾದ ಮಾರ್ಗ ಆಕೆಯು ಇಷ್ಟದಂತೆಯೇ ಆಗಲಿ' ಎಂದು ಹೇಳಿ ಆಕೆಯನ್ನು ಸತಿಯರೊಡನೆ ತಂದೆಯ ಮನೆಗೆ ಹಿಂದಿರುಗಿಸಿ, ಕನ್ಯೆಯನ್ನು ಬೇಡುವುದಕ್ಕಾಗಿ ಸಪ್ತಋಷಿಗಳನ್ನು ಮನಸ್ಸಿನಲ್ಲಿ ನೆನೆದನು. ಒಡನೆಯೇ ವಸಿಷ್ಠಾದಿ ಸಪ್ತರ್ಷಿಗಳು ಅರುಂಧತೀ ಸಮೇತ ಶಿವನ ಸಮೀಪಕ್ಕೆ ಧಾವಿಸಿ ಬಂದು ಆ ದೇವನ ಗುಣಗಳನ್ನು ಬಣ್ಣಿಸಿ ತಮ್ಮನ್ನು ಬರಮಾಡಿಕೊಂಡ ಉದ್ದೇಶವೇನೆಂಬುದನ್ನು ನಮ್ರತೆಯಿಂದ ಪ್ರಶ್ನಿಸಿದರು. ಅದಕ್ಕೆ ಉತ್ತರವಾಗಿ ಶಿವನು ಈ ಮುಂದಿನಂತೆ ಉತ್ತರವಿತ್ತನು :– ದೇವತೆಗಳು ತಮ್ಮ ಕಾರ್ಯ ಸಾಧನೆಗಾಗಿ ನನ್ನಿಂದ ಪರ್ವತರಾಜನ ಪುತ್ರಿಯಲ್ಲಿ ಔರಸ ಪುತ್ರನನ್ನು ಬಯಸಿ ದರು. ಅವರ ಇಷ್ಟಾರ್ಥವನ್ನು ನೆರವೇರಿಸಲು ನೀವುಗಳು ಮಹಾ ಪತಿವ್ರತೆ

ಯೆನಿಸಿದ ಅರುಂಧತೀ ದೇವಿಯೊಡನೆ ಹಿಮವಂತನ ಪಟ್ಟಣವೆನಿಸಿದ ಓಷದಿ ಪ್ರಸ್ಥಕ್ಕೆ ಹೋಗಿ ಆತನ ಮಗಳನ್ನು ನನಗೆ ಪತ್ನೀ ರೂಪವಾಗಿ ಅರ್ಪಿಸುವಂತೆ ಆ ಗಿರಿರಾಜನಿಗೆ ಬಿನ್ನವಿಸಿ ಆತನ ಒಪ್ಪಿಗೆಯನ್ನು ತಳೆದು ಆ ವಿಷಯವನ್ನು ಈ ಗಂಗಾಪ್ರಪಾತದ ಬಳಿ ಆಸ್ಥಿತನಾಗಿರುವ ನನಗೆ ತಿಳಿಸಿರಿ. ಈ ಮೊದಲೇ ಪಾರ್ವತಿಯು ತನ್ನ ತಪಸ್ಸಿನಿಂದ ನನ್ನನ್ನು ಒಲಿಸಿಕೊಂಡಿರುತ್ತಾಳೆ. ಲೌಕಿಕ ವಾಗಿ ಆಕೆಯ ತಾಯಿ ತಂದೆಯರ ಒಪ್ಪಿಗೆಯನ್ನು ಪಡೆಯಬೇಕೆಂಬ ಆಕೆಯ ಬಯಕೆಯಂತೆ ಈ ಮಂಗಳ ಕಾರ್ಯಕ್ಕೆ ನೀವು ನೆರವಾಗಬೇಕು' ಎಂದು ಆ ಮುನಿವೃಂದಕ್ಕೆ ಆಜ್ಞಾಪಿಸಿದನು.

ಧರ್ಮಸಂಸ್ಥಾಪನೆಗಾಗಿ ಶಿವನು ಈಗ ತಾನು ಜಿತೇಂದ್ರಿಯನಾಗಿದ್ದರೂ, ಈ ಸಂಬಂಧವನ್ನು ಬೆಳೆಸ ಬೇಕಾಗಿದೆ ಎಂಬ ಭಾವವನ್ನು ಆ ಸಪ್ತರ್ಷಿಗಳ ತಂಡವು ಅರಿತು ಶಿವನಿಗೆ ತಲೆಬಾಗಿ, 'ಮಹಾ ಪ್ರಸಾದ, ಈ ಕಾರ್ಯವನ್ನು ಶಿರಸಾವಹಿಸಿ ನಾವು ನೆರವೇರಿಸಬೇಕಾದುದು ನಮ್ಮ ಧರ್ಮ' ಎಂದು ಹೇಳಿ ಅಲ್ಲಿಂದ ಹೊರಟು ಆಕಾಶ ಮಾರ್ಗದಲ್ಲಿ ಪಯಣಿಸಿ ಕ್ಷಣಮಾತ್ರದಲ್ಲಿ ಹಿಮ ವಂತನ ರಾಜಧಾನಿಯಾದ ಓಷದಿಪ್ರಸ್ಥವನ್ನು ಸೇರಿ ಆತನ ಅರಮನೆಯ ಮುಂದೆ ಇಳಿದರು ಇಂತಹ ಪೂಜ್ಯ ಮುನಿಗಳನ್ನು ಹಿಮವಂತನು ಇದಿರು ಗೊಂಡು, ತನ್ನ ರಾಣೀವಾಸಕ್ಕೆ ಅವರನ್ನು ಗೌರವದಿಂದ ಕರೆದೊಯ್ದು ಶೈತ್ಯೋಪಚಾರಗಳನ್ನು ಸಲ್ಲಿಸಿ, 'ಅವಾಪ್ತಕಾಮರಾದ ಆ ಪೂಜ್ಯ ವ್ಯಕ್ತಿಗಳು ತಮ್ಮ ಮನೆಗೆ ಬಂದುದು ತನ್ನನ್ನು ಪಾವನ ಮಾಡುವುದಕ್ಕಾಗಿಯೇ ವಿನಾ ಬೇರಲ್ಲ. ಆದರೂ ಅವರ ಉದ್ದೇಶವನ್ನು ನೆರವೇರಿಸುವ ಕರ್ತವ್ಯ ತನ್ನದು' ಎಂದು ಹೇಳಿ,

ಏತೇ ವಯಂ ಅಮೀದಾರಾ : ‡ ಕನ್ಯೆಯಂ ಕುಲಜೀವಿತಂ ।
ಬ್ರೂತಯೇನಾ ತ್ರವಃ ಕಾರ್ಯಂ ‡ ಅನಾಸ್ಥಾ ಬಾಹ್ಯವಸ್ತುಷು ॥

ಎಂಬಂತೆ ಮಹನೀಯರೆ ! ಇಲ್ಲಿ ನಾನು, ಈ ನನ್ನ ಭಾರ್ಯೆ ಮೇನಕೆ, ಮತ್ತು ವಂಶವನ್ನು ತನ್ನ ಶೀಲವ ಬೆಳಗಬಲ್ಲ ಮಗಳು ಪಾರ್ವತಿ ಈ ಮೂವರೂ ತಮ್ಮ ಕಾರ್ಯವನ್ನು ಶಿರಸಾವಹಿಸಿ ನಡೆಸಿಕೊಡಲು ಸಿದ್ಧರಿದ್ದೇವೆ

ಏಕೆಂದರೆ ಇತರ ಬಾಹ್ಯವಸ್ತುಗಳಲ್ಲಿ ನಿಮಗೆ ಆಸಕ್ತಿಯಿಲ್ಲದು" ಎಂದ ಬೇಡಿಕೊಂಡನು.

ಈ ಮಾತನ್ನು ಕೇಳಿ ಮುನಿಗಳೆಲ್ಲರೂ ವಾಗ್ಮಿಯೆನಿಸಿದ ಅಂಗಿರಸ ಮುನಿಯನ್ನು ಪ್ರೇರಿಸಲು, ಆತನು 'ಅಪ್ಪ ! ಹಿಮವಂತ ! ನೀನು ಉತ್ತಮ ಕುಲದಲ್ಲಿ ಜನ್ಮವೆತ್ತಿದ ಧರ್ಮಿಷ್ಠ ! ನಾವು ಮಹೇಶ್ವರನಿಂದ ಪ್ರೇರಿತರಾಗಿ ಆತನು ವರಿಸುವುದಕ್ಕಾಗಿ ನಿನ್ನ ಮಗಳನ್ನು ಕೇಳಲು ಕನ್ಯಾರ್ಥಿಯಾಗಿ ಬಂದಿರುತ್ತೇವೆ. ಈಗಾಗಲೇ ಆ ನಿನ್ನ ಪುತ್ರಿಯು ತಪಸ್ಸಿನ ಮೂಲಕ ಆತನನ್ನು ಒಲಿಸಿರುತ್ತಾಳೆ. 'ತಮರ್ಥಮಿವ ಭಾರತ್ಯಾ ‡ ಸುತಯಾ ಯೋಕ್ತುಮರ್ಹಸಿ ಅಂದರೆ ವಾಗಧಿದೇವತೆಯಾದ ಆಕೆಯನ್ನು ಅರ್ಥಕ್ಕೆ ಅಧಿದೇವನಾದ ಶಿವನೊಡನೆ ಸೇರಿಸಿದಂತಾಗುತ್ತದೆ. ಈ ಸಂಬಂಧವು ಅತ್ಯುತ್ತಮವಾದುದು.

ಉಮಾ ವಧೂಃ, ಭವಾನ್ದಾತಾ ‡ ಯಾಚಿತಾರ ! ಇಮೇವಯಂ ।
ವರಃ ಶಂಭುಃ ಅಲಂ ಹ್ಯೇಷಃ ‡ ತ್ವತ್ಕುಲೋಭೂತಯೇ ವಿಧಿಃ ॥

ಎಂಬಂತೆ ತಪಸ್ಸಿನಲ್ಲಿ ನುರಿತು 'ಉಮಾ' ಎಂಬ ಅನ್ವರ್ಥನಾಮವನ್ನು ಗಳಿಸಿದವಳು ಕನ್ಯೆ, ಉಚ್ಚಕುಲಸ್ಥನೂ ಧರ್ಮಿಷ್ಠನೂ ಆದ ನೀನು ಕನ್ಯಾದಾನವನ್ನು ಮಾಡುವವ, ಅವಾಪ್ತಕಾಮರೆನಿಸಿದ ನಾವುಗಳು ನಿನ್ನ ಮಗಳನ್ನು ಬೇಡುತ್ತಿರುವವರು. ಈ ವಿಧವಾದ ಪ್ರಸಂಗಗಳು ನಿನ್ನ ವಂಶವನ್ನು ಉದ್ಧಾರ ಮಾಡುವುದಕ್ಕೆ ತಕ್ಕ ಸಲಕರಣೆಗಳು, ಅಲ್ಲದೆ ಲೋಕಮಾನ್ಯನಾದವನು ಶಿವ, ಅವನನ್ನು ಸೇರಿದ ನಿನ್ನ ಮಗಳು ಲೋಕಮಾನ್ಯತೆಯನ್ನು ಪಡೆದು ಸಮಸ್ತ ದೇವ ಗಣಗಳಿಂದ ವಂದನೆಗೆ ಅರ್ಹತೆಯನ್ನು ಪಡೆಯಲಿ ಎಂಬುದು ನಮ್ಮ ಆಸೆ" ಅಲ್ಲದೆ ನೀನು ಈ ಸಂಬಂಧದಿಂದ 'ಭವ ವಿಶ್ವಗುರೋಃ ಗುರುಃ ಇಡೀ ವಿಶ್ವಕ್ಕೇ ಅಧಿಪತಿಯಾಗಿರುವ ಮಹೇಶ್ವರನಿಗೆ ನೀನು ಮಾವನಾಗಿ ಸರ್ವದಿಂದಲೂ ಪೂಜ್ಯತೆಯನ್ನು ಪಡೆಯುವಂತಾಗಲಿ' ಎಂದು ಹೇಳಿದ ಮಾತನ್ನು ಕೇಳಿ ಇದು ಅತ್ಯುತ್ತಮವಾದ ಸಂಬಂಧವೆಂದೆನಿಸಿದರೂ ಕೂಡ ಕನ್ಯೆಯ ವಿಷಯದಲ್ಲಿ ತಾಯಿಗೆ ಹೆಚ್ಚು ಸ್ವಾತಂತ್ರ್ಯ ಎಂದು ಭಾವಿಸಿ ತನ್ನ ಹೆಂಡತಿ

ಆಯೂದ ಮೋಸಕೆಯ ಕಡೆಗೆ ನೋಡಿದನು. ಮಹಾ ಪತಿವ್ರತೆಯೆನಿಸಿದ ತಾಯಿಯು ತನ್ನ ಪತಿಯ ಮನೋವೃತ್ತಿಯೇ ತನ್ನದು ಎಂದು ಭಾವಿಸಿ ತನ್ನ ಸಂಪೂರ್ಣ ಸಮ್ಮತಿಯನ್ನು ಈ ವಿಷಯದಲ್ಲಿ ತೋರಿದಳು. ಆ ಬಳಿಕ ಹಿಮವಂತನು ಮಗಳನ್ನು ಕರೆದು ಕೈಹಿಡಿದುಕೊಂಡು.

ಶ್ಲೋ ॥ ಏಹಿ ವಿಶ್ವಾತ್ಮನೇ ಗೌರಿ! ‡ ಭಿಕ್ಷಾಸಿ ಪರಿಕಲ್ಪಿತಾ । ಅರ್ಥಿನೋ ಮನಯಃ ಸಾಕ್ಷಾತ್ ‡ ಗೃಹಮೇಧಿಫಲಂ ಮಯೋ ಎಂಬಂತೆ ಮಗಳೇ ಇತ್ತಬಾ, ವಿಶ್ವಾತ್ಮನಾದ ಮಹೇಶ್ವರನೆ ನಿನ್ನನ್ನು ಭಿಕ್ಷೆಯನ್ನಾಗಿ ಕಲ್ಪಿಸುತ್ತೇನೆ. ನಿನ್ನನ್ನು ಬೇಡುವುದಕ್ಕೆ ಬಂದವರು ಈ ಸಪ್ತರ್ಷಿಗಳು, ಇದರಿಂದ ನನಗೆ ಗೃಹಮೇಧಿಫಲ। ಅಂದರೆ ಕನ್ಯಾದಾನದ ಫಲವು ಉತ್ತಮ ರೀತಿಯಲ್ಲಿ ದೊರಕುತ್ತದೆ' ಎಂದು ಹೇಳಿ ಬಳಿಕ ಸಪ್ತರ್ಷಿಗಳನ್ನು ಕುರಿತು 'ಇಯಂ ನಮತಿ ಕಲ್ಯಾಣೀ ‡ ತ್ರಿಲೋಚನವಧೂರತಿ" ಎಂಬಂತೆ ಈ ನನ್ನಮಗಳಾದ ಗೌರಿಯೆಂಬ ಕನ್ಯೆಯು ತ್ರಿಲೋಚನನಾದ ಅಂದರೆ ಸೂರ್ಯ ಚಂದ್ರ ಅಗ್ನಿ ಇವರುಗಳನ್ನೇ ತನ್ನ ಕಣ್ಣುಗಳನ್ನಾಗಿ ಮಾಡಿಕೊಂಡ ಮಹೇಶ್ವರನ ಪತ್ನಿಯಾಗುವಮನ್ನ । ನಿಮ್ಮೆಲ್ಲರಿಗೂ ನಮಿಸುತ್ತಿರುವಳು' ಎಂದು ಹೇಳಿದನು. ಇದನ್ನು ಕೇಳಿ ಸಪ್ತಮಹರ್ಷಿಗಳೆಲ್ಲರೂ ಹಿಮವಂತನನ್ನು ಶ್ಲಾಘಿಸಿದರು. ಅರುಂದತೀದೇವಿಯು ಗೌರಿದೇವಿಯನ್ನು ತನ್ನ ತೊಡೆಯಮೇಲೆ ಕೂಡಿಸಿಕೊಂಡು ಅಕೆಯ ನಿರ್ಧಾರಕ್ಕೆ ಶ್ಲಾಘಿಸಿ ಆಶೀರ್ವದಿಸಿದಳು ಸಪ್ತಮಹರ್ಷಿಗಳೆಲ್ಲರೂ ತಮ್ಮ ಕಾರ್ಯವು ನೆರವೇರಿದುದರಿಂದ ಅಲ್ಲಿಂದ ಸಂತೋಷ ಚಿತ್ತರಾಗಿ ಅಂತರಿಕ್ಷ ಮಾರ್ಗವಾಗಿ ಪಯಣಿಸಿ ತಮಗಾಗಿ ಕಾಯುತ್ತಿದ್ದ ಮಹೇಶ್ವರನ ಬಳಿಸೇರಿ, ಆ ದೇವನ ಅಪ್ಪಣೆಯನ್ನುತಳೆದು ತಮ್ಮ ಸ್ಥಾನವನ್ನು ಸೇರಿದಳು. ಇಲ್ಲಿಗೆ ಈ ಮಹಾಕಾವ್ಯದ ಆರನೆಯಸರ್ಗದಲ್ಲಿನ ವಿಷಯವು ಮುಗಿಯಿತು.

ಈ ಮುಂದೆ ಶಿವಪಾರ್ವತಿಯರ ಕಲ್ಯಾಣ ಕಾರ್ಯವು ನೆರವೇರಿತೆಂಬ ವಿಷಯವನ್ನೊಳಗೊಂಡ ಏಳನೆಯ ಸರ್ಗವು ಆರಂಭವಾಗುತ್ತದೆ.

ಶ್ರೀ ಪರಮೇಶ್ವರನ ಪರವಾಗಿ ಕನ್ಯಾಪೇಕ್ಷೆಯಿಂದ ಹೋಗಿದ್ದ ಸಪ್ತರ್ಷಿಗಳು ವಿವಾಹ ದೀಕ್ಷೆಯು ಕೇವಲ ಮೂರು ದಿನಗಳು ಮಾತ್ರ ನಿರ್ಧರಿಸಿದ್ದರು.

ಅದಕ್ಕಾಗಿ ಹಿಮವಂತ ಮೇನಕೆಯರು ಮಗಳು ಗಿರಿಜೆಯ ಕಲ್ಯಾಣಕ್ಕೆ ಬಹಳ ಆತುರದಿಂದ ಸಿದ್ಧ ಪಡಿಸಿದರು. ಒಂದು ಕಡೆ ಪಟ್ಟಣದಲ್ಲಿನ ಭವನಗಳ ದೇವಸ್ಥಾನಗಳ, ಬೀದಿ ಬೀದಿಗಳ ಅಲಂಕಾರಕ್ಕೆ ಏರ್ಪಡಿಸಿದರೆ ಮತ್ತೊಂದು ಕಡೆ ಕನ್ಯೆಯಾದ ಗಿರಿಜೆಗೆ ಮಜ್ಜನ ವಸ್ತ್ರ, ಆಭರಣ ಮೊದಲಾದವುಗಳ ಅಲಂಕಾರಕ್ಕಾಗಿ ಕಾರ್ಯ ನಡೆಯುತೊಡಗಿತು. ಮೂರು ದಿವಸಗಳಲ್ಲಿಯೇ ಈ ಕಾರ್ಯವು ನೆರವೇರಿ ವರನ ಪರಿವಾರದ ಆಗಮನವನ್ನೇ ನಿರೀಕ್ಷಿಸುತ್ತಿದ್ದರು.

ಇತ್ತ ಪರಶಿವನ ಕಡೆಯುವರು ಅಂದರೆ ಬ್ರಹ್ಮ ವಿಷ್ಣು ಇಂದ್ರಾದಿ ಅಷ್ಟ ದಿಕ್ಪಾಲಕರು ಮತ್ತು ಇತರ ದೇವತೆಗಳು ಅಲಂಕೃತರಾಗಿ ಸೌಮ್ಯ ಸ್ವರೂಪ ದಿಂದ ಹೊರಡಲು ಸಿದ್ಧರಾದರು. ಪರಶಿವನಾದರೋ ಅತ್ಯಂತ ಮಂಗಳ ಕರವಾದ ಕೋಟಿ ಮನ್ಮಥರಂತೆ ಸ್ವಾಭಾವಿಕವಾದ ಸೌಂದರ್ಯವನ್ನು ತಳೆದು ಅಲಂಕೃತನಾಗಿ ತನ್ನ ವಾಹನವನ್ನೇರಿ ಗೊತ್ತಾದ ದಿನಕ್ಕೆ ಸರಿಯಾಗಿ ಹಿಮವಂತನ ಪುರವೆನಿಸಿದ ಓಷಧಿಪ್ರಸ್ಥವನ್ನು ಬಹಳ ವೈಭವದಿಂದ ಪ್ರವೇಶಿ ಸಿದನು. ಊರ ಹೊರಬಾಗಿಲಿನಲ್ಲಿಯೇ ವರನನ್ನೂ ಆತನ ಪರಿವಾರವನ್ನೂ ಹಿಮವಂತನು ಬಹಳ ಗೌರವದಿಂದ ಇದಿರುಗೊಂಡು ತಾಳಮೇಳಗಳ ಸಹಿತವಾಗಿ ಅವರನ್ನು ಬರಮಾಡಿಕೊಂಡನು. ಪಟ್ಟಣದ ಬೀದಿಗಳಲ್ಲಿ ಅತ್ಯು ತ್ಸವದಿಂದ ವರನೂ ಆತನ ಪರಿವಾರಗಳೂ ಬರುತ್ತಿರುವುದನ್ನು ದರ್ಶಿಸು ವುದಕ್ಕಾಗಿ ಪುರದಸುಂದರ ಸ್ತ್ರೀಯರು ತಮ್ಮ ಭವನದ ಮಹಡಿಗಳನ್ನೇರಿ ಅತ್ಯಂತ ಕುತೂಹಲದಿಂದ ತಮ್ಮ ಇತರಕಾರ್ಯಗಳೆಲ್ಲವನ್ನೂ ಒತ್ತಟ್ಟಿಗಿರಿಸಿ ನೋಡ ಲಾರಂಭಿಸಿದರು. ವರನಸೌಂದರ್ಯವನ್ನು ಗಮನಿಸಿದವರು 'ಇಂತಹ ಸುಂದರ ಮೂರ್ತಿಯು ಮನ್ಮಥನನ್ನು ತನ್ನ ಹಣೆಗಣ್ಣಿಂದ ಸುಡುವುದೆಂದ ರೇನು? ಮನ್ಮಥನು ಈ ಮೂರ್ತಿಯ ಸೌಂದರ್ಯವನ್ನು ಗಮನಿಸಿ, ಈತನ ಮುಖಸೌಂದರ್ಯಕ್ಕೆ ತನ್ನದನ್ನು ಹೋಲಿಸಿದರೆ ತನ್ನ ಮೂರ್ತಿಯುವ್ಯರ್ಥ ಎಂದು ಭಾವಿಸಿ ತನ್ನನ್ನು ತಾನೇ ದಹಿಸಿಕೊಂಡಿರಬೇಕು. ಸರ್ವಾಂಗ ಸೌಂದರ್ಯದಿಂದಲೂ ಯೌವನದಿಂದಲೂ ಮೇಲೆತ್ತಿರುವ ಗಿರಿಜೆಗೆ ತಕ್ಕವರನು ಈತನೇ ಹೌದು ಈತನನ್ನು ಬಿಟ್ಟರೇ ಉಳಿದವರಾರೂ ಆಕೆಗೆ ತಕ್ಕ ವರನು ದೊರಕನು. ಆಕೆಯು ಇಂಥವನನ್ನು ತನ್ನ ಭರ್ತನಾಗಿ ಮಾಡಿಕೊಳ್ಳುವುದ

ಕ್ಕಾಗಿಯೇ ಘೋರವಾಗಿ ತಪಸ್ಸನ್ನು ಆಚರಿಸಿ ಆತನನ್ನು ಒಲಿಸುವುದು ಅತಿಶಯ ವೇನೂ ಅಲ್ಲ' ಎಂಬ ವಿಧವಾದ ಸುಂಧರಾಂಗಿಯರ ಮಾತುಗಳನ್ನು ಕೇಳುತ್ತ ತನ್ನ ಮಾವನಾದ ಹಿಮವಂತನು ಏರ್ಪಡಿಸಿದ್ದ ವಿವಾಹ ಮಂಟಪವನ್ನು ಪ್ರವೇಶಿಸಿದನು. ಈ ಹಿಂದೆಯೇ ಶಿವನಿಂದ ಪ್ರೇರಿತರಾದ ಸಪ್ತಮಹರ್ಷಿಗಳು ವಿವಾಹಾಗ್ನಿಗೆ ಋತ್ವಿಕ್ಕುಗಳಾಗಿ ನಿಲ್ಲಲು ಸಿದ್ಧರಾಗಿದ್ದರು, ಪುರೋಹಿತರು ಅಗ್ನಿಸಾಕ್ಷಿಕವಾಗಿ ವಧೂವರರನ್ನು ಒಟ್ಟುಗೂಡಿಸಿ ವೈವಾಹಾಗ್ನಿಗೆ ಪ್ರದಕ್ಷಿಣೆ ಮಾಡಿಸಿ, ಲಾಜಾಹೋಮವನ್ನು ಪೂರೈಸಿ ಸಾಪ್ತಪದಿಯನ್ನೂ ಅನುಗೊಳಿಸಿ ಅವರಿಬ್ಬರನ್ನೂ ಪತಿಪತ್ನಿಯರನ್ನಾಗಿ ಮಾಡಿ ಅವರನ್ನು ಆಶೀರ್ವಾದ ಪೂರ್ವಕವಾಗಿ ಲೌಕಿಕರೀತಿಯಂತೆ ಹಿಮವಂತನು ಅನುಗ್ರಹಿಸಿದನು ಹೀಗೆ ಪಾರ್ವತೀ ಪರಮೇಶ್ವರರ ವೈವಾಹಿಕ ಪ್ರಸಂಗವನ್ನು ಈ ಏಳನೆಯ ಸರ್ಗದಲ್ಲಿ ಕವಿಯು ಅತಿ ರಮ್ಯತೆಯಿಂದ ವರ್ಣಿಸಿರುತ್ತಾನೆ.

ಎಂಟನೆಯ ಸರ್ಗವು ಶಿವಗಿರಿಜೆಯರನ್ನು ಶಯ್ಯಾಗೃಹಕ್ಕೆ ಪ್ರವೇಶಿಸುವಂತೆಮಾಡಲು, ಅಲ್ಲಿ ಪತಿಪತ್ನಿಯರು ವಾಕ್ ಮತ್ತು ಅದರ ಅರ್ಥಗಳಂತೆ, ಸೂರ್ಯರಶ್ಮಿಗಳಂತೆ ಬೆರೆತು ವಿವಿಧವಾದ ಮಹಾಮೈಥುನ ಸಂಕಲ್ಪದಿಂದ ಒಬ್ಬರೊಬ್ಬರನ್ನು ಬೆರೆತು ರತಿಸುಖವನನ್ನುಭವಿಸುವುದಕ್ಕೆ ತೊಡಗಿರುತ್ತಿದ್ದರು ಎಂಬ ವಿಷಯವು ಅತಿ ಸುಂದರವಾಗಿ ನಿರೂಪಿತವಾಗಿದೆ.

ಒಂಭತ್ತನೆಯ ಸರ್ಗದಲ್ಲಿನ ಸಂಗ್ರಹವಾದ ವಿಷಯವು ಈ ಮುಂದಿನಂತಿದೆ. ಉಮಾಮಹೇಶ್ವರರು ಶಯ್ಯಾಗೃಹದಲ್ಲಿ ರತಿಸುಖವನ್ನು ಅನುಭವಿಸುತ್ತ ಕೆಲವು ಋತುಗಳನ್ನೇ ಕಳೆದರು. ತಾರಕಾಸುರನಿಂದ ತಪ್ತರಾದ ಇಂದ್ರಾದಿ ದೇವತೆಗಳು ಈಶ್ವರನ ಔರಸಪುತ್ರನಿಂದಲ್ಲದೆ ಮತ್ತಾರಿಂದಲೂ ತನಗೆ ಸಾವುಂಟಾಗಬಾರದೆಂಬ ವರದ ಮಹಿಮೆಯಿಂದ ದೇವತೆಗಳನ್ನು ಪೀಡಿಸುತ್ತಿದ್ದುದರಿಂದ ಇಂದ್ರಾದಿಗಳು ಶಿವಪಾರ್ವತಿಯರ ಸಂಯೋಗದಿಂದ ಪುತ್ರನನ್ನು ಪಡೆದು ಆ ಮೂಲಕವಾಗಿ ತಾರಕಾಸುರನ ವಧಕಾಂಕ್ಷಿಗಳಾಗಿದ್ದರೂ ಕೂಡ ಅದಕ್ಕೆ ವಿಳಂಬವಾಗುತ್ತಿರುವುದನ್ನು ಲಕ್ಷಿಸಿ ಅತಿ ಶೀಘ್ರವಾಗಿ ಸಂತಾನೋತ್ಪತ್ತಿಯಾಗಬೇಕೆಂದು ಬಯಸಿ ಅಗ್ನಿಯನ್ನು ಪ್ರೇರಿಸಿ ಶಿವಪಾರ್ವತಿಯರ ರಹಸ್ಯ

ಶಯ್ಯಾಗೃಹವನ್ನು ಪ್ರವೇಶಿಸುವಂತೆ ಮಾಡಿದರು. ಅಗ್ನಿಯಾದರೋ ಇಂದ್ರ ದೇವನ ಮಾತನ್ನು ಮೀರಲಾರದೆ ವೇಷವನ್ನು ಮರೆಸಿಕೊಂಡು ಕಪೋತ 'ಪಾರಿವಾಳದ' ರೂಪವನ್ನು ತಳೆದು ಏಕಾಂತವಾದ ಶಯ್ಯಾಗೃಹವನ್ನು ಪ್ರವೇಶಿಸಿದನು. ಶಿವನು ಪಾರಿವಾಳದ ರೂಪವನ್ನು ಧರಿಸಿಬಂದ ಅಗ್ನಿಯನ್ನುದ್ದೇಶಿಸಿ 'ಸಮಯವನ್ನು ಮೀರಿ ತನ್ನ ಏಕಾಂತಗೃಹವನ್ನು ಪ್ರವೇಶಿಸಿದ ಅಗ್ನಿಯಲ್ಲಿ ಕುಪಿತನಾದನು. ಇದರ ಸುಳಿವನ್ನು ತಿಳಿದ ಅಗ್ನಿಯೂ ನಮ್ರತೆಯಿಂದ ಶಿವನಿಗೆ ನಮಸ್ಕರಿಸಿ ದೇವತೆಗಳಿಂದ ಪ್ರೇರಿತನಾಗಿ ಅವರ ದೂತನಂತೆ ಅಲ್ಲಿಗೆ ಬಂದ ತಪ್ಪನ್ನು ಕ್ಷಮಿಸಬೇಕೆಂದು ಬೇಡಿದೊಡನೆಯೇ ಶಿವನು ಶಾಂತನಾದನು. ಆದರೆ ರತಿ ಕೇಳಿಯಲ್ಲಿ ಪಾಲ್ಗೊಂಡ ಪಾರ್ವತಿಗೆ ಅಗ್ನಿಯನ್ನು 'ನೀನು ಶುದ್ಧಾಶುದ್ಧ ವಸ್ತುಗಳನ್ನು ಭಕ್ಷಿಸುವನಾಗು ಅಲ್ಲದೆ ನೀನು ಆಹಾರ ಇಂಧನಾದಿಗಳಿರದೆ ನಾಶವಾಗು ಮತ್ತು ಹೊಗೆ ಮೊದಲಾದ ಅಶುದ್ಧ ವಸ್ತುಗಳನ್ನು ಹೊರಚೆಲ್ಲುವವನಾಗು ಎಂದು ಶಪಿಸಿದಳು.

ಅಗ್ನಿಯು ಏಕಾಂತಗೃಹವನ್ನು ಪ್ರವೇಶಿಸಿದಂದು ಪಾರ್ವತಿಗಾಗಿ ಶಿವನ ವೀರ್ಯವು ಸ್ಖಲಿತವಾಯಿತು. ಪರಮಾತ್ಮ ಸ್ವರೂಪಿಯಾದ ಶಿವನು ಆ ವೀರ್ಯವು ನಷ್ಟವಾಗಬಾರದೆಂದು ಭಾವಿಸಿ ಅದನ್ನು ಅಗ್ನಿಯ ಗರ್ಭದಲ್ಲಿ ಪ್ರತಿಷ್ಠಿಸಿದನು. ಆ ವೀರ್ಯದ ಬೇಗೆಯನ್ನು ತಡೆಯಲಾರದೆ ವಿವರ್ಣನಾಗಿ ತೇಜಸ್ಸು ಕುಂದಿ ಜೋಲುಮುಖಮಾಡಿಕೊಂಡು ಇಂದ್ರನ ಬಳಿಗೆ ಬಂದನು.

ಇಷ್ಟರಲ್ಲಿ ಶಿವನ ಅನುಚರನಾದ ನಂದಿಯು ಭಕ್ತಾದಿಗಳು ಶಿವನನ್ನು ದರ್ಶಿಸಲು ಕಾದಿರುವರೆಂಬ ವಿಷಯವನ್ನು ಒಡೆಯನಿಗೆ ಶಯ್ಯಾಗೃಹದ ದ್ವಾರದಲ್ಲಿ ನಿಂತು ವಿಜ್ಞಾಪಿಸಿಕೊಂಡನು. ಇದನ್ನು ಕೇಳಿ ಭಕ್ತರನ್ನು ಅನುಗ್ರಹಿಸಲು ಕೈಲಾಸಕ್ಕೆ ಹೊರಡಲು ಸಿದ್ಧನಾದನು. ನಿತ್ಯಾನಪಾಯಿನಿಯೆನಿಸಿದ ಪಾರ್ವತೀ ದೇವಿಯೂ ಕೂಡ ಭರ್ತನ ಜೊತೆಯಲ್ಲಿ ಪ್ರಯಾಣಸನ್ನದ್ಧಳಾಗಿ ಕೈಲಾಸವನ್ನು ಸೇರಿ ಅಲ್ಲಿ ಭಕ್ತರ ಇಷ್ಟಾರ್ಥಗಳನ್ನು ಸಲ್ಲಿಸಲು ಅನುಮಾದಳು. ಶಿವ ಪಾರ್ವತಿಯರ ಕೈಲಾಸಾನುಗಮನವೆಂಬ ಒಂಭತ್ತನೆಯಸರ್ಗವು ಇಲ್ಲಿಗೆ ಮುಗಿಯಿತು.

ಹತ್ತನೆಯ ಸರ್ಗದಲ್ಲಿನ ಸಂಕ್ಷಿಪ್ತ ವಿಷಯವು ಈಬಗೆಯಲ್ಲಿದೆ :-ಅಗ್ನಿದೇವನು ಶಿವನತೇಜಸ್ಸನ್ನು ಗರ್ಭದಲ್ಲಿ ಧರಿಸಿ ಅದರವೇಗೆಯಿಂದ ಕಳೆಗುಂದಿ ಇಂದ್ರನ ಆಸ್ಥಾನಕ್ಕೆ ಬಂದು ದೇವತೆಗಳ ಆಜ್ಞಾಪಾಲನೆಗಾಗಿ ತೊಡಗಿದ್ದ ತನ್ನ ದುರ್ದಶೆಯನ್ನು ಇಂದ್ರದೇವನಿಗೆ ತಿಳಿಸಿದನು. ಇಂದ್ರನು ಅದಕ್ಕಾಗಿ ವ್ಯಥೆಪಟ್ಟು ಸಮಸ್ತದೇವತೆಗಳಿಂದಲೂ ಪೂಜ್ಯನಾದ ಅಗ್ನಿದೇವನಿಗೆ ಈ ಅವಸ್ಥೆ ಬಂದೊದಗಿದುದನ್ನು ತಿಳಿದು ಸಲ್ಪಕಾಲ ಯೋಚಿಸಿ, ಪುರುಷನು ಗರ್ಭವನ್ನು ಧರಿಸುವುದು ಅನುಚಿತ, ಸ್ತ್ರೀಯರೇ ಗರ್ಭಧಾರಣೆ ಮಾಡುವುದಕ್ಕೆ ಯೋಗ್ಯರು ಎಂದು ಸ್ವಲ್ಪಕಾಲ ಯೋಚಿಸಿ 'ದೇವಗಂಗೆಯನ್ನು ಶಿವನು ವರಿಸಿ ತನ್ನ ತಲೆಯಡೆಯಲ್ಲಿ ಅವಳನ್ನು ಧರಿಸಿರುವುದರಿಂದ ಈಶ್ವರನ ವೀರ್ಯವನ್ನು ಧರಿಸಲು ಆಕೆಯೇ ಯೋಗ್ಯಳು ಈ ಕಾರಣ ಅಗ್ನಿದೇವಾ ನೀನು ಆಕೆಯಿದ್ದೆಡೆಗೆ ಹೋಗಿ ಆಕೆಯನ್ನು ಪ್ರಾರ್ಥಿಸಿ ಶಿವತೇಜಸ್ಸನ್ನು ಭರಿಸಲು ಆಕೆಯೇ ಶಕ್ಕವಳು ಅಂತಹ ಅನುಗ್ರಹವನ್ನು ತನ್ನಲ್ಲಿ ತೋರಬೇಕೆಂದು ಬೇಡಿಕೊಂಡು ಆಕೆಯು ಶುದ್ಧ ಜಲದಲ್ಲಿ ಸ್ನಾನವನ್ನು ಆಚರಿಸಿದಲ್ಲಿ ನಿನ್ನಲ್ಲಿರುವ ವೀರ್ಯವನ್ನು ಆಕೆಯು ಸಂತೋಷದಿಂದ ಧರಿಸುತ್ತಾಳೆ! ಎಂದು ಸಮಾಧಾನ ಹೇಳಿ ಕಳುಹಿಸಿದನು. ಅಗ್ನಿಯು ಅದರಂತೆಯೇ ನಡೆಸಲು ತನ್ನಲ್ಲಿದ್ದ ಶಿವನ ತೇಜಸ್ಸನ್ನು ಗಂಗಾದೇವಿಯು ಧರಿಸಿದಳು. ಆದರೆ ಆವೀರ್ಯದ ವೇಗೆಯನ್ನು ತಡೆಯಲಾರದ ಆ ನದಿಯಲ್ಲಿನ ಜಲಚರಗಳೆಲ್ಲವೂ ಅಲ್ಲಿಂದ ಹೊರ ಹೊರಡಲು ಯತ್ನಿಸಿದವು. ಇದನ್ನು ತಪ್ಪಿಸಲು ಹಾದಿಕಾಣದೆ ಕೊರಗುತ್ತಿರುವ ಗಂಗಾನದಿಯಲ್ಲಿ ಆರುಜನ ಕೃತ್ತಿಕೆಯರು ಮಾಘಸ್ನಾನವನ್ನು ಮಾಡಿ ಪುನೀತರಾಗಬೇಕೆಂಬ ಉದ್ದೇಶದಿಂದ ಗಂಗಾನದಿಗೆ ಸ್ನಾನಕ್ಕಿಳಿದರು. ಇವರು ಸ್ನಾನಮಾಡುತ್ತಿದ್ದಂತೆಯೇ ಗಂಗೆಯಲ್ಲಿ ಮಿಳಿತವಾದ ರುದ್ರವೀರ್ಯವು ಈ ಕೃತ್ತಿಕಾಸ್ತ್ರೀಯರ ಗರ್ಭಗಳನ್ನು ಸೇರಿ ಅವರನ್ನು ಬೇಯಿಸತೊಡಗಿತು. ಮಹಾಪತಿವ್ರತೆಯರಾದ ಅವರು ತಾವು ಪತಿಸಂಯೋಗವಿರದೆಯೇ ಗರ್ಭಿಣಿಯರಾಗಿರುವುದನ್ನು ಪತಿಗೆ ತೋರಲಾರದೆ ಗಂಗಾನದಿಯ ದಡದಲ್ಲಿ ಬೆಳೆದಿರುವ ಶರ ಅಂದರೆಬಾಳದ ಕಡ್ಡಿಗಳಮೇಲೆ ತಮ್ಮಲ್ಲಿದ್ದ ಶಿವನವೀರ್ಯವನ್ನು ತ್ಯಜಿಸಿಬಿಟ್ಟರು. ಆವೀರ್ಯವೇ ಆರು ಮುಖಗಳಾಗಿ ಒಡೆದು ಶರೀರಧಾರಣೆಮಾಡಿತು. ಕೃತ್ತಿಕೆಯರ ಗರ್ಭವಾಸವನ್ನು

ಮಾಡಿದುದರಿಂದ ಅವರೇ ತಮ್ಮ ಶಿಶುವೆಂದು ಆ ಶಿವಪುತ್ರನನ್ನು ಭಾವಿಸಿ ತಮ್ಮ ತಮ್ಮ ಸ್ತನ್ಯಗಳಿಂದ ಪೋಷಿಸತೊಡಗಿದರು. ಇದರಿಂದ ಷಣ್ಮುಖನಿಗೆ ಶರಜನ್ಮಾ, ಕಾರ್ತಿಕೇಯ, ಷಣ್ಮುಖ ಎಂಬ ಅನ್ವರ್ಥನಾಮಗಳನ್ನು ತಳೆದನು. ಕುಮಾರ ಸಂಭವವೆಂಬ ವಿಷಯವನ್ನೊಳಗೊಂಡ ಈ ಹತ್ತನೆಯ ಅಧ್ಯಾಯವು ಇಲ್ಲಿಗೆ ಮುಗಿಯಿತು.

ಇಲ್ಲಿ ಒಂದು ವಿಷಯವನ್ನು ಓದುಗನಿಗೆ ತಿಳಿಸಬೇಕಾಗಿದೆ. ಈಗ ನಮಗೆ ಹಸ್ತಗತವಾದ 'ಕುಮಾರಸಂಭವ'ವೆಂಬ ಕಾವ್ಯವು ಹದಿನೇಳು ಸರ್ಗಗಳನ್ನೊಳಗೊಂಡಿದ್ದರೂ ಕೂಡ ತಜ್ಞರ ಭಾವನೆಯಲ್ಲಿ ಮಹಾಕವಿಕಾಳಿದಾಸನಿಂದ ರಚಿತವಾದುದು ಎಂಟು ಸರ್ಗಗಳು ಮಾತ್ರ, ಉಳಿದ ಸರ್ಗಗಳೆಲ್ಲವನ್ನೂ ಬೇರೊಬ್ಬ ಕವಿಯು ಬರೆದಿರಬೇಕು. ಏಕೆಂದರೆ ಮೊದಲನೆಯ ಎಂಟುಸರ್ಗಗಳ ಶೈಲಿಯು ಮಹಾಕವಿಗೆ ಸಂಬಂಧಿಸಿದುದು. ಉಳಿದ ಸರ್ಗಗಳ ಶೈಲಿಯು ಮಹಾಕವಿಗೆ ಸಂಬಂಧಿಸಿದುದಲ್ಲ ಎಂಬುದು ತಜ್ಞರವಾದ, ಈ ಮಾತು ತಿರುಳು ಇದ್ದಂತೆ ಕಂಡುಬಂದರೂ ಕೂಡ, ಕವಿಯು ತನ್ನ ಕಾವ್ಯಕ್ಕೆ 'ಕುಮಾರಸಂಭವ' ವೆಂಬ ಹೆಸರನ್ನಿಟ್ಟಮೇಲೆ ಆಕಾವ್ಯವು ಆ 'ಕುಮಾರಸಂಭವ' ವಾಗುವವರೆಗಾದರೂ ರಚಿತವಾಗಿರಬೇಕು. ಪಾರ್ವತೀಪರಮೇಶ್ವರರ ಮಹಾಮೈಥುನ ಸಂಕಲ್ಪದಿಂದಲೇ ಎಂಟನೆಯಸರ್ಗ ಮುಕ್ತಾಯಮಾಡುವುದಕ್ಕೆ ಕಾರಣವೇನು? ಕುಮಾರಸಂಭವ' ದಲ್ಲಿಯಾದರೂ ಅದು ಕೊನೆಗಾಣಬೇಕು ಅಲ್ಲದೆ ತಾರಕಾಸುರನನ್ನು ನಿಗ್ರಹಿಸಬೇಕಾದ ಉದ್ದೇಶದಿಂದ ಕುಮಾರನ ಸಂಭವವಾಗಬೇಕಾಗಿದೆ. ಈ ವಿಷಯವನ್ನು ಮನಗಂಡು ಹತ್ತನೆಯ ಅಧ್ಯಾಯದಲ್ಲಿ ಕುಮಾರೋತ್ಪತ್ತಿಯನ್ನು ತಿಳಿಯಹೇಳಿ ಉಳಿದ ಸರ್ಗಗಳನ್ನು ತಾರಕಾಸುರನ ಸಂಹಾರದವರೆಗೂ ಇದನ್ನು ವಿಸ್ತರಿಸಬೇಕೆಂದು ಭಾವಿಸಿ ಬೇರೊರ್ವಕವಿಯು ಒಂಭತ್ತು ಸರ್ಗಗಳನ್ನು ಸೇರಿಸಿರಬೇಕು ಎಂದು ಊಹಿಸಲು ಸಾಧ್ಯ, ಆದರೂ ಕೂಡ ಈ ಪುಟ್ಟಹೊತ್ತಿಗೆಯಲ್ಲಿ ಉಳಿದ ಸರ್ಗಗಳಲ್ಲಿನ ವಿಷಯವನ್ನು ಅತಿಸಂಗ್ರಹವಾಗಿ ತಿಳಿಯಹೇಳಿದೆ.

ಹನ್ನೊಂದನೆಯ ಸರ್ಗದಲ್ಲಿನ ವಿಷಯಸಂಗ್ರಹ ಈ ಬಗೆಯಲ್ಲಿದೆ. ಈ ಹಿಂದೆ ಸೂಚಿಸಿದ್ದಂತೆ ಕೃತ್ತಿಕಾಸ್ತ್ರೀಯರು ಅಗ್ನಿಯಿಂದ ಗಂಗೆಯಲ್ಲಿ ಬಿಟ್ಟ

ರುದ್ರವೀರ್ಯವನ್ನು ತಮ್ಮ ಗರ್ಭಗಳಲ್ಲಿ ಧರಿಸಿ ಅದರ ಬೇಗೆಯನ್ನು ತಡೆಯಲಾರದೆ ಗಂಗಾನದಿಯ ತಡಿಯಲ್ಲಿ ಬೆಳೆದಿದ್ದ ಶರವಣ ಅಂದರೆ ಲಾಳದ ಕಡ್ಡಿಗಳ ಮೇಲೆ ಬಿಟ್ಟುದರಿಂದ ಅಲ್ಲಿ ಆರೂ ಮುಖಗಳನ್ನೊಳಗೊಂಡ ಶಿಶುವಿಗೆ ಜನ್ಮ ದೊರಕಿತು. ಶಿಶುವಿನ ವಯಸ್ಸು ಆರು ದಿನಗಳಾಗಿದ್ದರೂ ಕೂಡ ರಮ್ಯವಾದ ಯುವಕನ ರೂಪವನ್ನು ಧರಿಸಿದ್ದುದನ್ನು ಕಂಡು ಅಗ್ನಿ, ಗಂಗೆ ಮತ್ತು ಕೃತ್ತಿಕಾ ಸ್ತ್ರೀಯರ ಗರ್ಭದಲ್ಲಿ ಅದು ವಾಸಿಸುತ್ತಿದ್ದ ಕಾರಣ ಆ ಶಿಶುವು ತಮ್ಮ ತಮ್ಮದೆಂದು ಭಾವಿಸಿದ ಆ ಮೂರು ಪಂಗಡಕ್ಕೂ ವಿವಾದ ಉಂಟಾಯಿತು. ಹೀಗಿದ್ದ ಸಂದರ್ಭದಲ್ಲಿ ಶಿವ ಪಾರ್ವತಿಯರು ವಿಮಾನವನ್ನೇರಿ ಅಕಸ್ಮಾತ್ ಇವರನ್ನು ಕಂಡು ಈ ರಮ್ಯವಾದ ಶಿಶುವಿಗಾಗಿ ಈ ಮೂರು ಪಂಗಡಗಳು ವಾದದಲ್ಲಿ ತೊಡಗಿರುತ್ತಾರೆ. ಇಂತಹ ರಮ್ಯವಾದ ಶಿಶುವಿಗೆ ಜನ್ಮವಿತ್ತವರಾರೆಂಬ ವಿಷಯ ಸರ್ವಜ್ಞ ಸರ್ವೇಶ್ವರನಾದ ಶಿವನಿಗೆ ತಿಳಿದಿರಬೇಕಾಗಿರುವುದರಿಂದ 'ಹೃದಯೇಶ್ವರ ! ಈ ಸುಂದರ ಶಿಶುವಿಗೆ ತಂದೆ ತಾಯಿಗಳಾರು' ? ಎಂದು ಉಮೆಯು ಪ್ರಶ್ನಿಸಲು, ಈಶ್ವರನು 'ಮಂಗಳಾಂಗಿ ? ಕೇಳು, ನಾವು ರತಿ ಕೇಳಿಯಲ್ಲಿ ಅಗ್ನಿಯು ಕಪೋತದ ರೂಪವನ್ನು ತಳೆದು ಬಂದಿದ್ದಾಗ ನಿನಗಾಗಿ ಆಗ ತಾನೆ ಸ್ಖಲಿತವಾದ ನನ್ನ ವೀರ್ಯವು ವ್ಯರ್ಥವಾದುದಂಥದಲ್ಲವೆಂದು ಭಾವಿಸಿ ಅದನ್ನು ಅಗ್ನಿಯ ಗರ್ಭದಲ್ಲಿ ನಾನು ಪ್ರತಿಷ್ಠಿಸಿದೆನು. ಅದರ ಬೇಗೆಯನ್ನು ಅಗ್ನಿಯು ತಡೆಯಲಾರದೆ ಇಂದ್ರನ ಸೂಚನೆಯಂತೆ ಅದನ್ನು ಗಂಗೆಯಲ್ಲಿ ಅವಗಾಹನ ಮಾಡುವ ಮೂಲಕ ಅದರಲ್ಲಿ ತ್ಯಜಿಸಿದನು. ಅದರ ಬೇಗೆಯನ್ನು ತಡೆಯಲಾಗದೆ ಜಲಚರಗಳೆಲ್ಲವೂ ಹೊರಬಂದುದನ್ನು ತಡೆಯಲಾರದೆ ಆ ವೀರ್ಯವನ್ನು ತನ್ನಲ್ಲಿ ಸ್ನಾನ ಮಾಡಲು ಬಂದಂಥ ಆರು ಮಂದಿ ಕೃತ್ತಿಕಾ ಸ್ತ್ರೀಯರ ಗರ್ಭವನ್ನು ಆ ವೀರ್ಯವು ಸೇರಿತು. ಅವರು ಅದರ ತೇಜಸ್ಸನ್ನು ಸಹಿಸದವರಾಗಿ ಗಂಗೆಯ ತಡಿಯಲ್ಲಿ ಬೆಳೆದಿದ್ದ ಶರವಣದಲ್ಲಿ ಅದನ್ನು ವಿಸರ್ಜಿಸಿದರು. ಈಗ ಆ ವೀರ್ಯವು ಪಕ್ವವಾಗಿ ಆರು ತಲೆಗಳುಳ್ಳ ಸುಂದರ ಶಿಶುವಾಗಿ ಬೆಳೆಯುತ್ತಿದೆ. ಅದನ್ನು ನೋಡಿ ತಮ್ಮ ಕುಕ್ಷಿಗಳಲ್ಲಿ ಬೆಳೆಯುತ್ತಿದ್ದ ವೀರ್ಯದಿಂದ ಈ ಶಿಶುವಿನ ಜನ್ಮ ಎಂದು ಭಾವಿಸಿ ತಮ್ಮ ತಮ್ಮ ಶಿಶು ಎಂದು ವಿವಾದಿಸಲು ತೊಡಗಿದ್ದಾರೆ. ನಿಜಸ್ಥಿತಿಯನ್ನು ತಿಳಿಸ

ಬೇಕೆಂದರೆ ನಿನಗಾಗಿ ಸ್ಖಲನವಾದ ವೀರ್ಯದಿಂದ ಈ ಶಿಶುವಿನ ಜನ್ಮವಾದುದ ರಿಂದ ನಾನೇ ಆ ಶಿಶುವಿಗೆ ತಂದೆ, ನೀನೇ ಅದರ ತಾಯಿ, ನೀನು ಆ ಸ್ಥಳಕ್ಕೆ ಹೋಗಿ ಅದಕ್ಕೆ ಸ್ತನ್ಯವನ್ನು ಕೊಟ್ಟು ಅವನ ಹುಟ್ಟಿಗಾಗಿ ಆನಂದಿಸು' ಎಂದು ಹೇಳಿದುದನ್ನು ಕೇಳಿ ಉಮಾದೇವಿಯು ಸ್ಥಳಕ್ಕೆ ಧಾವಿಸಿ ಬಂದು ತನ್ನ ಕಂದನನ್ನು ನೋಡಿ ಆನಂದಿಸಿದುದರಿಂದ ಉತ್ಪನ್ನವಾದ ಸ್ತನ್ಯವನ್ನು ಆ ಶಿಶು ವಿಗೆ ಪಾನ ಮಾಡಿಸಿದಳು. ಆ ಶಿಶು ಕೇವಲ ಆರು ದಿನಗಳಾಗಿದ್ದರೂ ಕೂಡ ಯೌವನವನ್ನು ತಳೆದವನಂತೆ ಕಂಗೊಳಿಸುತ್ತ, ದೇವತೆಗಳ ಆಶಯದಂತೆ ಅವರ ಸೇನಾಧಿಪತ್ಯವನ್ನು ವಹಿಸಿ ತಾರಕಾಸುರನ ಮೇಲೆ ಧಾಳಿಯಿಟ್ಟು ಅವನನ್ನು ಕೊಂದು ದೇವತೆಗಳನ್ನು ಉದ್ಧಾರಮಾಡುವುದಕ್ಕಾಗಿ ಆ ಶಿಶುವು ಯೋಚಿಸು ತ್ತಿದ್ದಿತು.

ಆ ಬಳಿಕ ಸರ್ವಜ್ಞನಾದ ಮಹೇಶ್ವರನು ಪಾರ್ವತಿಗಾಗಿ ತನ್ನಿಂದ ಉತ್ಪತ್ತಿಯಾದ ವೀರ್ಯವೇ ಈ ಶಿಶುವಿನ ಜನ್ಮಕ್ಕೆ ಕಾರಣವೆಂದು ತಿಳಿದು ಅದು ತನ್ನ ಕಂದನೇ ಹೌದು ಎಂದು ಭಾವಿಸಿ ಅದನ್ನು ತಬ್ಬಿಕೊಂಡು ಎತ್ತಿ ತೊಡೆಯ ಮೇಲಿರಿಸಿ ಪತಿಯೊಡನೆ ಕೈಲಾಸಕ್ಕೆ ಹಿಂದಿರುಗಿದಳು. ಅಲ್ಲಿ ತನ್ನ ಶಿಶುವಿಗೆ ಸಲ್ಲಬೇಕಾದ ಮಂಗಳ ಕರ್ಮಗಳೆಲ್ಲವನ್ನೂ ನಡೆಸಿ, ಅದರ ಆಟ ಪಾಟಗಳನ್ನು ನೋಡಿ ಪತಿಯೊಡನೆ ಪಾರ್ವತಿಯು ತಾನೇ ಹಿಗ್ಗುತ್ತಿದ್ದಳು. ಶಿಶುವನ್ನು ಶಿವನು ಮೇಲೆ ಎತ್ತಿಕೊಂಡಂದು, ಅದು ಆತನ ತಲೆಯಮೇಲಿದ್ದ ತಣ್ಣಗಿರುವ ಗಂಗಾ ಜಲದಲ್ಲಿ ಕೈಯಿಟ್ಟು ತನ್ನ ಕೈ ಅತಿ ಕೊರತೆಯಿಂದ ಪೀಡಿತ ವಾದುದಕ್ಕಾಗಿ ತಕ್ಷಣ ಹೊರ ತೆಗೆದು ಈಶ್ವರನ ಹಣೆಗಣ್ಣು ಅಗ್ನಿಯಾದುದ ರಿಂದ ಅದರಲ್ಲಿ ಕೈಯನ್ನು ಬಿಸಿಮಾಡಿಕೊಂಡಿತು. ಈ ಬಗೆಯಾದ ಶಿಶುವಿನ ಆಟ ಪಾಟಗಳನ್ನು ಕಂಡು ತಾಯಿ ತಂದೆಯರು ಬಹಳವಾಗಿ ಆನಂದಿಸು ತ್ತಿದ್ದರು. ಇಲ್ಲಿಗೆ ಕಾವ್ಯದ ಹನ್ನೊಂದನೆಯ ಸಂಧಿಯಲ್ಲಿನ ವಿಷಯವನ್ನು ಸಂಗ್ರಹಿಸಲಾಯಿತು.

ಹನ್ನೆರಡನೆಯ ಸಂಧಿಯಲ್ಲಿನ ವಿಷಯವನ್ನು ಈ ಮುಂದಿನಂತೆ ಸಂಗ್ರಹಿಸಲಾಗಿದೆ :– ಇತ್ತ ಶಿಶುವು ಬೆಳೆಯುತ್ತಿದ್ದರೆ ಅತ್ತ ಇಂದ್ರಾದಿ

ದೇವತೆಗಳು ತಾರಕಾಸುರನ ಪೀಡೆಯನ್ನು ಸಹಿಸಲಾರದೆ, ಅವನನ್ನು ಮರ್ದಿಸುವುದಕ್ಕಾಗಿಯೇ ಈಶ್ವರನ ಔರಸ ಪುತ್ರನಾಗಿ ಜನ್ಮಿಸಿದೆಯೆಂದು ತಿಳಿದು, ಆತನನ್ನು ತಮ್ಮ ಸೇನಾನಿಯನ್ನಾಗಿ ಮಾಡಿಕೊಳ್ಳುವ ಆತುರದಿಂದ ಆ ಕಾರ್ಯವನ್ನು ಸಾಧಿಸಲು ಸ್ವರ್ಗಾಧಿ ಪತಿಯೆನಿಸಿದ್ದ ಇಂದ್ರನೂ ದೇವ ಸಮೂಹವನ್ನು ಕರೆದುಕೊಂಡು ತಮ್ಮ ಕಾರ್ಯ ಸಾಧನೆಗಾಗಿ ಶಿವನನ್ನು ಬೇಡಿಕೊಳ್ಳಲು ಕೈಲಾಸ ಪರ್ವತಕ್ಕೆ ಧಾವಿಸಿದರು. ಅರಮನೆಯ ಹೆಬ್ಬಾಗಿಲನ್ನು ಅವರು ಸೇರಿದೊಡನೆಯೇ ದ್ವಾರದಲ್ಲಿ ಕಾದಿದ್ದ ನಂದಿಯು ಇಂದ್ರನ ಬರವನ್ನು ಆಸನಾಸೀನನಾಗಿದ್ದ ಶಿವನಿಗೆ ಇಂದ್ರದೇವನ ಬರವನ್ನು ವಿಜ್ಞಾಪಿಸಿಕೊಂಡನು. ಒಡೆಯನ ಅಪ್ಪಣೆಯನ್ನು ಪಡೆದು ನಂದಿಯು ಇಂದ್ರನನ್ನೂ ದೇವತೆಗಳನ್ನೂ ಶಿವನ ಆಸ್ಥಾನಕ್ಕೆ ಒಯ್ದರು. ಪರಮ ಶಿವನು ಸರ್ವಜ್ಞನಾಗಿರಲು ತಾರಕಾಸುರನನ್ನು ಕೊಲ್ಲುವ ಉದ್ದೇಶದಿಂದ ತನ್ನ ಕಂದ ಷಣ್ಮುಖನನ್ನು ಕರೆದೊಯ್ಯಲು ಬಂದಿರುವನೆಂದು ತಿಳಿದು ಅವರ ಇಚ್ಛೆಯನ್ನು ನೆರವೇರಿಸುವ ಉದ್ದೇಶದಿಂದ ಇಂದ್ರನನ್ನು ಆ ವಿಷಯವಾಗಿ ಪ್ರಶ್ನಿಸಲು ಅವನು 'ಸರ್ವಜ್ಞನಾದ ಪರಮ ಶಿವನಿಗೆ ತಿಳಿಯದಿದ್ದ ವಿಷಯವಾವುದುಂಟು ? ನಾವು ತಮ್ಮ ಕಂದನನ್ನು ಸೇನಾನಿಯನ್ನಾಗಿ ಮಾಡಿಕೊಂಡು ಆ ಕ್ರೂರ ತಾರಕನನ್ನು ಆ ತಮ್ಮ ಕಂದನಿಂದ ಮಾತ್ರ ಸಾವನ್ನು ಬೇಡಿದ್ದಂತೆ ಅವನನ್ನು ನಾಶಪಡಿಸುವುದಕ್ಕಾಗಿ ಕಾತುರರಾಗಿ ಇಲ್ಲಿಗೆ ಧಾವಿಸಿ ಬಂದಿರುತ್ತೇವೆ. ದುಷ್ಟ ಶಿಕ್ಷಣದ ಮೂಲಕ ಶಿಷ್ಟ ಪರಿಪಾಲನೆಯನ್ನು ಮಾಡುವ ಸಂಕಲ್ಪವನ್ನು ಸಾಧಿಸಲುಳ್ಳ ತಮ್ಮ ಅನುಗ್ರಹವನ್ನು ಬೇಡಲು ನಾವು ಬಂದಿರುತ್ತೇವೆ' ಎಂದು ವಿನಯದಿಂದ ಬೇಡಲಾಗಿ 'ಹಾಗೆಯೇ ಆಗಲಿ' ಎಂಬ ಮಾತಿನಿಂದ ಇಂದ್ರನಿಗೆ ಆಶ್ವಾಸನವನ್ನು ಕೊಟ್ಟು ತನ್ನ ಕುಮಾರ ಷಣ್ಮುಖನನ್ನು ಕುರಿತು, 'ಕಂದ ? ದುಷ್ಟ ರಾಕ್ಷಸನಿಂದ ಪೀಡಿತರಾದ ಇಂದ್ರಾದಿ ದೇವತೆಗಳು ನಿನ್ನ ಸಹಾಯವನ್ನು ಬೇಡಿ ಬಂದಿರುತ್ತಾರಾಗಿ ಆ ಸತ್ಕಾರ್ಯವನ್ನು ಸಲ್ಲಿಸು' ಎಂದು ಆಶೀರ್ವದಿಸಿದನು. ಇಲ್ಲಿಗೆ ಹನ್ನೆರಡನೆಯ ಅಧ್ಯಾಯವು ಮುಗಿಯಿತು.

ಆ ಬಳಿಕ ಷಣ್ಮುಖನು ತನ್ನ ತಾಯಿ ತಂದೆಯರಾದ ಪಾರ್ವತೀ ಪರಮೇಶ್ವರರಿಗೆ ನಮಿಸಿ, ತಾರಕನಿಂದ ಪೀಡಿತರಾದ ಇಂದ್ರಾದಿ ದೇವತೆಗಳ

ಸೈನ್ಯಕ್ಕೆ ಆಧಿಪತ್ಯವಹಿಸಲು ಒಪ್ಪಿ ಆ ಕಾರ್ಯವನ್ನು ಸಾಧಿಸುವ ಸಲುವಾಗಿ ಅಲ್ಲಿಂದ ಇಂದ್ರಾದಿಗಳು ವಾಸಿಸುವ ಸ್ಥಾನವನ್ನು ಕುರಿತು ಅವರೊಡಗೂಡಿ ಪಯಣಿಸಿದನು. ಶತ್ರುವನ್ನು ವಧಿಸುವುದಕ್ಕಾಗಿ ತನ್ನ ಅಪ್ರತಿಹತವಾದ ಶಕ್ತ್ಯಾಯುಧವನ್ನು ಧರಿಸಿ, ಅಲ್ಲಿಂದ ಹಿರಿಯನಾದ ಬ್ರಹ್ಮದೇವನ ಸ್ಥಾನವನ್ನು ಸೇರಿ ಆತನ ಪ್ರೀತಿ ಪೂರ್ವಕವಾದ ಆಶೀರ್ವಾದವನ್ನು ಪಡೆಯಲೋಸುಗ ಸಾಷ್ಟಾಂಗ ಪ್ರಣಾಮವನ್ನರ್ಪಿಸಿದನು. ಬ್ರಹ್ಮದೇವನಾದರೋ ಆ ಕುಮಾರನನ್ನು ಆದರದಿಂದ ಅಪ್ಪಿಕೊಂಡು 'ಅಪ್ಪ ಮಗು! ನಿನ್ನ ಶಕ್ತ್ಯಾಯುಧದ ಪ್ರಭಾವದಿಂದ ತಾರಕಾಸುರನನ್ನು ಕೊಂದು, ಇಂದ್ರಾದಿಗಳಿಗೆ ಸ್ವಸ್ಥಾನಗಳನ್ನು ಕಲ್ಪಿಸಿ ಕೊಡುವಂತೆ ವರ್ತಿಸು, ನಿನಗೆ ಜಯವು ಲಭಿಸಲಿ' ಎಂದು ಆಶೀರ್ವದಿಸಿ ಆ ಸಮರ್ಥನಾದ ಶಿಶುವಿಗೆ ಆಶೀರ್ವದಿಸಿ ಇಂದ್ರಾದಿಗಳೊಡನೆ ಸೇರಿ, ಅವರ ಸೈನ್ಯಾಧಿಪತ್ಯವನ್ನು ವಹಿಸಿ ಅವರ ಉದ್ದೇಶವನ್ನು ನೆರವೇರಿಸು' ಎಂದು ಹೇಳಿ ಅವರೊಡನೆ ಕಳುಹಿಸಿಕೊಟ್ಟನು.

ಇಂದ್ರಾದಿಗಳಾದರೋ ಬ್ರಹ್ಮದೇವನ ಅನುಗ್ರಹಾಶೀರ್ವಾದವನ್ನು ತಳೆದ ಶಿಶುಕುಮಾರನಿಗೆ ದೇವಸೇವೆಗಳ ಆದಿಪತ್ಯವನ್ನು ವಹಿಸುವುದಕ್ಕಾಗಿ ಅಭಿಷೇಕವನ್ನು ಕಲ್ಪಿಸಿದವರಾದರು. ಇಲ್ಲಿಗೆ ಹದಿಮೂರನೆಯ ಅಧ್ಯಾಯವು ಕೊನೆಗೊಂಡಿತು.

ಕಾವ್ಯದ ಹದಿನಾಲ್ಕನೆಯ ಸರ್ಗದಲ್ಲಿ ತಾರಕಾಸುರನು ವಾಸಿಸುತ್ತಿದ್ದ ಪಟ್ಟಣಕ್ಕೆ ಕುಮಾರನ ಸೇನಾಧಿಪತ್ಯದೊಡನೆ ಪಯಣಿಸಿದರು. ದೇವತೆಗಳು ಚತುರಂಗ ಸೈನ್ಯ ಸನ್ನದ್ಧರಾಗಿ ಹೊರಟಂದು ಇಂದ್ರ, ಅಗ್ನಿ, ಯಮ, ನೈರುತಿ, ವರುಣ, ವಾಯು, ಕುಬೇರ ಮತ್ತು ಈಶಾನರೆಂಬ ಅಷ್ಟ ದಿಕ್ಪಾಲಕರೂ ತಮ್ಮ ತಮ್ಮ ವಾಹನಗಳನ್ನೇರಿ ತಾರಕಾಸುರನನ್ನು ಭಂಗ ಪಡಿಸುವ ಸಲುವಾಗಿ ತಮ್ಮ ತಮಗೆ ಸಲ್ಲುವ ಆಯುಧಗಳೊಡನೆ ಬಹಳ ವೈಭವದಿಂದ ಹೊರ ಹೊರಟರು. ಇವರುಗಳ ಸೈನ್ಯ ಸಮೂಹದಿಂದ ಎದ್ದ ಧೂಳು ಸಮಸ್ತ ದಿಕ್ಕುಗಳನ್ನೂ ಸೂರ್ಯ ಚಂದ್ರರನ್ನೂ ಮುಚ್ಚಿತು. ರಣವಾದ್ಯಗಳನ್ನು ಮೊಳಗಿಸುತ್ತ ಕೆಲವು ದಿನಗಳು ಪಯಣಿಸಿ ಕಡೆಗೆ ತಾರಕಾಸುರನ ಪಟ್ಟಣದ ಹೊರವಲಯವನ್ನು ಸೇರಿ ಅದಕ್ಕೆ ಮುತ್ತಿಗೆ ಹಾಕಿದರು.

ಹದಿನೈದನೆಯ ಸರ್ಗದಲ್ಲಿನ ವಿಷಯ ಈ ಮುಂದಿನಂತಿದೆ :–ತಾರಕಾಸುರನು ವೈಭವದಿಂದ ತನ್ನರಮನೆಯಲ್ಲಿ ನಿರಾತಂಕನಾಗಿದ್ದ ಸಮಯದಲ್ಲಿ ದೇವತೆಗಳು ಶಿವನ ಔರಸ ಪುತ್ರನನ್ನು ಸೇನಾಧಿಪತಿಯನ್ನಾಗಿ ಮಾಡಿಕೊಂಡು ದೊಡ್ಡ ಸೈನ್ಯದೊಡನೆ ಪಟ್ಟಣಕ್ಕೆ ಧಾಳಿಯಿಟ್ಟಿದ್ದ ವಿಷಯವನ್ನು ದ್ವಾರ ಪಾಲಕನ ಮೂಲಕ ಪ್ರಧಾನ ಅಸುರವೀರರು ತಮ್ಮೊಡೆಯ ತಾರಕಾಸುರನಿಗೆ ತಿಳಿಯಪಡಿಸಿದರು. ಇದನ್ನು ಕೇಳಿ ತನ್ನಿಂದ ಸಂಪೂರ್ಣವಾಗಿ ಸೋತು ತಮ್ಮೆಡೆಗಳನ್ನು ತ್ಯಜಿಸಿ ದಿಕ್ಕುಪಾಲಾಗಿ ಹೋಗಿದ್ದ ದೇವತೆಗಳು ಈಶ್ವರನ ಔರಸ ಪುತ್ರನಾದ ಶಿಶುವನ್ನು ಮುಂದಿಟ್ಟುಕೊಂಡು ಪಟ್ಟಣವನ್ನು ಮುತ್ತಿರುವ ಬಗೆ ಹೇಗೆ ? ಅವರು ಮತ್ತೊಮ್ಮೆ ಭಂಗ ಪಡಬೇಕಾಗಿದೆ ಎಂದು ಭಾವಿಸಿ ಅವ ರೊಡನೆ ಸೆಣೆಸಲು ಚತುರಂಗ ಸೈನ್ಯವನ್ನೂ ಸಿದ್ಧಗೊಳಿಸಿ ತಾನು ಒಂದು ಅಜೇಯವಾದ ರಥವನ್ನೇರಿ ಮುಂದರಿದನು. ಆಗ ಅವನಿಗೆ ಅನೇಕಲುತ್ಪಾತ ಗಳು ಕಂಡುಬಂದವು. ಮಾತ್ರವಲ್ಲದೆ ದುರ್ನಿಮಿತ್ತಗಳೂ ಕೂಡ ಅವನ ಕಣ್ಣ ಮುಂದೆ ಸುಳಿದವು. ಇವನ್ನು ಕಂಡು ದೈವಜ್ಞರು ಇವೆಲ್ಲವೂ ಅಸುರನ ಸಾವಿನ ಸೂಚಕವು' ಎಂದು ಎಚ್ಚರಿಸಿದರೂ ಕೂಡ, ಅವುಗಳನ್ನು ಲಕ್ಷಿಸದೆ 'ನೀವೆಲ್ಲರೂ ಹೇಡಿಗಳು ನನ್ನ ಬಾಹುಪರಾಕ್ರಮಕ್ಕೆ ಇದಿರಾರು ? ಕೇವಲ ಆರು ದಿನದ ಹಸುಳೆ ನನ್ನನ್ನೇನು ಮಾಡಿತು. ನಾನು ದೇವಸೇನೆಯನ್ನು ಭಂಗ ಪಡಿಸಿ, ಶಿಶುವನ್ನು ಕೊಂದು ಜಯಶೀಲನಾಗಿ ಬರುವುದನ್ನು ನೀವೇ ಕಾಣು ವಿರಿ' ಎಂದು ಅವರನ್ನು ಧಿಕ್ಕರಿಸಿ ದೇವಸೇನೆಯನ್ನು ಇದಿರಿಸಲು ಸಿದ್ಧನಾದನು.

ಹದಿನಾರನೆಯ ಅಧ್ಯಾಯದಲ್ಲಿ ದೇವಸೈನ್ಯಕ್ಕೂ ಮತ್ತು ರಾಕ್ಷಸ ಸೈನ್ಯಕ್ಕೂ ನಡೆದ ತುಮುಲ ಯುದ್ಧವನ್ನು ಮಾತ್ರವಲ್ಲದೆ ತಾರಕಾಸುರನು ಕುಮಾರನೊಡನೆ ಮಾಡಿದ ಯುಧ್ಧ ವೈಚಿತ್ರ್ಯವನ್ನು ವರ್ಣಿಸಿದೆ. ಕಡೆಯ ಹದಿನಾರನೆಯ ಸರ್ಗದಲ್ಲಿ ತಾರಕಾಸುರನು ದೇವತಾ ಸೈನ್ಯದ ಮೇಲೆ ಪ್ರಯೋಗಿಸಿದ ವಾಯುವ್ಯಾಸ್ತ್ರ, ಆಗ್ನೇಯಾಸ್ತ್ರ ವಾರುಣಾಸ್ತ್ರ, ವಜ್ರಾಸ್ತ್ರ ಇವುಗಳಿಂದ ತಂಗೆಟ್ಟು ಕುಮಾರನನ್ನೇ ಮರೆಹೊಕ್ಕಂದು ಕುಮಾರನು ತನ್ನ ಅಸ್ತ್ರ ಬಲದಿಂದ ರಕ್ಕಸನ ಅಸ್ತ್ರಗಳಿಂದಾದ ದುಷ್ಪರಿಣಾಮಗಳನ್ನು ತಪ್ಪಿಸಿ

ತಾರಕಾಸುರನನ್ನು ವಿರಥನನ್ನಾಗಿ ಮಾಡಿದನು. ಆಗ ತಾರಕಾಸುರನು ವಿವಿಧ ಮಾಯಾಸ್ತ್ರಗಳನ್ನು ಕುಮಾರನ ಮೇಲೆ ಪ್ರಯೋಗಿಸಲು ಅವೆಲ್ಲವನ್ನೂ ಲೀಲೆಯಿಂದಲೇ ಪರಿಹರಿಸಿದುದನ್ನು ಕಂಡು ಬಾಹುಯುದ್ಧವನ್ನು ಮಾಡಲು ರಥದಿಂದ ಹೊರಬಿದ್ದು ಕುಮಾರನ ಮೇಲೆ ಬಲಪ್ರಯೋಗ ಮಾಡಲು ಯತ್ನಿಸಿದನು. ಇದನ್ನು ಕಂಡ ಷಣ್ಮುಖನು ತನ್ನಲ್ಲಿದ್ದ ಶಕ್ತ್ಯಸ್ತ್ರವನ್ನು ರಾಕ್ಷಸನ ಮೇಲೆ ಪ್ರಯೋಗಿಸಲು ಅದರ ಪ್ರಭಾವದಿಂದ ರಕ್ಕಸನು ಅಸುನೀಗಿ ರಣರಂಗದಲ್ಲಿ ಒರಗಿದನು. ಇದನ್ನು ಕಂಡು ದೇವತೆಗಳಿಗೆ ಅತ್ಯಂತ ಸಂತೋಷವೂ ಅಸುರವರ್ಗಕ್ಕೆ ಅಪರಿಮಿತವಾದ ದುಃಖವೂ ತಲೆದೋರಿತು. ದೇವ ಶತ್ರುವೆನಿಸಿದ ತಾರಕಾಸುರನನ್ನು ಕೊಂದುದರಿಂದ ಅಪರಿಮಿತವಾದ ಆನಂದದಿಂದ ದೇವಲೋಕದ ಪಾರಿಜಾತ ಪುಷ್ಪಗಳನ್ನು ಕುಮಾರನ ಮೇಲೆ ಧಾರಾಧಾರೆಯಾಗಿ ಸುರಿಸಿದರು. ಕುಮಾರನ ಉತ್ಪತ್ತಿಯಿಂದ ತಾರಕಾಸುರನ ಮರಣ, ಅದರಿಂದ ದೇವತೆಗಳಿಗೆ ಸ್ವಪದಪ್ರಾಪ್ತಿಯಾದ ವಿಷಯವು ಕವಿಯು ಹದಿನೇಳನೆಯ ಸರ್ಗದಲ್ಲಿ ಚಿತ್ರಿಸಿರುತ್ತಾನೆ, ಇಲ್ಲಿಗೆ ಕುಮಾರಸಂಭವವೆಂಬ ಕಾವ್ಯವು ಮುಗಿಯಿತು.